ಸಮಾಚಾರ ಸಣ್ಣದಲ್ಲ

ಪ್ರತಿಪಕ್ಷಗಳ ಪ್ರತಿಭಟನೆ ಹಾಸ್ಯಾಸ್ಪದ: ಶಾಸಕ

ಮದ್ದೂರು: ರಾಜ್ಯದಲ್ಲಿನ ಹಲವು ಸಮಸ್ಯೆ ಮತ್ತು ಅಭಿವೃದ್ಧಿ ಬಗ್ಗೆ ಚರ್ಚಿಸಬೇಕಾದ ವಿರೋಧ ಪಕ್ಷದವರು ಸರಕಾರದ ವಿರುದ್ಧ ಟೀಕೆ ಟಿಪ್ಪಣಿ ಹಾಗೂ ಪ್ರತಿಭಟನೆ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು. ಮದ್ದೂರು ಪಟ್ಟಣದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ವಿರೋಧ ಪಕ್ಷದವರಿಗೆ ಬೇರೆ ಯಾವುದೇ ಕೆಲಸವಿಲ್ಲದ ಕಾರಣ ಸದನದ ಅಮೂಲ್ಯ ಸಮಯ ಹಾಳು ಮಾಡುತ್ತಿದ್ದಾರೆ ಎಂದರು. ರಾಜ್ಯದ ಅಭಿವೃದ್ಧಿಯ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲ ರಾಜ್ಯದ ಅಭಿವೃದ್ಧಿಯ ಬಗ್ಗೆ ಚರ್ಚಿಸಬೇಕಾದ ಹಲವಾರು ವಿಷಯಗಳಿದ್ದರೂ ಇದಕ್ಕೆ ಗಮನ ಕೊಡದೆ ಕೇವಲ ಮುಡಾ ಹಗರಣವನ್ನೇ ಗುರಿಯಾಗಿಸಿಕೊಂಡು ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆಂದು ದೂರಿದರು. ಮುಡಾ ಮತ್ತು ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಈಗಾಗಲೇ 3 ತನಿಖಾ ತಂಡಗಳು ತನಿಖೆ ನಡೆಸುತ್ತಿದ್ದು ಅಂತಿಮವಾಗಿ ವರದಿ ಬಂದ ಬಳಿಕ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಲಿದೆ.

ಸರಕಾರಿ ಆಸ್ಪತ್ರೆ, ಶಾಲೆಗೆ ಡಿಸಿ ಭೇಟಿ

ಗುಬ್ಬಿ: ತಾಲೂಕಿನ ಸರಕಾರಿ ಆಸ್ಪತ್ರೆ, ಶಾಲೆ, ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಎಂಎನ್ ಕೋಟೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಮಾಹಿತಿ ಪಡೆದು ಗ್ರಾಮಾಂತರ ಭಾಗದ ಜನರಿಗೆ ಉತ್ತಮ ಆರೋಗ್ಯ ನೀಡಬೇಕು ಡೆಂಘೀ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ಹೂವಿನ ಕಟ್ಟೆ ವಸತಿ ನಿಲಯಕ್ಕೆ ಭೇಟಿ ನೀಡಿ, ಊಟದ ಮನೆ, ವಸತಿ ಶಿಕ್ಷಣದ ಗುಣಮಟ್ಟದ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು. ಯಾವುದೇ ಸಮಸ್ಯೆ ಇದ್ದರೂ ತಿಳಿಸುವಂತೆ ಹೇಳಿದರು. ತಹಸೀಲ್ದಾರ್ ಬಿ.ಆರತಿ, ಕ್ಷೇತ್ರ ಶಿಕ್ಷಣಾಧಿಕಾರಿ ಲೇಪಾಕ್ಷಪ್ಪ ಇದ್ದರು.

ವಿ+ ಸೋಮವಾರ

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆ | ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಸೂಚನೆ

ಬ್ಲಾಕ್ ಸ್ಪಾಟ್ ಪರಿಶೀಲಿಸಿ ಅಪಘಾತ ತಪ್ಪಿಸಿ

ಚಿಕ್ಕಬಳ್ಳಾಪುರ: ರಸ್ತೆ ಅಪಘಾತ ಸಂಭವಿಸಿರುವ ಅಂಕಿ ಅಂಶಗಳು ಹಾಗೂ ಇತರ ಸುರಕ್ಷತಾ ಅಂಶಗಳನ್ನು ಪರಿಗಣಿಸಿ ಜಿಲ್ಲೆಯಲ್ಲಿ ಒಟ್ಟು 29 ಬ್ಲಾಕ್ ಸ್ಪಾಟ್ ಗಳನ್ನು ಗುರುತಿಸಲಾಗಿದ್ದು ಅಂತಹ ಸ್ಥಳಗಳಿಗೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ಅವರು ತಿಳಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2022 ರಿಂದ ಈವರೆಗೆ ರಸ್ತೆ ಅಪಘಾತ ಸಂಭವಿಸಿರುವ ಅಂಕಿ ಅಂಶಗಳು ಹಾಗೂ ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಕೊರತೆಗಳ ಇತರ ಅಂಶಗಳನ್ನು ಪರಿಗಣಿಸಿ 29 ಬ್ಲಾಕ್ ಸ್ಪಾಟ್ ಗಳನ್ನು ಗುರುತಿಸಲಾಗಿದೆ. ಆ ಬ್ಲಾಕ್ ಸ್ಪಾಟ್ ಸ್ಥಳಗಳನ್ನು ಪರಿಶೀಲಿಸಿ ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡುವುದಕ್ಕೆ ಸೂಕ್ತ ಕ್ರಮ ವಹಿಸಬೇಕು. ಜಿಲ್ಲೆಯಲ್ಲಿ ರಸ್ತೆಯ ಅಭಿವೃದ್ಧಿ ಕಾಮಗಾರಿಗಳಲ್ಲಿ ರಸ್ತೆ ಸುರಕ್ಷತಾ ಅಂಶಗಳಿಗೆ ಒತ್ತು ನೀಡಬೇಕು ಎಂದು ಸೂಚನೆ ನೀಡಿದರು.

ಹೆದ್ದಾರಿಗಳಲ್ಲಿ ಆಂಬ್ಯುಲೆನ್ಸ್ ಸೇವೆಗಳು ಮತ್ತು ಟ್ರಾಮಾ ಕೇಂದ್ರಗಳ ಜಾಲ ಸ್ಥಾಪನೆಯಾಗಬೇಕು. ಹೈವೇ ಪ್ಯಾಟ್ರೋಲಿಂಗ್ ಕಾರ್ಯವು ಬ್ಲಾಕ್ ಸ್ಪಾಟ್ ಗಳಲ್ಲಿ ಹೆಚ್ಚಾಗಿ ಜರುಗಬೇಕು. ಹೆದ್ದಾರಿಗಳ ಅಂಡರ್ ಪಾಸ್ ನಲ್ಲಿ ಸರ್ವೀಸ್ ರಸ್ತೆ ಮುಂದೆ ಮುಖ್ಯ ರಸ್ತೆಗೆ ವಾಹನಗಳು ತೆರಳದಂತೆ ಕ್ರಾಷ್ ಬ್ಯಾರಿಯಲ್ ಅಳವಡಿಸಬೇಕು. ಹೆದ್ದಾರಿಗಳ ಪಕ್ಕದ ಸರ್ವೀಸ್ ರಸ್ತೆಗಳಲ್ಲಿನ ಗುಂಡಿಗಳನ್ನು ಸರಿ ಪಡಿಸಬೇಕು. ಎಂದು ತಿಳಿಸಿದರು.

ಈ ವೇಳೆ ಜಿಲ್ಲಾಧಿಕಾರಿಗಳು, 'ಮಕ್ಕಳ ಬಗ್ಗೆ ನಿಗಾ ವಹಿಸಿ ವಾಹನ ಚಲಾಯಿಸಿ' ಎಂಬ ಸಂದೇಶ ಸಾರುವ ರಸ್ತೆ ಸುರಕ್ಷಾ ಜಾಗೃತಿಯ ಭಿತ್ತಿಪತ್ರ ಮತ್ತು ಕರಪತ್ರಗಳನ್ನು ಬಿಡುಗಡೆಗೊಳಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸೆ, ಪ್ರಾದೇಶಿಕ ಸಾರಿಗೆ ಅಧಿಕಾರಿ ವಿವೇಕಾನಂದ, ಕಾರ್ಯಪಾಲಕ ಅಭಿಯಂತರರಾದ ರಂಗಸ್ವಾಮಿ, ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ಜಿಲ್ಲಾಡಳಿತ ಭವನದಲ್ಲಿ ಗುರುವಾರ ನಡೆದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಮಾತನಾಡಿದರು.

ಭ್ರೂಣಲಿಂಗ ಪತ್ತೆ, ಹೆಣ್ಣುಮಕ್ಕಳ ಸಂಖ್ಯೆ ಇಳಿಕೆ

ತುಮಕೂರು: ಭ್ರೂಣಲಿಂಗ ಪತ್ತೆಯಿಂದ ಹೆಣ್ಣುಮಕ್ಕಳ ಜನನದ ಸಂಖ್ಯೆ ಕಡಿಮೆಯಾಗುತ್ತಿರುವುದು ಆತಂಕಕಾರಿ. ಇದನ್ನು ತಡೆಯುವ ಉದ್ದೇಶದಿಂದ ಭ್ರೂಣಲಿಂಗ ಪತ್ತೆ ಕಾರ್ಯ ಕಂಡುಬಂದರೆ 5 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಕಾನೂನು ಜಾರಿಗೆ ಬಂದಿದೆ ಎಂದು ಜಿಲ್ಲಾ ನ್ಯಾಯಾಲಯದ ಸರಕಾರಿ ಅಭಿಯೋಜಕಿ ಕವಿತ ವಿ. ಎ. ತಿಳಿಸಿದರು. ವಿವಿ ವಿಜ್ಞಾನ ಕಾಲೇಜಿನ ಮಹಿಳಾ ಸಬಲೀಕರಣ ಕೋಶ ಹಾಗೂ 'ಮಹಿಳಾ ಲೈಂಗಿಕ ಕಿರುಕುಳ ತಡೆ ಕೋಶ' ಸೋಮವಾರ ಆಯೋಜಿಸಿದ್ದ ಹೆಣ್ಣು ಮಕ್ಕಳಿಗೆ ಇರುವ 'ಕಾನೂನು ರಕ್ಷಣೆ-ಒಂದು ಅರಿವು' ಕುರಿತ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು. ಹೆಣ್ಣು ಮಕ್ಕಳ ಸುರಕ್ಷತೆಗಾಗಿ 45 ವಿಧಿಗಳು ಕಾನೂನಿನಲ್ಲಿವೆ. ಮಹಿಳೆಯರಿಗೆ ಜೀವನ ನಡೆಸಲು ಕಾನೂನು ತಿಳುವಳಿಕೆ ಮುಖ್ಯ. ಪರಿಚ್ಛೇದ 14ರ ಪ್ರಕಾರ ದೇಶದ ಎಲ್ಲಾ ಪ್ರಜೆಗಳು ಸಮಾನರು. ಇಲ್ಲಿ ಗಂಡು ಹೆಣ್ಣು ಎನ್ನುವ ತಾರತಮ್ಯವಿಲ್ಲ. ಪರಿಚ್ಛೇದ 15ರ ಪ್ರಕಾರ ಗಂಡು, ಹೆಣ್ಣು, ಭಾಷೆ, ಹುಟ್ಟಿದ ಜಾಗ, ಬಣ್ಣದ ಮೇಲೆ ಯಾರನ್ನೂ ಹೀಯಾಳಿಸಬಾರದು. ಪರಿಚ್ಛೇದ 16ರ ಪ್ರಕಾರ ಹೆಣ್ಣು ಗಂಡು ಸಮಾನರು ಎಂದು ತಿಳಿಸಿದರು. ಪರಿಚ್ಛೇದ 42ರ ಪ್ರಕಾರ ಹೆಣ್ಣು ಮಕ್ಕಳ ಆರೋಗ್ಯದ ಜವಾಬ್ದಾರಿ ಸರಕಾರದ ಮೇಲಿದೆ. ಹೆಣ್ಣು ಮಕ್ಕಳ ಅಶ್ಲೀಲ ಚಿತ್ರ ತೆಗೆಯುವುದು, ಹಂಚುವುದು, ಮಾಧ್ಯಮಗಳಲ್ಲಿ ಮಹಿಳೆಯನ್ನು ಅಸಭ್ಯವಾಗಿ ತೋರಿಸುವುದು ಶಿಕ್ಷಾರ್ಹ ಅಪರಾಧ ಎಂದು ತಿಳಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ಪ್ರಕಾಶ್ ಎಂ.ಶೇಟ್ ಮಾತನಾಡಿ, ಮಹಿಳೆಯರು ತಮ್ಮ ಹಕ್ಕುಗಳನ್ನು ತಿಳಿದು ಪ್ರಶ್ನಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಮಹಿಳೆಯರು ಎಲ್ಲದರಲ್ಲೂ ಸಮನಾಗಿರಬೇಕು ಎಂದರು.

ಗಣಿಗಾರಿಕೆಗೆ 'ಅಳಲೇಕಾಯಿ ವನ'ಮರೆ

ಸೋಮನಾಥ ಸಂಜೀವ, ತಿಪಟೂರು

ಕಲ್ಪತರು ನಾಡು ತುಮಕೂರು ಜಿಲ್ಲೆಯಲ್ಲಿ ಎಷ್ಟೋ ತಾಣಗಳು ಬೆಳಕಿಗೆ ಬರದೆ, ಕಣ್ಮರೆಯಾಗುತ್ತಿವೆ. ಅದೇ ಹಾದಿ ಹಿಡಿದ ಅಪರೂಪದ ಸಸ್ಯ ಪ್ರಭೇದವನ್ನು ಹುಡುಕಿಕೊಂಡು ಹೊರಟಾಗ ಕಣ್ಣಿಗೆ ಬಿದ್ದದ್ದು ಇದು. ತಾಲೂಕು ಕೇಂದ್ರವಾದ ತಿಪಟೂರಿನಿಂದ ಚಿಕ್ಕನಾಯಕನಹಳ್ಳಿ ಮಾರ್ಗವಾಗಿ 12 ಕಿಮೀ ಚಲಿಸಿ ಎಡ ತಿರುವು ಪಡೆದು ಬೆಟ್ಟದ ಹಾದಿಯಲ್ಲಿ 1 ಕಿ.ಮೀ. ಕ್ರಮಿಸಿದಾಗ ಕಣ್ಣಿಗೆ ಗೋಚರಿಸುವ ನಯನ ಮನೋಹರ ತಾಣವೇ 'ಮಂಚೆಕಲ್ಲು ಬೆಟ್ಟ'.

ಔಷಧೀಯ ಗುಣಗಳಿರುವ ಅಳಲೇಕಾಯಿ ಮರ.

ತಿಪಟೂರು ತಾಲೂಕಿನ ಹುಚ್ಚಗೊಂಡನಹಳ್ಳಿ ಗ್ರಾಮದ ಬಳಿ ಕಾಣುವ 'ಮಂಚೆಕಲ್ಲು ಬೆಟ್ಟ'.

ಬೆಟ್ಟದ ಸುತ್ತಮುತ್ತ ಆಯುರ್ವೇದದಲ್ಲಿ (ನಾಟಿ ಔಷಧಿ)ಬಹುಮುಖ್ಯ ಪಾತ್ರ ವಹಿಸುವ ಅಳಲೇಕಾಯಿ ವನ ಇಲ್ಲಿ ನೋಡಬಹುದು. ತಲೆಮಾರುಗಳ ಹಿಂದೆ ನಾಟಿವೈದ್ಯರ ಒಂದು ಭಾಗವಾಗಿದ್ದ ಅಳಲೇಕಾಯಿ ಪಂಡಿತರ ಬಗ್ಗೆ ತಮಗೆಲ್ಲ ತಿಳಿದಿದೆ.

ಮಂಚೆಕಲ್ಲು ಬೆಟ್ಟ:

ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕ ಸೇರಿದಂತೆ ಪಾರಂಪರಿಕ ನಾಟಿ ವೈದ್ಯ ವೃತ್ತಿ ಮಾಡುತ್ತಿದ್ದ ಅಳಲೇಕಾಯಿ ಪಂಡಿತರು ಆಷಾಢ ಮಾಸದ ಆಸುಪಾಸು ಮಂಚೆಕಲ್ಲು ಬೆಟ್ಟಕ್ಕೆ ಬಂದು ತಿಂಗಳುಗಟ್ಟಲೆ ಠಿಕಾಣಿ ಹೂಡುತ್ತಿದ್ದರು. ಇಲ್ಲಿ ಸಿಗುವ ಅಳಲೇಕಾಯಿ ಸಂಗ್ರಹಿಸುವುದು ವಾಡಿಕೆಯಾಗಿತ್ತು.

ಬೋರೇಗೌಡನ ಕೆರೆ:

ಈ ಮಂಚೆಕಲ್ಲು ಬೆಟ್ಟದಲ್ಲಿ ಹೇರಳವಾಗಿ ಬೆಳೆಯುತ್ತಿದ್ದ ಅಪರೂಪದ ಆಯುರ್ವೇದೀಯ ಸಸ್ಯ ಸಂಕುಲಗಳನ್ನು ಸ್ಪರ್ಶಿಸಿದ ಮಳೆ ನೀರು, ಔಷಧೀಯ ಗುಣಗಳ ಹೊತ್ತು ಗೂಬೆಹಳ್ಳದ ಮೂಲಕ ಸಣ್ಣ ಸಣ್ಣ ಝರಿಗಳನ್ನು ಸೃಷ್ಟಿಸಿ ಬೋರೇಗೌಡನ ಕೆರೆಗೆ ಸೇರುತ್ತಿತ್ತು. ಅಂದಿನ ಕಾಲದಲ್ಲಿ ಪಂಡಿತರು ಚರ್ಮರೋಗದಿಂದ ಬಳಲುತ್ತಿದ್ದವರಿಗೆ ಬೋರೇಗೌಡನ ಕೆರೆಯಲ್ಲಿ ಸ್ನಾನ ಮಾಡುವಂತೆ ಸೂಚಿಸುತ್ತಿದ್ದರು ಎಂದು ಈ ಭಾಗದ ಹಿರಿಯರು ಹೇಳುತ್ತಾರೆ. ಈ ಕೆರೆಯ ನೀರು ಚರ್ಮರೋಗವನ್ನು ಗುಣಪಡಿಸುವಲ್ಲಿ ಬಹು ಮುಖ್ಯಪಾತ್ರ ವಹಿಸುತ್ತಿತ್ತು.

ವನ್ಯಜೀವಿಗಳ ತಾಣ :

ಮಂಚೆಕಲ್ಲು ಬೆಟ್ಟ ಔಷಧಿಯ ಗುಣಗಳಿರುವ ಅಳಲೇಕಾಯಿ ಮರ, ಕಾಡು ಮುತ್ತುಗ, ಮುಳ್ಳು ಮುತ್ತುಗ ಹೀಗೆ ಇನ್ನು ಅನೇಕ ಬಗೆಯ ಗಿಡಮರಗಳ ವನವಿದು. ಹಾಗೇ ಚಿರತೆ, ಕರಡಿ, ನರಿ, ತೋಳ, ಕಾಡು ಹಂದಿ, ಕಾಡು ಗುರಿ, ಕಾಡು ಕೋಳಿ,ಕತ್ತೆ ಕಿರುಬ, ಹೆಬ್ಬಾವು, ಮುಳ್ಳುಹಂದಿ, ಚಿಪ್ಪುಹಂದಿ, ಹೀಗೆ ವಿವಿಧ ಬಗೆಯ ವನ್ಯಜೀವಿಗಳಿಗೆ ಆಶ್ರಯ ತಾಣವೂ ಆಗಿತ್ತು.

ಅವನತಿ ಹಾದಿ:

ಕಸಬಾ ಹೋಬಳಿಯ ಹುಚ್ಚಗೊಂಡನಹಳ್ಳಿ ಪಂಚಾಯಿತಿ ವ್ಯಾಪ್ತಿಯ ಮಂಚೆಕಲ್ಲು ಬೆಟ್ಟ ಸುಮಾರು 300 ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ಹೊಂದಿದೆ. ಮಂಚೆಕಲ್ಲು ಬೆಟ್ಟದ ಗೂಬೆಹಳ್ಳದಲ್ಲಿ ಈಗಲೂ ಅಳಲೇಕಾಯಿ ಮರಗಳನ್ನು ನೋಡಬಹುದು. ವಿಶೇಷವೇನೆಂದರೆ ಸಹ್ಯಾದ್ರಿ ಬೆಟ್ಟದ ಸಾಲು ಮತ್ತು ಪಶ್ಚಿಮ ಘಟ್ಟಗಳಲ್ಲಿ ಹೇರಳವಾಗಿ ಬೆಳೆಯುವ ಅಳಲೇಕಾಯಿಗಿಂತ ಈ ಭಾಗದ ಅಳಲೇಕಾಯಿಗೆ ಹೆಚ್ಚಿನ ಬೇಡಿಕೆ ಇತ್ತು. ಇಂಥ ಅಪರೂಪದ ಮರ ತಿಪಟೂರಿನ ತಾಲೂಕಿನಲ್ಲಿ ಮಾತ್ರ ಕಾಣಸಿಗುತ್ತವೆ. ಈ ಅಪರೂಪ ಸಸ್ಯ ಸಂಕುಲದ ಜಾಗ ಇದೀಗ ಅರಣ್ಯ ಪ್ರದೇಶ ಒತ್ತುವರಿ ಹಾಗೂ ಗಣಿಗಾರಿಕೆಯಿಂದಾಗಿ ಅವನತಿಯ ಹಾದಿ ಹಿಡಿಯುತ್ತಿರುವುದು ವಿಪರ್ಯಾಸವೇ ಸರಿ..!

ತ್ರಿಫಲ ಔಷಧ :

ಈಗಿನ ಕಾಲದಲ್ಲೂ ಆಯುರ್ವೇದಿಕ್ ವೈದ್ಯರು ಹೇಳುವ ಪ್ರಕಾರ ಹಲವಾರು ಕಾಯಿಲೆಗಳಿಗೆ ನೀಡುತ್ತಿರುವ ತ್ರಿಫಲ ಔಷಧಿಗಳಲ್ಲಿ ಅಳಲೇಕಾಯಿ ಬಹುಮುಖ್ಯ ಪಾತ್ರವಹಿಸುತ್ತದೆ. ಉದರ ಕಾಯಿಲೆ, ಜ್ವರ, ಮೂಲವ್ಯಾದಿ, ಹಲವು ಕಾಯಿಲೆ ಗುಣಪಡಿಸುವ ಔಷಧ ಗುಣ ಅಳಲೇಕಾಯಿಯಲ್ಲಿದೆ.'

ಬೆಟ್ಟ ಉಳಿಸಲಿ:

ವರುಷಕೊಮ್ಮೆ ವಿಶ್ವ ಪರಿಸರ ದಿನದಂದು ಪರಿಸರ ಉಳಿಸಬೇಕು, ಬೆಳೆಸಬೇಕು ಎಂದು ಸಾವಿರಾರು ಸಂಖ್ಯೆಯ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳುವ ಸರಕಾರಿ ಅಧಿಕಾರಿಗಳು ಹಾಗೂ ಪರಿಸರ ಪ್ರೇಮಿಗಳು ಈ ಬೆಟ್ಟದ ಕಡೆ ಒಮ್ಮೆ ಕಣ್ಣಾಯಿಸಲಿ. ಇಂಥ ಅಮೂಲ್ಯ ಮಂಚೆಕಲ್ಲು ಬೆಟ್ಟವನ್ನು ಈಗಲಾದರೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು, ಆಯುರ್ವೇದ ಸಂಸ್ಥೆಗಳು ಉಳಿಸಿಕೊಳ್ಳಲು ಮುಂದಾಗಲಿ.

ತುರ್ತು ಕೆಲಸಗಳಿಗೆ ಅನುಮೋದನೆ

ಕೆ.ಆರ್.ನಗರ: ಎಲ್ಲಾ ಇಲಾಖೆಯ ಅಧಿಕಾರಿಗಳು ಇಲಾಖೆಗೆ ಅಗತ್ಯವಿರುವ ಕೆಲಸಗಳ ಪಟ್ಟಿಮಾಡಿ ಅನುಮೋದನೆಗೆ ಕಳಿಸಿಕೊಡಿ. ಇರುವ ಅನುದಾನದಲ್ಲಿ ತುರ್ತು ಕೆಲಸಗಳಿಗೆ ಅನುಮೋದನೆ ನೀಡಲಾಗುವುದು ಎಂದು ತಾಲೂಕು ಪಂಚಾಯಿತಿ ಆಡಳಿತಾಧಿಕಾರಿ ಪ್ರಭುಸ್ವಾಮಿ ತಿಳಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯವ್ಯಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮುಂದಿನ ತಿಂಗಳ ಒಳಗಾಗಿ ಇಲಾಖೆಯ ಕೆಲಸಗಳ ಎಸ್ಟಿಮೇಟ್ ಪಟ್ಟಿಯನ್ನು ತಯಾರು ಮಾಡಿ ತಾಲೂಕು ಪಂಚಾಯಿತಿಗೆ ಹಾಗೂ ಜಿಲ್ಲಾ ಪಂಚಾಯತಿಗೆ ನೀಡುವಂತೆ ತಿಳಿಸಿದರು. ಬಿಸಿಎಂ ಇಲಾಖೆಯ ಹಾಸ್ಟೆಲ್ ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿಯಲು ಪ್ರಚಾರದ ಕೊರತೆ ಕಾರಣ. ವಸತಿ ನಿಲಯಗಳಲ್ಲಿ ಶೌಚಾಲಯ ಸ್ವಚ್ಛತೆ ಹಾಗೂ ಆಹಾರದ ಪರಿಶೀಲನೆಗೆ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣಾಧಿಕಾರಿ ಪ್ರತಿ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರ ಸಭೆ ಮಾಡಿ ಸವಲತ್ತುಗಳ ಬಗ್ಗೆ ಮಾಹಿತಿ ಪಡೆದು ವರದಿ ನೀಡುವಂತೆ ತಿಳಿಸಿದರು.

ಶಿಕ್ಷಣ ಇಲಾಖೆ ತಕ್ಷಣ ಮಳೆಯಿಂದ ಹಾನಿಯಾದ ಶಾಲಾ ಕಟ್ಟಡಗಳ ಬಗ್ಗೆ ಮಾಹಿತಿ ಪಡೆದು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರ ವಹಿಸುವಂತೆ ಸೂಚಿಸಿದರು.

ತಾಲೂಕು ಪಂಚಾಯಿತಿ ಆಯವ್ಯಯವನ್ನು ಆಡಳಿತಾಧಿಕಾರಿ ಪ್ರಭುಸ್ವಾಮಿ ಮಂಡಿಸುತ್ತಿರುವುದು.

ಡೆಂಘೀ ತಡೆಗಟ್ಟಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ ಪ್ರತಿ ಹಳ್ಳಿಯಲ್ಲಿಯೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಜೊತೆ ಸಂಪರ್ಕದಲ್ಲಿದ್ದು ಕುಡಿವ ನೀರು ಹಾಗೂ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಸೂಚಿಸಿದರು.

ಸಭೆಯಲ್ಲಿ ತಾಪಂ ಇಒ ಎಚ್ ಕೆ ಹರೀಶ್, ಟಿಎಚ್ಒ ಡಾ. ಡಿ ನಟರಾಜ್, ಸಮಾಜ ಕಲ್ಯಾಣ ಇಲಾಖೆ ಎಡಿ ಅಶೋಕ್, ಎ ಇ ಇ ವಿನೂತ್ ರಾಜಾರಾಮ್, ಪಶುವೈದ್ಯ ಇಲಾಖೆ ಎಡಿ ಮಂಜುನಾಥ್, ಕೃಷಿ ಎಡಿ ಮಲ್ಲಿಕಾರ್ಜುನ್ ಹಾಜರಿದ್ದರು.

ಕುಂದುಕೊರತೆ ಸಭೆ, ದೂರು ಸುರಿಮಳೆ

ತಾಪಂ ಸಭಾಂಗಣದಲ್ಲಿ ತಹಸೀಲ್ದಾರ್ ಸುರೇಶ ಆಚಾರ್ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಜೊತೆ ರೈತರ ಕುಂದು ಕೊರತೆ ಸಭೆ ನಡೆಸಲಾಯಿತು.

ತಿ.ನರಸೀಪುರ: ಸರಕಾರಿ ಜಮೀನು ಒತ್ತುವರಿ, ಜಲಜೀವನ್ ಮಿಷನ್ ಕಾಮಗಾರಿ ಅವ್ಯವಹಾರ, ನೀರಾವರಿ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿತನದ ಬಗ್ಗೆ ಕುಂದು ಕೊರತೆ ಸಭೆಯಲ್ಲಿ ದೂರುಗಳ ಸುರಿಮಳೆ ಆಯಿತು. ಪಟ್ಟಣದ ತಾಪಂ ಸಭಾಂಗಣದಲ್ಲಿ ತಹಸೀಲ್ದಾರ್ ಸುರೇಶ ಆಚಾರ್ ಅಧ್ಯಕ್ಷತೆಯಲ್ಲಿ ಅಧಿಕಾರಿಗಳ ಜೊತೆ ರೈತರ ಕುಂದು ಕೊರತೆ ಸಭೆ ನಡೆಸಲಾಯಿತು.

ಸಭೆಯಲ್ಲಿ ಮಾತನಾಡಿದ ರೈತ ಮುಖಂಡ ಬನ್ನೂರು ನಾರಾಯಣ ತುರುಗನೂರು ಗ್ರಾಮದಲ್ಲಿ ಕಾಲುವೆ ರಸ್ತೆಯಲ್ಲಿ ಬೇಸಾಯ ಮಾಡುತ್ತಿದ್ದು ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವವರ ಮೇಲೆ ಕ್ರಮ ಕೈಗೊಳ್ಳಲು ಅಧಿಕಾರಿಗಳು ಮೀನ ಮೇಷ ಎಣಿಸುತ್ತಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ ಉತ್ತರಿಸಿದ ತಹಶೀಲ್ದಾರ್, ಈಗಾಗಲೇ ಎಫ್ಐಆರ್ ದಾಖಲೆಗೆ ಸೂಚಿಸಲಾಗಿದೆ ಎಂದು ಹೇಳಿದರು.

ರೈತ ಸಂಘದ ಅಧ್ಯಕ್ಷ ಕೋರಹಟ್ಟಿ ಕುಮಾರಸ್ವಾಮಿ ಮಾತನಾಡಿ, ಕಾಲುವೆಗೆ ನೀರು ಹರಿಸುವ ಮೊದಲೇ ಕಾಲುವೆಗಳ ಹೂಳು ಎತ್ತಬೇಕು. ಆದರೆ ನೀರು ಬಂದ ಮೇಲೆ ಹೂಳೆತ್ತುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಕಾರಣ ನೀರಾವರಿ ಇಲಾಖೆ ಅಧಿಕಾರಿಗಳು ಎಂದು ಕಿಡಿ ಕಾರಿದರು.

ಅತ್ತಹಳ್ಳಿ ಶಿವನಂಜು ಮಾತನಾಡಿ, ನಮ್ಮ ಅತ್ತಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಪರಿಶಿಷ್ಟ ಜಾತಿ ಅಭಿವೃದ್ಧಿಗಾಗಿ ಮೀಸಲು ಇರಿಸಿದ ಹಣ ದುರ್ಬಳಕೆಯಾಗಿದೆ. ಪಿಡಿಒ ಮಾದೇಶ್ ಮೇಲೆ ಕ್ರಮವಹಿಸುವಂತೆ ಇಒ ಕೃಷ್ಣಗೆ ಒತ್ತಾಯಿಸಿದರು. ತಾಲೂಕಿನ ಪ್ರತಿಯೊಂದು ಗ್ರಾಮದಲ್ಲೂ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ. ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದು ದೂರಿದರು.

ತಾಲೂಕಿನ ಹಲವು ಕಡೆ ಸರ್ಕಾರಿ ಜಮೀನು ಒತ್ತುವರಿಗಳಾಗಿವೆ. ಇದಕ್ಕೆ ಅಧಿಕಾರಿಗಳ ಜವಾಬ್ದಾರಿತನವೇ ಕಾರಣ. ಇನ್ನು ಎಚ್ಚೆತ್ತು ಸರಕಾರಿ ಆಸ್ತಿಯನ್ನು ಉಳಿಸಬೇಕೆಂದು ಅಧಿಕಾರಿಗಳಿಗೆ ಎಚ್ಚರಿಸಿದರು

ತಾಪಂ ಇಒ ಕೃಷ್ಣ, ಬಿಇಒ ಶಿವಮೂರ್ತಿ, ಪಿಡಬ್ಲ್ಯೂಡಿ ಎ ಇ ಇ ಸತೀಶ್ ಚಂದ್ರ, ತೋಟಗಾರಿಕೆ ಇಲಾಖೆ ಎಡಿ ಶಾಂತ, ಸಸ್ಕಾಂ ಎ ಇ ಇ ವೀರೇಶ್, ಅಬಕಾರಿ ಇಲಾಖೆ ಪರಶಿವಮೂರ್ತಿ, ಪುರಸಭೆ ಮುಖ್ಯ ಅಧಿಕಾರಿ ವಸಂತಕುಮಾರಿ, ಹೇಮಂತ್ ರಾಜ್, ಅರಣ್ಯ ಅಧಿಕಾರಿ ರಾಜೇಶ್ ಹಾಜರಿದ್ದರು,

ಜಿಲ್ಲಾಸ್ಪತ್ರೆ ಕಸದ ಮೂಟೆ, ತರಾಟೆ

ತುಮಕೂರು: ಜಿಲ್ಲಾಸ್ಪತ್ರೆಯ ಐಸಿಯು ವಾರ್ಡ್‌ನ ಶೌಚಾಲಯದಲ್ಲಿ ರಾಶಿ ರಾಶಿ ಕಸದ ಮೂಟೆಗಳ ಕಂಡ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಕ್ಷಣ ಕಸದ ಮೂಟೆಯನ್ನು ತೆರವುಗೊಳಿಸದಿದ್ದಲ್ಲಿ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾ ಶಸ್ತಚಿಕಿತ್ಸಕ ಡಾ. ಅಸ್ಗರ್‌ಬೇಗ್ ಅವರಿಗೆ ಎಚ್ಚರಿಕೆ ನೀಡಿದರು.

ಅವರು ಜಿಲ್ಲಾಸ್ಪತ್ರೆಯ ಮಕ್ಕಳ ವಿಭಾಗ, ಡೆಂಘೀ ವಿಭಾಗ, ನವಜಾತ ಶಿಶು ವಿಭಾಗ, ಹೆರಿಗೆ ಕೊಠಡಿ, ಮಹಿಳಾ ವಿಭಾಗ, ಪ್ರಸವಪೂರ್ವ ಆರೈಕೆ ಕೊಠಡಿ, ಡಾಟಾ ಎಂಟ್ರಿ, ಮತ್ತಿತರ ವಿಭಾಗಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಆಸ್ಪತ್ರೆ ಸಿಬ್ಬಂದಿ, ವೈದ್ಯಾಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಡಾಟಾ ಎಂಟ್ರಿ ಆಪರೇಟರ್ ಕೊಠಡಿಯಂತೂ ಕೆಟ್ಟ ವಾಸನೆ ಮತ್ತು ಕತ್ತಲೆಯಿಂದ ಕೂಡಿದೆ. ಸಿಬ್ಬಂದಿ ಕೊಠಡಿಗಳಲ್ಲೇ ಶುಚಿಯಾಗಿಲ್ಲ. ರೋಗಿಗಳ ವಾರ್ಡ್ ಇನ್ನೆಷ್ಟರ ಮಟ್ಟಿಗೆ ಸ್ವಚ್ಛವಾಗಿಡುತ್ತೀರಾ? ಪ್ರತೀ ದಿನ ಸ್ವಚ್ಛಗೊಳಿಸುವುದಿಲ್ಲವೇ? ಆಸ್ಪತ್ರೆ ಸುತ್ತಮುತ್ತ ಸ್ವಚ್ಛತೆ ಮಾಡದಿದ್ದಲ್ಲಿ ಸೇವೆಯಿಂದ ವಜಾ ಮಾಡಲಾಗುವುದೆಂದು ಗ್ರೂಪ್ ಡಿ ನೌಕರರ ಮೇಲೆ ಸಿಡಿಮಿಡಿಗೊಂಡರು.

ಮಕ್ಕಳ ವಿಭಾಗದಲ್ಲಿದ್ದ ತ್ಯಾಜ್ಯ ವಸ್ತುಗಳನ್ನು ತಮ್ಮ ಸಮ್ಮುಖದಲ್ಲೇ ತೆರವು ಮಾಡಲು ಸೂಚಿಸಿದ ಡಿಸಿ, ತ್ಯಾಜ್ಯ ತೆರವು ವೇಳೆ ಇಲಿಗಳು ಹೊರಬಂದಿದ್ದನ್ನು ಕಂಡು, ಇಲಿಗಳು, ಸೊಳ್ಳೆಗಳನ್ನು ಸಾಕಿದ್ದೀರಾ ಎಂದು ಕಿಡಿ ಕಾರಿದರು. ತಕ್ಷಣ ಧೂಮೀಕರಣಕ್ಕೆ ತಾಕೀತು ಮಾಡಿದರು.

ಪ್ರತೀದಿನ ನೆಲ ಒರೆಸಬೇಕು. ಸಿಬ್ಬಂದಿ ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು. ಅನುದಾನ ಲಭ್ಯವಿದ್ದರೂ ನಿರ್ವಹಣೆ ಸಮರ್ಪಕವಾಗಿ ಮಾಡುತ್ತಿಲ್ಲ. ಖಾಸಗಿ ಆಸ್ಪತ್ರೆ ಒಮ್ಮೆ ನೋಡಿ ಬನ್ನಿ. ರೋಗಿಗಳಿಗೆ ಖಾಸಗಿಗಿಂತ ಉತ್ತಮ ನೈರ್ಮಲ್ಯ, ಚಿಕಿತ್ಸೆ ಸರಕಾರಿ ಆಸ್ಪತ್ರೆಯಲ್ಲಿ ಸಿಗಬೇಕೆಂದು ಖಡಕ್ ಸೂಚನೆ ನೀಡಿದರು. ಅನುಪಯುಕ್ತ ವೈದ್ಯಕೀಯ ಸಲಕರಣೆ ಕೂಡಲೇ ವಿಲೇವಾರಿ ಮಾಡಬೇಕು. ಆಸ್ಪತ್ರೆ ಹೊರಾಂಗಣದಲ್ಲಿ ಬೆಳೆದಿರುವ ಹುಲ್ಲು, ಕಳೆಗಿಡ ಕಿತ್ತು ಹಾಕಿಸಬೇಕು ಎಂದು ಸಿಬ್ಬಂದಿಗೆ ನಿರ್ದೇಶನ ನೀಡಿದರು.

ಡಾ. ಸಂತೋಷ್, ಡಿಎಂಒ ಡಾ. ಚೇತನ್ ಉಪಸ್ಥಿತರಿದ್ದರು.

ಕೊಡಿಗೆಹಳ್ಳಿ ಗ್ರಾಪಂ ಗ್ರಾಮ ಸಭೆ

ಬೆಂಗಳೂರು ಉತ್ತರ: ತಾಲೂಕಿನ ಕೊಡಿಗೆಹಳ್ಳಿ ಗ್ರಾಮ ಪಂಚಾಯಿತಿಯ ಗ್ರಾಮ ಸಭೆ ಯಶಸ್ವಿಯಾಗಿ ನೆರವೇರಿತು. ಮೊದಲ ಸುತ್ತಿನ ಗ್ರಾಮ ಸಭೆ ಅಧ್ಯಕ್ಷತೆವಹಿಸಿದ ವಿನೋದ ನರಸಿಂಹಮೂರ್ತಿ ಚಾಲನೆ ನೀಡಿದರು. ಕರ ವಸೂಲಿಗಾರ ರಮೇಶ್ ವರದಿ ಮಂಡಿಸಿದರು.

15ನೇ ಹಣಕಾಸು ಯೋಜನೆ ಅಡಿಯಲ್ಲಿ ಕ್ರಿಯಾ ಯೋಜನೆಗಳ ವರದಿ ತಯಾರಿಸಿ ಮಂಡಿಸಲಾಯಿತು. ಹಲವು ಸರ್ಕಾರಿ ಯೋಜನೆಗಳಿಗೆ ಸಂಬಂಧಪಟ್ಟಂತೆ ಚರ್ಚೆ ನಡೆಸಲಾಯಿತು. ಸ್ಥಳೀಯರಿಂದ ಅಹವಾಲುಗಳನ್ನು ಸ್ವೀಕರಿಸಿ ಶೀಘ್ರದಲ್ಲೇ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು. ಗ್ರಾಪಂ ಅಧ್ಯಕ್ಷರಾದ ವಿನೋದ ಪಿ ನರಸಿಂಹಮೂರ್ತಿ, ಉಪಾಧ್ಯಕ್ಷೆ ಭಾಗ್ಯವತಿ ಎಂ. ಮುನಿಯಪ್ಪ, ಗ್ರಾಪಂ ಸದಸ್ಯರಾದ, ಗಂಗರಾಜಮ್ಮ ಪ್ರಕಾಶ್ ಮೂರ್ತಿ, ಪುರುಷೋತ್ತಮ್, ಪುಷ್ಪಲತಾ ಪುಟ್ಟರಾಜು, ಶಿಲ್ಪ ರೇಣುಕಪ್ಪ,ಚಿಕ್ಕ ಕೊಡಿಗೆಹಳ್ಳಿ ನಾಗರಾಜು, ಸುರೇಶ್, ಸಾಕಮ್ಮ ಬೈರಪ್ಪ, ಲೋಕದೇವಿ ನಾಗರಾಜು, ಸಾವಿತ್ರಿ ಸದಾನಂದ, ಕೋಮಲ ಸೋಮಶೇಖರ, ಉಮಾದೇವಿ ಗಾಳಪ್ಪ, ನಂದನ ಮಹೇಶ್ ಹಾಗೂ ಕೊಡಿಗೆಹಳ್ಳಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಎನ್ ಭಾಗೀರಥಿ, ಕಾರ್ಯದರ್ಶಿ ಪ್ರವೀಣ್ ಕುಮಾರ ಹಾಜರಿದ್ದರು.

ಕುಂಬಳಗೂಡು ಗ್ರಾಪಂ ಅಧ್ಯಕ್ಷರ ಆಯ್ಕೆ

ಬೆಂಗಳೂರು ನಗರ: ನಗರದ ಅತಿ ದೊಡ್ಡ ಪಂಚಾಯಿತಿಯಾದ ಬೆಂಗಳೂರು ದಕ್ಷಿಣ ಯಶವಂತಪುರ ವಿಧಾನಸಭಾ ಕ್ಷೇತ್ರದ ಕುಂಬಳಗೂಡು ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರಾಗಿ ಎನ್.ದೇವರಾಜ್ ಅವಿರೋಧವಾಗಿ ಆಯ್ಕೆಯಾದರು.

ಒಟ್ಟು 50 ಸದಸ್ಯ ಬಲ ದೊಂದಿಗೆ ಪಂಚಾಯತಿ ಸ್ಥಾನಕ್ಕೆ ಯಾರೂ ಉಮೇದಾರರಾಗಿ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಬಿಇಒ ಜಯಲಕ್ಷ್ಮಿ ಅವಿರೋಧ ಘೋಷಣೆ ಮಾಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್.ಟಿ.ಸೋಮಶೇಖರ ನೂತನ ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದರು. ನಂತರ,' ಪಂಚಾಯಿತಿ ಅಭಿವೃದ್ಧಿ ಕೆಲಸಗಳಿಗೆ ಸಹಕಾರ ಇದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕುಂಬಳಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಚಿಕ್ಕರಾಜು, ರಾಮಕೃಷ್ಣ, ನರಸಿಂಹಮೂರ್ತಿ, ವೆಂಕಟೇಗೌಡ, ಉಪಾಧ್ಯಕ್ಷ ಗೋಪಾಲಕೃಷ್ಣ, ರಾಮೋಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ಬಿ ಎಚ್ ಪ್ರಭು, ಚಂದ್ರಪ್ಪ, ಶ್ರೀನಿವಾಸ್, ಚೇತನ್ ನಂಜೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರೇವಣ ಸಿದ್ದಯ್ಯ ಉಪಸ್ಥಿತರಿದ್ದರು.

ನೆಲಮಂಗಲದ ಟ್ರಾಫಿಕ್ ಸಮಸ್ಯೆ

ನೆಲಮಂಗಲ: ಬೆಂಗಳೂರಿನ ಹೆಬ್ಬಾಗಿಲು, ಹಲವು ಜಿಲ್ಲೆಗಳಿಗೆ ಸಂಪರ್ಕ ಕಲ್ಪಿಸುವ ನೆಲಮಂಗಲ ನಗರದಲ್ಲಿ ಪ್ರತಿನಿತ್ಯ ಸಹಸ್ರಾರು ಜನ ಟ್ರಾಫಿಕ್ ಸಮಸ್ಯೆಯಿಂದ ಹೈರಾಣಾಗುತ್ತಿದ್ದಾರೆ ಹಾಗೂ ರಾಷ್ಟ್ರೀಯ ಹೆದ್ದಾರಿ ಅವೈಜ್ಞಾನಿಕವಾಗಿ ರಸ್ತೆ ನಿರ್ಮಾಣ ಹಾಗೂ ಸರ್ವಿಸ್ ರಸ್ತೆ ಇಕ್ಕಟ್ಟಾಗಿದ್ದು ವಾಹನ ಸವಾರರು ಟ್ರಾಫಿಕ್ ಸಮಸ್ಯೆ ಎದುರಿಸುತ್ತಿದ್ದಾರೆ. ಇದರ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಎಂದು ನೆಲಮಂಗಲ ಶಾಸಕರಾದ ಎನ್.ಶ್ರೀನಿವಾಸ್ ವಿಧಾನಮಂಡಲ ಅಧಿವೇಶನದ ಗಮನ ಸೆಳೆಯುವ ಸೂಚನೆಯಡಿ ಮಾತನಾಡಿದರು.ಹಾಸನ.ಕುಣಿಗಲ್. ಹಾಗೂ ತುಮಕೂರು ಕಡೆ ಹೋಗುವವರು ಹಾಗೂ ನನ್ನ ಕ್ಷೇತ್ರದ ಜನರು ಪ್ರತಿನಿತ್ಯ ಟ್ರಾಫಿಕ್ ಸಮಸ್ಯೆ ಎದುರಿಸುತ್ತಿದ್ದಾರೆ. ಅವೈಜ್ಞಾನಿಕವಾಗಿ ರಸ್ತೆ ನಿರ್ಮಾಣ ಹಾಗೂ ಕೆಲವು ಕಡೆ ಸರ್ವಿಸ್ ರಸ್ತೆಯನ್ನೇ ನಿರ್ಮಾಣ ಮಾಡಿಲ್ಲ. ಸರ್ವಿಸ್ ರಸ್ತೆ ಇಕ್ಕಟ್ಟಾಗಿರುವುದೇ. ಟ್ರಾಫಿಕ್ ಸಮಸ್ಯೆಗೆ ಕಾರಣವಾಗಿದೆ, ಕುಣಿಗಲ್ ಬೈಪಾಸ್ ನಲ್ಲಿ ಮೇಲ್ಸೇತುವೆ ನಿರ್ಮಾಣ ಮಾಡಿದರೆ ಶಾಶ್ವತವಾದ ಪರಿಹಾರ ಸಿಗಲಿದೆ ಎಂದರು. ಸರಕಾರ ಇತ್ತ ಗಮನಹರಿಸಬೇಕು ಎಂದು ಶಾಸಕರು ಮನವಿ ಮಾಡಿದರು.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ರವರ ನ್ಯಾಯಾಲಯ, ಮಧುಗಿರಿ
ಸೀಮಿಸ್ ನಂ 272/2024

ಅರ್ಜಿದಾರರು: 1. ರಂಗಮ್ಮ ಬಿನ್ ಲೇಟ್ ನರಸಿಂಹಯ್ಯ ಕೋಂ:ಶಿವರಾಜು, ವಯಸ್ಸು 38 ವರ್ಷ ವಾಸ-ಗಿರೇಗೊಂಡನಹಳ್ಳಿ ಗ್ರಾಮ, ದೊಡ್ಡೇರಿ ಹೋಬಳಿ, ಮಧುಗಿರಿ ತಾಲ್ಲೂಕು. 2. ಮಂಗಳಮ್ಮ ಬಿನ್ ಲೇಟ್ ನರಸಿಂಹಯ್ಯ ಕೋಂ:ನರಸಿಂಹಮೂರ್ತಿ, ವಯಸ್ಸು 35 ವರ್ಷ ವಾಸ:ಮಲ್ಲೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮಧುಗಿರಿ ತಾಲ್ಲೂಕು.
ಎದುರುದಾರರು: ತಹಶೀಲ್ದಾರ್-ಗ್ರೇಡ್-2, ಮಧುಗಿರಿ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ 1 ಮತ್ತು 2ನೇ ಅರ್ಜಿದಾರರ ತಂದೆಯಾದ ನರಸಿಂಹಯ್ಯ ಬಿನ್ ದಾಸಪ್ಪ ರವರು ದಿನಾಂಕ: 07-04-2018 ರಂದು ಮಧುಗಿರಿ ತಾಲ್ಲೂಕು, ಕಸಬಾ ಹೋಬಳಿ, ಮಲ್ಲೇನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ:- 30/08/2024 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ತಾವಾಗಲಿ, ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ 2024 ನೇ ವರ್ಷದ ಜುಲೈ ತಿಂಗಳ 24 ರಂದು.

ನ್ಯಾಯಾಲಯದ ಅಪ್ಪಣೆಯ ಮೇರೆಗೆ,
ಶಿರಸ್ತೆದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಎಂ.ಶಿವಣ್ಣ , ಮಧುಗಿರಿ.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ರವರ ನ್ಯಾಯಾಲಯ, ಮಧುಗಿರಿ
ಸೀಮಿಸ್ -274/2024

ಅರ್ಜಿದಾರರು: 1. ಶ್ರೀಮತಿ ವಸುಂದರಾದೇವಿ ಎಸ್.ಎಲ್ ಕೋಂ.ಸುಂದರ ರಾಜ್ ಜಿ.ವಿ ಬಿನ್ ಲೇಟ್ ಎಸ್.ಲಕ್ಷ್ಮೀಪತಯ್ಯ, ವಯಸ್ಸು ಸುಮಾರು 75 ವರ್ಷ. ವಾಸ:ಶ್ರಾವಂಡನಹಳ್ಳಿ ಗ್ರಾಮ(ಮತ್ತು ಅಂಚೆ), ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲೂಕು.

ವಿರುದ್ಧ

ಎದುರುದಾರರು: ಉಪ-ತಹಶೀಲ್ದಾರ್, ನಾಡಕಚೇರಿ, ಕೊಡಿಗೇನಹಳ್ಳಿ, ಕೊಡಿಗೇನಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು,

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ ಅರ್ಜಿದಾರರ ತಂದೆಯಾದ ಎಸ್.ಲಕ್ಷ್ಮೀಪತಯ್ಯ ಬಿನ್ ಪಾಪಣ್ಣರವರು ದಿನಾಂಕ: 18-12-1963 ರಂದು ಮಧುಗಿರಿ ತಾಲ್ಲೂಕು, ಕೊಡಿಗೇನಹಳ್ಳಿ ಹೋಬಳಿ, ಶ್ರಾವಂಡನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಅರ್ಜಿದಾರರು ಸದರಿ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ - 30/08/2024 ರಂದು ಬೆಳಿಗ್ಗೆ 11-00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ 2024 ನೇ ವರ್ಷದ ಜುಲೈ ತಿಂಗಳ 24 ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು.
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು.
ಎಂ.ಎಸ್.ಪುಷ್ಪಲತಾ, ಮಧುಗಿರಿ.

IN THE COURT OF THE PRL, CIVIL JUDGE AND JMFC AT MADHUGIRI.
O. S No 470 /2021

PLAINTIF: M/S. STATE BANK OF INDIA Madhugiri Branch, Madhugiri Town, is one of the Branch, having Head Office at Bangalore, and the Madhugiri Branch is represented by its Present Branch Manager by name D. Srenivasulu aged about 36 years.

V/S

1) Sri. Maranna s/o Kotekallappa Aged about 50 years
2)Mamatha D/o Maranna, aged 31 years
3) Kavitha d/o Maranna a/a 27 years,
4) Lakshmi d/o Maranna a/a 25 years,
5) Prema d/o Maranna a/a 21 years
6) Jyothi do Maranna a/a 19 years
All are residing at Dodderi village, Dodderi hobli Madhugiri taluk.

PaperPublicationasperthecourtorder

That the above named plaintiff has filed the above suit for Recovery of money due by the defendant. You being the defendant inspite of taking sufficient steps against you through court, you have avoid to receive notices issued by the said court, hence you are hereby inform to appear before this court on 9-09-24 personally or through an advocate. If you are unable to appear the Hon'ble court you will be placed exparte and case will be proceeded against you. Given under my hand and the seal of the court of this day at Madhugiri.

By order of the court
Sherasthedar
Prl . Civil judge Madhugiri.
Advocate for appellant.
S.Raghuantha Reddy. B.A.LL.B.
22nd ward,Raghavendara coloney
Madhugiri town.

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ರವರ ನ್ಯಾಯಾಲಯ, ಮಧುಗಿರಿ.
ಸೀಮಿಸ್ ಸಂಖ್ಯೆ -271/2024

ಅರ್ಜಿದಾರರು: 1.ಅಮೀತ್ ನಾಯ್ಕ ಬಿನ್ ಜಯರಾಮ ನಾಯ್ಕ, 38 ವರ್ಷ. 2. ಕಮಲಮ್ಮ ಕೋಂ ಲೇಟ್ ರಾಮನಾಯ್ಕ, 60 ವರ್ಷ. 3. ನವೀನ್ ಕುಮಾರ್ ಬಿನ್ ಲೇಟ್ ರಾಮನಾಯ್ಕ -33 ವರ್ಷ, 4. ನಾಗೇಂದ್ರನಾಯ್ಕ ಬಿನ್ ಲೇಟ್ ರಾಮನಾಯ್ಕ, 31 ವರ್ಷ. 5. ಸುಬ್ಬನಾಯ್ಕ ಬಿನ್ ಲೇಟ್ ರಾಮನಾಯ್ಕ-,29 ವರ್ಷ. ಅರ್ಜಿದಾರ 2 ರಿಂದ 5 ರವರ ವಾಸ: #123, ಸಿರಿಗೊನಹಳ್ಳಿ ಗ್ರಾಮ, ಕೊರಟಗೆರೆ ತಾಲ್ಲೂಕು,6. ಉಮಾದೇವಿ ಕೋಮ್ ಲೇಟ್ ರಾಜುನಾಯ್ಕ -50 ವರ್ಷ, 7. ಪ್ರತಾಪ್ ಬಿನ್ ಲೇಟ್ ರಾಜುನಾಯ್ಕ -17 ವರ್ಷ 8.ಶಿವಕುಮಾರ್ ಬಿನ್ ಲೇಟ್ ರಾಜುನಾಯ್ಕ-16 ವರ್ಷ ಅರ್ಜಿದಾರ 7 & 8 ರವರು ಅಪ್ರಾಪ್ತರಾಗಿದ್ದು, ಅವರ ಪರವಾಗಿ 6ನೇ ಅರ್ಜಿದಾರರು ಉಮಾದೇವಿ. ಅರ್ಜಿದಾರ 1, 6 ರಿಂದ 8ರವರ ವಾಸ: ದಾದಗೊಂಡನಹಳ್ಳಿ ಗ್ರಾಮ,ಐ.ಡಿ.ಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.

ವಿರುದ್ಧ

ಡೆಪ್ಯೂಟಿ ತಹಶೀಲ್ದಾರ್, ನಾಡಕಛೇರಿ, ಐ.ಡಿ.ಹಳ್ಳಿ ಹೋಬಳಿ, ಮಧುಗಿರಿ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ.

ಮೇಲ್ಕಂಡ 1ನೇ ಅರ್ಜಿದಾರರ ತಂದೆ, ಅರ್ಜಿದಾರ 2 & 6 ರವರ ಭಾವ, ಅರ್ಜಿದಾರ 3 ರಿಂದ 5, 7 & 8 ರವರ ದೊಡ್ಡಪ್ಪನಾದ ಜಯರಾಮನಾಯ್ಕ ಬಿನ್ ಭೀಮನಾಯ್ಕ ರವರು ದಿನಾಂಕ: 31/05/2005 ರಂದು ಮಧುಗಿರಿ ತಾಲ್ಲೂಕು, ಐ.ಡಿ.ಹಳ್ಳಿ ಹೋಬಳಿ ದಾದಗೊಂಡನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿದ್ದು, ಈ ಮೇಲ್ಕಂಡ ಮೃತರ ಮರಣ ಸಮರ್ಥನಾ ಪತ್ರವನ್ನು ಪಡೆಯಲು ಈ ಮೇಲ್ಕಂಡ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಮೃತರ ರವರ ಬೇರೆ ಯಾರಾದರೂ ವಾರಸುದಾರರು ಇದ್ದಲ್ಲಿ ದಿನಾಂಕ: 30/8/20 2024 ರಂದು ಬೆಳಗ್ಗೆ 11-00 ಗಂಟೆಗೆ ಖುದ್ದು ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ತಾಜರಾಗಿ ತಕರಾರು ಸಲ್ಲಿಸಬಹುದು. ಇಲ್ಲವಾದ್ದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ, 2024 ನೇ ವರ್ಷದ ಜುಲೈ ತಿಂಗಳ 24 ನೇ ದಿನ.

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಶಿರಸ್ತೇದಾರರು
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ರವರ ನ್ಯಾಯಾಲಯ, ಮಧುಗಿರಿ.
ಅರ್ಜಿದಾರರ ಪರ ವಕೀಲರು
ತಿರುಮಲಯ್ಯ , ಮಧುಗಿರಿ.

ಸಮಾಚಾರ ಸಣ್ಣದಲ್ಲ

ಪಿಂಚಣಿ ಆಂದೋಲನ ಜಾಗೃತಿ ಜಾಥಾ ಇಂದು

ತುಮಕೂರು: ಕಂದಾಯ ಇಲಾಖೆ ಹಾಗೂ ಮಹಾನಗರ ಪಾಲಿಕೆ ಸಹಯೋಗದಲ್ಲಿ ತುಮಕೂರು ತಾಲೂಕು ವ್ಯಾಪ್ತಿಯ ಅರ್ಹ ನಾಗರಿಕರಿಗೆ ಸಾಮಾಜಿಕ ಭದ್ರತಾ ಯೋಜನೆಯಡಿ ವಿವಿಧ ಮಾಸಾಶನ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಜುಲೈ 26ರಂದು ಬೆಳಗ್ಗೆ 7 ಗಂಟೆಗೆ ಪಿಂಚಣ ಆಂದೋಲನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರ ನೇತೃತ್ವದಲ್ಲಿ ನಡೆಯಲಿರುವ ಈ ಜಾಥಾ ಕಾರ್ಯಕ್ರಮವು ನಗರದ ಬನಶಂಕರಿ ದೇವಸ್ಥಾನದಿಂದ ಶಾಂತಿನಗರ-ವಿಶ್ವಣ್ಣ ಲೇಔಟ್‌ನ ಮಸೀದಿ ಮುಂಭಾಗದ ಮೂಲಕ ಮರಳೂರು ದಿಣ್ಣೆಗೆ ತಲುಪಲಿದೆ. ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ, ಪಾಲಿಕೆ ಆಯುಕ್ತರು, ಸದಸ್ಯರು, ಕಂದಾಯ ನಿರೀಕ್ಷಕರು, ನೀರು ಸರಬರಾಜುದಾರರು, ಕಂದಾಯ ಇಲಾಖೆಯ ಅಧಿಕಾರಿ/ನೌಕರರು ಜಾಥಾದಲ್ಲಿ ಭಾಗವಹಿಸಲಿದ್ದಾರೆ ಎಂದು ತಹಸೀಲ್ದಾರ್ ಸಿದ್ದೇಶ್ ತಿಳಿಸಿದ್ದಾರೆ.

ದಿಬ್ಬೂರಹಳ್ಳಿಯ ಕರಗ ಮಹೋತ್ಸವ

ಶಿಡ್ಲಘಟ್ಟ : ತಾಲೂಕಿನ ದಿಬ್ಬೂರಹಳ್ಳಿ ಗ್ರಾಮದ ಪ್ರಸಿದ್ದ ಗ್ರಾಮದೇವತೆಗಳ ಜಾತ್ರಾ ಮಹೋತ್ಸವ ಹಾಗೂ ಕರಗ ಮಹೋತ್ಸವ ಸೋಮವಾರ ಅತ್ಯಂತ ಅದ್ದೂರಿಯಾಗಿ, ವಿಜೃಂಭಣೆಯಿಂದ ನಡೆಯಿತು. ತಾಲೂಕಿನ ಗ್ರಾಮ ದೇವತೆಗಳ ಜಾತ್ರಾ ಮಹೋತ್ಸವದ ಹಿನ್ನಲೆಯಲ್ಲಿ ಹೂವಿನ ಕರಗ ಹೊತ್ತ ಹುಲಿಬೆಲೆ ವರರಘು ಪ್ರಸಾದ್ ರವರ ಮತ್ತು ತಂಡದ ವೀರಕುಮಾರರು ಗಂಗಮ್ಮ ದೇವಾಲಯದಲ್ಲಿ ದೇವಿಗೆ ವಿಶೇಷ ಪೂಜೆಗಳನ್ನು ನೆರವೇರಿಸಿ, ದೇವಾಲಯದ ಪ್ರಾಂಗಣವನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ದೇವಾಲಯದಿಂದ ಕರಗ ಹೊರ ಬರುತ್ತಿದ್ದಂತೆ ದೇವಾಲಯದ ಬಳಿ ನೆರೆದಿದ್ದ ಸಾವಿರಾರು ಭಕ್ತರು ಗೋವಿಂದ ಗೋವಿಂದ ಕೂಗುತ್ತಾ ಕರಗಕ್ಕೆ ಮಲ್ಲಿಗೆ ಹೂವು ಚೆಲ್ಲಿ ಸಂಭ್ರಮಿಸಿ ದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ದಿಬ್ಬೂರಹಳ್ಳಿ ಗ್ರಾಮಸ್ಥರು ಹಾಗೂ ಯುವಕರು ಜಾತ್ರಾ ಮಹೋತ್ಸವ ಹಾಗೂ ಕರಗ ಮಹೋತ್ಸವದಲ್ಲಿ ಪಾಲ್ಗೊಂಡಿದ್ದರು.

ಬಾಡಿಗೆ ಕಟ್ಟಡ : ಮಾಲೀಕರಿಂದ ಅರ್ಜಿ

ತುಮಕೂರು: ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಡಿ ಸರ್ಕಾರಿ ಮೆಟ್ರಿಕ್ ನಂತರದ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಸುಸಜ್ಜಿತ ಬಾಡಿಗೆ ಕಟ್ಟಡ ಬೇಕಾಗಿದ್ದು, ಕಟ್ಟಡ ಮಾಲೀಕರಿಂದ ಅರ್ಜಿ ಆಹ್ವಾನಿಸಿದೆ. ತುಮಕೂರು ನಗರ ವ್ಯಾಪ್ತಿಯಲ್ಲಿ ಸುಮಾರು 150ಕ್ಕೂ ಹೆಚ್ಚಿನ ವಿದ್ಯಾರ್ಥಿಗಳ ವಾಸ್ತವ್ಯ ಹಾಗೂ ಊಟೋಪಚಾರಕ್ಕಾಗಿ ಸುಸಜ್ಜಿತವಾದ ಅಡುಗೆ ಕೋಣೆ, ಸ್ವಂತ ಕೊಳವೆ ಬಾವಿ ನೀರಿನ ವ್ಯವಸ್ಥೆ, ಸೋಲಾರ್ ವಾಟರ್ ಹೀಟರ್, ಪ್ರತ್ಯೇಕ ಶೌಚಾಲಯ ಹಾಗೂ ಸ್ನಾನಗೃಹ ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ 2 ಕಟ್ಟಡಗಳು ಬೇಕಾಗಿದೆ. ಆಸಕ್ತ ಕಟ್ಟಡ ಮಾಲೀಕರು ಸಹಾಯಕ ನಿರ್ದೇಶಕ(ಗ್ರೇಡ್-1)ರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ತುಮಕೂರು ತಾಲ್ಲೂಕು(ಜಿಲ್ಲಾ ಪಂಚಾಯತ್ ಕಚೇರಿ ಪಕ್ಕ, ಬಿ.ಎಚ್. ರಸ್ತೆ,) ದೂ.ವಾ.ಸಂ. 9480843205ನ್ನು ಸಂಪರ್ಕಿಸಬೇಕೆಂದು ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್-1 ತಿಳಿಸಿದ್ದಾರೆ.

ಕರಡಿ ದಾಳಿ ವೃದ್ಧಗೆ ತೀವ್ರ ಗಾಯ

ಅರಸೀಕೆರೆ: ತೋಟದ ಮನೆಯ ಬಳಿ ನಿಂತಿದ್ದ ವೃದ್ದರ ಮೇಲೆ ಕರಡಿ ದಾಳಿ ಮಾಡಿ ಗಂಭಿರ ಗಾಯಗೊಳಿಸಿದೆ. ಮಹಾಲಿಂಗಪ್ಪ (75) ಕರಡಿ ದಾಳಿಯಿಂದ ಗಂಭೀರವಾಗಿ ಗಾಯಗೊಂಡ ವೃದ್ದ. ತಾಲೂಕಿನ ಬಾಣಾವರ ಹೋಬಳಿ, ಜನ್ನಾವರ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಕರಣಿ ವೃದ್ದನ ತಲೆಯ ಚರ್ಮವನ್ನೇ ಕಿತ್ತುಹಾಕಿ, ಮುಖವನ್ನು ಗಾಯಗೊಳಿಸಿದೆ. ಬೆಳಗ್ಗೆ 6 ಗಂಟೆ ವೇಳೆ ಮಹಾಲಿಂಗಪ್ಪ, ಮನೆಯ ಮುಂದೆ ನಿಂತಿದ್ದರು. ಈ ವೇಳೆ ಕರಳಿ ಏಕಾಏಕಿ ದಾಳಿ ಮಾಡಿದೆ. ಆದರೂ ಎದೆಗುಂದದ ಕರಡಿ ಜತೆ ಹೋರಾಡಿ ವೃದ್ದ ಪ್ರಾಣ ಉಳಿಸಿಕೊಂಡಿದ್ದಾರೆ. ಗಾಯಾಳುವಿಗೆ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ರವಾನೆ ಮಾಡಲಾಗಿದೆ.
ಮತ್ತೊಂದೆಡೆ ಇದೇ ತಾಲೂಕಿನ ಮುರುಂಡಿ ಗ್ರಾಮದ ನಂಜಾಗಲ್ಲು ಗುಡ್ಡದ ಮೇಲೆ ಮೂರು ಚಿರತೆ ಪ್ರತ್ಯಕ್ಷವಾಗಿ ಸ್ಥಳೀಯರಲ್ಲಿ ಭಯ ಹುಟ್ಟಿಸಿವೆ. ಜಮೀನು, ಜಾನುವಾರು ಮೇಯಿಸಲು ಹೋಗಲು ರೈತರು,ಜನರು ಭಯ ಪಡುತ್ತಿದ್ದು, ಆತಂಕ ಸೃಷ್ಟಿಸಿರುವ ಚಿರತೆಗಳನ್ನು ಶೀಘ್ರ ಸೆರೆ ಹಿಡಿಯುವಂತೆ ಅರಣ್ಯ ಇಲಾಖೆಗೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

{ ಎನ್. ಚಲುವರಾಯಸ್ವಾಮಿ } ಸಚಿವ

ಮಂಡ್ಯದಲ್ಲಿ ನಡೆಯಲಿರುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಾಹಿತ್ಯ, ಸಾಂಸ್ಕೃತಿಕ ಶ್ರೀಮಂತಿಕೆಯ ಜತೆಗೆ ಪಾರದರ್ಶಕವಾಗಿರಲಿ.

ಅರೇಹಳ್ಳಿಯಲ್ಲಿ ಕೆರೆ ಒಡೆದು ಭತ್ತದ ಸಸಿ ಮಡಿ ನೀರು ಪಾಲು

ಹಾಸನದಲ್ಲಿ ಮಳೆ ಆರ್ಭಟ

ಹಾಸನ: ಜಿಲ್ಲೆಯಲ್ಲಿ ವರುಣನ ಆರ್ಭಟ ಮುಂದುವರಿದಿದೆ. ಅದರಲ್ಲೂ ಮಲೆನಾಡು ಭಾಗದಲ್ಲಿ ಧೋ ಎಂದು ಸುರಿಯುತ್ತಿದೆ. ಹಾಗೆಯೇ ಹಾನಿಯೂ ಮುಂದುವರಿದಿದೆ. ಬೇಲೂರು ತಾಲೂಕು ಅರೇಹಳ್ಳಿಯಲ್ಲಿ ಭಾರಿ ಮಳೆಗೆ ಕೆರೆ ಒಡೆದು ನಾಟಿ ಮಾಡಿದ್ದ ಭತ್ತದ ಸಸಿ ಕೊಚ್ಚಿಹೋಗಿವೆ.

ಮಂಜಪ್ಪ, ಚಂದ್ರೇಗೌಡ, ಬಸವರಾಜು, ಸೀತಮ್ಮ, ಯು.ಎಂ. ಇಂದಿರಾ, ಯು.ಡಿ.ಮಂಜುನಾಥ್ ಎಂಬುವವರಿಗೆ ಸೇರಿದ 12 ಎಕರೆ ಪ್ರದೇಶದಲ್ಲಿ ನಾಟಿ ಮಾಡಿದ್ದ ಭತ್ತದ ಸಸಿ ಮಣ್ಣು ಪಾಲಾಗಿವೆ. ಐಬಿಸಿ ಎಸ್ಟೇಟ್ ವ್ಯಾಪ್ತಿಯಲ್ಲಿರುವ ಕೆರೆ ಒಡೆದು ಉತ್ತೊಳಲು ಗ್ರಾಮದ ರೈತರ ಜಮೀನಿಗೆ ನೀರು ನುಗ್ಗಿದೆ. ಆಗಿರುವ ನಷ್ಟಕ್ಕೆ ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿದ್ದಾರೆ.

ಹಾಸನ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಭಾರಿ ಬುಡಮೇಲಾಗಿದೆ. ಫುಟ್ಬಾಲ್ ಕೋರ್ಟ್ ಬಳಿ ಬೆಳೆದಿದ್ದ ಮರ ಮಳೆ-ಗಾಳಿಗೆ ಬುಡಮೇಲಾಗಿದೆ. ಇನ್ನು ಸಕಲೇಶಪುರ, ಆಲೂರು, ಬೇಲೂರು, ಹಾಸನದಲ್ಲಿ ಜೋರು ಮಳೆ ನಿರಂತರವಾಗಿ ಮುಂದುವರಿದಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಹೆಚ್ಚಿದ ಒಳಹರಿವು: ಸಕಲೇಶಪುರ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಭಾರೀ ಮಳೆ ಆಗುತ್ತಿರುವುದರಿಂದ ಹೇಮಾವತಿ ಜಲಾಶಯಕ್ಕೆ ಒಳ ಹರಿವು ಹೆಚ್ಚುತ್ತಿದೆ. ಹೊಳೆ ಮಲ್ಲೇಶ್ವರ ದೇಗುಲದ ಮೆಟ್ಟಿಲು ಜಲಾವೃತವಾಗಿದೆ.

ಭೂ ಕುಸಿತ ಭೀತಿ ಅಧಿಕಾರಿಗಳ ವಿರುದ್ಧ ಆಕ್ರೋಶ
ಸಕಲೇಶಪುರ ತಾಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಹಲವೆಡೆ ಭೂ ಕುಸಿತ ಭೀತಿ ಎದುರಾಗಿದೆ. 5 ಮನೆಗಳಿಗೆ ಆತಂಕ ಎದುರಾಗಿದೆ. ಚತುಷ್ಪಥ ರಸ್ತೆಯ ಎರಡೂ ಬದಿಯಲ್ಲಿ ಮಣ್ಣು ಕುಸಿಯುತ್ತಿದೆ. ಹೆದ್ದಾರಿ ಕಾಮಗಾರಿ ಸಿಬ್ಬಂದಿ ಅಲ್ಲೇ ಮೊಕ್ಕಾಂ ಹೂಡಿದ್ದಾರೆ. ಸ್ಥಳಕ್ಕೆ ಬಾರದ ಅಧಿಕಾರಿಗಳ ವಿರುದ್ಧ ಕುಟುಂಬ ಸದಸ್ಯರು ಆಕ್ರೋಶಗೊಂಡಿದ್ದಾರೆ.

ಸಕಲೇಶಪುರದಲ್ಲಿ ಹೇಮಾವತಿ ನದಿ ಉಕ್ಕಿಹರಿಯುತ್ತಿದೆ. ತೇಜಸ್ವಿ ಚಿತ್ರಮಂದಿರ ಸಮೀಪದ ಭತ್ತದ ಗದ್ದೆ, ತೋಟ ಜಲಾವೃತವಾಗಿವೆ.

ಇದರಿಂದ 45-50 ಸಾವಿರ ಕ್ಯುಸೆಕ್ ನೀರು ಬಿಡುಗಡೆ ಸಾಧ್ಯತೆ ಇದೆ. ಒಳಹರಿವು ಇನ್ನೂ ಹೆಚ್ಚಾದರೆ 50 ಸಾವಿರ ಕ್ಯೂಸೆಕ್‌ಗಿಂತ ಹೆಚ್ಚಿನ ನೀರನ್ನು ಅಣೆಕಟ್ಟೆಯಿಂದ ಬಿಡುಗಡೆ ಮಾಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಹೇಮಾವತಿ ನದಿಯ ತಗ್ಗು ಪ್ರದೇಶದ ಮತ್ತು ನದಿಯ ಎರಡು ದಂಡೆಯಲ್ಲಿರುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚನೆ. ನೀಡಲಾಗಿದೆ. ಇನ್ನೊಂದೆಡೆ ಬೇಲೂರಿನ ಯಗಚಿ ಜಲಾಶಯ ಸಹ ಸಂಪೂರ್ಣ ಭರ್ತಿಯಾಗಿದೆ. ಐದು ಕ್ರಸ್ಟ್ ಗೇಟ್ ಮೂಲಕ ಜಲಾಶಯದಿಂದ ನೀರು ಬಿಡುಗಡೆ ಮಾಡಲಾಗಿದೆ.

ಕೇಂದ್ರ ಸರಕಾರದ ಬಜೆಟ್‌ನಲ್ಲಿ ರಾಜ್ಯಕ್ಕೆ ಚೊಂಬು: ಪ್ರತಿಭಟನೆ

ತುಮಕೂರು: ಕೇಂದ್ರದ ಬಜೆಟ್‌ನಲ್ಲಿ ರಾಜ್ಯವನ್ನು ಕಡೆಗಣ ಸಲಾಗಿದೆ.ರಾಜ್ಯದ ಬಗ್ಗೆ ಕೇಂದ್ರ ಸರಕಾರ ಮಲತಾಯಿ ಧೋರಣೆಯನ್ನು ಮುಂದುವರೆಸಿ, ಚೊಂಬು ನೀಡಿದೆ ಎಂದು ಆಪಾದಿಸಿ, ಜಿಲ್ಲಾ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಭದ್ರಮ್ಮ ವೃತ್ತಕ್ಕೆ ತೆರಳಿದ ಕಾಂಗ್ರೆಸ್ ಕಾರ್ಯಕರ್ತರು, ತಲೆಯ ಮೇಲೆ,ಕೈಯಲ್ಲಿ ಚೊಂಬು ಪ್ರದರ್ಶಿಸುವ ಮೂಲಕ ಕೇಂದ್ರ ಸರಕಾರ ಈ ಬಾರಿಯೂ ಕರ್ನಾಟಕಕ್ಕೆ ಚೆಂಬು ನೀಡಿದೆ. ರಾಜ್ಯದಿಂದ ಬಿಜೆಪಿಯ 19 ಜನ ಸಂಸತ್ ಸದಸ್ಯರು ಆಯ್ಕೆಯಾಗಿ, ನಾಲ್ವರು ಸಚಿವರಾಗಿದ್ದರೂ ರಾಜ್ಯಕ್ಕೆ ಮಲತಾಯಿ ಧೋರಣೆಯನ್ನು ಮುಂದುವರೆಸಿದೆ ಎಂದು ಆಪಾದಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರಗೌಡ, ಕೇಂದ್ರ ಸರಕಾರದಲ್ಲಿ ರಾಜ್ಯದ 4 ಜನ ಮಂತ್ರಿಗಳಿದ್ದಾಗ್ಯೂ, ರಾಜ್ಯಕ್ಕೆ ಬಿಜೆಪಿಯಿಂದ ಘನ ಘೋರ ಅನ್ಯಾಯವಾಗಿದೆ. ಮಿತ್ರ ಪಕ್ಷಗಳಿಂದ ಕುರ್ಚಿ ಉಳಿಸಿಕೊಳ್ಳಲು ಬಿಹಾರ ಮತ್ತು ಆಂಧ್ರ ಪ್ರದೇಶಕ್ಕೆ ಬಜೆಟ್‌ನ ಬಹುಪಾಲು ನೀಡಿ, ಕರ್ನಾಟಕವನ್ನು ಕಡೆಗಣ ಸಲಾಗಿದೆ. ಇದರ ವಿರುದ್ಧ ಮುಂದಿನ ಮೂರು ದಿನಗಳ ಕಾಲ ಕೇಂದ್ರ ಸರಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸಲಿದೆ ಎಂದರು.

ಮುಖಂಡ ಇಕ್ಬಾಲ್ ಅಹಮದ್ ಮಾತನಾಡಿ,ಕೇಂದ್ರದ ಮಲತಾಯಿ ಧೋರಣೆ ಈ ವರ್ಷದ ಬಜೆಟ್‌ನಲ್ಲಿಯೂ ಮುಂದುವರೆ ದಿದ್ದು, ಕರ್ನಾಟಕದಿಂದ ವಾರ್ಷಿಕ ಸುಮಾರು 4.50 ಲಕ್ಷ ಕೋಟಿಗೂ ಹೆಚ್ಚು ಜಿಎಸ್ಟಿ ಬಾಚಿಕೊಂಡು, ಉತ್ತರ ಭಾರತದ ಬಿಹಾರ ವನ್ನು ಉದ್ಧಾರ ಮಾಡಲು ಹೊರಟಿದೆ. ಜಿಎಸ್ಟಿ ಪಾಲು ಪಡೆಯಲು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪ್ರತಿಭಟನೆ ನಡಸಿಯೂ ಪ್ರಯೋಜನವಾಗದೆ, ಕೋರ್ಟ್ ಮೆಟ್ಟಿಲೇರಿ, ರಾಜ್ಯದ ಪಾಲು ಪಡೆಯುವಂತಹ ಸ್ಥಿತಿ ತಲುಪಿರುವುದು ಕೇಂದ್ರದ ಇಬ್ಬಗೆಯ ನೀತಿಗೆ ಹಿಡಿದ ಕನ್ನಡಿಯಾಗಿದೆ. ರೈತರ ಬಹುದಿನದ ಬೇಡಿಕೆ ಎಂಎಸ್‌ಪಿ ಕಾಯ್ದೆ ಜಾರಿಗೆ ತರದೆ ಮೋಸ ಮಾಡಿದೆ. ಅಲ್ಲದೆ ಶಿಕ್ಷಣ,ಆರೋಗ್ಯ ಕ್ಷೇತ್ರಗಳ ಅನುದಾನ ಕಡಿತ ಮಾಡಿ, ಜನರಿಗೆ ಅನ್ಯಾಯ ಮಾಡಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಟೂಡಾ ಮಾಜಿ ಅಧ್ಯಕ್ಷ ಸಿದ್ದಲಿಂಗೇಗೌಡ, ಎಚ್.ಸಿ.ಹನುಮಂತಯ್ಯ, ವಾಲೆಚಂದ್ರಯ್ಯ, ತರುಣೇಶ್, ಅಸ್ಲಾಂಪಾಷ, ಮಂಜುನಾಥ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸುಜಾತ, ಸಂಜೀವಕುಮಾರ್, ನಟರಾಜಶೆಟ್ಟಿ, ಜ್ವಾಲಮಾಲ ರಾಜಣ್ಣ, ರೇವಣ್ಣಸಿದ್ದಯ್ಯ, ಬೋವಿಪಾಳ್ಯ ಉಮೇಶ್, ಕೈದಾಳ ರಮೇಶ್, ಶಿವಾಜಿ, ಗೀತಾ, ಭಾಗ್ಯಮ್ಮ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಭಂದ್ರಮ್ಮ ವೃತ್ತದಲ್ಲಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು.

> ಸಂವಿಧಾನ ಪ್ರಕಾರ ಒಕ್ಕೂಟದ ವ್ಯವಸ್ಥೆಯಲ್ಲಿ ಎಲ್ಲಾ ರಾಜ್ಯಗಳನ್ನು ಸಮಾನವಾಗಿ ಕಾಣಬೇಕು.ಆದರೆ ಉತ್ತರ ಭಾರತಕ್ಕೆ ಒಂದು ರೀತಿ, ದಕ್ಷಿಣ ಭಾರತಕ್ಕೆ ಒಂದು ರೀತಿ ಎಂಬಂತಹ ತಾರತಮ್ಯ ನೀತಿಯನ್ನು ಕೇಂದ್ರ ಅನುಸರಿಸುತ್ತಿದೆ. ತಮ್ಮ ಕುರ್ಚಿ ಉಳಿಸಿಕೊಳ್ಳಲು ಮಿತ್ರ ಪಕ್ಷ ಅಧಿಕಾರದಲ್ಲಿರುವ ಬಿಹಾರಕ್ಕೆ 58 ಸಾವಿರ ಕೋಟಿ,ಆಂಧ್ರ ಪ್ರದೇಶಕ್ಕೆ 15 ಸಾವಿರ ಕೋಟಿ ನೀಡಿ, ಕರ್ನಾಟಕಕ್ಕೆ ಚೆಂಬು ನೀಡಿದೆ.
> -ಕೆಂಚಮಾರಯ್ಯ ಹಿರಿಯ ಕಾಂಗ್ರೆಸ್ ಮುಖಂಡ

ಕನ್ನಡ ಜ್ಯೋತಿ ರಥಯಾತ್ರೆಗೆ ಡಿಸಿ ಚಾಲನೆ

ಕನ್ನಡ ಜ್ಯೋತಿ ರಥಯಾತ್ರೆಗೆ ಜಿಲ್ಲಾಧಿಕಾರಿ ಪಿ. ಎನ್ ರವೀಂದ್ರ ಸೇರಿ ಇತರರು ಸ್ವಾಗತ ಕೋರಿ ಜಿಲ್ಲೆಯಲ್ಲಿ ಸಂಚರಿಸಲು ಅನುವು ಮಾಡಿಕೊಟ್ಟರು.

ಚಿಕ್ಕಬಳ್ಳಾಪುರ : ಕರ್ನಾಟಕ ಸಂಭ್ರಮ 50 ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಅಭಿಯಾನದ ಅಂಗವಾಗಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಕನ್ನಡ ಜ್ಯೋತಿ ರಥಯಾತ್ರೆಯು ಗುರುವಾರ ಬೆಳಗ್ಗೆ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಮುದಿಗೆರೆ ಗ್ರಾಮ ಪಂಚಾಯತ್ ವ್ಯಾಪ್ತಿ ಸರಹದ್ದಿಗೆ ಆಗಮಿಸಿತು.

ಸ್ಥಳದಲ್ಲಿ ಹಾಜರಿದ್ದ ಜಿಲ್ಲಾಧಿಕಾರಿ ಪಿ. ಎನ್ ರವೀಂದ್ರ ಅವರು ಕನ್ನಡ ಜ್ಯೋತಿ ರಥಯಾತ್ರೆಗೆ ಸ್ವಾಗತ ಕೋರಿದರಲ್ಲದೆ ನಾಡಧ್ವಜ ಬೀಸುವ ಮೂಲಕ ಜಿಲ್ಲೆಯಲ್ಲಿ ಸಂಚಾರ ಮಾಡಲು ಅನುವು ಮಾಡಿಕೊಟ್ಟರು.

ಈ ಸಂದರ್ಭದಲ್ಲಿ ಗೌರಿಬಿದನೂರು ಶಾಸಕ ಪುಟ್ಟಸ್ವಾಮಿಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಕೊಡಿರಂಗಪ್ಪ, ಗೌರಿಬಿದನೂರು ತಹಸೀಲ್ದಾರ್ ಮಹೇಶ್ ಪರ್ತಿ, ಗೌರಿಬಿದನೂರು ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಹೊನ್ನಯ್ಯ, ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಕುಮಾರ್, ಮುದಿಗೆರೆ ಗ್ರಾಮ ಪಂಚಾಯಿತಿ ಜನಪ್ರತಿನಿಧಿಗಳು,ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು, ಪದಾಧಿಕಾರಿಗಳು, ಸಾಹಿತಿಗಳು,ಕನ್ನಡ ಪರ ಸಂಘಟನೆಗಳ ಮುಖ್ಯಸ್ಥರು, ಪದಾಧಿಕಾರಿಗಳು ಹಾಜರಿದ್ದರು.

ನೀರು-ಮಣ್ಣಿನ ಸಂರಕ್ಷಣೆ ಜಾಗೃತಿಗೆ ಚಿಂತನೆ: ಜಿಪಂ ಸಿಇಒ

ಕೋಲಾರ: ಕೆರೆ ಮತ್ತು ಮಣ್ಣಿನ ಆರೋಗ್ಯ ಉಳಿಸುವ ಸಂಬಂಧ ಸಮಾಜದಲ್ಲಿ ಜಾಗೃತಿ ಮೂಡಿಸಬೇಕಾಗಿದ್ದು ಈ ನಿಟ್ಟಿನಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಜಿಲ್ಲಾ ಪಂಚಾಯತಿ ಜತೆಗೆ ಕೈ ಜೋಡಿಸಬೇಕೆಂದು ಜಿಪಂ ಸಿಇಒ ಪದ್ಮಬಸವಂತಪ್ಪ ಮನವಿ ಮಾಡಿದರು. ಗ್ರಾಮವಿಕಾಸ ಸೇರಿದಂತೆ ಮತ್ತಿತರ ಸ್ವಯಂ ಸೇವಾ ಸಂಸ್ಥೆಗಳ ಜತೆಗೆ ಜಿಲ್ಲಾ ಪಂಚಾಯತಿಯಲ್ಲಿ ನಡೆಸಿದ ಸಭೆಯಲ್ಲಿ ಮಾತನಾಡಿ, ಪ್ರಸ್ತುತ ಜಮೀನುಗಳಲ್ಲಿ ಬೋರ್‌ವೆಲ್ ತೂತುಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವುದರಿಂದಾಗಿ ನೀರಿನ ಸಂರಕ್ಷಣೆ ಮಾಡಬೇಕಾಗಿದೆ ಎಂದರು. ಹಿಂದೆ ಹಸಿರು ಕ್ರಾಂತಿ ವರದಾನವಾಗಿತ್ತಾದರೂ ಬದಲಾದ ಕಾಲಘಟ್ಟದಲ್ಲಿ ರಾಸಾಯನಿಕಗಳ ಬಳಕೆಯಿಂದಾಗಿ ಶಾಪವಾಗಿ ಪರಿಣಮಿಸಿರುವುದರಿಂದಾಗಿ ಪ್ರಸ್ತುತ ಸಾವಯವ ಕೃಷಿಗೆ ಒತ್ತು ನೀಡಬೇಕಾಗಿದ್ದು ಈ ನಿಟ್ಟಿನಲ್ಲಿ ರೈತರಿಗೆ ಅರಿವು ಮೂಡಿಸಬೇಕಾಗಿದೆ ಎಂದು ತಿಳಿಸಿದರು. ಜಲ,ಭೂ ಸಂರಕ್ಷಣೆ ಜತೆಗೆ ತೆರಿಗೆ ಪಾವತಿ ಕುರಿತಾಗಿಯೂ ಜನರಿಗೆ ಮಾಹಿತಿ ನೀಡಬೇಕಾಗಿದ್ದು ಹೀಗಾಗಿ ಇದಕ್ಕೆ ಸಂಬಂಧಿಸಿದಂತೆ ಕಾರ್ಟೂನ್ ಸಿದ್ಧಪಡಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವ ಮೂಲಕ ಮನೆ ಮನೆ ತಲುಪಲು ಪ್ರಯತ್ನಿಸಲು ಯೋಜನೆ ಸಿದ್ಧಪಡಿಸಲಾಗಿದೆ ಎಂದು ಪದ್ಮ ನುಡಿದರು.

ಗ್ರಾಮವಿಕಾಸ ಸಂಸ್ಥೆ ನಿರ್ದೇಶಕ ಎಂವಿಎನ್ ರಾವ್ ಮಾತನಾಡಿ, ಸಂಸ್ಥೆ ಕಳೆದ 40 ವರ್ಷದಿಂದ ಕೆರೆ ಅಭಿವೃದ್ಧಿ ಮತ್ತು ಮಣ್ಣಿನ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದು ಬೀಜ ಬ್ಯಾಂಕ್ ಸ್ಥಾಪನೆ ಮೂಲಕ ಅವಸಾನದ ಅಂಚಿನಲ್ಲಿದ್ದ ತಳಿಗಳನ್ನು ಉಳಿಸುವಲ್ಲಿ ಸಾಧನೆ ಮೆರೆದಿದೆ. ಕೆರೆ ಮತ್ತು ಕೃಷಿಕರ ನಡುವೆ ಭಾವನಾತ್ಮಕ ಸಂಬಂಧ ಬೆಳೆಸುವ ಮೂಲಕ ಜಲಸಂರಕ್ಷಣೆಗೆ ಯೋಜನೆ ಮಾಡಬೇಕಿದ್ದು ಈ ನಿಟ್ಟಿನಲ್ಲಿ ಗ್ರಾಮವಿಕಾಸ ತನು,ಮನ, ಧನದ ನೆರವು ನೀಡಲಿದೆ ಎಂದು ಸಭೆಗೆ ಭರವಸೆ ನೀಡಿದರು. ಗ್ರಾಮೀಣ ಮಹಿಳಾ ಒಕ್ಕೂಟದ ಎಂ.ಜಿ.ಪಾಪಮ್ಮ, ಗ್ರಾಮವಿಕಾಸದ ರಾಮಕೃಷ್ಣೇಗೌಡ, ನಿವೃತ್ತ ಓಂಬುಡ್ಸ್‌ಮನ್ ಡಾ. ಶ್ರೀರಾಮಯ್ಯ ಇದ್ದರು.

ಕೋಲಾರ ಜಿಪಂ ಸಿಇಒ ಪದ್ಮಾ ಅವರು ಸ್ವಯಂ ಸೇವಾ ಸಂಸ್ಥೆ ಮುಖ್ಯಸ್ಥರುಗಳ ಜತೆಗೆ ಸಭೆ ನಡೆಸಿದರು.

> ಮಾರ್ಜೇನಹಳ್ಳಿ ಪಂಚಾಯತಿಯಲ್ಲಿ ಪ್ರಾಪರ್ಟಿ ಫೈನ್ ನಿರ್ಮಾಣದಲ್ಲಿ ಶೇ.100 ಸಾಧನೆ ಮೆರೆಯಲಾಗಿದ್ದು ಆಸ್ತಿ ವಹಿ ನಿರ್ವಹಣೆಗಾಗಿ ಸರ್ವೇ ನಡೆಸಲಾಗುತ್ತಿದೆ. ಇ ಸ್ವತ್ತು ಅಭಿಯಾನ ಶೀಘ್ರದಲ್ಲೇ ನಡೆಸುವ ಮೂಲಕ ಮನೆ ಜನರ ಬಾಗಿಲಿಗೆ ದಾಖಲೆ ತಲುಪಿಸುವ ಯೋಜನೆ ರೂಪಿಸಲಾಗಿದೆ.
> - ವಿದ್ಯಾ, ಅಧ್ಯಕ್ಷರು, ಮಾರ್ಜೇನಹಳ್ಳಿ

ಪ್ಯಾನಿಕ್ ಬಟನ್ ಆದೇಶ ವಾಪಸ್ಸಿಗೆ ಆಗ್ರಹ

ತುಮಕೂರು: ವಾಣಿಜ್ಯ ವಾಹನಗಳಿಗೆ ಜಿಪಿಆರ್‌ಎಸ್ ಮತ್ತು ಪ್ಯಾನಿಕ್ ಬಟನ್ ಅಳವಡಿಸುವ ಆದೇಶ ವಾಪಸ್ ಪಡೆಯುವಂತೆ ಸರಕಾರವನ್ನು ಒತ್ತಾಯಿಸಿ ಟ್ಯಾಕ್ಸಿ ಚಾಲಕರು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಕರ್ನಾಟಕ ಟ್ಯಾಕ್ಸಿ ಡ್ರೈವರ್ ಆರ್ಗನೈಸೇಷನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಆರೀಫ್ ಮಾತನಾಡಿ, ಕೇಂದ್ರ ಸಾರಿಗೆ ಇಲಾಖೆಯ ಆದೇಶದಂತೆ ರಾಜ್ಯ ಸಾರಿಗೆ ಇಲಾಖೆಯು ನೀಡಿರುವ ವಾಣಿಜ್ಯ ವಾಹನಗಳಿಗೆ ಪ್ಯಾನಿಕ್ ಬಟನ್ ಮತ್ತು ಜಿ.ಪಿ. ಆರ್.ಎಸ್. ಎಂಬ ಅವೈಜ್ಞಾನಿಕ ಸಾಧನ ಅಳವಡಿಸಲು ನೀಡಿರುವ ಆದೇಶದಿಂದ ಟ್ಯಾಕ್ಸಿ ಚಾಲಕರಿಗೆ ಸಮಸ್ಯೆಯಾಗಿದೆ. ಈ ಆದೇಶ ಹಿಂಪಡೆಯುವಂತೆ ಸರಕಾರವನ್ನು ಒತ್ತಾಯಿಸಿದರು.

ಇಂತಹ ಅವೈಜ್ಞಾನಿಕ ಸಾಧನಗಳನ್ನು ಅಳವಡಿಸಲು ಕೇಂದ್ರ ಸರಕಾರ ನಿಗದಿಪಡಿಸಿರುವುದು 7890 ರು. ಆದರೆ ರಾಜ್ಯದ ಎಲ್ಲಾ ಸಾರಿಗೆ ಕಚೇರಿಗಳಲ್ಲಿ ಇದರ ಮೊತ್ತವು 15 ಸಾವಿರ ರು.ನಿಂದ 20 ಸಾವಿರ ರು. ವರೆಗೆ ಹಾಗೂ 1 ಪ್ಯಾನಿಕ್ ಬಟನ್ ದರ 650 ರು. ಜತೆಗೆ ಶೇಕಡ 18ರಷ್ಟು ತೆರಗೆ ವಸೂಲಿ ಮಾಡಲಾಗುತ್ತಿದೆ. ಇದು ರಾಜ್ಯದ ಎಲ್ಲಾ ಟೂರಿಸ್ಟ್ ವಾಹನ ಚಾಲಕ, ಮಾಲಿಕರಿಗೆ ಮಾಡುತ್ತಿರುವ ಅನ್ಯಾಯವಾಗಿದೆ ಎಂದು ಹೇಳಿದರು. ರಾಜ್ಯದ ಸಾರಿಗೆ ಸಚಿವರು ಈ ಬಗ್ಗೆ ಸೆಪ್ಟಂಬರ್ 24ರವರೆಗೆ ಯಾವುದೇ ವಾಹನಗಳಿಗೆ ಜಿಪಿಎಸ್ ಮತ್ತು ಪ್ಯಾನಿಕ್ ಬಟನ್ ಅಳವಡಿಸದೆ ಎಫ್.ಸಿ ಮಾಡಬಹುದು ಎಂದು ತಿಳಿಸಿದ್ದಾರೆ.

ಇದನ್ನು ಸಾರಿಗೆ ಇಲಾಖೆ ಅಧಿಕಾರಿಗಳು ಸಚಿವರ ಆದೇಶ ಗಡೆಗಣ ಸಿ ತರಾತುರಿಯಲ್ಲಿ ಎಫ್.ಸಿ. ಮಾಡಲು ಪ್ಯಾನಿಕ ಬಟನ್ ಕಡ್ಡಾಯ ಮಾಡಿದ್ದಾರೆ ಎಂದು ಟೀಕಿಸಿದರು.ಸರಕಾರ ಟ್ಯಾಕ್ಸಿ ಉದ್ಯಮವನ್ನು ಪ್ರೋತ್ಸಾಹಿಸುವ ಬದಲು ನಿರ್ನಾಮ ಮಾಡುವ ಪ್ರಯತ್ನ ತಡೆದಿದೆ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ಜಿಲ್ಲಾಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಮಹೇಶ್, ಉಪಾಧ್ಯಕ್ಷ ಬಳ್ಳಗೆರೆ ಕುಮಾರ್, ಕೆ.ಟಿ.ಡಿ.ಓ. ರಾಜು, ಹುಸೇನ್ ಭಾಗವಹಿಸಿದ್ದರು.

ವಾಣಿಜ್ಯ ವಾಹನಗಳಿಗೆ ಜಿಪಿಆರ್‌ಎಸ್ ಮತ್ತು ಪ್ಯಾನಿಕ್ ಬಟನ್ ಅಳವಡಿಸುವ ಆದೇಶ ವಾಪಸ್ ಪಡೆಯುವಂತೆ ಸರಕಾರವನ್ನು ಒತ್ತಾಯಿಸಿ ಟ್ಯಾಕ್ಸಿ ಚಾಲಕರು ಪ್ರತಿಭಟಿಸಿದರು.

ಸರಕಾರ ಭೂ-ಸ್ವಾಧೀನ ಕಾಯ್ದೆ ವಿರೋಧ

ವಿಧಾನಸೌಧ ಮತ್ತಿಗೆಗೆ ಶಿಡ್ಲಘಟ್ಟ ತಾಲೂಕಿನ ರೈತ ಮುಖಂಡರ ಪ್ರಯಾಣ

ಶಿಡ್ಲಘಟ್ಟ: ಭೂ-ಸ್ವಾಧೀನ ಕಾಯಿದೆ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಮತ್ತು ತಾಲೂಕಿನ ರೈತರು ಬೆಂಗಳೂರಿನ ವಿಧಾನ ಸೌಧ ಮುತ್ತಿಗೆ ಹಾಕಲು ಗುರುವಾರ ಹೊರಟರು.

ನಗರದ ಬಸ್ ನಿಲ್ದಾಣದ ಇಂದಿರಾ ಕ್ಯಾಂಟೀನ್ ಮುಂಭಾಗದಲ್ಲಿ ಗುರುವಾರ ಜಮಾವಣೆಗೊಂಡ ರೈತ ಮುಖಂಡರು, ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕು ಅಧ್ಯಕ್ಷ ತಾದೂರು ಮಂಜುನಾಥ್ ಮಾತನಾಡಿ, ರೈತರ ಹಿತ ಕಾಯಬೇಕಾದ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯ ಸರಕಾರದ ಮೇಲಿದೆ. ಆದರೆ ಇದಕ್ಕೂ ತಮಗೂ ಯಾವುದೇ ಸಂಬಂಧವೇ ಇಲ್ಲ ಎಂಬಂತೆ ಬಂಡವಾಳಶಾಹಿಗಳ ಪರ ವರ್ತಿಸುತ್ತಿರುವ ಪರಿಣಾಮ ರೈತರು ಸಮಸ್ಯೆಗಳ ಸುಳಿಯಲ್ಲಿ ಸಿಲುಕುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಮರ್ಪಕ ಯೋಜನೆಗಳನ್ನು ರೂಪಿಸಿಲ್ಲ. ಇದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರ ಕುಟುಂಬಗಳು ಬೀದಿಗೆ ಬರುವಂತಹ ಪರಿಸ್ಥಿತಿ ಬಂದಿದೆ. ದೇಶಕ್ಕೆ ಅನ್ನ ನೀಡುವಂತಹ ರೈತನ ಸ್ಥಿತಿ ಸಂಪೂರ್ಣ ಹೀನಾಯವಾಗಿದೆ. ಜನಪ್ರತಿನಿಧಿಗಳ ನಿಷ್ಕಾಳಜಿತನವೇ ಇದಕ್ಕೆ ಮುಖ್ಯ ಕಾರಣವಾಗಿದೆ ಎಂದು ದೂರಿದರು. ಜಿಲ್ಲಾ ಕಾರ್ಯದರ್ಶಿಯಾದ ಮುನಿ ನಂಜಪ್ಪ ಮಾತನಾಡಿ ಕೇಂದ್ರ ಸರಕಾರ ಸುಗ್ರೀವಾಜ್ಞೆಯಿಂದ ಭೂ ಸ್ವಾಧೀನ ಕಾಯಿದೆ ಜಾರಿಗೊಳಿಸುವ ಮೂಲಕ ಬಂಡವಾಳ ಶಾಹಿಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಇದು ಉದ್ಯಮಿಗಳ ಪರವಾಗಿದೆ. ಇದರಿಂದ ಮತ್ತಷ್ಟು ಸಮಸ್ಯೆ ಎದುರಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಂದರ್ಭದಲ್ಲಿ ರೈತಸಂಘದ ಗುಡಿಹಳ್ಳಿ ಕೆಂಪಣ್ಣ, ವೇಣುಗೋಪಾಲ್, ಟಿ ನಾರಾಯಣಸ್ವಾಮಿ, ದೇವರಾಜ್, ಸುಡ್ರಹಳ್ಳಿ ಬೀರಪ್ಪ, ಜಂಗಮಕೋಟೆ ದೇವರಾಜ್ ಇದ್ದರು.



ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಗುರುವಾರ ಶಿಡ್ಲಘಟ್ಟ ನಗರದ ಬಸ್ ನಿಲ್ದಾಣದ ಇಂದಿರಾ ಕ್ಯಾಂಟೀನ್ ಮುಂಭಾಗದಿಂದ ರೈತ ಮುಖಂಡರು, ಕಾರ್ಯಕರ್ತರು ಜಮಾಯಿಸಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿರುದ್ಧ ಘೋಷಣೆ ಕೂಗಿದರು.

ಮೈಸೂರು ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲು ಬಿಜೆಪಿ ಕರೆ

ಕೋಲಾರ: ಮೈಸೂರಿನ ಮುಡಾ ಹಗರಣ ಖಂಡಿಸಿ ಸಾವಿರಾರು ಬಿಜೆಪಿ ಕಾರ್ಯಕರ್ತರಿಂದ ಬೆಂಗಳೂರಿನಿಂದ ಮೈಸೂರುವರೆಗೂ ಬೃಹತ್ ಪಾದಯಾತ್ರೆ ನಡೆಯಲಿದ್ದು ಜಿಲ್ಲೆಯಿಂದ ಹೆಚ್ಚಿನ ಮಂದಿ ಭಾಗವಹಿಸಬೇಕೆಂದು ಮಾವು ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಮಲ್ಲನಾಯಕನಹಳ್ಳಿ ವಾಸುದೇವ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಬೃಹತ್ ಪಾದಯಾತ್ರೆಯಲ್ಲಿ ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ರಾಮನಗರ, ಚನ್ನಪಟ್ಟಣ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆಂದರು. ಬೆಂಗಳೂರಿನಿಂದ ಮೈಸೂರಿಗೆ ತೆರಳಿ ಮುಖ್ಯಮಂತ್ರಿಗಳ ಮನೆ ಹಾಗೂ ಮೂಡಾ ಕಚೇರಿಗೆ ಮುತ್ತಿಗೆ ಹಾಕಲಿದ್ದೇವೆ. ಪ್ರಾಮಾಣಿಕ ರಾಜಕಾರಣಿ, ಸ್ವಚ್ಛ ರಾಜಕಾರಣಿ, ರಾಜಕೀಯ ಜೀವನದಲ್ಲಿ ಯಾವುದೇ ಹಗರಣದಲ್ಲಿ ಭಾಗಿಯಾಗಿಲ್ಲ ಅಂತಾ ಹೇಳುಕೊಳ್ಳತ್ತಿದ್ದ ಸಿದ್ದರಾಮಯ್ಯ ಅವರನ್ನು ಜನರು ಕೂಡ ನಂಬಿದ್ದರು, ಏಕೆಂದರೆ ದೇವೇಗೌಡ ಹಾಗೂ ರಾಮಕೃಷ್ಣ ಹೆಗಡೆ ಅವರ ಗರಡಿಯಲ್ಲಿ ಪಳಗಿದವರು ಮೌಲ್ಯಯುತವಾದ ರಾಜಕಾರಣಿ ಎಂಬುದು ಜನರ ಭಾವನೆಯಲ್ಲಿತ್ತು. ಆದರೆ ಸಿದ್ದರಾಮಯ್ಯ ಅವರು ತನ್ನ ಮೌಲ್ಯಯುತ ರಾಜಕಾರಣವನ್ನು ಗಾಳಿಗೆ ತೂರಿ ಮೂಡಾ ಹಗರಣದಲ್ಲಿ ಭಾಗಿಯಾಗಿರುವುದು ಕಣ್ಣಿಗೆ ಕಾಣುವಂತೆ ಇದೆ. ವಾಲ್ಮೀಕಿ ನಿಗಮದಲ್ಲಿ ಹಗರಣ ನಡೆದಿಲ್ಲ ಅಂತಾ ಹೇಳಿಕೊಂಡ ಸಿದ್ದರಾಮಯ್ಯ ಸದನದಲ್ಲಿ 180 ಕೋಟಿ ಅಲ್ಲ 89 ಕೋಟಿ ಅವ್ಯವಹಾರ ನಡೆದಿದೆ ಎಂದು ಭ್ರಷ್ಟಾಚಾರವನ್ನು ಒಪ್ಪಿಕೊಂಡಿದ್ದಾರೆ. ಕಾಂಗ್ರೆಸ್ ಸರಕಾರದ ಹಗರಣಗಳ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮತ್ತು ವಿಪಕ್ಷ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಸದನದಲ್ಲಿ ಹಾಗೂ ಹೊರಗಡೆ ನಿರಂತರ ಹೋರಾಟವನ್ನು ಬಿಜೆಪಿ ನಡೆಸಲಿದೆ ಎಂದು ಮಲ್ಲನಾಯಕನಹಳ್ಳಿ ವಾಸುದೇವ್ ತಿಳಿಸಿದರು.



ತುಮಕೂರು ಕಳೆದ 12 ವರ್ಷಗಳಿಂದ ಕೊಪ್ಪಲ್ ಸಿದ್ಧವೀರಯ್ಯ, ಪಾರ್ವತಮ್ಮ ಸ್ಮರಣಾರ್ಥ ಪ್ರತಿಷ್ಠಾನದಿಂದ ಸಿದ್ದಗಂಗಾ ಮಠದ ಅಂಧ ಶಾಲೆಯ ಪ್ರತಿಭಾನ್ವಿತ ಮಕ್ಕಳು ಹಾಗೂ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಯಿತು. ಶ್ರೀ ಸಿದ್ದಲಿಂಗ ಸ್ವಾಮೀಜಿ, ಕೊಪ್ಪಲ್ ನಾಗರಾಜು, ಚಂದ್ರಾ, ನಾಗರಾಜು, ನವೀನ್ ನಾಗರಾಜು, ಹೇಮಲತಾ, ಪವನ್, ಜೆ.ಎಸ್.ಮಂಜುನಾಥ್, ಕಡಬ ವಿಶ್ವನಾಥ್ ಲಕ್ಷ್ಮೀನಾರಾಯಣ ಉಪಸ್ಥಿತರಿದ್ದರು.

ಜನಮನವನ್ನು ಮುಟ್ಟಿದ ಗ್ರಾಮ ಸೇವೆ ಸಾರ್ಥಕ

ಚಿಕ್ಕಬಳ್ಳಾಪುರ: ಹಣ ಮತ್ತು ರಕ್ತ ಒಂದೆಡೆ ಶೇಖರಣೆಯಾದರೆ ಜಾಡ್ಯಕ್ಕೆ ಕಾರಣವಾಗುತ್ತದೆ. ಎರಡೂ ಸತ್ಕಾರ್ಯಗಳಿಗೆ ವಿನಿಯೋಗವಾಗುವುದು ಒಂದು ಯೋಗ. ಸಂಪತ್ತನ್ನು ಒಂದೆಡೆ ಶೇಖರಿಸುವುದು ಸ್ವಾರ್ಥವಾಗುತ್ತದೆ. ಸ್ವಾರ್ಥರಹಿತ ವಿನಿಯೋಗ ಮತ್ತು ಸೇವೆ ನೆಮ್ಮದಿಯ ಬದುಕಿಗೆ ಆಧಾರ. ಸಂಪತ್ತು ಎಂಬ ಭಾಗ್ಯವನ್ನು ಯಾವುದೇ ಸ್ವಾರ್ಥವಿಲ್ಲದೆ ಸಮಾಜದ ಒಳಿತಿಗೆ ಉಪಯೋಗಿಸುವುದೇ ಸೇವೆ ಎನಿಸುತ್ತದೆ. ಸೇವೆಯಿಂದ ಮಿಳಿತವಾದ ಬದುಕು ಸದಾ ಸಾರ್ಥಕ.

ಸೇವೆಯು ಸದಾ ಪ್ರವಹಿಸುವ ಪಾವನ ಗಂಗೆ ಇದ್ದಂತೆ. ಸ್ವಾರ್ಥವು ಕಟ್ಟಿ ನಿಂತ ನೀರಿನ ಹಾಗೆ. ನರರೆಲ್ಲರೂ ನಾರಾಯಣ ಸ್ವರೂಪಿ ಶ್ರೀರಾಮ ಇದ್ದಹಾಗೆ. ಸರ್ವರಲ್ಲೂ ಅಂತರ್ಗತವಾದ ಶ್ರೀರಾಮನನ್ನು ಸಂತೃಪ್ತಿಪಡಿಸಿದಾಗ ನೆಮ್ಮದಿ ದೊರೆಯುತ್ತದೆ. ಆ ನೆಮ್ಮದಿಯೇ ಬದುಕಿಗೆ ಸಾರ್ಥಕತೆಯನ್ನು ನೀಡುವ ಪರಮ ಮಂತ್ರವೆಂದು ಸಾಯಿ ಅವತಾರ ಜಗತ್ತಿಗೆ ಬೋಧಿಸಿದ ಪಾಠವಾಗಿದೆ.

ತಾಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ಸದ್ಗುರು ಶ್ರೀ ಮಧುಸೂದನ ಸಾಯಿ ಅವರ 45ನೇ ವರ್ಧಂತ್ಯುತ್ಸವದ ಪ್ರಯುಕ್ತ ಇಂದು ಮುಂಜಾನೆ ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ವಿದ್ಯುಕ್ತ ಚಾಲನೆ ನೀಡಿದರು.

ಸುಮಾರು 25 ಕ್ಕೂ ಹೆಚ್ಚು ವಾಹನಗಳು ಸದ್ಗುರುಗಳ ಆಶೀರ್ವಾದವನ್ನು ಪಡೆದು ಸೇವಾ ಕಾರ್ಯಕ್ಕೆ ಅಗತ್ಯವಿರುವ ಪರಿಕರಗಳನ್ನು ಸಂಗ್ರಹಿಸಿಕೊಂಡು ಸತ್ಯಸಾಯಿ ಗ್ರಾಮದಿಂದ ಪ್ರತ್ಯೇಕ ತಂಡಗಳನ್ನು ಜತೆಗಿರಿಸಿಕೊಂಡು 955 ಕ್ಕೂ ಅಧಿಕ ಸಂಖ್ಯೆಯ ಶಿಕ್ಷಕ ಶಿಕ್ಷಕಿಯರು, ವಿದ್ಯಾರ್ಥಿ ವಿದ್ಯಾರ್ಥಿನಿಯರು, ಸ್ವಯಂಸೇವಕರು ಹಾಗೂ ಭಕ್ತ ಜನ ಬಂಧು ಭಗಿನಿಯರು ಸನ್ನಿಧಿಗೆ ಸನಿಹದಲ್ಲಿರುವ ಆರು ಮಂಡಲಗಳ 36 ಗ್ರಾಮಗಳಲ್ಲಿರುವ 5800 ಮನೆಗಳ ಕದವನ್ನು ತಟ್ಟಿ 26,300 ಜನರ ಮನ ಮುಟ್ಟಿದ ಸೇವೆಯನ್ನು ಸಲ್ಲಿಸಿದರು.

ಸಮಾಚಾರ ಸಣ್ಣದಲ್ಲ

ರಾಜ್ಯ ತಂಡಕ್ಕೆ ಮುತ್ತಮ್ಮ ಆಯ್ಕೆ

ಮಡಿಕೇರಿ: ಹರಿಯಾಣದಲ್ಲಿ ಜು.28ರವರೆಗೆ ನಡೆಯಲಿರುವ 42ನೇ ಅವೃತ್ತಿಯ ರಾಷ್ಟ್ರೀಯ ಸೀನಿಯರ್ ನೆಟ್ ಬಾಲ್ ಚಾಂಪಿಯನ್ ಶಿಪ್‌ಗೆ ಎಂ.ಮುತ್ತಮ್ಮ (ಸಂಜನಾ) ಕರ್ನಾಟಕ ತಂಡದಿಂದ ಸ್ಪರ್ಧಿಸಿದ್ದಾರೆ. ಇವರು ಬೆಂಗಳೂರು ಡಾ.ಎನ್.ಎಸ್.ಎ.ಎಂ.ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ದೈಹಿಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಪೊನ್ನಂಪೇಟೆ ತಾಲೂಕಿನ ಪೊರಾಡು ಗ್ರಾಮದ ಮೀದೇರಿರ ವಸಂತ ಮತ್ತು ಕವಿತಾ ದಂಪತಿಯ ಪುತ್ರಿ.

ಛಲವಾದಿಗೆ ಜಿಲ್ಲಾ ಬಿಜೆಪಿ ಸಮಿತಿ ಅಭಿನಂದನೆ

ಚಾಮರಾಜನಗರ: ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿ ಆಯ್ಕೆಯಾದ ಛಲವಾದಿ ನಾರಾಯಣ ಸ್ವಾಮಿ ಅವರನ್ನು ಜಿಲ್ಲಾ ಬಿಜೆಪಿ ಸಮಿತಿ ವತಿಯಿಂದ ಬೆಂಗಳೂರಿನ ಶಾಸಕರ ಭವನದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ಪಿ .ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್ ,ಮಹಾದೇವಸ್ವಾಮಿ ಎಂ ಹೊನ್ನೂರು, ಹನೂರು ಮಂಡಲ ಅಧ್ಯಕ್ಷ ರಾಜು, ಗ್ರಾಮ ಪಂಚಾಯಿತಿ ಸದಸ್ಯ ಕೇತಹಳ್ಳಿ ಚಿಕ್ಕನಾಗಪ್ಪ , ಕೋಣನಪುರ ಪ್ರಭು ಇದ್ದರು.

ರೋಟರಿ ಕ್ಲಬ್‌ನಿಂದ ಡಅಭಿನಂದನೆ

ಹುಣಸೂರು: ಹುಣಸೂರು ರೋಟರಿ ಕ್ಲಬ್ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾದ ಧರ್ಮಾಪುರ ನಾರಾಯಣ್ ಹಾಗೂ ಚಾರ್ಟೆಡ್ ಅಕೌಂಟ್ ಪಲಿತಾಂಶದಲ್ಲಿ ಉತ್ತೀರ್ಣರಾದ ಹುಣಸೂರು ತಾಲೂನ ನಿಲವಾಗಿಲು ಗ್ರಾಮದ ರಾಘವೇಂದ್ರ ಇವರನ್ನು ಹುಣಸೂರು ರೋಟರಿ ಕ್ಲಬ್ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಹಾಯಕ ಗೌನರರ್ ಆನಂದ್, ರೋಟರಿ ಅಧ್ಯಕ್ಷ ಪ್ರಸನ್ನ, ಹಿರಿಯ ಡಾ. ರವಿಕುಮಾರ್, ರಾಜಶೇಖರ, ಅಶೋಕ್ ಕುಮಾರ, ಹೋಟೆಲ್ ಮಂಜಣ್ಣ , ಚನ್ನಕೇಶವ, ಲೂಯಿಸ್ ಪೆರೇರಾ, ರವೀಶ್, ಶ್ಯಾಮ್, ಸಿದ್ದೇಶ್, ಮಂಜುನಾಥ್ ಇದ್ದರು.

ಪಿಎಲ್‌ಡಿ ಬ್ಯಾಂಕ್‌ಗೆ ನೂತನ ನಿರ್ದೇಶಕ ಆಯ್ಕೆ

ಮದ್ದೂರು: ಪಿ.ಎಲ್.ಡಿ ಬ್ಯಾಂಕ್ (ಭೂ ಬ್ಯಾಂಕ್) ನೂತನ ನಿರ್ದೇಶಕರಾಗಿ ತಾಲೂಕಿನ ಕೊಪ್ಪ ಹೋಬಳಿಯ ತರಿಕೆರೆ ಗ್ರಾಮದ ಸಣ್ಣಮರಿನಾಯಕ ಅರೋಧವಾಗಿ ಆಯ್ಕೆಯಾಗಿದ್ದಾರೆ. ಹಿಂದಿನ ನಿರ್ದೇಶಕ ದಾಸ್‌ನಾಯಕ ರವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಸಣ್ಣಮರಿನಾಯಕನನ್ನು 6 ತಿಂಗಳ ಉಳಿದ ಅವಧಿಗೆ ನೇಮಕ ಮಾಡಲಾಗಿದೆ ಎಂದು ಅಧ್ಯಕ್ಷ ಸಿದ್ದೇಗೌಡ ತಿಳಿಸಿದರು. ಈ ವೇಳೆ ಬ್ಯಾಂಕ್‌ನ ಮಾಜಿ ಉಪಾಧ್ಯಕ್ಷ ಟಿ.ಕೆಂಪಯ್ಯ, ನಿರ್ದೇಶಕರಾದ ಗೌರಮ್ಮ, ಕೃಷ್ಣೇಗೌಡ, ಸಿದ್ದಮರಿಗೌಡ, ಮಧು, ಮುತ್ತರಾಜು, ಈರೇಗೌಡ, ಮುಖಂಡರಾದ ದೇವರಾಜು, ಹೊನ್ನೇಗೌಡ, ಕೃಷ್ಣೇಗೌಡ, ತಮ್ಮಣ್ಣಗೌಡ ಹಾಜರಿದ್ದರು.

ಕಾರ್ಗಿಲ್ ಹುತಾತ್ಮರಿಗೆ ದೀಪ ನಮನ ಇಂದು

ಮಡಿಕೇರಿ: ಮಡಿಕೇರಿ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಜುಲೈ 25 ರಂದು ಶುಕ್ರವಾರ ಕಾರ್ಗಿಲ್ ವಿಜಯ್ ದಿವಸ್ ಅಂಗವಾಗಿ ದೀಪನಮನ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಪೊನ್ನಚ್ಚನ ಮಧುಸೂದನ್ ತಿಳಿಸಿದ್ದಾರೆ,

ಮಡಿಕೇರಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿಯಿರುವ ಗಾಂಧಿ ಭವನದಲ್ಲಿ ಸಂಜೆ 6,30ಕ್ಕೆ ಕಾರ್ಯಕ್ರಮವಿದೆ. ಸುಂಟಿಕೊಪ್ಪದ ವಿದ್ಯಾರ್ಥಿನಿ ಶ್ರೀಜಾ ಅವರಿಂದ ದೇಶದ ಸೇನಾನಿಗಳ ಮಹತ್ವದ ಬಗ್ಗೆ ಭಾಷಣ, ನಂತರ ಗೌರವಪೂರ್ವಕವಾಗಿ ದೀಪಗಳ ನಮನವಿದೆ. ಈ ವೇಳೆ ಮಾಜಿ ಯೋಧ ಬಿ.ಎ.ಲೋಕೇಶ್ ಅವರನ್ನು ಸನ್ಮಾನಿಸಲಾಗುತ್ತದೆ.

ವಿರಾಮ
ಪ್ರತಿ ಭಾನುವಾರ

{ಕೆ.ಎಂ.ಉದಯ್} ಮದ್ದೂರು ಕ್ಷೇತ್ರದ ಶಾಸಕ

ಮುಡಾದಲ್ಲಿ ನಡೆದಿರುವ ಹಗರಣವನ್ನು ಖಂಡಿಸಿ ಬಿಜೆಪಿ ಹಾಗೂ ಜೆ.ಡಿ.ಎಸ್ ನಾಯಕರು ಬೆಂಗಳೂರಿನಿಂದ ಮೈಸೂರಿನವರೆಗೆ ಪಾದಯಾತ್ರೆ ಕೈಗೊಳ್ಳಲಿ ಬಿಡಿ. ಆ ಪಕ್ಷಗಳ ಶಾಸಕರಿಗೆ ಬೇರೆ ಕೆಲಸವಿಲ್ಲ. ಸದ್ಯ ನಿರುದ್ಯೋಗಿಗಳು, ಹಾಗಾಗಿ ಇಂತಹ ಪಾದಯಾತ್ರೆಗೆ ಮುಂದಾಗಿದ್ದಾರೆ. ಇದಕ್ಕೆ ಹೆಚ್ಚಿನ ಮಹತ್ವ ಕೊಡುವ ಅಗತ್ಯವಿಲ್ಲ.

ಸಿಎಂಗೆ, ಉಸ್ತುವಾರಿ ಸಚಿವರಿಗೆ ಕಪ್ಪು ಬಾವುಟ | ರಾಜ್ಯ ಕಬ್ಬು ಬೆಳೆಗಾರರ ಸಂಘದ ನಿರ್ಧಾರ

ಸರಕಾರದ ವಿರುದ್ಧ ರೈತರ 'ಜೈಲ್ ಭರೋ' ಚಳವಳಿ

ಮೈಸೂರು: ರೈತರ ಪರ ಕನಿಷ್ಠ ಕಾರ್ಯಕ್ರಮ ಜಾರಿ ಮಾಡದ ರಾಜ್ಯ ಸರಕಾರದ ವಿರುದ್ಧ ನಮ್ಮ ಹೋರಾಟ ತೀವ್ರಗೊಳಿಸಲು ಮೈಸೂರಿಗೆ ಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಬಂದಾಗ ಕಪ್ಪು ಬಾವುಟ ಪ್ರದರ್ಶನ ಮಾಡಿ 'ಜೈಲ್ ಭರೋ' ಚಳವಳಿ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಹಳ್ಳಿ ಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಗುರುವಾರ ತುರ್ತು ಸಭೆ ನಡೆಸಿ ಮಾತನಾಡಿದ ಅವರು, ರೈತರ ಬಗ್ಗೆ ಕಾಳಜಿ ಇಲ್ಲದೆ ನಿರಂತರ ಅಹೋರಾತ್ರಿ ಧರಣೆ ನಡೆಸಿದ ರೈತರಿಗೆ ಭರವಸೆ ನೀಡಿ ಭರವಸೆಯಂತೆ ನಡೆದುಕೊಳ್ಳದ ಜಿಲ್ಲಾಡಳಿತ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಮುಖ್ಯಮಂತ್ರಿಗಳ ವಿರುದ್ಧ ಕಪ್ಪು ಬಾವುಟ ಪ್ರದರ್ಶನಕ್ಕೆ ನಿರ್ಧರಿಸಲಾಗಿದೆ ಎಂದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಪ್ರಸಕ್ತ ಸಾಲಿಗೆ ಅಡ್ವಾನ್ಸ್ 4000 ರೂ ನಿಗದಿ ಮಾಡಬೇಕು. ಕಳೆದ ಸಾಲಿನ ಲಾಭಾಂಶದಲ್ಲಿ ಪ್ರತಿ ಟನ್‌ಗೆ 150 ರೂ ಹಾಗೂ ಸಕ್ಕರೆ ಕಾರ್ಖಾನೆಯ ಮುಂದೆ ಎ.ಪಿ.ಎಂ.ಸಿ ಮುಖಾಂತರ ಮುಖ್ಯ ದ್ವಾರದಲ್ಲಿ ತೂಕದ ಯಂತ್ರ ಅಳವಡಿಸಬೇಕು. ಅಂತರ್ ಜಿಲ್ಲಾ ಕಬ್ಬು ಸಾಗಣೆ ನಿರ್ಬಂಧವನ್ನು ಹೇರಬಾರದು. ಮುಕ್ತ ಮಾರುಕಟ್ಟೆಯಲ್ಲಿ ರೈತ ಮಾರಾಟ ಮಾಡಿದರೆ ಹೆಚ್ಚಿನ ಬೆಲೆ ಸಿಗುತದೆ ಹಾಗೂ ಕಟಾವು ವಿಳಂಬ ತಪ್ಪಿ ಪೈಪೋಟಿಯ ದರ ರೈತರಿಗೆ ಸಿಗುತ್ತದೆ. ಇದರಿಂದ ರೈತರ ಕಬ್ಬು 15 ತಿಂಗಳು ತುಂಬಿ ಕಟಾವಿನ ವಿಳಂಬ ಕಡಿಮೆಯಾಗುತ್ತದೆ. ಇದರಿಂದ ರೈತರಿಗೆ ಲಾಭವಾಗಲಿದೆ ಎಂದರು. ಕೇಂದ್ರ ಸರ್ಕಾರ ಎಫ್ ಆರ್ ಪಿ ದರವನ್ನು ಇಳುವರಿ ಪ್ರತಿ ಟನ್ ಕಬ್ಬಿಗೆ 10.5ಕ್ಕೆ ಏರಿಕೆ ಮಾಡಿ 3400 ನಿಗದಿ ಮಾಡಿರುವುದು ರೈತರಿಗೆ ಮಾಡಿದ ದ್ರೋಹ. ತಕ್ಷಣ ಇದನ್ನು ಮರುಪರಿಶೀಲನೆ ಮಾಡಿ 8.5ಕ್ಕೆ ಇಳುವರಿಯನ್ನು ನಿಗದಿ ಮಾಡಬೇಕು. ಬಣ್ಣಾರಿ ಸಕ್ಕರೆ ಕಾರ್ಖಾನೆಯ ಲಾಭಾಂಶ ಮತ್ತು ಖರ್ಚಿನ ಬ್ಯಾಲೆನ್ಸ್ ಶೀಟನ್ನು ತನಿಖೆ ಮಾಡಿ ರೈತರಿಗೆ ನ್ಯಾಯ ಕೊಡಿಸಬೇಕು. ಕಬ್ಬು ಕಟಾವು ಸಾಗಾಣಿಕೆ ಕೂಲಿಯನ್ನು ಮನಬಂದಂತೆ ನಿಗದಿ ಮಾಡಿ ರೈತರನ್ನು ಕಾರ್ಖಾನೆ ಸುಲಿಗೆ ಮಾಡುತ್ತಿದೆ ಎಂದು ಆರೋಪಿಸಿದರು. ನಾಲೆಯಿಂದ ಮೋಟಾರ್ ಮೂಲಕ ನೀರು ತೆಗೆದುಕೊಳ್ಳಬಾರದು ಎಂಬ ನಿಯಮ ಮಾಡಿರುವುದು ರೈತರಿಗೆ ಮಾರಕವಾಗಿದೆ. ಕೃಷಿ ಬಳಕೆಗಾಗಿ ಮಾತ್ರ ನಾಲೆಗಳಿಂದ ನೀರನ್ನು ತೆಗೆದುಕೊಳ್ಳುವ ರೈತರ ಮೇಲೆ ಕಾನೂನು ಕ್ರಮ ಎಂದರೆ ಇದರ ವಿರುದ್ಧ ಕಾನೂನು ಭಂಗ ಚಳುವಳಿ ನಡೆಸಬೇಕಾಗುತ್ತದೆ. ಆದ್ದರಿಂದ ಈ ನಿಯಮವನ್ನು ನೀರಾವರಿ ಸಚಿವರು ಪೂರ್ಣ ಪರಿಶೀಲಿಸಬೇಕೆಂದು ಒತ್ತಾಯಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ರಾಜ್ಯ ಕಬ್ಬು ಬೆಳೆಗಾರ ಸಂಘದ ತುರ್ತು ಸಭೆ ನಡೆಯಿತು.

ರೈತರಿಗೆ ಮಾಡಿದ ದ್ರೋಹ

ಕೇಂದ್ರ ಸರ್ಕಾರ ಎಫ್‌ಆರ್‌ಪಿಯನ್ನು ಇಳುವರಿ ಪ್ರತಿ ಟನ್ ಕಬ್ಬಿಗೆ 10.5ಕ್ಕೆ ಏರಿಕೆ ಮಾಡಿ 3400 ನಿಗದಿ ಮಾಡಿರುವುದು ರೈತರಿಗೆ ಮಾಡಿದ ದ್ರೋಹ. ತಕ್ಷಣ ಇದನ್ನು ಪರಿಶೀಲಿಸಬೇಕು.

ಹೊಸ ಕೃಷಿ ಪಂಪ್‌ಸೆಟ್ ಗಳಿಗೆ ಅಕ್ರಮ-ಸಕ್ರಮ ಯೋಜನೆಯನ್ನು ಮರು ಜಾರಿ ಮಾಡಬೇಕು. ರೈತರು ಹೊಸ ಕೃಷಿ ಪಂಪ್ ಸೆಟ್ಟುಗಳಿಗೆ ಸಂಪರ್ಕ ಪಡೆಯಬೇಕಾದರೆ ಎರಡು ಮೂರು ಲಕ್ಷ ರೂ ಖರ್ಚಾಗುತ್ತದೆ. ತಕ್ಷಣ ಈ ನಿಯಮವನ್ನು ಕೈ ಬಿಟ್ಟು ರೈತರ ಕೃಷಿಗೆ ವಿದ್ಯುತ್ ನೀಡಬೇಕು. ಕರ್ನಾಟಕ ಕಾವೇರಿ ಗ್ರಾಮೀಣ ಬ್ಯಾಂಕ್ ರೈತರಿಗೆ ಸಾಕಷ್ಟು ಕಿರುಕುಳ ನೀಡುತಿದ್ದು ಒಟಿಎಸ್ ಮೂಲಕ ಸಾಲವನ್ನು ತೀರಿಸಿಕೊಳ್ಳುತ್ತಿಲ್ಲ, ಕೃಷಿಗೆ ಹೊಸ ಸಾಲವನ್ನು ಸಹ ನೀಡುತಿಲ್ಲ ಎಂದು ದೂರಿದರು. ಕೆ.ಆರ್.ನಗರದ ಶ್ರೀರಾಮ ಸಕ್ಕರೆ ಕಾರ್ಖಾನೆ ತಕ್ಷಣ ಪ್ರಾರಂಭವಾಗಬೇಕು. ಕಾರ್ಖಾನೆಯನ್ನು ನಡೆಸುವ ಕಂಪನಿಗೆ ನೋಂದಣಿ ಪ್ರಕ್ರಿಯೆ ತ್ವರಿತವಾಗಿ ಮುಗಿಸಬೇಕು ಮತ್ತು ಕಬ್ಬು ಅರೆಯಲು ಕಾರ್ಖಾನೆಯನ್ನು ಪ್ರಾರಂಭಿಸಬೇಕು. ನಂಜನಗೂಡು ತಾಲೂಕು ವ್ಯಾಪ್ತಿಯ ಅಂಬಳೆ, ಹಗಿನವಾಳು, ಹುಸ್ಕೂರು, ವಳಗೆರೆ, ಶಿರಮಳ್ಳಿ, ಮಸಗೆ,ಯೆಚಗುಂಡ್ಲಾ, ಕೆರೆಹುಂಡಿ, ಸಿಂಧುವಳ್ಳಿ, ಮುದ್ದಹಳ್ಳಿ, ನವಿಲೂರು, ಹೊಸಪುರ, ಲಕ್ಷ್ಣಾಪುರ, ಯಲಚಗೆರೆ, ಕೃಷ್ಣಾಪುರ, ಸಿದ್ದಯ್ಯನ ಹುಂಡಿ, ಕಸುವನಹಳ್ಳಿ, ಮಾಕನಪುರ, ಸೂರಹಳ್ಳಿ, ಅಲ್ಲರೆ, ದೀಪೇಗೌಡನಪುರ, ಹುರಾ, ಹುರ ಏತ ನೀರಾವರಿ ಕಾಮಗಾರಿ ತ್ವರಿತವಾಗಿ ಮುಗಿಯಬೇಕು ಎಂದು ಒತ್ತಾಯಿಸಿದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳ ಜೊತೆ ತಕ್ಷಣ ಸಭೆ ನಡೆಸಿದ್ದರು. ಇದೇ 16ರಂದು ಮೈಸೂರಿನ ಡಿಸಿ ಕಚೇರಿ ಮುಂದೆ ಅಹೋರಾತ್ರಿ ಧರಣಿ ನಡೆಸಿದ ರೈತರ ಜತೆ ಡಿಸಿ ಮಾತನಾಡಿ ಜು. 27ರಂದು ಸಭೆ ನಡೆಸುತ್ತೇವೆ ಎಂದು ಹೇಳಿ ಈಗ ಸಭೆಯ ಬಗ್ಗೆ ಯಾವುದೇ ಮಾಹಿತಿ ರೈತರ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿದರು.

ರಸ್ತೆ ದುರಸ್ತಿಗೆ ಗ್ರಾಮಸ್ಥರಿಂದ ಪ್ರತಿಭಟನೆ

ಮಡಿಕೇರಿ: ಗ್ರಾಮದ ರಸ್ತೆ ಸಮಸ್ಯೆ ಸರಿಪಡಿಸುವಂತೆ ಆಗ್ರಹಿಸಿ ವಿರಾಜಪೇಟೆ ಕೆದಮುಳ್ಳೂರು, ತೆರ್ಮೆಮೊಟ್ಟೆ, ಬಾರಿಕಾಡು, ಪಾಲಂಗಾಲ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ರಸ್ತೆ ಕುಸಿದು ಒಂದು ತಿಂಗಳಾದರೂ ಬದಲಿ ರಸ್ತೆಯನ್ನು ವ್ಯವಸ್ಥೆ ಮಾಡದ ತಾಲೂಕು ಆಡಳಿತ ಕಾರ್ಯವೈಖರಿಗೆ ಬೇಸತ್ತು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಶೀಘ್ರದಲ್ಲೇ ಬದಲಿ ರಸ್ತೆ ವ್ಯವಸ್ಥೆ ಮಾಡದಿದ್ದರೆ ಗ್ರಾಮ ಪಂಚಾಯಿತಿಗೆ ಮುತ್ತಿಗೆ ಹಾಕಿ ಬೀಗ ಜಡಿದು ಪ್ರತಿಭಟನೆ ಮಾಡುತ್ತೇವೆ. ತಹಸೀಲ್ದಾರ್ ಇಲ್ಲಿ ಬಂದು ರಸ್ತೆಗೆ ಪ್ಲಾಸ್ಟಿಕ್ ಹೊದಿಕೆ ಹಾಕಿ ಸಂಚಾರ ಬಂದ್ ಮಾಡಿ ಹೋದರು ಅಷ್ಟೇ. ಪ್ರಾಕೃತಿಕ ವಿಕೋಪ ಪರಿಹಾರದ ಅನುದಾನ ಬಳಸಿ ನಮಗೆ ರಸ್ತೆ ಮಾಡಿಕೊಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಈ ಸಂದರ್ಭ ಮಾತನಾಡಿದ ಕೆದಮುಳ್ಳೂರು ಗ್ರಾ.ಪಂ ಉಪಾಧ್ಯಕ್ಷ ಎಂ.ಎ. ಪರಮೇಶ್ವರ್, ಗ್ರಾಮದಿಂದ ಕರಡ ಗ್ರಾಮವನ್ನು ಸಂಪರ್ಕಿಸುವ ಕಾಂಕ್ರೀಟ್ ರಸ್ತೆಯಲ್ಲಿ ನಡುವಿನ ಸೀಳು ದೊಡ್ಡದಾಗಿ ರಸ್ತೆ ಸಂಚಾರ ದುಸ್ತರವಾಗಿತ್ತು. ಅಧಿಕಾರಿಗಳು ರಸ್ತೆಗೆ ಹೊದಿಕೆ ಅಳವಡಿಸಿ ಸಂಚಾರವನ್ನು ನಿರ್ಬಂಧಿಸಿದ್ದರು. ತಿಂಗಳಾಗುತ್ತಾ ಬಂದಿದ್ದರೂ ರಸ್ತೆ ದುರಸ್ತಿ ಇನ್ನು ಕೈಗೊಂಡಿಲ್ಲ. ಇದರಿಂದ ಪಟ್ಟಣದ ಶಾಲಾ-ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ನಿತ್ಯ ಸಮಸ್ಯೆಯಾಗುತ್ತಿದೆ. ಆದರೂ ತಾಲೂಕು ಆಡಳಿತ ಸಂಚಾರಕ್ಕೆ ಬದಲಿ ರಸ್ತೆಯನ್ನು ವ್ಯವಸ್ಥೆಗೊಳಿಸಿಲ್ಲ ಎಂದರು.

ಬಾರಿಕಾಡು, ಪಾಲಂಗಾಲ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಪಂ ಮಾಜಿ ಸದಸ್ಯ ಚೋಟು ಬಿದ್ದಪ್ಪ ಮಾತನಾಡಿ, ಬದಲಿ ರಸ್ತೆಯನ್ನು ತಾಲೂಕು ಆಡಳಿತ ವ್ಯವಸ್ಥೆ ಮಾಡಿಕೊಡಬೇಕು. ಹೆಗ್ಗಳ ಮಾರ್ಗವಾಗಿ ಕ್ರಮಿಸಿ ವಿರಾಜಪೇಟೆಗೆ ತೆರಳಲು ಕಷ್ಟವಾಗುತ್ತದೆ. ಆದಷ್ಟು ಬೇಗ ರಸ್ತೆ ವ್ಯವಸ್ಥೆ ಕಲ್ಪಿಸಿಕೊಡಬೇಕು ಎಂದು ಆಗ್ರಹಿಸಿದರು.

ಗ್ರಾಪಂ ಅಭಿವೃದ್ಧಿ ಅಧಿಕಾರಿ ಬಿ.ಮಣಿ ಪ್ರತಿಭಟನಾಕಾರರ ಮನವೊಲಿಸಿ, ಸದ್ಯದಲ್ಲೇ ರಸ್ತೆ ಕಾಮಗಾರಿ ಬಗ್ಗೆ ತಹಸೀಲ್ದಾರ್‌ಗೆ ಮತ್ತೊಮ್ಮೆ ಮನವಿ ಸಲ್ಲಿಸಲಾಗುವುದು. ಕನಿಷ್ಠ ಆರೇಳು ಲಕ್ಷ ರೂ. ಅನುದಾನ ಬೇಕಾಗುತ್ತದೆ ಎಂದರು.

ಸಂತ್ರಸ್ತರಿಗೆ ನ್ಯಾಯ ಒದಗಿಸಿ: ಡಿಸಿ

ಚಾಮರಾಜನಗರ: ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ದೌರ್ಜನ್ಯದ ಪ್ರಕರಣಗಳಲ್ಲಿ ಪರಿಹಾರ ವಿತರಿಸಿದರಷ್ಟೆ ಸಾಲದು, ನೊಂದವರಿಗೆ ಸಾಮಾಜಿಕ ನ್ಯಾಯ ಒದಗಿಸಲು ಅಧಿಕಾರಿಗಳು ಮುಂದಾಗುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದಲ್ಲಿ ನಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ದೌರ್ಜನ್ಯ ಪ್ರಕರಣಗಳ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತಾನಾಡಿದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಬಡವರಿಗೆ ನ್ಯಾಯ ದೊರಕದೆ ಸಮಸ್ಯೆ ಜಿಲ್ಲಾಡಳಿತಕ್ಕೆ ಸಲ್ಲಿಕೆಯಾಗಲಿದೆ. ಸಂಬಂಧಪಟ್ಟ ಅಧಿಕಾರಿಗಳು ವಿಳಂಬ ಮಾಡದೇ ಖುದ್ದಾಗಿ ಸ್ಥಳ ಪರಿಶೀಲನೆ ನಡೆಸಿ ಪ್ರಕರಣಕ್ಕೆ ನ್ಯಾಯ ಒದಗಿಸಬೇಕು. ಸಭೆಯಲ್ಲಿ ಕೈಗೊಳ್ಳುವ ನಿರ್ಧಾರ ಕಾರ್ಯರೂಪಕ್ಕೆ ತರುವುದರೊಂದಿಗೆ ಬಾಧಿತರಿಗೆ ನ್ಯಾಯ ಒದಗಿಸಬೇಕೆಂದು ಸೂಚಿಸಿದರು.

ಪ್ರಸ್ತುತ ಜನವರಿಯಿಂದ ಇದುವರೆಗೆ ಚಾಮರಾಜನಗರ 4, ಕೊಳ್ಳೇಗಾಲ 3, ಹನೂರು 8, ಗುಂಡ್ಲುಪೇಟೆ 1 ಹಾಗೂ ಯಳಂದೂರು ತಾಲೂಕಿನ 2 ಸೇರಿ ಒಟ್ಟು 18 ಪ್ರಕರಣಗಳು ದಾಖಲಾಗಿವೆ. ಈ ಪೈಕಿ 16 ಪ್ರಕರಣಗಳಿಗೆ 25 ಲಕ್ಷ ಪರಿಹಾರ ಒದಗಿಸಲಾಗಿದೆ. ಉಳಿದವು ಶೀಘ್ರ ಇತ್ಯರ್ಥಪಡಿಸಲಾಗುವುದು ಎಂದರು. ಅತ್ಯಾಚಾರ, ಹಲ್ಲೆ, ಜಾತಿನಿಂದನೆ ಪ್ರಕರಣಗಳನ್ನು ತ್ವರಿತ, ನ್ಯಾಯ ಸಮ್ಮತವಾಗಿ ಬಗೆಹರಿಸಬೇಕು. ಯಾವುದೇ ಪ್ರಕರಣ ಬಾಕಿ ಉಳಿಯಬಾರದು. ಅಗತ್ಯವಿದ್ದರೆ ಪೊಲೀಸ್ ಸಹಕಾರ ಪಡೆಯಬೇಕೆಂದು ಡಿಸಿ ತಿಳಿಸಿದರು. ಹನೂರು ತಾಲೂಕಿನ ಸುಳ್ವಾಡಿ ದುರಂತದಲ್ಲಿ ಅಸ್ವಸ್ಥಗೊಂಡಿದ್ದ 12 ಕುಟುಂಬಗಳ 114 ಜನರಿಗೆ ಡಿ.ಎಂ.ಎಫ್ ಅನುದಾನದಿಂದ ಪೌಷ್ಟಿಕ ಆಹಾರದ ಕಿಟ್ ಕೊಡುತ್ತಿದ್ದು, ನರೇಗಾ ಯೋಜನೆಯಡಿ ಜಾಬ್ ಕಾರ್ಡ್ ಕೊಡಬೇಕು. ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರ ಬಗ್ಗೆ ಪರಿಶೀಲಿಸಿ ಪ್ರಕರಣ ದಾಖಲಿಸಬೇಕು ಎಂದು ತಾಕೀತು ಮಾಡಿದರು.

ಕಾಡುಪ್ರಾಣಿ ಹಾವಳಿ ಹೆಚ್ಚಾಗುತ್ತಿದೆ. ಸೋಲಿಗರು ಹೆಚ್ಚಾಗಿ ವಾಸಿಸುತ್ತಿದ್ದು, ವಾಸಯೋಗ್ಯ ಮನೆ ಇಲ್ಲವಾಗಿವೆ. ಒಟ್ಟು 2930 ಮನೆಗಳ ನಿರ್ಮಾಣಕ್ಕಾಗಿ ಮುಖ್ಯಮಂತ್ರಿಗೆ ಪ್ರಸ್ತಾವ ಸಲ್ಲಿಸಲಾಗುತ್ತಿದೆ. ಗ್ರಾಮಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆ ನಿರ್ಮಿಸಿ ಕೊಡಲಾಗುವುದು ಎಂದರು.

ಉಸ್ತುವಾರಿ ಸಮಿತಿ ಸಭೆಯ ಸದಸ್ಯರಾದ ಸಿದ್ದರಾಜು, ಮುದ್ದಯ್ಯ, ಸಿದ್ದರಾಜು, ಸೋಮೇಶ್ವರ, ಎಸ್ಪಿ ಡಾ. ಬಿ.ಟಿ. ಕವಿತ, ಎಡಿಸಿ ಗೀತಾಹುಡೇದ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜು, ಎಸ್ಟಿ ಕಲ್ಯಾಣಾಧಿಕಾರಿ ಕೆ. ಮಂಜುಳ ಉಪಸ್ಥಿತರಿದ್ದರು.

ಅಗತ್ಯ ಸಿದ್ದತೆಗೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚನೆ

ಜುಲೈ 31ರಂದು ಜಿಲ್ಲಾ ಜನಪದ ಸಂಭ್ರಮ

ಚಾಮರಾಜನಗರ: ನಗರದಲ್ಲಿ ಜುಲೈ 31ರಂದು ಜಿಲ್ಲಾ ಜನಪದ ಸಂಭ್ರಮ' ಹಮ್ಮಿಕೊಂಡಿದ್ದು, ಕಾರ್ಯಕ್ರಮದ ಅಚ್ಚುಕಟ್ಟು ಆಯೋಜನೆಗೆ ಅಗತ್ಯ ಸಿದ್ದತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಡಿಸಿ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯಿಂದ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಚಾಮರಾಜನಗರ ಜನಪದ ಕಲೆಗಳ ತವರೂರು, ಜಿಲ್ಲೆಯ ಕಲೆ, ಸಂಸ್ಕೃತಿ ಬಿಂಬಿಸುವ ವಿಭಿನ್ನ ಕಾರ್ಯಕ್ರಮಗಳಿಗೆ ಒತ್ತು ನೀಡಬೇಕು. ಜಿಲ್ಲೆಯಲ್ಲಿ ಸಾಕಷ್ಟು ಮಂದಿ ಜಾನಪದ ಕಲಾವಿದರಿದ್ದು, ಜಿಲ್ಲೆಯ ಕಲಾ ಸಂಸ್ಕೃತಿ ಇತರೆ ಜಿಲ್ಲೆಗಳಿಗೆ ಪಸರಿಸಬೇಕು ಎಂದು ತಿಳಿಸಿದರು.

ಕರ್ನಾಟಕ ಜಾನಪದ ಅಕಾಡಮಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಡೆಯಲಿದೆ. ಜುಲೈ 31 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.ಎಂದರು.

ವೇದಿಕೆ ಕಾರ್ಯಕ್ರಮದಲ್ಲಿ ಎಲ್ಲಾಬಗೆಯ ಕಲಾ ಪ್ರದರ್ಶನಗಳು ಅನಾವರಣಗೊಳ್ಳಲು ವ್ಯವಸ್ಥೆ ಮಾಡಬೇಕು. ಜನಪದ ಬಗ್ಗೆ ಉಪನ್ಯಾಸ ಆಯೋಜಿಸಬೇಕು. ಪದವಿ ಹಾಗೂ ಪದವಿ ಪೂರ್ವ, ಎಂಜಿನಿಯರಿಂಗ್, ಇತರೆ ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಪಾಲ್ಗೊಳ್ಳುವಂತಾಗಬೇಕು. ಕಾರ್ಯಕ್ರಮ ಸೋಶಿಯಲ್ ಮೀಡಿಯಾದಲ್ಲಿ ನೇರ ಪ್ರಸಾರಕ್ಕೆ ವ್ಯವಸ್ಥೆ ಮಾಡಬೇಕು. ಆಹ್ವಾನಪತ್ರಿಕೆಗಳನ್ನು ಶಿಷ್ಟಾಚಾರದ ಜತೆ ವಿಶೇಷವಾಗಿ ಮುದ್ರಿಸಿ ಸಚಿವರು, ಶಾಸಕರು ಸೇರಿ ಗಣ್ಯರನ್ನು ಆಹ್ವಾನಿಸಬೇಕು ಎಂದರು.

ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಮಾತನಾಡಿದರು.

ಜಿಪಂ ಸಿಇಒ ಮೋನಾ ರೋತ್, ಎಸ್‌ಪಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಕರ್ನಾಟಕ ಜಾನಪದ ಅಕಾಡಮಿ ರಿಜಿಸ್ಟ್ರಾರ್ ನಮ್ರತಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುದರ್ಶನ್, ಜಿಲ್ಲಾ ಜಾನಪದ ಅಕಾಡಮಿ ಸದಸ್ಯ ಉಮೇಶ್ ಸಭೆಯಲ್ಲಿ ಉಪಸ್ಥಿತರಿದ್ದರು.

ಮಕ್ಕಳಿಗೆ ಅನೀಮಿಯ ತಪಾಸಣೆ

ಸರಗೂರು: ತಾಲೂಕಿನ ಬಿ.ಮಟಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಕೆಬ್ಬೇಪುರ ಆಶ್ರಮ ಶಾಲೆಯಲ್ಲಿ ಮಕ್ಕಳಿಗೆ ಸಿಕ್ಕಲ್ ಸೆಲ್ ಅನೀಮಿಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಕಾರ್ಯ ಕ್ರಮಕ್ಕೆ ಜಿಲ್ಲಾ ಕ್ಷಯ ರೋಗ ನಿರ್ಮೂಲನ ಅಧಿಕಾರಿಗಳಾದ ಡಾ.ಸಿರಾಜ್‌ಅಹಮದ್, ಆರೋಗ್ಯಾಧಿಕಾರಿ ಡಾ.ರವಿಕುಮಾರ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದರು.

ಸಿಕ್ಕಲ್ ಸೆಲ್ ಅನಿಮಿಯ ಕಾಯಿಲೆ ಎಂಬುದು ಕುಡುಗೋಲು ಅಥವಾ ಕುಡ್ಲು ಕಾಯಿಲೆ ಎಂದು ಕರೆಯುತ್ತಾರೆ. ಈ ಕಾಯಿಲೆಯಲ್ಲಿ ಕೆಂಪು ರಕ್ತಕಣಗಳು ಕುಡುಗೋಲು ಆಕಾರಕ್ಕೆ ಪರಿವರ್ತನೆಗೊಂಡು ಅನಾರೋಗ್ಯಕ್ಕೆ ಕಾರಣವಾಗುತ್ತದೆಲ. ಇದು ಹೆಚ್ಚಾಗಿ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಒಂದು ಅನುವಂಶಿಕ ಕಾಯಿಲೆ. ಆದರೂ ಆರೋಗ್ಯವಂತ ಪೋಷಕರಿಗೆ ಸಿಕ್ಕಲ್ ಸೆಲ್ ಇರುವ ಮಕ್ಕಳು ಹುಟ್ಟಬಹುದು. ಪದೇ ಪದೇ ಜ್ವರ, ತೀವ್ರ ಮೂಳೆ ನೋವು, ತೀವ್ರ ಹೊಟ್ಟೆ ನೋವು, ಆಗಾಗ ಕಾಮಾಲೆ ರೋಗ, ರಕ್ತ ಹೀನತೆ ,ವಾಸಿಯಾಗದ ಹುಣ್ಣುಗಳು, ಲಕ್ವಾ, ಈ ಲಕ್ಷಣಗಳು ಮಕ್ಕಳಲ್ಲಿ ಕಂಡುಬರುತ್ತವೆ ಎಂದರು.

ಮಕ್ಕಳಲ್ಲಿ ಯಾವುದೇ ರೋಗ ಲಕ್ಷಣಗಳು ಕಂಡು ಬಂದಲ್ಲಿ ಅಥವಾ ಸಂಬಂಧಿಕರಿಗೆ ಸಿಕ್ಕಲ್ ಸೆಲ್ ಕಾಯಿಲೆ ಇದ್ದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರಕ್ತ ಪರೀಕ್ಷೆ ಮಾಡಿಸಿ ಪತ್ತೆ ಹಚ್ಚಬಹುದು. ಆರಂಭದಲ್ಲೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆದು ಮತ್ತು ಆರೋಗ್ಯಕರ ಜೀವನ ಕಾಪಾಡಿಕೊಂಡಲ್ಲಿ ಕಾಯಿಲೆಯಿಂದ ಆಗುವ ತೊಂದರೆಯನ್ನು ತಪ್ಪಿಸಿಕೊಳ್ಳಿ ಎಂದು ತಿಳಿಸಿದರು. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ.ಚಂದ್ರ ಶೇಖರ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ನಾಗರಾಜು , ರವಿರಾಜ್, ಕ್ಷಯ ರೋಗ ಮೇಲ್ವಿಚಾರಕರಾದ ಉಮೇಶ್, ಸಿಬ್ಬಂದಿ ಅನಿತಾ, ಜಲಜ, ವತ್ಸಲ ಅಶಾಕಾರ್ಯಕರ್ತೆಯರು ಮತ್ತು ಶಾಲೆಯ ಶಿಕ್ಷಕರು ಹಾಜರಿದ್ದರು.

ಸಿಕ್ಕಲ್ ಸೆಲ್ ಕಾಯಿಲೆ ಪರೀಕ್ಷೆ ಹಾಗೂ ಚಿಕಿತ್ಸೆ ಈ ಕಾರ್ಯ ಕ್ರಮದಲ್ಲಿ ಟಿಎಚ್‌ಒ ಟಿ.ರವಿಕುಮಾರ ಮಾತನಾಡಿದರು.

ಕೃಷಿ ವೈಜ್ಞಾನಿಕ ಪದ್ದತಿಗೆ 'ಯಂತ್ರಶ್ರೀ' ಜಾರಿ

ಮದ್ದೂರು: ರೈತರು ಕೃಷಿ ವೈಜ್ಞಾನಿಕ ಪದ್ದತಿಯನ್ನು ಅಳವಡಿಸಿಕೊಳ್ಳಲು ತಾಲೂಕಿನಲ್ಲಿ ಯಂತ್ರಶ್ರೀ ಯೋಜನೆ ಜಾರಿಗೊಳಿಸುತ್ತಿರುವುದಾಗಿ ಸುಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಯೋಗೇಶ್ ಕನ್ಯಾಡಿ ತಿಳಿಸಿದರು.

ಮದ್ದೂರು ತಾಲೂಕಿನ ಬೋರಾಪುರ ವಲಯದಲ್ಲಿ ಆಯೋಜಿಸಿದ್ದ ಯಂತ್ರಶ್ರೀ ಭತ್ತದ ನಾಟಿ ಬಗ್ಗೆ ರೈತರಿಗೆ ಮಾಹಿತಿ ಮತ್ತು ಪ್ರಾತ್ಯಕ್ಷತೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ರೈತರು ದಿನನಿತ್ಯ ಒಂದಿಲ್ಲ ಒಂದು ಸಮಸ್ಯೆಗಳನ್ನು ಎದುರಿಸುತ್ತಿದ್ದು ಸಮರ್ಪಕವಾದ ನೀರಿಲ್ಲದೆ ರೈತರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ರೈತರ ಬೆನ್ನಲುಬಿಗೆ ನಿಲ್ಲಬೇಕೆಂಬ ಉದ್ದೇಶದಿಂದ ಧರ್ಮಸ್ಥಳ ಸಂಸ್ಥೆ ಯಂತ್ರಶ್ರೀ ಯೋಜನೆಯನ್ನು ಜಾರಿಗೊಳಿಸಿದೆ ಎಂದರು.

ಈ ವೇಳೆ ಸಹಾಯಕ ಕೃಷಿ ನಿರ್ದೇಶಕಿ ಪ್ರತಿಭಾ, ಕೃಷಿ ತಾಂತ್ರಿಕ ಅಧಿಕಾರಿ ಗಾವಸ್ಕರ್, ಕೃಷಿ ಮೇಲ್ವಿಚಾರಕ ನವೀನ್ ಇದ್ದರು.



ಮದ್ದೂರು ತಾಲೂಕಿನ ಬೋರಾಪುರ ಗ್ರಾಮದಲ್ಲಿ ಯಂತ್ರಶ್ರೀ ಭತ್ತದ ನಾಟಿ ಯೋಜನೆಗೆ ಯೋಜನಾಧಿಕಾರಿ ಯೋಗೇಶ್ ಕನ್ಯಾಡಿ ಚಾಲನೆ ನೀಡಿದರು.

ಒತ್ತುವರಿ ತೆರವು: ಸರಕಾರಿ ಭೂಮಿ ವಶ

ಮೈಸೂರು: ಮೈಸೂರಿನಲ್ಲಿ ಭೂಗಳ್ಳರಿಗೆ ತಹಶೀಲ್ದಾರ್ ಮಹೇಶ್ ಕುಮಾರ ಶಾಕ್ ಕೊಟ್ಟಿದ್ದು, ಸರಕಾರಿ ಜಾಗವನ್ನು ಕಬಳಿಸಿ ಅಕ್ರಮವಾಗಿ ನಿರ್ಮಿಸಿದ್ದ ವಾಣಿಜ್ಯ ಮಳಿಗೆಗಳನ್ನ ತೆರವು ಮಾಡಿ ಭೂಮಿಯನ್ನ ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಸುಮಾರು 10ರಿಂದ 12 ವಾಣಿಜ್ಯ ಮಳಿಗೆಗಳನ್ನು ತೆರವುಗೊಳಿಸಿ ಕೋಟ್ಯಾಂತರ ಬೆಲೆ ಬಾಳುವ ಭೂಮಿ ಸರಕಾರದ ವಶಕ್ಕೆ ಪಡೆದಿದ್ದಾರೆ. ತಹಶೀಲ್ದಾರ್ ಮಹೇಶ್ ಕುಮಾರ ಅವರು ಖುದ್ದು ಸ್ಥಳದಲ್ಲಿ ಹಾಜರಿದ್ದು ಒತ್ತುವರಿ ತೆರವು ಮಾಡಿದರು. ಮೈಸೂರು ತಾಲೂಕು ಇಲವಾಲ ಹೋಬಳಿ ಮಾದಗಳ್ಳಿ ಗ್ರಾಮದ ಗದ್ದಿಗೆ ಮುಖ್ಯ ರಸ್ತೆ ಸರ್ವೆ ನಂ.54 ರಿಂದ 57 ರವರೆಗಿನ ಸ್ಥಳ ಸರ್ಕಾರಿ ರಸ್ತೆ ಆಗಿದೆ. ಒತ್ತುವರಿ ಮಾಡಿಕೊಂಡಿದ್ದ ಭೂಗಳ್ಳರು ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದರು. ಈ ಮಾಹಿತಿ ಪಡೆದ ತಹಶೀಲ್ದಾರ ದಾಖಲೆ ಗಳನ್ನು ಪರಿಶೀಲಿಸಿ ಒತ್ತುವರಿ ಖಚಿತಪಡಿಸಿಕೊಂಡು ಜೆಸಿಬಿ ಯಂತ್ರದ ಮೂಲಕ ಮಳಿಗೆಗಳ ನೆಲಸಮಗೊಳಿಸಿದರು. ಸುಮಾರು 3 ಕೋಟಿ ರೂ. ಬೆಲೆಬಾಳುವ ಆಸ್ತಿಯನ್ನು ಸರ್ಕಾ ರದ ವಶಕ್ಕೆ ಪಡೆದಿದ್ದಾರೆ. ಇಲವಾಲ ಹೋಬಳಿ ಉಪ ತಹಶೀಲ್ದಾರ ಕುಬೇರ, ರಾಜಸ್ವ ನಿರೀಕ್ಷಕ ಶಿವಕುಮಾರ, ಗ್ರಾಮ ಆಡಳಿತ ಅಧಿಕಾರಿ ಭಾರತೀಶ್, ಬೋಗಾದಿ ಪಪಂ ಮುಖ್ಯ ಅಧಿಕಾರಿ ಬಸವರಾಜ್, ರೆವಿನ್ಯೂ ಇನ್ಸ್‌ಪೆಕ್ಟರ ವಿಜಯ್ ಕುಮಾರ ಇದ್ದರು.

ಚೆಲುವನಾರಾಯಣ ದೇಗುಲ ಭೂ ಕಬಳಿಕೆ

ಮೈಸೂರು: ಮೈಸೂರಿನ ಮುಡಾ ಹಗರಣದ ನಡುವೆಯೇ ಮತ್ತೊಂದು ಬಹುಕೋಟಿ ಭೂ ಹಗರಣದ ಆರೋಪ ಕೇಳಿ ಬಂದಿದೆ. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಮೇಲುಕೋಟೆಯ ಚೆಲುವನಾರಾಯಣಸ್ವಾಮಿ ದೇವರಿಗೆ ಸೇರಿದ ಆಸ್ತಿ ಭೂಗಳ್ಳರ ಪಾಲಾಗುತ್ತಿದೆ ಎನ್ನಲಾಗಿದೆ. ನೂರಾರು ಕೋಟಿ ರೂಪಾಯಿ ಬೆಲೆ ಬಾಳುವ ಆಸ್ತಿ ಕಬಳಿಸಲು ಸಂಚು ಹಾಕಲಾಗಿದ್ದು ಮೈಸೂರು ಉಪ ವಿಭಾಗಾಧಿಕಾರಿ ರಕ್ಷಿತ್ ಅವರು ಕೋಟ್ಯಾಂತರ ರೂ. ಮೌಲ್ಯದ ಆಸ್ತಿ ಭೂಗಳ್ಳರಿಗೆ ಅಕ್ರಮ ಪರಭಾರೆ ಎಂಬ ಗಂಭೀರ ಆರೋಪ ಎದುರಿಸುತ್ತಿದ್ದಾರೆ. ಈ ಬಗ್ಗೆ ಚೆಲುವನಾರಾಯಣ ಸ್ವಾಮಿಯ ಭಕ್ತರಾಗಿರುವ ರವಿಕುಮಾರ ಗಂಭೀರ ಆರೋಪ ಮಾಡಿದ್ದಾರೆ. ಮೈಸೂರಿನ ಕೆಸರೆ ಗ್ರಾಮ ವ್ಯಾಪ್ತಿಯಲ್ಲಿ 21.5 ಎಕರೆ ಭೂಮಿಯಲ್ಲಿ ಅಕ್ರಮ ನಡೆದಿದೆ ಎನ್ನಲಾಗಿದೆ. ಮಂಡ್ಯ ಜಿಲ್ಲೆ ನಗುವಿನಹಳ್ಳಿ ಗ್ರಾಮದ ಗೋಸೇಗೌಡ ಕುಟುಂಬ ದೇಗುಲಕ್ಕೆ ದೇಣಿಗೆಯಾಗಿ ನೀಡಿತ್ತು. ಆದರೆ ದೇವಾಲಯಕ್ಕೆ ಸೇರಿದ ಈ ಜಮೀನನ್ನು ಅನ್ಯರಿಗೆ ಪರಭಾರೆ ಮಾಡುವಲ್ಲಿ ಕಂದಾಯ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ಆರೋಪಿಸಲಾಗಿದೆ. ತಮ್ಮ ಸ್ನೇಹಿತರಾದ ಗುತ್ತಿಗೆದಾರ ಸತೀಶ್‌ಬಾಬು ರೆಡ್ಡಿಗೆ ಭೂಮಿ ಕೊಡಿಸಲು ಯತ್ನ ನಡೆದಿದೆ ಎಂದು ರವಿಕುಮಾರ ಆರೋಪ ಮಾಡಿದ್ದಾರಲ್ಲದೆ, ಜಮೀನನ್ನು ಮತ್ತೆ ದೇವಾಲಯದ ಹೆಸರಿಗೆ ವರ್ಗಾಯಿಸುವಂತೆ ದೂರುದಾರ ಆಗ್ರಹಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಪತ್ರ ಕೂಡ ಬರೆದಿದ್ದಾರೆ.

ದಾಸೋಹ ಭವನಕ್ಕೆ ಶುದ್ಧ ನೀರಿನ ಘಟಕ

ಮೈಸೂರು: ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳಿಗೆ ಮತ್ತು ಪ್ರವಾಸಿಗರ ಅನೂಕಲಕ್ಕಾಗಿ ಅನ್ನ ದಾಸೋಹ ಭವನದಲ್ಲಿ ವಿ- ಗಾರ್ಡ್ ಕಂಪನಿ ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕವನ್ನು ಉಚಿತವಾಗಿ ಸ್ಥಾಪಿಸಿ ಗುರುವಾರ ಹಸ್ತಾಂತರಿಸಲಾಯಿತು.

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿಟಿ.ದೇವೆಗೌಡ ಅವರು ಚಾಮುಂಡಿ ಬೆಟ್ಟಕ್ಕೆ ಸೌಲಭ್ಯಗಳನ್ನು ಶಾಶ್ವತವಾಗಿ ಒದಗಿಸಲು ಸಿಎಸ್ ಆರ್ ವಲಯ ಖಾಸಗಿ ಕಂಪನಿಗಳಿಗೆ ಮನವಿ ಮಾಡಿದ್ದರು. ಇದಕ್ಕೆ ಸ್ಪಂದಿಸಿದ ವಿ-ಗಾರ್ಡ್ ಕಂಪನಿ ಚಾಮುಂಡಿಬೆಟ್ಟಕ್ಕೆ ಪ್ರತಿನಿತ್ಯ ಆಗಮಿಸುವ ಭಕ್ತಾಧಿಗಳಿಗೆ ಪ್ರತಿದಿನ 50 ಸಾವಿರ ಮಂದಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವ ಸಾಮರ್ಥ್ಯವುಳ್ಳ ವಿ-ಗಾರ್ಡ್ ಶುದ್ಧ ಕುಡಿಯುವ ನೀರಿನ ಘಟಕವನ್ನು ಕಂಪನಿಯ ಉಪಾಧ್ಯಕ್ಷ ಸೂರ್ಯಪ್ರಸಾದ್ ವಿಜೆ, ಶಾಖಾ ವ್ಯವಸ್ಥಾಪಕ ಹರ್ಷೇಂದ್ರ ಪ್ರಸಾದ್ ಹಸ್ತಾಂತರಿಸಿದರು.

ಈ ವೇಳೆ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಡಾ. ಶಶಿಶೇಖರ ದೀಕ್ಷಿತ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ, ನಿರೂಪಕ ಅಜಯ್ ಶಾಸ್ತ್ರಿ , ತನ್ವಿ ಟ್ರೇಡಿಂಗ್ ಕಾರ್ಪೋರೇಷನ್ ದೀಪಕ್ ಹೆಬ್ಬಾಳ್, ಚಮನ್, ಪುರುಷೋತ್ತಮ್, ಅರುಣ್ ಇದ್ದರು.

ಶಿಕ್ಷಕರ ಹಿತರಕ್ಷಣಾ ವೇದಿಕೆ ಪ್ರತಿಭಟನೆ

ಮೈಸೂರು: ವರ್ಗಾವಣೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಹಿತರಕ್ಷಣಾ ವೇದಿಕೆ ವತಿಯಿಂದ ಡಿಡಿಪಿಐ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು. 2016ಕ್ಕಿಂತ ಮುಂಚೆ ಪ್ರಾಥಮಿಕ ಶಾಲಾ ಶಿಕ್ಷಕರೆಂದು ನೇಮಕವಾಗಿ 25-30 ವರ್ಷಗಳಿಂದ 1-8ನೇ ತರಗತಿಗೆ ಬೋಧಿಸುತ್ತಿರುವ ಶಿಕ್ಷಕರನ್ನು ಹೊಸ ವೃಂದಬಲ ನಿಗದಿ, 2017ರಲ್ಲಿ ರಚಿತವಾದ ನೂತನ ಸಿಎಸ್‌ಆರ್ ಪೂರ್ವಾನ್ವಯ ಮಾಡಿ 1-5ನೇ ತರಗತಿಗೆ ಸೀಮಿಗೊಳಿಸಿ ಹಿಂಬಡ್ತಿ ನೀಡಿರುವುದು ಸಾಮಾಜಿಕ ನ್ಯಾಯಕ್ಕೆ ವ್ಯತಿರಿಕ್ತವಾಗಿದೆ. ಇದರಿಂದ ಶಿಕ್ಷಕರಿಗೆ ಕಾಲಮಿತಿ ಬಡ್ತಿ, ಪ್ರೌಢಶಾಲಾ ಶಿಕ್ಷಕರ ಬಡ್ತಿ, ಮುಖ್ಯ ಶಿಕ್ಷಕರ ಬಡ್ತಿಗಳಲ್ಲಿ ಅನ್ಯಾಯವಾಗುತ್ತಿದೆ ಎಂದು ಕಿಡಿಕಾರಿದರು. 25-30 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ವರ್ಗಾವಣೆಗೆ ಕಾಯುತ್ತಿದ್ದಾರೆ. ಆದರೆ ಕೌನ್ಸೆಲಿಂಗ್ಗೆ ಬರುವ ಶಿಕ್ಷಕರಿಗೆ ವರ್ಗಾವಣೆ ಸಿಗುತ್ತಿಲ್ಲ. ಜಿಪಿಟಿ ಶಿಕ್ಷಕರು ಕೆಲವೇ ವರ್ಷ ಸೇವೆ ಸಲ್ಲಿಸಿದ್ದರೂ ಮನೆಯಿಂದ ಕೂಗಳತೆ ದೂರದ ಶಾಲೆಗೆ ವರ್ಗಾವಣೆ ಸಿಗುತ್ತಿದೆ. ಇದು ಅವೈಜ್ಞಾನಿಕವಲ್ಲವೆ ಎಂದು ಪ್ರಶ್ನಿಸಿದರು.

ಬಹುತೇಕ ಹುದ್ದೆಗಳು ಏಕಕಾಲದಲ್ಲಿ ಖಾಲಿಯಾಗಿ ವರ್ಗಾವಣೆ ಸಿಗುತ್ತದೆ. ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಚಾಲಕ ಮಂಜುನಾಥ್.ಪಿ.ಎಸ್, ಉಮಾ ಗುಡ್ಡದ, ಶಂಕರ ಜೇನಿ, ನೇತ್ರಾವತಿ, ಗೀತಾ, ನಾಗರತ್ನ, ರಮೇಶ್, ಲೋಕೇಶ್. ಎಂ, ಮಹೇಶ್, ಪ್ರವೀಣ್, ಉಷಾ, ಪವಿತ್ರಾ.ವಿ, ಶೋಭಾ ಭಾಗವಹಿಸಿದ್ದರು.

ಪ್ರೇಮಿಗಳ ಆತ್ಮಹತ್ಯೆ

ಮೈಸೂರು: ಪ್ರಿಯತಮೆ ಆತ್ಮಹತ್ಯೆಗೆ ಶರಣಾದ ಕಾರಣದಿಂದ ತೀವ್ರವಾಗಿ ನೊಂದ ಪ್ರಿಯತಮನೂ ನೇಣಿಗೆ ಶರಣಾದ ದುರಂತ ಘಟನೆ ನಡೆದಿದೆ.



ಮೋನಿಕಾ(20) ಹಾಗೂ ಮನು(22) ಮೃತ ಪ್ರೇಮಿಗಳು. ಹತ್ತಿರದ ಸಂಬಂಧಿಗಳಾಗಿದ್ದ ಮಂಡಕಳ್ಳಿ ಗ್ರಾಮದ ನಿವಾಸಿ ಮೋನಿಕಾ ಹಾಗೂ ಮೈಸೂರಿನ ಜ್ಯೋತಿನಗರದ ಮನು ಕಳೆದ 2 ವರ್ಷಗಳಿಂದ ಪ್ರೀತಿಸುತ್ತಿದ್ದರು. ಮನೆಯಲ್ಲಿ ಇಬ್ಬರಿಗೂ ಮದುವೆ ಮಾಡಲು ಕುಟುಂಬಸ್ಥರು ತೀರ್ಮಾನಿಸಿದ್ದರು. ಆದರೆ, ಇತ್ತೀಚೆಗೆ ಇಬ್ಬರ ಮಧ್ಯೆ ಕ್ಷುಲ್ಲಕ ಕಾರಣಕ್ಕೆ ಭಿನ್ನಾಭಿಪ್ರಾಯ ಬಂದಿದ್ದು, ಸಣ್ಣ ಗಲಾಟೆ ಆಗಿದೆ.

ಇದರಿಂದ ಬೇಸತ್ತ ಮೋನಿಕಾ ದಟ್ಟಗಳ್ಳಿಯ ಕೆಲಸ ಮಾಡುತ್ತಿದ್ದ ಮನೆಯೊಂದರಲ್ಲಿ ನೇಣಿಗೆ ಶರಣಾಗಿದ್ದಾಳೆ. ವಿಷಯ ತಿಳಿದ ಮನು ಸ್ಥಳಕ್ಕೆ ಧಾವಿಸಿ ಮೋನಿಕಾಳನ್ನು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸುವ ವೇಳೆ ಮೋನಿಕಾ ಮೃತಪಟ್ಟಿದ್ದಾಳೆ ಎನ್ನಲಾಗಿದೆ. ನಂತರ ಮೋನಿಕಾ ಸಾವಿಗೆ ಮನನೊಂದ ಮನು, ತಾನೂ ಸಹ ಜ್ಯೋತಿನಗರದ ಮನೆಯಲ್ಲಿ ನೇಣಿಗೆ ಶರಣಾಗಿದ್ದಾನೆ.

ಜಲಾಶಯಗಳಲ್ಲಿ ಹೆಚ್ಚಿದ ನೀರಿನ ಹರಿವು | ಗೋಡೆ ಕುಸಿದು ಬಾಲಕ ಸಾವು | ನಾನಾ ಕಡೆ ಧರೆಗುರುಳಿದ ಮರಗಳು

ಪುಷ್ಯ ಮಳೆಗೆ ರಾಜ್ಯದಲ್ಲಿ ನಾನಾ ಅವಾಂತರ

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	124.80	52,972
2.	ಕಬಿನಿ	2284	2282	17,657
3.	ಹಾರಂಗಿ	2859	2857.07	9,358
4.	ಹೇಮಾವತಿ	2922	2921	45,909
5.	ತುಂಗಭದ್ರಾ	1633	16313.91	97,111
6.	ಆಲಮಟ್ಟಿ	1704.81	1697.32	2,20,706
7.	ನಾರಾಯಣಪುರ	1615	1610.35	2,38,363

ಕೃಷ್ಣೆ ಪ್ರವಾಹ ಭೀತಿಯಲ್ಲಿ ಜನತೆ

ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಭಾರಿ ಪ್ರಮಾಣದಲ್ಲಿ ಮಳೆಯಾಗುತ್ತಿರುವುದರಿಂದ ಸಮೀಪದ ಹಿಪ್ಪರಗಿ ಜಲಾಶಯಕ್ಕೆ ಗುರುವಾರ ಬೆಳಗ್ಗೆ 7 ಗಂಟೆಗೆ 168565 ಕ್ಯೂಸೆಕ್ ಒಳ ಹರಿವು ಇದ್ದು, 167815 ಹೊರ ಹರಿವು ದಾಖಲಾಗಿದೆ. ಕೃಷ್ಣಾ ನದಿಗೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ಬನಹಟ್ಟಿ ಸಮೀಪದಲ್ಲಿ ಕೃಷ್ಣಾ ನದಿ ಭೋರ್ಗರೆಯುತ್ತಿದೆ. ಈ ಹಿನ್ನಲೆಯಲ್ಲಿ ತಾಲೂಕಿನ ತಮದಡ್ಡಿ, ಹಳಿಂಗಳಿ, ಮದನಮಟ್ಟಿ, ಅಸ್ಕಿ, ಸೇರಿದಂತೆ ಕೃಷ್ಣಾ ತೀರದ ಅನೇಕ ಗ್ರಾಮಗಳ ಗ್ರಾಮಸ್ಥರಲ್ಲಿ ಪ್ರವಾಹ ಭೀತಿ ಎದುರಾಗಿದೆ.

ಹೆಬ್ಬಾಳ ಸೇತುವೆ ಮತ್ತೆ ಮುಳುಗಡೆ

ಚಿಕ್ಕಮಗಳೂರಿನ ಕಳಸ-ಹೊರನಾಡು ಸಂಪರ್ಕ ಕಲ್ಪಿಸುವ ಹೆಬ್ಬಾಳ ಸೇತುವೆ ಮತ್ತೆ ಮುಳುಗಡೆಯಾಗಿದೆ. ಕುದುರೆಮುಖ ಘಟ್ಟ ಪ್ರದೇಶದಲ್ಲಿ ಕಳೆದ ರಾತ್ರಿಯಿಂದ ಸುರಿದ ಧಾರಾಕಾರ ಮಳೆಗೆ ಕಳಸ-ಹೊರನಾಡು ಸಂಪರ್ಕದ ಹೆಬ್ಬಾಳೆ ಸೇತುವೆ ಮುಳುಗಡೆಯಾಗಿದೆ. ಕಳೆದ 15 ದಿನಗಳಲ್ಲಿ 10ಕ್ಕೂ ಹೆಚ್ಚು ಬಾರಿ ಸೇತುವೆ ಮುಳುಗಡೆಯಾಗಿದೆ. ಹತ್ತಾರು ಹಳ್ಳಿಯ ಸಂಪರ್ಕ ಕಡಿತದೊಂದಿಗೆ ಹೊರನಾಡು ಅನ್ನಪೂರ್ಣೇಶ್ವರಿ ದೇಗುಲದ ಮಾರ್ಗವು ಬಂದ್ ಆಗಿದೆ.

ಬೆಂಗಳೂರು: ರಾಜ್ಯದಲ್ಲಿ ಮಳೆ ಅವಾಂತರಗಳು ಮುಂದುವರಿದಿದೆ. ಬೆಳಗಾವಿಯಲ್ಲಿ ಮನೆಯೊಂದಕ್ಕೆ ಮಳೆ ನೀರು ನುಗ್ಗಿದ್ದು, ಕಾಲು ಜಾರಿ ಬಿದ್ದು ವೃದ್ಧೆಯೊಬ್ಬರು ಮೃತಪಟ್ಟಿದ್ದಾರೆ. ಮಲೆನಾಡಿನಲ್ಲೂ ಮರಗಳು ಧರೆಗುರುಳಿದ್ದು, ಹಾನಿಯಾಗಿವೆ. ಬೆಳಗಾವಿ ನಗರ ಸೇರಿದಂತೆ ವಿವಿಧ ಭಾಗಗಳಲ್ಲಿ ಮಳೆ ಅಬ್ಬರ ಮುಂದುವರಿದಿದೆ. ಜಿಲ್ಲೆಯ ಪ್ರಮುಖ ನದಿಗ ಳಾದ ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಹಿರಣ್ಯಕೇಶಿ, ವೇದ ಗಂಗಾ ಹಾಗೂ ದೂದಗಂಗಾ ನದಿಗಳ ಒಳ ಹರಿವು ಹೆಚ್ಚಾ ಗುತ್ತಿದ್ದು ನದಿ ಪಾತ್ರದ ಜನರಲ್ಲಿ ಪ್ರವಾಹ ಭೀತಿ ಎದುರಾಗಿದೆ. ಚಿಕ್ಕೋಡಿ ಹಾಗೂ ನಿಪ್ಪಾಣಿ ತಾಲೂಕಿನ ಸುಮಾರು 8 ಕ್ಕೂ ಅಧಿಕ ಸೇತುವೆಗಳು ಜಲಾವೃತಗೊಂಡಿವೆ.

ಉಡುಪಿಯಲ್ಲಿ ಮರ ಬಿದ್ದು ಮನೆಗಳು ಧ್ವಂಸ: ಉಡುಪಿಯ ಕುಂದಾಪುರ ತಾಲೂಕಿನ ಬಳ್ಕೂರಿನಲ್ಲಿ ಭಾರಿ ಗಾಳಿ ಮಳೆಗೆ ಮರ ಬಿದ್ದು ಎರಡು ಮನೆಗಳು ಸಂಪೂರ್ಣ ಹಾನಿಯಾಗಿದೆ. ಬಳ್ಕೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಒಂದನೇ ವಾರ್ಡ್‌ನಲ್ಲಿ ಘಟನೆ ನಡೆದಿದೆ. ಸೀತಾ ಪೂಜಾರಿ ಮತ್ತು ಲಚ್ಚ ಪೂಜಾರಿ ಅವರ ಮನೆಗಳು ಧ್ವಂಸಗೊಂಡಿವೆ. ಒಂದು ಮನೆಯ ಮೇಲೆ ತೆಂಗಿನ ಮರ, ಇನ್ನೊಂದು ಮನೆಯ ಮೇಲೆ ಎರಡು ಅಡಿಕೆ ಮರಗಳು ಉರುಳಿ ಬಿದ್ದಿವೆ. ಮನೆಯ ಪಕ್ಕದಲ್ಲಿದ್ದ ಹಲಸಿನ ಮರ ಮತ್ತು ವಿದ್ಯುತ್ ಕಂಬಕ್ಕೂ ಹಾನಿಯಾಗಿದೆ.

ಕಾರಿನ ಮೇಲೆ ಬಿದ್ದ ವಿದ್ಯುತ್ ತಂತಿ: ಚಿಕ್ಕಮಗಳೂರಿನಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು, ಅವಾಂತರವೇ ಸೃಷ್ಟಿಸಿದೆ. ಗಾಳಿ ಮಳೆ ಅಬ್ಬರಕ್ಕೆ ಚಲಿಸುತ್ತಿದ್ದ ಕಾರಿನ ಮೇಲೆ ವಿದ್ಯುತ್ ತಂತಿ ಬಿದ್ದಿದೆ. ವಿದ್ಯುತ್ ಇಲ್ಲದ ಪರಿಣಾಮ ಭಾರಿ ಅನಾಹುತ ತಪ್ಪಿದೆ. ಚಿಕ್ಕಮಗಳೂರು ತಾಲೂಕಿನ ಮುಳ್ಳಯ್ಯನಗಿರಿ ರಸ್ತೆಯಲ್ಲಿ ಘಟನೆ ನಡೆದಿದೆ. ಗಿರಿ ರಸ್ತೆಯ ಐದಾರು ಕಡೆ ಮರಗಳು ಬಿದ್ದು ವಿದ್ಯುತ್ ಕಂಬಗಳು ಧರೆಗುರುಳಿದೆ. ಕೊಪ್ಪ ತಾಲೂಕಿನ ಹೇರೂರು ಗ್ರಾಂ.ಪಂ ವ್ಯಾಪ್ತಿಯ ಕೆಮ್ಮಣ್ಣು ಗ್ರಾಮದಲ್ಲಿ ಘಟನೆ ನಡೆದಿದೆ. ಹಸುಗಳು ಮೇಯಲು ಹೋಗಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ. ಸುಮಾರು 50ಕ್ಕೂ ಹೆಚ್ಚು ಹಸುಗಳಿದ್ದು, ಗೋ ಶಾಲೆಯ ಚಾವಣಿ ಸಂಪೂರ್ಣ ಜಖಂಗೊಂಡಿದೆ.

ನೂರಾರು ಎಕರೆ ಜಮೀನು ಜಲಾವೃತ: ಹಾಸನದ ಸಕಲೇಶಪುರ ತಾಲೂಕಿನಲ್ಲಿ ಮಳೆಯಾರ್ಭಟಕ್ಕೆ ಹೇಮಾವತಿ ನದಿ ಉಕ್ಕಿ ಹರಿಯುತ್ತಿದೆ. ಹೇಮಾವತಿ ನದಿ ನೀರು ಉಕ್ಕಿ ಹರಿದ ಪರಿಣಾಮ ನೂರಾರು ಎಕ್ಕರೆ ಜಮೀನು ಜಲಾವೃತಗೊಂಡಿದೆ. ಸಕಲೇಶಪುರ ತೇಜಸ್ವಿ ಚಿತ್ರಮಂದಿರ ಸಮೀಪದ ಭತ್ತದ ಗದ್ದೆಗಳು,ತೋಟ ಜಲಾವೃತಗೊಂಡಿದೆ. ನಾಟಿ ಮಾಡಿದ್ದ ಭತ್ತದ ಗದ್ದೆ ,ಭತ್ತದ ಸಸಿ ನೀರುಪಾಲಾಗಿದೆ.

ತುಂಗಭದ್ರಾ ಜಲಾಶಯ ಬಹುತೇಕ ಭರ್ತಿಯಾಗಿದ್ದು ನದಿಗೆ 83,649 ಕ್ಯುಸೆಕ್ ನೀರನ್ನು ಬಿಡುಗಡೆ ಮಾಡಲಾಗಿದೆ.

ಚಿಕಿತ್ಸೆ ಫಲಿಸದೆ ಮಹಿಳೆ ಸಾವು

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಕಾಡಂಚಿನಲ್ಲಿರುವ ಅಮ ಗಾಂವ ಗ್ರಾಮದಲ್ಲಿ ಕಟ್ಟಿಗೆ ಸ್ಟ್ರೇಚರ್‌ನಲ್ಲಿ ಐದು ಕಿ.ಮೀ. ಹೊತ್ತೊಯ್ದು ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ದಾಖಲಿಸಿದ್ದ ಮಹಿಳೆ ಚಿಕಿತ್ಸೆ ಫಲಕಾರಿ ಆಗದೇ ಗುರುವಾರ ಬೆಳಗಿನ ಜಾವ ಮೃತಪಟ್ಟಿದ್ದಾಳೆ. ಚಿಕಿತ್ಸೆ ಫಲಿಸದೆ ಬೆಳಗಾವಿ ಕೆ ಎಲ್ ಇ ಆಸ್ಪತ್ರೆಯಲ್ಲಿ ಹರ್ಷದಾ ಘಾಡಿ(42) ಮೃತಪಟ್ಟ ದ್ದಾರೆ. ತೀವ್ರ ಜ್ವರ ಹಿನ್ನೆಲೆಯಲ್ಲಿ ಜು. 18ರಂದು ಆಸ್ಪತ್ರೆಗೆ ದಾಖಲಿಸಲು ಹರ ಸಾಹಸ ಪಡಲಾಗಿತ್ತು. ಕಟ್ಟಿಗೆಯಲ್ಲಿ ಸ್ಟ್ರೇಚರ್ ಮಾಡಿಕೊಂಡು ಚಿಕಲೆ ವರೆಗೂ ಗ್ರಾಮಸ್ಥರು ಹೊತ್ತುಕೊಂಡು ಬಂದಿದ್ದರು. ಐದು ಕಿ. ಮೀ. ಸುರಿಯುತ್ತಿದ್ದ ಭಾರಿ ಮಳೆಯಲ್ಲಿ ಪ್ರಾಣ ಉಳಿಸಲು ಕಸರತ್ತು ನಡೆಸಿದ್ದರು. ಆದರೆ, ಗ್ರಾಮಸ್ಥರ ಹೋರಾಟ ಕೊನೆಗೂ ಫಲಿಸಲಿಲ್ಲ. ಚಿಕಿತ್ಸೆಗೆ ಸ್ಪಂದಿಸದೇ ಹರ್ಷದಾ ಕೊನೆಯುಸಿರೆಳೆದಿದ್ದಾರೆ.

ಕಾವೇರಿ ನದಿ ಪಾತ್ರದ ಜನರಿಗೆ ಭೀತಿ

ಕೆಆರ್‌ಎಸ್ ಜಲಾಶಯದಿಂದ ಸುಮಾರು 50,000 ರಿಂದ 80,000 ಕ್ಯೂಸೆಕ್ ನೀರು ಕಾವೇರಿ ನದಿಗೆ ಯಾವುದೇ ಕ್ಷಣದಲ್ಲಿ ಬಿಡುವ ಸಾಧ್ಯತೆ ಇದೆ. ಈ ಪ್ರಮಾಣ ಯಾವುದೇ ಸಮಯದಲ್ಲಿ ಹೆಚ್ಚಾಗುವ ಸಂಭವವಿರುವುದರಿಂದ ಕಾವೇರಿ ನದಿಯ ತಗ್ಗು ಪ್ರದೇಶದಲ್ಲಿರುವ ಮತ್ತು ನದಿಯ ಎರಡೂ ದಂಡೆಗಳಲ್ಲಿರುವ ಸಾರ್ವಜನಿಕರು ತಮ್ಮ ಆಸ್ತಿ ಪಾಸ್ತಿ ಹಾಗೂ ಜಾನುವಾರುಗಳ ರಕ್ಷಣೆಗೆ ಎಚ್ಚರಿಕೆ ವಹಿಸಿ, ಸೂಕ್ತ ಮುಂಜಾಗ್ರತೆ ಕೈಗೊಂಡು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಕಾ.ನೀ.ನಿ.ನಿ. ಕೃಷ್ಣರಾಜಸಾಗರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮನವಿ ಮಾಡಿದ್ದಾರೆ.

ನೋಡ ನೋಡುತ್ತಿದ್ದಂತೆ ಕುಸಿದ ಗುಡ್ಡ

ಗುಡ್ಡದ ಮಣ್ಣು ಕುಸಿದಿದ್ದು, ಕೆಎಸ್‌ಆರ್‌ಟಿಸಿ ಬಸ್ ನಲ್ಲಿದ್ದ ವರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಕೊಡಗಿನ ಸೋಮವಾರಪೇಟೆ ತಾಲೂಕಿನ ಶಾಂತಳ್ಳಿ ಸಮೀಪ ಜೇಡಿ ಗುಂಡಿ ಬಳಿ ಘಟನೆ ನಡೆದಿದೆ. ಚಲಿಸುತ್ತಿದ್ದ ಬಸ್ ಮುಂದೆ ಯೇ ಗುಡ್ಡದ ಮಣ್ಣು ಕುಸಿದಿದೆ. ಕೂಡಲೇ ಚಾಲಕ ಬಸ್ ನಿಲ್ಲಿಸಿದ್ದಾರೆ. ಗುಡ್ಡದ ಮಣ್ಣು ಕುಸಿದು ಸೋಮವಾರಪೇಟೆ ಶಾಂತಳ್ಳಿ ರಸ್ತೆ ಸಂಚಾರ ಬಂದ್ ಆಗಿತ್ತು. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ವಾಹನಗಳು ಸಾಲು ಗಟ್ಟಿ ನಿಲ್ಲಬೇಕಾಯಿತು. ಇತ್ತ ಸೋಮವಾರಪೇಟೆ ವ್ಯಾಪ್ತಿಯಲ್ಲಿ ಭಾರಿ ಗಾಳಿ ಮಳೆಗೆ ವಾಸದ ಮನೆ ಮೇಲೆ ಮರ ಉರುಳಿ ಬಿದ್ದಿದೆ. ಮನೆಮಂದಿ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕೃಷ್ಣಾ ನದಿ ಪ್ರವಾಹ ಹೆಚ್ಚಾದ ಹಿನ್ನಲೆಯಲ್ಲಿ ಅಥಣಿ ತಾಲೂಕಿನ ಗ್ರಾಮಗಳಿಗೆ ಪ್ರವಾಹ ಭೀತಿ.

ಹೇಮಾವತಿಯಿಂದ 60 ಸಾವಿರ ಕ್ಯು.ಸೆಕ್ ನೀರು ಹೊರಕ್ಕೆ

ಹಾಸನ ನಗರದಲ್ಲಿ ಬೆಳಗ್ಗೆ ತುಸು ಬಿಡುವು ನೀಡಿದ್ದ ಮಳೆ ನಂತರದಲ್ಲಿ ಅಬ್ಬರಿಸುತ್ತಿದೆ. ಉಳಿದಂತೆ ಸಕಲೇಶಪುರ, ಆಲೂರು, ಬೇಲೂರು ಭಾಗದಲ್ಲಿ ಮಳೆ ಆರ್ಭಟ ಮುಂದುವರಿದಿದೆ. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ವಿದ್ಯಾರ್ಥಿಗಳು, ವಾಹನ ಸವಾರರು ಪರದಾಡುವಂತಾಗಿದೆ.ಶಿರಾಡಿಘಾಟ್‌ನಲ್ಲಿ ಭೂ ಕುಸಿತ ಭೀತಿ ಇದ್ದೇ ಇದೆ. ಇದರಿಂದ ವಾಹನ ಸವಾರರು ಭಯದಿಂದ ಓಡಾಡುವಂತಾಗಿದೆ. ತುಮಕೂರು ಹಾಗೂ ಮಂಡ್ಯ ಜಿಲ್ಲೆಗೆ ನೀರು ಹರಿಸೋ ನಾಲೆಗೆ 60000 ಕ್ಯುಸೆಕ್ ಹಾಗೂ ಇತರೆ ನಾಲೆಗಳಿಗೆ 295 ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗಿದೆ. ಅಣೆಕಟ್ಟೆ ತುಂಬಿರುವುದರಿಂದ 60 ಸಾವಿರ ಕ್ಯುಸೆಕ್ ಹೊರ ಬಿಡಲಾಗುತ್ತಿದೆ.

ಕೃಷ್ಣದೇವರಾಯ ಸಮಾಧಿಗೆ ದಿಗ್ಬಂಧನ

ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ವಿಪರೀತ ಮಳೆಯಾಗುತ್ತಿವುದ ರಿಂದ ಅಪಾರ ಪ್ರಮಾಣದ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ. ಆನೆಗೊಂದಿ ಸಮೀಪ ಇರುವ ವಿಜಯನಗರದ ಸಾಮ್ರಾಟ ಶ್ರೀಕೃಷ್ಣದೇವರಾಯನ ಸಮಾಧಿಯ ಸುತ್ತಲೂ ತುಂಗಭದ್ರಾ ನದಿಯ ನೀರು ಪ್ರವಹಿಸುವ ಮೂಲಕ ದಿಗ್ಬಂಧನ ಹಾಕಿದಂತಾಗಿದೆ. ಸಹಜವಾಗಿ ನದಿಯಲ್ಲಿ ಕಳೆದ 2 ದಿನಗಳಿಂದ ಹಂತ - ಹಂತವಾಗಿ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ಗುರುವಾರ 30 ಸಾವಿರ ಕ್ಯೂಸೆಕ್ ನೀರು ಹರಿಸಲಾಗಿದ್ದು, ಶ್ರೀ ಕೃಷ್ಣದೇವರಾಯನ ಸಮಾಧಿ ಎಂದು ಹೇಳಲಾಗುತ್ತಿರುವ 64 ಕಾಲಿನ ಮಂಟಪದ ಸುತ್ತಲೂ ನೀರು ಪ್ರವಹಿಸುತ್ತಿದೆ.

ತಡೆಗೋಡೆ ಕುಸಿದು ಸಾವು

ತಡರಾತ್ರಿ ಸುರಿದ ಗಾಳಿಸಹಿತ ಭಾರೀ ಮಳೆಗೆ ಮನೆಯ ಮೇಲೆ ತಡೆಗೋಡೆ ಕುಸಿದು ಬಿದ್ದು ಓರ್ವ ಬಾಲಕ ಮೃತಪಟ್ಟು, ನಾಲ್ವರು ಗಾಯಗೊಂಡಿರುವ ಘಟನೆ ಮಂಗಳೂರು ನಗರದ ಹೊರವಲಯದ ಜೋಕಟ್ಟೆ ಎಂಬಲ್ಲಿ ನಡೆದಿದೆ. ಮುಲ್ಕಿ ಕೊಲ್ನಾಡು ಲಿಂಗಪ್ಪಯ್ಯ ಕಾಡು ನಿವಾಸಿ ಶೈಲೇಶ್(17) ಮೃತಪಟ್ಟಿದ್ದಾರೆ. ಜೋಕಟ್ಟೆಯಲ್ಲಿರುವ ಸಂಬಂಧಿಕರ ಮನೆಗೆ ಶೈಲೇಶ್ ಅತಿಥಿಯಾಗಿ ಬಂದಿದ್ದರು. ರಾತ್ರಿ ಮನೆಮಂದಿ ಊಟ ಮುಗಿಸಿ ಮಲಗಿದ್ದಾರೆ. ನಂತರ ಭಾರೀ ಗಾಳಿಸಹಿತ ಭಾರೀ ಮಳೆ ಸುರಿದಿದೆ. ಪಕ್ಕದ ಮನೆಯ ತಡೆಗೋಡೆ ಇವರ ಮನೆ ಮೇಲೆ ಕುಸಿದು ಬಿದ್ದಿದೆ. ಪರಿಣಾಮ ಮನೆ ಸಂಪೂರ್ಣ ಕುಸಿದಿದೆ. ಮಣ್ಣಿನಡಿ ಸಿಲುಕಿ ಶೈಲೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಪಾದಯಾತ್ರೆ ಪಾಲಿಟಿಕ್ಸ್

← ಮೊದಲಪುಟದಿಂದ

ಬಿಜೆಪಿಗೆ ಠಕ್ಕರ್ ಕೊಡಲು ಸಜ್ಜಾದ ಕಾಂಗ್ರೆಸ್: ಇನ್ನು ಬಿಜೆಪಿ ನಾಯಕರು ಬೆಂಗಳೂರು-ಮೈಸೂರು ಪಾದಯಾತ್ರೆಗೆ ಮುಂದಾಗುತ್ತಿದ್ದಂತೆ, ಇದಕ್ಕೆ ಠಕ್ಕರ್ ಕೊಡಲು ಮೈಸೂರು ಕಾಂಗ್ರೆಸ್ ವತಿಯಿಂದ ಪ್ರತಿ ಪಾದಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ. ಬಿಜೆಪಿಯವರು ಬೆಂಗಳೂರಿನಿಂದ ಪಾದಯಾತ್ರೆ ಆರಂಭಿಸಿದ ದಿನವೇ, ಮೈಸೂರು ಕಾಂಗ್ರೆಸ್ ವತಿಯಿಂದ ಮೈಸೂರು-ಬೆಂಗಳೂರು ಪಾದಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ. ಬಿಜೆಪಿ ಪಾದಯಾತ್ರೆಗೆ ಕೌಂಟರ್ ಆಗಿ ಕಾಂಗ್ರೆಸ್ ಪಾದಯಾತ್ರೆ ನಡೆಸಲಿದ್ದು, ಬಿಜೆಪಿ ಅವಧಿಯಲ್ಲಿ ನಡೆದ 23 ಹಗರಣಗಳ ತನಿಖೆ ಪೂರ್ಣಗೊಳಿಸಬೇಕು ಹಾಗೂ ಮೂರು ತಿಂಗಳ ಒಳಗಾಗಿ ವರದಿ ನೀಡಬೇಕು ಎಂದು ಸರಕಾರವನ್ನು ಆಗ್ರಹಿಸಲಿದೆ. ಈ ಬಗ್ಗೆ ಮಾತನಾಡಿರುವ ಎಂ.ಲಕ್ಷ್ಮಣ್, ಬಿಜೆಪಿ ಸರಕಾರದ ಅವಧಿಯ ಹಗರಣಗಳ ತನಿಖೆ ಆಗಬೇಕು ಹಾಗೂ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎಂಬದು ನಮ್ಮ ಪಾದಯಾತ್ರೆಯ ಬೇಡಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ಪಾದಯಾತ್ರೆ ದಿನವೇ ನಾವೂ ಪಾದಯಾತ್ರೆ ನಡೆಸುತ್ತೇವೆ. ಕಾಂಗ್ರೆಸ್ ಕಾರ್ಯಕರ್ತರು ಮಾತ್ರವಲ್ಲದೆ, ಪ್ರಗತಿಪರ ಸಂಘಟನೆಗಳು, ದಲಿತ ಸಂಘಟನೆಗಳು ಭಾಗಿಯಾಗಲಿವೆ ಎಂದು ಸ್ಪಷ್ಟಪಡಿಸಿದ್ದಾರೆ.

ಪ್ರೇಮಿಗಳ ಆತ್ಮಹತ್ಯೆ

ಮೈಸೂರು: ಪ್ರಿಯತಮೆ ಆತ್ಮಹತ್ಯೆಗೆ ಶರಣಾದ ಕಾರಣದಿಂದ ತೀವ್ರವಾಗಿ ನೊಂದ ಪ್ರಿಯತಮನೂ ನೇಣಿಗೆ ಶರಣಾದ ದುರಂತ ಘಟನೆ ನಡೆದಿದೆ. ಮೋನಿಕಾ(20) ಹಾಗೂ ಮನು(22) ಮೃತ ಪ್ರೇಮಿಗಳು. ಹತ್ತಿರದ ಸಂಬಂಧಿಗಳಾಗಿದ್ದ ಮಂಡಕಳ್ಳಿ ಗ್ರಾಮದ ನಿವಾಸಿ ಮೋನಿಕಾ ಹಾಗೂ ಮೈಸೂರಿನ ಜ್ಯೋತಿನಗರದ ಮನು ಕಳೆದ 2 ವರ್ಷಗಳಿಂದ ಪ್ರೀತಿಸುತ್ತಿದ್ದರು. ಮನೆಯಲ್ಲಿ ಇಬ್ಬರಿಗೂ ಮದುವೆ ಮಾಡಲು ಕುಟುಂಬಸ್ಥರು ತೀರ್ಮಾನಿಸಿದ್ದರು. ಆದರೆ, ಇತ್ತೀಚೆಗೆ ಇಬ್ಬರ ಮಧ್ಯೆ ಕ್ಷುಲ್ಲಕ ಕಾರಣಕ್ಕೆ ಭಿನ್ನಾಭಿಪ್ರಾಯ ಬಂದಿದ್ದು, ಸಣ್ಣ ಗಲಾಟೆ ಆಗಿದೆ. ಇದರಿಂದ ಬೇಸತ್ತ ಮೋನಿಕಾ ದಟ್ಟಗಳ್ಳಿಯ ಕೆಲಸ ಮಾಡುತ್ತಿದ್ದ ಮನೆಯೊಂದರಲ್ಲಿ ನೇಣಿಗೆ ಶರಣಾಗಿದ್ದಾಳೆ. ವಿಷಯ ತಿಳಿದ ಮನು ಸ್ಥಳಕ್ಕೆ ಧಾವಿಸಿ ಮೋನಿಕಾಳನ್ನು ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸುವ ವೇಳೆ ಮೋನಿಕಾ ಮೃತಪಟ್ಟಿದ್ದಾಳೆ ಎನ್ನಲಾಗಿದೆ. ನಂತರ ಮೋನಿಕಾ ಸಾವಿಗೆ ಮನನೊಂದ ಮನು, ತಾನೂ ಸಹ ಜ್ಯೋತಿನಗರದ ಮನೆಯಲ್ಲಿ ನೇಣಿಗೆ ಶರಣಾಗಿದ್ದಾನೆ.

ದೇವಾಲಯಗಳಲ್ಲಿ ವಸ್ತ್ರ ಸಂಹಿತೆ ಜಾರಿಗೊಳಿಸಿ

ಮಂಗಳೂರು: ಶೃಂಗೇರಿ ದೇವಸ್ಥಾನದಂತೆ ರಾಜ್ಯದ ಎಲ್ಲ ದೇವಸ್ಥಾನಗಳಲ್ಲೂ ಧಾರ್ಮಿಕ ವಸ್ತ್ರ ಸಂಹಿತೆ ಜಾರಿಗೊಳಿಸುವಂತೆ ವಿಶ್ವ ಹಿಂದೂ ಪರಿಷತ್‌ನ ಸಹ ಕಾರ್ಯದರ್ಶಿ ಶರಣ್ ಕುಮಾರ್ ಪಂಪ್ವೆಲ್ ರಾಜ್ಯ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಇತ್ತೀಚೆಗೆ ಕರ್ನಾಟಕದ ಪ್ರಮುಖ ಧಾರ್ಮಿಕ ಕ್ಷೇತ್ರ ಶೃಂಗೇರಿ ಶ್ರೀ ಶಂಕರ ಮಠದವರು ವಸ್ತ್ರ ಸಂಹಿತೆ ಯನ್ನು ಜಾರಿ ಮಾಡ್ದಿದು ಕ್ಷೇತ್ರಕ್ಕೆ ಬರುವವರು ಹಿಂದೂ ಸಂಪ್ರದಾಯದಂತೆ ಉಡುಗೆ ತೊಡುಗೆ ಧರಿಸಿ ಬರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಇವರ ನಿರ್ಧಾರವನ್ನು ವಿಶ್ವ ಹಿಂದೂ ಪರಿಷತ್ ಸ್ವಾಗತಿಸುತ್ತದೆ ಎಂದು ಹೇಳಿದ್ದಾರೆ. ಅದೇ ರೀತಿ ಶೃಂಗೇರಿ ಮಠದಲ್ಲಿ ಜಾರಿಗೆಗೊಳಿಸಿದ ವಸ್ತ್ರಸಂಹಿತೆಯ ಮಾದರಿಯನ್ನು ಮುಂಬರುವ ದಿನಗಳಲ್ಲಿ ಕರ್ನಾಟಕದ ಎಲ್ಲಾ ಹಿಂದೂ ಧಾರ್ಮಿಕ ಶ್ರದ್ಧಾ ಕೇಂದ್ರಗಳಲ್ಲಿ ಹಾಗೂ ಧಾರ್ಮಿಕ ದತ್ತಿ ಇಲಾಖೆ ಒಳಪಟ್ಟ ಎಲ್ಲ ದೇವಸ್ಥಾನಗಳಲ್ಲಿ ಆಗಮಿಸುವ ಭಕ್ತರಿಗೆ ಧಾರ್ಮಿಕ ವಸ್ತ್ರ ಸಂಹಿತೆಯನ್ನು ಜಾರಿಗೊಳಿಸುವಂತೆ ರಾಜ್ಯ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಪರಶುರಾಮ ಥೀಂ ಪಾರ್ಕ್ ಹಗರಣ: ಅಮಾನತು

ಉಡುಪಿ: ಕಾರ್ಕಳ ತಾಲೂಕು ಎರ್ಲಪಾಡಿ ಗ್ರಾಮದ ಬೈಲೂರು ಉಮಿಕಲ್ ಬೆಟ್ಟದಲ್ಲಿ ನಿರ್ಮಿಸಿರುವ ಪರುಶುರಾಮ ಥೀಂ ಪಾರ್ಕ್ ಕಾಮಗಾರಿ ಹಗರಣಕ್ಕೆ ಸಂಬಂಧಿಸಿ

ಉಡುಪಿ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಅರುಣ್ ಕುಮಾರ್ ಅವರನ್ನು ಅಮಾನತುಗೊಳಿಸಿ ಉಡುಪಿ ಜಿಲ್ಲಾಧಿಕಾರಿ ಡಾ.ವಿದ್ಯಾ ಕುಮಾರಿ ಆದೇಶ ಹೊರಡಿಸಿದ್ದಾರೆ.

ಅನುಷ್ಠಾನ ಅಧಿಕಾರಿಯಾಗಿ ಅರುಣ್ ಕುಮಾರ್ ಅವರು ಪರಶುರಾಮ ಥೀಂ ಪಾರ್ಕ್ ಕಾಮಗಾರಿ ನಿರ್ವಹಿಸಿದ್ದು, ಈ ಕಾಮಗಾರಿಗೆ ಅಂದಾಜು ಮೊತ್ತ 11.05ಕೋಟಿ ರು. ಆಡಳಿತ್ಮಾತಕ ಮಂಜೂರಾತಿಗೊಂಡಿದೆ. ಈ ಪೈಕಿ 6.72 ಕೋಟಿ ರೂ. ಅನುದಾನ ಈಗಾಗಲೇ ಬಿಡುಗಡೆಯಾಗಿದೆ. ಆದರೆ ಕಾಮಗಾರಿ ಪೂರ್ಣಗೊಳಿಸದೇ, ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರ ಮಾಡದೆ, ಉದ್ಘಾಟನಾ ಕಾರ್ಯಕ್ರಮ ಮಾಡಲಾಗಿದೆ. ಈ ಇದರ ಕಾಮಗಾರಿಯ ಗುಣಮಟ್ಟ ಹಾಗೂ ಧಾರ್ಮಿಕ ಭಾವನೆಗಳಿಗೆ ಅಪಚಾರ ಆಗುತ್ತಿರುವ ಬಗ್ಗೆ ಆರೋಪಗಳು ಕೇಳಿ ಬಂದಿವೆ.

ಅಹೋರಾತ್ರಿ ಧರಣಿಯಲ್ಲೂ ಬಿಜೆಪಿಗರ ಭಿನ್ನಮತ

← ಮೊದಲಪುಟದಿಂದ

ಬಿಎಸ್‌ವೈ ಕಾಲದ ಹಗರಣ ಹೊರಬರಲಿ: ಬಿ.ಎಸ್.ಯಡಿಯೂರಪ್ಪನವರ ಕಾಲದ ಹಗರಣ ಗಳೂ ಹೊರಬರಬೇಕು. ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೂ ನಿಜಬಣ್ಣ ಗೊತ್ತಾಗಲಿ. 'ಪೂಜ್ಯ ಅಪ್ಪಾಜಿಯವರು, ಪೂಜ್ಯ ತಂದೆಯ ವರು' ಎಂದು ತಿಳಿದುಕೊಳ್ಳುವವರಿಗೆ ಇವರ ಅಸಲಿ ರೂಪ ಗೊತ್ತಾಗಲಿ. ಇದು ನಡೆಯಬೇಕು, ಅವರೂ ಜೈಲಿಗೆ ಹೋಗಲಿ ಎಂದು ವಾಗ್ದಾಳಿ ನಡೆಸಿದರು.

ಯಡಿಯೂರಪ್ಪನವರ ಅವಧಿಯಲ್ಲಿ ಏನೇನಾಗಿದೆ ಎನ್ನುವುದು ಮೊದಲು ತಿಳಿಯಬೇಕು. ಪಾದಯಾತ್ರೆ ಮಾಡುವುದರಿಂದ ಆಗುವುದೇನಿದೆ? ಮೊದಲು ನಮಗೆ ನೈತಿಕತೆ ಇದೆಯಾ ಎನ್ನುವುದು ಕರ್ನಾಟಕದ ಜನತೆಗೆ ಗೊತ್ತಾಗಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2024-25 ದಿನಾಂಕ: 24-07-2024

ಅಲ್ಪಾವಧಿ / ಇ-ಟೆಂಡರ ಅಧಿಸೂಚನೆ

ಉಲ್ಲೇಖ: ಜಾಹಿರಾತು ನಂ: 913 ದಿನಾಂಕ:- 06-03-2024

ಹುಬ್ಬಳ್ಳಿ-ಧಾರವಾಡ ಮಹಾನಗರ ಸನ್-2023-24ನೇ ಸಾಲಿನ 15ನೇ ಹಣಕಾಸು ಯೋಜನೆ, ಸನ್ 2023-24ನೇ ಸಾಲಿನ ಎಸ್.ಎಫ್.ಸಿ 7.25%, ಪಾಲಿಕೆಯ ಎಸ್.ಎಫ್.ಸಿ ಎಸ್.ಸಿಎಸ್.ಪಿ, ಟಿಎಸ್‌ಪಿ 17.15, 7.25% ಹಾಗೂ ಸನ್ 2024-25ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿಯ ಅನುದಾನ, ಸನ್ 2023-24ನೇ ಸಾಲಿನ ಶಾಸಕರ ಅನುದಾನ ಯೋಜನೆ ಮತ್ತು ವಾರ್ಡ ವಾರು ಅನುದಾನ 75.00 ಲಕಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999-2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಕರ್ನಾಟಕ ಪಬ್ಲಿಕ್ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
1) ಇಂಡೆಂಟ್ ನಂ: 20651 ರೂ. 8.00 ಲಕ್ಷ 2) ಇಂಡೆಂಟ್ ನಂ: 22075 ರೂ. 4.50 ಲಕ್ಷ
3) ಇಂಡೆಂಟ್ ನಂ: 22871 ರೂ. 3.60 ಲಕ್ಷ 4) ಇಂಡೆಂಟ್ ನಂ: 19254 ರೂ. 2.13 ಲಕ್ಷ
5) ಇಂಡೆಂಟ್ ನಂ: 21974 ರೂ. 8.10 ಲಕ್ಷ 6) ಇಂಡೆಂಟ್ ನಂ: 23145 ರೂ. 45.45 ಲಕ್ಷ
7) ಇಂಡೆಂಟ್ ನಂ: 18810 ರೂ. 50.00 ಲಕ್ಷ

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
8) ಇಂಡೆಂಟ್ ನಂ: 19246 ರೂ. 2.27 ಲಕ್ಷ 9) ಇಂಡೆಂಟ್ ನಂ: 21947 ರೂ. 32.35 ಲಕ್ಷ
10) ಇಂಡೆಂಟ್ ನಂ: 21972 ರೂ. 4.35 ಲಕ್ಷ 11) ಇಂಡೆಂಟ್ ನಂ: 23148 ರೂ. 36.50 ಲಕ್ಷ

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
12) ಇಂಡೆಂಟ್ ನಂ: 19245 ರೂ. 2.13 ಲಕ್ಷ 13) ಇಂಡೆಂಟ್ ನಂ: 19297 ರೂ. 98.00 ಲಕ್ಷ
14) ಇಂಡೆಂಟ್ ನಂ: 20983 ರೂ. 28.00 ಲಕ್ಷ 15) ಇಂಡೆಂಟ್ ನಂ: 20657 ರೂ. 35.00 ಲಕ್ಷ
16) ಇಂಡೆಂಟ್ ನಂ: 20550 ರೂ. 36.70ಲಕ್ಷ 17) ಇಂಡೆಂಟ್ ನಂ: 20732 ರೂ. 35.50 ಲಕ್ಷ
18) ಇಂಡೆಂಟ್ ನಂ: 20730 ರೂ. 42.00ಲಕ್ಷ 19) ಇಂಡೆಂಟ್ ನಂ: 22878 ರೂ. 11.80 ಲಕ್ಷ
20) ಇಂಡೆಂಟ್ ನಂ: 22888 ರೂ. 35.30 ಲಕ್ಷ 21) ಇಂಡೆಂಟ್ ನಂ: 18963 ರೂ. 6.00 ಲಕ್ಷ
22) ಇಂಡೆಂಟ್ ನಂ: 21946 ರೂ. 1.55 ಲಕ್ಷ 23) ಇಂಡೆಂಟ್ ನಂ: 21966 ರೂ. 6.95 ಲಕ್ಷ
24) ಇಂಡೆಂಟ್ ನಂ: 22829 ರೂ. 13.50 ಲಕ್ಷ 25) ಇಂಡೆಂಟ್ ನಂ: 22832 ರೂ. 49.40 ಲಕ್ಷ
26) ಇಂಡೆಂಟ್ ನಂ: 22833 ರೂ. 13.40 ಲಕ್ಷ 27) ಇಂಡೆಂಟ್ ನಂ: 22458 ರೂ. 10.00 ಲಕ್ಷ
28) ಇಂಡೆಂಟ್ ನಂ: 23089 ರೂ. 26.50 ಲಕ್ಷ 29) ಇಂಡೆಂಟ್ ನಂ: 23091 ರೂ. 32.00 ಲಕ್ಷ
30) ಇಂಡೆಂಟ್ ನಂ: 23093 ರೂ. 17.80 ಲಕ್ಷ 31) ಇಂಡೆಂಟ್ ನಂ: 23066 ರೂ. 48.35 ಲಕ್ಷ
32) ಇಂಡೆಂಟ್ ನಂ: 23141 ರೂ. 5.55 ಲಕ್ಷ 33) ಇಂಡೆಂಟ್ ನಂ: 23137 ರೂ. 3.00 ಲಕ್ಷ
34) ಇಂಡೆಂಟ್ ನಂ: 20548 ರೂ. 100.00 ಲಕ್ಷ 35) ಇಂಡೆಂಟ್ ನಂ: 23152 ರೂ. 7.50 ಲಕ್ಷ
36) ಇಂಡೆಂಟ್ ನಂ: 20654 ರೂ. 10.00 ಲಕ್ಷ 37) ಇಂಡೆಂಟ್ ನಂ: 20656 ರೂ. 21.00 ಲಕ್ಷ
38) ಇಂಡೆಂಟ್ ನಂ: 23088 ರೂ. 49.40 ಲಕ್ಷ 39) ಇಂಡೆಂಟ್ ನಂ: 17709 ರೂ. 14.90 ಲಕ್ಷ
40) ಇಂಡೆಂಟ್ ನಂ: 22072 ರೂ. 10.00 ಲಕ್ಷ 41) ಇಂಡೆಂಟ್ ನಂ: 22070 ರೂ. 34.95 ಲಕ್ಷ
42) ಇಂಡೆಂಟ್ ನಂ: 22074 ರೂ. 48.70 ಲಕ್ಷ 43) ಇಂಡೆಂಟ್ ನಂ: 23044 ರೂ. 48.25 ಲಕ್ಷ

ಮರು ಕರೆ ಕಾಮಗಾರಿಗಳು

ಪರಿಶಿಷ್ಟ ಜಾತಿ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
44) ಇಂಡೆಂಟ್ ನಂ: 19261 ರೂ. 2.27 ಲಕ್ಷ (2ನೇ ಕರೆ) 45) ಇಂಡೆಂಟ್ ನಂ: 19210 ರೂ. 5.00 ಲಕ್ಷ (2ನೇ ಕರೆ) 46) ಇಂಡೆಂಟ್ ನಂ: 19259 ರೂ. 1.87ಲಕ್ಷ (2ನೇ ಕರೆ) 47) ಇಂಡೆಂಟ್ ನಂ: 17710 ರೂ. 30.00ಲಕ್ಷ (2ನೇ ಕರೆ)

ಪರಿಶಿಷ್ಟ ಪಂಗಡದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
48) ಇಂಡೆಂಟ್ ನಂ: 19211 ರೂ. 3.55 ಲಕ್ಷ (2ನೇ ಕರೆ) 49) ಇಂಡೆಂಟ್ ನಂ: 17430 ರೂ. 49.46 ಲಕ್ಷ (2ನೇ ಕರೆ) 50) ಇಂಡೆಂಟ್ ನಂ: 17618 ರೂ. 49.50 ಲಕ್ಷ (2ನೇ ಕರೆ)

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರಿಸಿದ ಕಾಮಗಾರಿ
51) ಇಂಡೆಂಟ್ ನಂ: 17430 ರೂ. 49.46 ಲಕ್ಷ (2ನೇ ಕರೆ) 52) ಇಂಡೆಂಟ್ ನಂ: 19220 ರೂ. 1.87 ಲಕ್ಷ (2ನೇ ಕರೆ) 53) ಇಂಡೆಂಟ್ ನಂ: 19250 ರೂ. 1.87 ಲಕ್ಷ (2ನೇ ಕರೆ) 54) ಇಂಡೆಂಟ್ ನಂ: 8082 ರೂ. 11.00 ಲಕ್ಷ (5ನೇ ಕರೆ) 55) ಇಂಡೆಂಟ್ ನಂ: 17219 ರೂ. 9.30 ಲಕ್ಷ (2ನೇ ಕರೆ) 56) ಇಂಡೆಂಟ್ ನಂ: 7034 ರೂ. 17.80 ಲಕ್ಷ (5ನೇ ಕರೆ) 57) ಇಂಡೆಂಟ್ ನಂ: 7034 ರೂ. 17.80 ಲಕ್ಷ (5ನೇ ಕರೆ) 58) ಇಂಡೆಂಟ್ ನಂ: 3005 ರೂ. 30.00 ಲಕ್ಷ (9ನೇ ಕರೆ) 59) ಇಂಡೆಂಟ್ ನಂ: 12019 ರೂ. 17.10 ಲಕ್ಷ (3ನೇ ಕರೆ) 60) ಇಂಡೆಂಟ್ ನಂ: 5494 ರೂ. 1.22 ಲಕ್ಷ (6ನೇ ಕರೆ) 61) ಇಂಡೆಂಟ್ ನಂ: 16772 ರೂ. 30.00 ಲಕ್ಷ (3ನೇ ಕರೆ) 62) ಇಂಡೆಂಟ್ ನಂ: 2838 ರೂ. 30.00 ಲಕ್ಷ (2ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯುಬಹುದಾಗಿದೆ. ಕಚೇರಿಯು ದೂರವಾಣಿ ಸಂಖ್ಯೆ:0836:2213834ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ: kppp.karnataka.gov.in ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟ್‌ನಲ್ಲಿ **ದಿನಾಂಕ: 26-07-2024** ಪಡೆಯಬಹುದಾಗಿದೆ.

ಕ್ರ. ಸಂ 01 ರಿಂದ 04,08,12,15,16,34,36 ರಿಂದ 46,48,49,51 ರಿಂದ 58 ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 05-08-2024 ರಂದು ಸಾಯಂಕಾಲ 4.00 ಘಂಟೆಯವರೆಗೆ**

ಕ್ರ. ಸಂ 01 ರಿಂದ 04,08,12,15,16,34,36 ರಿಂದ 46,48,49,51 ರಿಂದ 58 ತೆರೆಯುವ **ದಿನಾಂಕ: 06-08-2024 ಸಾಯಂಕಾಲ 4.30 ಘಂಟೆಯ** ನಂತರ ತೆರೆಯಲಾಗುವುದು.

ಕ್ರ. ಸಂ 34 ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09-08-2024** ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಕ್ರ. ಸಂ 05 ರಿಂದ 07, 09 ರಿಂದ 11, 13,14, 17 ರಿಂದ 33 35, 47, 50, 59 ರಿಂದ 62ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 10-08-2024 ಸಾಯಂಕಾಲ 4.00 ಘಂಟೆಯವರೆಗೆ** 05 ರಿಂದ 07, 09 ರಿಂದ 11, 13,14, 17 ರಿಂದ 33 35, 47, 50, 59 ರಿಂದ 62 ತೆರೆಯುವ **ದಿನಾಂಕ: 12-08-2024 ಸಾಯಂಕಾಲ 4.30 ಘಂಟೆಯ** ನಂತರ ತೆರೆಯಲಾಗುವುದು.

ಕ್ರ. ಸಂ 07,13 ಕಾಮಗಾರಿಯ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 17-08-2024** ರಂದು ತೆರೆಯಲಾಗುವುದು. ಇಲ್ಲದಿದ್ದಲ್ಲಿ ನಂತರದ ಅನುಕೂಲಕರ ದಿನಗಳಲ್ಲಿ ತೆರೆಯಲಾಗುವುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/202/ದೇಶಪಾಂಡೆಪಬ್ಲಿಸಿಟಿ/2024-25

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು-560059.

ಸಂಖ್ಯೆ: ಡಿಪಿಎಸ್/ಸಿಎಸ್‌ಟಿಜಿ/ಟಿಪಿಬಿ/3/2024 ದಿನಾಂಕ: 23.07.2024

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವಿವಿಧ ಬಗೆಯ ಲೆಟರ್‌ಹೆಡ್ ಮತ್ತು ಲಕೋಟೆಗಳನ್ನು ವಾರ್ಷಿಕ ದರಗುತ್ತಿಗೆ ಆಧಾರದ ಮೇಲೆ ಮುದ್ರಿಸಿ ಸರಬರಾಜು ಮಾಡಲು ಬೆಂಗಳೂರಿನಲ್ಲಿನ (ಬಿ.ಬಿ.ಎಂ.ಪಿ ವಲಯ) ಅರ್ಹ ಮುದ್ರಣ ಹಾಗೂ ಬೈಂಡಿಂಗ್ ಸಂಸ್ಥೆಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಟೆಂಡರ್‌ನ ಅಂದಾಜು ಮೊತ್ತ ರೂ. 60.30 ಲಕ್ಷ**ಗಳಾಗಿದ್ದು, ಇದರ ಒಟ್ಟು ಇ.ಎಂ.ಡಿ. ಮೊತ್ತ **ರೂ.3.00 ಲಕ್ಷ**ಗಳಾಗಿರುತ್ತದೆ. ಟೆಂಡರು ಸಲ್ಲಿಸಲು **ಕೊನೆಯ ದಿನಾಂಕ: 12.08.2024**. ವಿವರವಾದ ಟೆಂಡರ್ ದಸ್ತಾವೇಜನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/-
ನಿರ್ದೇಶಕರು

ವಾಸಾಸಂಇ/ವಾ.ಪ್ರ/1087/ಎಂಎಎ/2024-25

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಯೋಜನಾ ಶಾಖೆ, ಚಾವಿಸನಿನಿ,
ಮೈಸೂರು-570017, ದೂರವಾಣಿ: 0821-2544963
ಇ-ಮೇಲ್: gmproj@cescmysore.org, ವೆಬ್‌ಸೈಟ್: cescmysore.karnataka.gov.in

ಸಂಖ್ಯೆ: ಸೆಸ್ಕ್/ಪ್ರ.ವ್ಯ(ಯೋ)/ಉಪ್ರವ್ಯ(ಟಿ.ಎಲ್)/ಸಪ್ರವ್ಯ(ಟಿ.ಎಲ್-3)/2024-25/8383 ದಿನಾಂಕ: 25.07.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ ಸಂ.	ವಿವರಗಳು	ವಿಚಾರಣೆ ಸಂಖ್ಯೆ
1	ಚಾ.ವಿ.ಸ.ನಿ.ನಿ, ಮೈಸೂರಿನ ನಿಗಮ ಕಛೇರಿಯಲ್ಲಿ ನೆಟ್‌ವರ್ಕ್ ಮೂಲ ಸೌಕರ್ಯವನ್ನು ನವೀಕರಿಸುವುದು	CESC/Proj-TL/ 2024-25/034
2	ಹಾಸನ ನಗರದ ಹಾಸನಾಂಬ ದೇವಸ್ಥಾನದ ಸುತ್ತ HT ಓವರ್‌ಹೆಡ್ ಲೈನ್ ಅನ್ನು HT ಅಂಡರ್ ಗ್ರೌಂಡ್ ಕೇಬಲ್ ಮತ್ತು LT ಓವರ್‌ಹೆಡ್ ಲೈನ್ ಅನ್ನು LT ಅಂಡರ್ ಗ್ರೌಂಡ್ ಕೇಬಲ್ ಆಗಿ ಪರಿವರ್ತಿಸುವ ಕಾಮಗಾರಿ	CESC/Proj-4 / 2024-25/035

ಸದರಿ ಕಾಮಗಾರಿ ಮತ್ತು ಟೆಂಡರ್‌ನ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ **https://kppp.karnataka.gov.in/** ನಲ್ಲಿ ದಿನಾಂಕ: **26-07-2024** ಅಥವಾ ನಂತರ ಪಡೆಯಬಹುದಾಗಿರುತ್ತದೆ. ಕೆ.ಪಿ.ಪಿ. ಪೋರ್ಟಲ್ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ **+91-8046010000/ 8068948777** ಗೆ ಅಥವಾ ಇ-ಮೇಲ್ ವಿಳಾಸ **support@eprochelpdesk.com** ಗೆ ಸಂಪರ್ಕಿಸಬಹುದಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/-
ಪ್ರಧಾನ ವ್ಯವಸ್ಥಾಪಕರು (ಯೋಜನೆಗಳು)
ಚಾವಿಸನಿನಿ, ಮೈಸೂರು

DIPR/MYS/KAVITA/321/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.
ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:ಸಇಂ-2:2024-25/757
ದಿ:24.07.2024

ಅಲ್ಪಾವಧಿ ಟೆಂಡರ್/ಮರು ಟೆಂಡರ್ ಪ್ರಕಟಣೆ ಸಂಖ್ಯೆ:07/2024-25

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, 2023-24ನೇ ಸಾಲಿನ ಪ.ಜಾ. ಮತ್ತು ಪ.ಪಂ. ಯೋಜನೆಯ ಲೆಕ್ಕ ಶಿರ್ಷಿಕೆ: 5054-03-337-0-75-422/423 ರಡಿ ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ:5054ರಡಿ ಅನುಮೋದನೆಯಾಗಿರುವ ಟೆಂಡರಿಗಿಟ್ಟ ಮೊತ್ತ ಗರಿಷ್ಟ **ರೂ.100.00 ಲಕ್ಷ** & **ಕನಿಷ್ಟ, ರೂ.20.00 ಲಕ್ಷ ಮೊತ್ತದ ಒಟ್ಟು 4 ಕಾಮಗಾರಿಗಳಿಗೆ** ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್/ಮರು ಟೆಂಡರ್ ಪ್ರಕಟಣೆ ಪ್ರಕಟಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in, KPPP Portal** ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ **ದಿನಾಂಕ:02.08.2024ರ ಸಂಜೆ 4.00ಗಂಟೆವರೆಗೆ.** ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/-ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಮಂಡ್ಯ.

ವಾಸಾಸಂಇ/ಸನಿ-ಮಂ/ಕೆಎಸ್ಎಂಸಿ&ಎ/196/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ರಾಯಚೂರು
ಇ.ಮೇಲ್ ವಿಳಾಸ: dtworcr@gmail.com ದೂರವಾಣಿ 08532-220045

ಸಂಖ್ಯೆ:ಜಿಪವಕಅರಾ/ಲೆಕ್ಕ/ಆಹಾರ/ಟೆಂಡರ್/ಸಿಆರ್-/2024-25 ದಿನಾಂಕ: 22-07-2024

:: ಇ-ಟೆಂಡರ್ ಪ್ರಕಟಣೆ::

2024-25ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು/ವಸತಿ ಶಾಲೆಗಳ ವಿದ್ಯಾರ್ಥಿಗಳಿಗೆ ಗ್ರೂಪ್ 'ಎ' ರಿಂದ 'ಡಿ' ವರೆಗಿನ ಆಹಾರ ಸಾಮಗ್ರಿಗಳನ್ನು ಮತ್ತು ಇನ್ನಿತರೆ ಸಾಮಗ್ರಿಗಳನ್ನು ಸರಬರಾಜು ಪಡೆಯಲು ರಾಯಚೂರು ಜಿಲ್ಲೆಯ 5 ತಾಲೂಕುಗಳನ್ನು ಘಟಕಗಳಾಗಿ ವಿಂಗಡಿಸಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ. ಇ-ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

1) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ): 1) ರಾಯಚೂರು ತಾಲೂಕಾ ರೂ. 5,81,00,000=00 2) ಮಾನವಿ ತಾಲೂಕಾ ರೂ. 2,23,40,000=00 3) ಸಿಂಧನೂರು ತಾಲೂಕಾ ರೂ. 75,95,000=00 4) ಲಿಂಗಸುಗೂರ ತಾಲೂಕಾ ರೂ. 2,49,90,000=00 5) ದೇವದುರ್ಗ ತಾಲೂಕಾ ರೂ. 4,55,10,000=00 **2) ಇ ಎಂ.ಡಿ ಮೊತ್ತ (ರೂ. ಗಳಲ್ಲಿ):** 1) ರಾಯಚೂರು ತಾಲೂಕಾ ರೂ. 8,71,500=00 2) ಮಾನವಿ ತಾಲೂಕಾ ರೂ. 3,35,100=00 3) ಸಿಂಧನೂರು ತಾಲೂಕಾ ರೂ. 1,13,925=00 4) ಲಿಂಗಸುಗೂರ ತಾಲೂಕಾ ರೂ. 3,74,850=00 5) ದೇವದುರ್ಗ ತಾಲೂಕಾ ರೂ. 6,82,650=00 **3) ಇ-ಪ್ರಾಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸ್ವೀಕರಿಸುವ ಪ್ರಾರಂಭಿಕ ದಿನಾಂಕ:** 22.07.2024 **4) Pre-Bid Meeting** (ಪ್ರೀ- ಬಿಡ್ ಮೀಟಿಂಗ್): 30.07.2024 ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಜಿಲ್ಲಾಧಿಕಾರಿಗಳು ರಾಯಚೂರುರವರ ಕಾರ್ಯಾಲಯ (ಬದಲಾವಣೆಗೆ ಒಳಪಟ್ಟಿರುತ್ತದೆ) **5) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** 21.08.2024 ಸಮಯ: 5.30 ರವರೆಗೆ **6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ:** 23.08.2024 ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಜಿಲ್ಲಾಧಿಕಾರಿಗಳು ರಾಯಚೂರು ರವರ ಕಾರ್ಯಾಲಯ (ಬದಲಾವಣೆಗೆ ಒಳಪಟ್ಟಿರುತ್ತದೆ) **7) ತಾಂತ್ರಿಕ ಬಿಡ್ ಪರಿಶೀಲಿಸುವ ದಿನಾಂಕ, ಸಮಯ ಮತ್ತು ಸ್ಥಳ:** 29.08.2024 ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಜಿಲ್ಲಾಧಿಕಾರಿಗಳು ರಾಯಚೂರುರವರ ಕಾರ್ಯಾಲಯ (ಬದಲಾವಣೆಗೆ ಒಳಪಟ್ಟಿರುತ್ತದೆ) **8) ಆರ್ಥಿಕ ಬಿಡ್ ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ:** 31.08.2024 ಬೆಳಿಗ್ಗೆ 11.00 ಗಂಟೆಗೆ ಸ್ಥಳ: ಜಿಲ್ಲಾಧಿಕಾರಿಗಳು ರಾಯಚೂರುರವರ ಕಾರ್ಯಾಲಯ (ಬದಲಾವಣೆಗೆ ಒಳಪಟ್ಟಿರುತ್ತದೆ) 9) ಸಂಪರ್ಕಿಸಬಹುದಾದ ಕಚೇರಿ ವಿಳಾಸ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ ರಾಯಚೂರು, ದೂರವಾಣಿ ಸಂಖ್ಯೆ:08532-220045 ಇಮೇಲ್-dtworcr@gmail.com ನೋಂದಾಯಿತ ಆಸಕ್ತ ಮತ್ತು ಅರ್ಹ ಟೆಂಡರ್‌ದಾರರು ವೆಬ್‌ಸೈಟ್ http://kppp.karnataka.gov.in ನಲ್ಲಿ ಬಿಡ್ ದಾಖಲೆಗಳನ್ನು ಅಪ್‌ಲೋಡ್ ಮಾಡಬಹುದು.

ಸಹಿ/- ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು
ರಾಯಚೂರು

DIP/RCR/151KSMC&A/150/2024-25

ಸಮಾಚಾರ ಸಣ್ಣದಲ್ಲ

ಪ್ರತಿಪಕ್ಷದ ಧರಣಿ ನಾಟಕವಷ್ಟೆ: ಎಚ್‌ಕೆಪಿ

ಬೆಂಗಳೂರು: ಪ್ರತಿಪಕ್ಷದ ಮಾಡುತ್ತಿರುವ ಧರಣಿ ಕೇವಲ ನಾಟಕವಷ್ಟೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಟೀಕಿಸಿದರು.

ವಿಧಾನಸೌಧದಲ್ಲಿ ಮಾತನಾಡಿದ ಅವರು, ಪ್ರತಿಪಕ್ಷದವರು ಅಹೋರಾತ್ರಿ ಧರಣಿ ಮಾಡಿದ್ದಾರೆ. ನಿಲುವಳಿ ಪ್ರಸ್ತಾಪ ಏಕೆ ಮಾಡಬಾರದು ಎನ್ನುವುದನ್ನು ವಿವರಿಸಿದ್ದಾರೆ. ಇಷ್ಟೆಲ್ಲಾವಾದರೂ ಅವರು ಧರಣಿ ಮಾಡಿದ್ದಾರೆ. ರಾಜಕೀಯ ತಂತ್ರಕ್ಕೆ ಅವರು ವಿಧಾನಸಭಾ ಅಧಿವೇಶನ ಉಪಯೋಗ ಮಾಡಿಕೊಂಡಿದ್ದಾರೆ. ಈಗಾಗಲೇ ಈ ತನಿಖೆಯನ್ನು ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರ ಮೂಲಕ ನಡೆಸಲಾಗುತ್ತಿದೆ. ಆಪಾದನೆ ಅವರ ಮೇಲಿದ್ದರೂ ಸಿಎಂ ತನಿಖೆಗೆ ಆಯೋಗ ರಚಿಸಿದ್ದಾರೆ. ತನ್ನ ಮೇಲೆ ಆಪಾದನೆ ಇದ್ದಾಗ ಯಾರಾದರೂ ಒಬ್ಬ ಮುಖ್ಯಮಂತ್ರಿ ತನಿಖಾ ಆಯೋಗ ರಚಿಸಿರುವ ಉದಾಹಣೆ ಇದೆಯಾ? ಎಂದು ಪ್ರಶ್ನಿಸಿದರು. ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಆಯೋಗ ರಚನೆ ಮಾಡಿದರಾ? ಪ್ರತಿಪಕ್ಷ ಸಿಎಂ ನಿಲುವನ್ನು ಪ್ರಶಂಸೆ ಮಾಡಬೇಕಿತ್ತು. ಇದು ಕೇವಲ ರಾಜಕೀಯ ನಾಟಕ ಅಷ್ಟೆ. ಭಾರಿ ಮಳೆಯಿಂದ ಉತ್ತರ ಕನ್ನಡದಲ್ಲಿ, ಮಲೆನಾಡಲ್ಲಿ ಸಾಕಷ್ಟು ಅನಾಹುತ ಆಗಿದೆ. ಆದರೆ ಇದರ ಬಗ್ಗೆ ಚರ್ಚೆ ಮಾಡಿಲ್ಲ ಎಂದು ಟೀಕಿಸಿದರು.

ಜೆಡಿಎಸ್ ಜತೆ ಚರ್ಚಿಸಿ ಮುಂದಿನ ಹೋರಾಟ

ಬೆಂಗಳೂರು: ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣ ಸಂಬಂಧ ಮುಂದಿನ ದಿನಗಳಲ್ಲಿ ನಡೆಸಲಿರುವ ಹೋರಾಟದ ಕುರಿತು ಜೆಡಿಎಸ್ ಜತೆ ಚರ್ಚಿಸಿ ತೀರ್ಮಾನಿಸುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇ.ಡಿ ವಿರುದ್ಧ ಧರಣಿ ನಡೆಸಿದ್ದಲ್ಲದೆ, ಇ.ಡಿ ವಿರುದ್ಧ ಎಫ್‌ಐಆರ್ ದಾಖಲಿಸಿ ಬೆದರಿಸುವ ತಂತ್ರಗಾರಿಕೆ ಮಾಡಿ ರಾಜ್ಯ ಹೈಕೋರ್ಟ್, ಇ.ಡಿ. ವಿರುದ್ಧ ಮಾಡಿದ ಎಫ್‌ಐಆರ್‌ಗೆ ತಡೆಯಾಜ್ಞೆ ನೀಡಿದೆ. ವಾಲ್ಮೀಕಿ ಹಗರಣ ಹಾಗೂ ಮುಡಾ ಹಗರಣ ಎಲ್ಲಿ ತಮ್ಮ ಬುಡಕ್ಕೆ ಬರಲಿದೆಯೋ ಎಂದು ಹೆದರಿಕೊಂಡು ವಿಸ್ತೃತ ಚರ್ಚೆಯಲ್ಲಿ ಭಾಗವಹಿಸದೇ ಮುಖ್ಯಮಂತ್ರಿಗಳು ಪಲಾಯನ ಮಾಡಿದ್ದಾರೆ ಎಂದು ತಿಳಿಸಿದರು.

ನಿಫಾ ಆತಂಕ: ಆರೋಗ್ಯ ಇಲಾಖೆ ಹೈ ಅಲರ್ಟ್

ಬೆಂಗಳೂರು: ಕೇರಳದ ಮಲಪ್ಪುರಂ ಜಿಲ್ಲೆಯು ನಿಫಾ ಸೋಂಕಿನಿಂದ ಸುರಕ್ಷಿತ ಎಂದು ಘೋಷಿಸುವವರೆಗೆ ಆ ಪ್ರದೇಶಕ್ಕೆ ಪ್ರಯಾಣ ಮಾಡದಿರುವುದು ಒಳಿತು ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಮಲಪ್ಪುರಂನಲ್ಲಿ ಜುಲೈ 21ರಂದು ನಿಫಾ ಪ್ರಕರಣ ದೃಢಪಟ್ಟಿದ್ದು, 14 ವರ್ಷದ ಬಾಲಕ ನಿಫಾ ಸೋಂಕಿನಿಂದ ಮೃತಪಟ್ಟಿದ್ದಾನೆ. ಆದರೆ ಕರ್ನಾಟಕದಲ್ಲಿ ಈವರೆಗೆ ಯಾವುದೇ ನಿಫಾ ಪ್ರಕರಣ ವರದಿಯಾಗಿಲ್ಲ. ಹಾಗಾಗಿ ಅತ್ಯಂತ ಅವಶ್ಯವಿದ್ದಲ್ಲಿ ಮಾತ್ರ ಕೇರಳಕ್ಕೆ ಪ್ರಯಾಣಿಸುವಂತೆ ಇಲಾಖೆ ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದ (ಐಡಿಎಸ್‌ಪಿ) ಯೋಜನಾ ನಿರ್ದೇಶಕರು ಸೂಚನೆ ನೀಡಿದ್ದಾರೆ. ಕೇರಳದಲ್ಲಿ ನಿಫಾ ಪ್ರಕರಣ ವರದಿಯಾದಾಗಲೆಲ್ಲ ಗಡಿಯಾಚೆಗೆ ಸೋಂಕು ಹರಡುವುದನ್ನು ತಡೆಯಲು ರಾಜ್ಯದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಮಲಪ್ಪುರಂನಲ್ಲಿ ವರದಿಯಾದ ಪ್ರಕರಣದಲ್ಲಿ ಸಂಪರ್ಕಿತರಿಗೆ ಪರೀಕ್ಷೆ ನಡೆಸಲಾಗಿದ್ದು, ಅವರಲ್ಲಿ ಸೋಂಕು ದೃಢಪಟ್ಟಿಲ್ಲ. ಆದ್ದರಿಂದ ಈ ಸೋಂಕು ಮನುಷ್ಯರಿಂದ ಮನುಷ್ಯರಿಗೆ ಹರಡುವ ಸಾಧ್ಯತೆ ತುಂಬಾ ಕಡಿಮೆಯಿದ್ದು, ಭಯಪಡಬೇಕಾದ ಅಗತ್ಯವಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಅತ್ಯವಶಕ್ಯವಾಗಿರದಿದ್ದಲ್ಲಿ ಅಲ್ಲಿಗೆ ಪ್ರಯಾಣ ತಪ್ಪಿಸುವುದು ಉತ್ತಮ ಎಂದು ತಿಳಿಸಿದ್ದಾರೆ.

ಅಧಿಕಾರಿಗಳ ಕರ್ತವ್ಯ ಲೋಪ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಕಲ್ಯಾಣದ ಜವಾಬ್ದಾರಿ ಹೊತ್ತಿರುವ ಸಮಾಜಕಲ್ಯಾಣ ಇಲಾಖೆ ತನ್ನ ಕರ್ತವ್ಯ ನಿರ್ವಹಣೆ ಮತ್ತು ಹೊಣೆಗಾರಿಕೆಯಲ್ಲಿ ವಿಫಲವಾಗಿದೆ. ಇಲಾಖೆಯ ಕೆಲ ಅಧಿಕಾರಿಗಳು ಕರ್ತವ್ಯ ಲೋಪ ಎಸಗಿದ್ದಾರೆ ಎಂದು ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಹೇಳಿದೆ. ಲೋಪ ಎಸಗಿ ಕರ್ತವ್ಯ ನಿರ್ವಹಣೆಯಲ್ಲಿ ಎಡವಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸುವಂತೆ ಸಮಿತಿಯು ಸರಕಾರಕ್ಕೆ ಶಿಫಾರಸು ಮಾಡಿದೆ. ಆಡಳಿತ ಪಕ್ಷದ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಅಧ್ಯಕ್ಷರಾಗಿರುವ ಸಮಿತಿಯ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು, ಸಮಾಜಕಲ್ಯಾಣ ಇಲಾಖೆಯಲ್ಲಿ ಆಗುತ್ತಿರುವ ಲೋಪಗಳು ಬೆಳಕಿಗೆ ಬಂದಿವೆ. ಬಜೆಟ್‌ನಲ್ಲಿ ಘೋಷಿಸಿದಂತೆ ಹಣ ಬಿಡುಗಡೆಯಾಗಿದ್ದರೂ ಕೂಡ ಸಕಾಲದಲ್ಲಿ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಎಡವಿದೆ. ಇದು ಎಲ್ಲ ನಿಗಮಗಳಲ್ಲಿ ಕಂಡು ಬಂದಿರುವ ವೈಫಲ್ಯತೆಯಾಗಿದೆ ಎಂದು ವರದಿ ಹೇಳಿದೆ.

{ ಲಕ್ಷ್ಮಣ್ ಸವದಿ } ಶಾಸಕ

ಮುಡದಲ್ಲಿ 200% ಯಾವುದೇ ಹಗರಣ ನಡೆದಿಲ್ಲ. ಮುಖ್ಯಮಂತ್ರಿಗಳ ಧರ್ಮ ಪತ್ನಿಗೆ ಅವರ ಕುಟುಂಬದಿಂದ ಆಸ್ತಿ ಬಂದಿದೆ. ಈಗ ಕೇಂದ್ರ ಬಜೆಟ್ ವೈಫಲ್ಯ ಮುಚ್ಚಿಕೊಳ್ಳಲು ಮೇಲಿನಿಂದ ಸೂಚನೆ ಬಂದಿದೆ. ಅದಕ್ಕೆ ಇಲ್ಲಿ ಧರಣಿ ನಡೆಯುತ್ತಿದೆ. ಈ ಡ್ರಾಮಾದ ಹಿಂದಿರುವವರು ಯಾರು ಎಂಬುದನ್ನು ಕೆಲವೇ ದಿನಗಳಲ್ಲಿ ಬಹಿರಂಗ ಪಡಿಸುತ್ತೇನೆ.

ಪ್ರತಿಪಕ್ಷಗಳು ಮುಡಾ ಹಗರಣದಲ್ಲಿ ರಾಜಕೀಯ ಮಾಡುತ್ತಿವೆ: ಸಿಎಂ ಸಿದ್ದರಾಮಯ್ಯ

ನನ್ನ ಹೆಸರಿಗೆ ಮಸಿ ಬಳಿಯಲು ಪ್ರತಿಭಟನೆ

ವಿಧಾನ ಪರಿಷತ್: ನನ್ನ ಹೆಸರಿಗೆ ಮಸಿ ಬಳಿಯಲು, ನನ್ನ ವಿರುದ್ಧ ಹೊಟ್ಟೆ ಕಿಚ್ಚಿನಿಂದ ಪ್ರತಿಪಕ್ಷಗಳು ಮುಡಾ ಹಗರಣದಲ್ಲಿ ರಾಜಕೀಯ ಮಾಡುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ-ಜೆಡಿಎಸ್ ಅಹೋರಾತ್ರಿ ಧರಣಿ ವಿರುದ್ಧ ಕಿಡಿಕಾರಿದ್ದಾರೆ.

ವಿಧಾನಪರಿಷತ್ ಕಲಾಪ ಪ್ರಾರಂಭವಾದ ಕೂಡಲೇ ಪ್ರತಿಪಕ್ಷಗಳು ಸದನದ ಬಾವಿಗಿಳಿದು ಮೂಡಾ ಹಗರಣ ಬಗ್ಗೆ ಚರ್ಚೆಗೆ ಅವಕಾಶ ಕೇಳಿದ್ದರು. ಈ ವೇಳೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬಿಜೆಪಿ ಅವರು ವಿಷಯವೇ ಇಲ್ಲದ್ದನ್ನು ವಿಷಯ ಮಾಡುತ್ತಿದ್ದಾರೆ. ಸುಮ್ಮನೆ ಮುಡಾ ವಿಷಯ ಇಟ್ಟುಕೊಂಡು ಪ್ರತಿಭಟನೆ ಮಾಡುತ್ತಿದ್ದಾರೆ. ನಿಯಮಾವಳಿ ಪ್ರಕಾರವೇ ನಿವೇಶನ ಪಡೆಯಲಾಗಿದೆ. ಕಾನೂನು ಪ್ರಕಾರವೇ ಎಲ್ಲಾ ಆಗಿದೆ. ಮುಡಾ ಸೈಟ್ ಕೊಟ್ಟಾಗ ಬಿಜೆಪಿಯೇ ಅಧಿಕಾರದಲ್ಲಿ ಇತ್ತು. ಅದರೂ ಈಗ ಪ್ರತಿಭಟನೆ ಮಾಡಿಸುತ್ತಿದ್ದಾರೆ ಎಂದು ವಿಪಕ್ಷಗಳ ವಿರುದ್ಧ ಕಿಡಿಕಾರಿದರು.

ವಿಧಾನ ಪರಿಷತ್ ಕಲಾಪ ಆರಂಭವಾಗುತ್ತಿದ್ದಂತೆ ಸದನದ ಬಾವಿಯಲ್ಲಿ ಬಿಜೆಪಿ, ಜೆಡಿಎಸ್ ಧರಣಿ ಮುಂದುವರಿಸಿದರು. ಈ ವೇಳೆ ಮಾತನಾಡಿದ ಬಿಜೆಪಿ ಸದಸ್ಯ ಸಿ ಟಿ ರವಿ, ಸಿಎಂ ಹುಲಿಯಾ ಆದರೆ ಚರ್ಚೆಗೆ ಅವಕಾಶ ನೀಡುತ್ತಾರೆ, ಇಲ್ಲದಿದ್ದರೆ ಇಲಿಯಾ ಆಗಲಿದ್ದಾರೆ. ಆದರೆ ಸಿಎಂ ಓಡಿ ಹೋಗುವವರಲ್ಲ, ಚರ್ಚೆಗೆ ಅವಕಾಶ ನೀಡಿ ಎಂದು ನಿಮಗೂ ಅವರು ಸಲಹೆ ನೀಡಲಿದ್ದಾರೆ ಎಂದರು.

ಇದಕ್ಕೆ ಸಭಾಪತಿ ಬಸವರಾಜ ಹೊರಟ್ಟಿ, ನಿಮ್ ಮಾತು ಕೇಳಿ ಮರದಲ್ಲಿರುವ ಮಂಗನೂ ಕೈ ಬಿಡ್ತಾವೆ ಎಂದು ಹಾಸ್ಯ ಚಟಾಕಿ ಹಾರಿಸಿದರು. ನಂತರ ಮಾತನಾಡಿದ ಸಿಎಂ ಸಿದ್ದರಾಮಯ್ಯ, ವಿಷಯ ಅಲ್ಲದೇ ಇರುವುದನ್ನು ವಿಷಯ ಮಾಡಿದ್ದೀರಿ, ವೈಯಕ್ತಿಕವಾಗಿ ತೆಗೆದುಕೊಂಡಿದ್ದೀರಿ, ಕಾನೂನು ರೀತಿ ಎಲ್ಲ ಸರಿ ಇದ್ದರೂ ವಿಷಯ ತೆಗೆದುಕೊಂಡಿದ್ದಾರೆ. ಬಿಜೆಪಿ ಸರಕಾರ ಇದ್ದಾಗಲೇ ನಿವೇಶನ ಕೊಟ್ಟಿದ್ದಾರೆ, ನಾವು ಇಂತಾ ಕಡೆ ಕೊಡಿ ಎಂದು ಕೇಳಿದ್ದೆವಾ? 2021 ರಲ್ಲಿ ಯಾರು ಅಧಿಕಾರದಲ್ಲಿದ್ದರು? ಬಿಜೆಪಿಯವರು ಅಧಿಕಾರದಲ್ಲಿದ್ದು, ನಿಮ್ಮ ಕಾಲದಲ್ಲಿ ಮಾಡಿದ ತಪ್ಪು ಅದು. ಮುಡಾದವರು ಮಾಡಿಕೊಟ್ಟಿದ್ದಾರೆ, ಈಗಾಗಲೇ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದೇವೆ. ಹಾಗಾಗಿ ಸಭಾಪತಿ ಚರ್ಚೆಗೆ ಅವಕಾಶ ನಿರಾಕರಿಸಿದ್ದು ಸರಿಯಾಗಿದೆ. ಚರ್ಚೆಗೆ ಅವಕಾಶವಿಲ್ಲ, ಸರಿಯಾದ ತೀರ್ಮಾನವಾಗಿದೆ ಎಂದು ಸಮರ್ಥಿಸಿಕೊಂಡರು.

ಪ್ರತಿಭಟನೆಯನ್ನು ಖಂಡಿಸುವೆ

ಪ್ರತಿಪಕ್ಷಗಳ ಪ್ರತಿಭಟನೆಯನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ. ನನ್ನ ಹೆಸರಿಗೆ ಮಸಿ ಬಳಿಯಲು ಹೀಗೆ ಮಾಡ್ತಿದ್ದಾರೆ. 40 ವರ್ಷಗಳಿಂದ ನನ್ನ ಮೇಲೆ ಯಾವುದೇ ಕಪ್ಪು ಚುಕ್ಕಿ ಇಲ್ಲ. ಹೀಗಾಗಿ ವಿಪಕ್ಷಗಳಿಗೆ ಹೊಟ್ಟೆ ಕಿಚ್ಚು. ಹೊಟ್ಟೆ ಕಿಚ್ಚಿಗೆ ಹೀಗೆ ಮಾಡ್ತಿದ್ದಾರೆ. ಕಾನೂನು ರೀತಿ ಸೈಟ್ ಹಂಚಿಕೆ ಆಗಿದೆ ಎಂದು ಮುಡಾ ಸೈಟ್ ಹಂಚಿಕೆಯನ್ನು ಸಮರ್ಥನೆ ಮಾಡಿಕೊಂಡರು. ಅಂತಿಮವಾಗಿ ಸಭಾಪತಿ ಬಸವರಾಜ ಹೊರಟ್ಟಿ, ಮುಡಾ ನಿವೇಶನ ಹಂಚಿಕೆ ಅವ್ಯವಹಾರ ಆರೋಪ ಕುರಿತು ಬಿಜೆಪಿ ನಿಲುವಳಿ ಮಂಡಿಸಿದ್ದು ನಿವೃತ್ತ ನ್ಯಾಯಮೂರ್ತಿ ನೇತೃತ್ವದ ತನಿಖೆಗೆ ಆಯೋಗ ರಚನೆ ಹಿನ್ನೆಲೆ ಚರ್ಚೆಗೆ ಅವಕಾಶ ನಿರಾಕರಿಸಲಾಗಿದೆ. ನಂತರ ಮರುಪರಿಶೀಲನೆಗೆ ಅವಕಾಶ ಕೋರಿದ್ದರು, ಆದರೆ ಇತ್ತೀಚೆಗೆ ನಡೆದ ನಿರ್ದಿಷ್ಟ ಘಟನೆಯಲ್ಲದ ಕಾರಣ ಚರ್ಚೆಗೆ ಅವಕಾಶ ನಿರಾಕರಿಸಲಾಗಿದೆ ಎಂದು ಮತ್ತೊಮ್ಮೆ ಚರ್ಚೆಗೆ ಅವಕಾಶ ನಿರಾಕರಿಸಿ ರೂಲಿಂಗ್ ನೀಡಿದರು. ಚರ್ಚೆಗೆ ಅವಕಾಶ ಸಿಗದ ಹಿನ್ನೆಲೆಯಲ್ಲಿ ಬಿಜೆಪಿ, ಜೆಡಿಎಸ್ ಸದಸ್ಯರು ಸದನದಲ್ಲಿ ಧರಣಿ ಮುಂದುವರೆಸಿ ಸರಕಾರದ ವಿರುದ್ಧ ಘೋಷಣೆ ಕೂಗಿದರು.

ಅವರು ಕೊಟ್ರು, ನಾವು ತಗೊಂಡ್ವಿ!

ಮುಡಾ ಪ್ರಕರಣದ ತನಿಖೆಗೆ ನಿವೃತ್ತಿ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಲಾಗಿದೆ. ತನಿಖೆ ಮಾಡುವಾಗ ಚರ್ಚೆ ಮಾಡುವುದು ಸರಿಯಲ್ಲ ಎಂದು ಸಭಾಪತಿ ರೂಲಿಂಗ್ ಅನ್ನು ಸಮರ್ಥನೆ ಮಾಡಿಕೊಂಡರು. ಸೈಟು ತೆಗೆದುಕೊಂಡಿರುವುದರಲ್ಲಿ ನನ್ನ ತಪ್ಪಿಲ್ಲ. 50:50 ನಿಯಮ ಮಾಡಿದ್ದು ಬಿಜೆಪಿ ಅವಧಿಯಲ್ಲಿ. ನಮ್ಮ ಜಮೀನಿಗೆ ಪರ್ಯಾಯವಾಗಿ ನಾವು ಸೈಟು ಕೇಳಿದಾಗ ಮೂಡಾ ಸೈಟು ಕೊಟ್ಟಿದೆ. ನಾವು ಇದೇ ಜಾಗ ಕೊಡಿ ಅಂತ ನಾವು ಕೇಳಿರಲಿಲ್ಲ. ಅವರು ಕೊಟ್ಟರು, ನಾವು ತಗೊಂಡಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ವಿಜೃಂಭಣೆಯಿಂದ ಆಯೋಜಿಸಲು ಚಲುವರಾಯಸ್ವಾಮಿ ಸೂಚನೆ

ಸಮ್ಮೇಳನ ಪಾರದರ್ಶಕವಾಗಿರಲಿ

ಸಾಹಿತ್ಯ ಸಮ್ಮೇಳನದ ಕಾರ್ಯಕ್ರಮದ ಸಂಘಟನೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಂಡ್ಯ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಸಭೆ ನಡೆಯಿತು. ಸಚಿವ ಶಿವರಾಜ ತಂಗಡಗಿ, ಶಾಸಕರಾದ ನರೇಂದ್ರ ಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ರವಿಕುಮಾರ್, ಉದಯ್ ಗೌಡ, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಇದ್ದರು.

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಾಹಿತ್ಯ, ಸಾಂಸ್ಕೃತಿಕ ಶ್ರೀಮಂತಿಕೆಯ ಜತೆಗೆ ಪಾರದರ್ಶಕವಾಗಿರಲಿ ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ವಿಕಾಸಸೌಧದ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಜತೆ ಕಾರ್ಯಕ್ರಮದ ಸಂಘಟನೆ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹಲವು ಸಲಹೆ ಸೂಚನೆ ನೀಡಿ ಮಾತನಾಡಿದ ಅವರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅತ್ಯಂತ ದೊಡ್ಡ ಐತಿಹಾಸಿಕ ಹಿನ್ನಲೆ ಇದ್ದು, ಇದರ ಚರಿತ್ರೆ, ಹಾಗೂ ಮಹತ್ವಕ್ಕೆ ಯಾವುದೇ ಕುಂದು ಉಂಟಾಗದಂತೆ ಸಂಭ್ರಮ, ಸಾಹಿತ್ಯಿಕ ಮೌಲ್ಯ, ಸಾಂಸ್ಕೃತಿಕ ಕಾರ್ಯಕ್ರಮ ಗಳಿಗೆ ಕೊರತೆಯಾಗದಂತೆ ಸಂಘಟನೆ ಮಾಡುವಂತೆ ಸಲಹೆ ನೀಡಿದರು.

ಕಾರ್ಯಕ್ರಮದ ಸಂಘಟನೆಯಲ್ಲಿ ಮೂಲ ಸೌಕರ್ಯ ಕಲ್ಪಿಸುವುದು ಹಾಗೂ ಆರ್ಥಿಕ ಹೊಣೆಗಾರಿಕೆಯನ್ನು ಸಂಪೂರ್ಣ ಜಿಲ್ಲಾಡಳಿತಕ್ಕೆ ಸೇರಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರ ಮತ್ತು ಸಹಯೋಗ ದೊಂದಿಗೆ ಹಿಂದೆಂದಿಗಿಂತ ವಿಜೃಂಭಣೆ ಯಿಂದ ಆಯೋಜಿಸಬೇಕು. ಈಗಾಗಲೇ 26 ಉಪಸಮಿತಿಗಳನ್ನು ರಚಿಸಲಾಗಿದ್ದು, ಎಲ್ಲಾ ಸಮಿತಿಗಳಿಗೂ ಸ್ಥಳೀಯ ಶಾಸಕರು ನೇತೃತ್ವ ವಹಿಸಿದ್ದು, ಜನಪ್ರತಿನಿಧಿಗಳು, ಸಂಘ- ಸಂಸ್ಥೆಗಳು, ಸಾರ್ವಜನಿಕರು ಕನ್ನಡದ ಅಭಿಮಾನಿಗಳನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಕಾರ್ಯಕ್ರಮ ನಡೆಸಬೇಕಾಗಿದೆ ಎಂದರು. ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲು ಈಗಾಗಲೇ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ದೂರದ ಜಿಲ್ಲೆಗಳಿಂದ ಆಗಮಿಸುವ ಹಾಗು ಮಂಡ್ಯ ಜಿಲ್ಲೆಯ ಜನತೆಗೆ ಅನುಕೂಲವಾದ ಸ್ಥಳವನ್ನು ಅಂತಿಮಗೊಳಿಸಿ ಸಮ್ಮೇಳನದ ಸಿದ್ಧತೆ ಮಾಡಿಕೊಳ್ಳಬೇಕು. ಸಾಹಿತ್ಯ ಸಮ್ಮೇಳನಕ್ಕೆ 30 ಕೋಟಿ ಒದಗಿಸುವ ಭರವಸೆ ದೊರೆತಿದ್ದು, ಈಗಾಗಲೇ ಬಜೆಟ್‌ನಲ್ಲಿ ಘೋಷಿಸಿರುವ ಅನುದಾನಲ್ಲೇ ವ್ಯವಸ್ಥಿತವಾಗಿ ಸಮ್ಮೇಳನ ನಡೆಸಿ ಹೆಚ್ಚು ಆರ್ಥಿಕ ಹೊರೆ ಬೀಳದಂತೆ ನಿಗದಿತ ಅನುದಾನದಲ್ಲೆ ಯಶ್ವಸಿಗೊಳಿಸಬೇಕು ಎಂದು ಹೇಳಿದರು.

> ಅತಿ ದೊಡ್ಡ ಸಾಂಸ್ಕೃತಿಕ ನುಡಿ ಹಬ್ಬ ಇದನ್ನು ಅತ್ಯಂತ ಜವಾಬ್ದಾರಿಯಿಂದ ಎಚ್ಚರಿಕೆಯಿಂದ ನಡೆಸಬೇಕಿದ್ದು, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಹೇಶ್ ಜೋಶಿ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಕನ್ನಡ ಸಾಹಿತ್ಯ ಸಮ್ಮೇಳನದ ಸ್ವರೂಪ ಗೋಷ್ಠಿಗಳು, ಪುಸ್ತಕ ಮಳಿಗೆ, ಊಟೋಪಚಾರ ಮತ್ತಿತರ ವಿಷಯ ಗಳ ಬಗ್ಗೆ ಮಾಹಿತಿ ನೀಡಿ ಅನುದಾನವು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾಗಲಿದ್ದು, ಹಣಕಾಸಿನ ಸಂಪೂರ್ಣ ಜವಾಬ್ದಾರಿ ಜಿಲ್ಲಾಡಳಿತದ ಮೇಲಿರುತ್ತದೆ.
> -ಶಿವರಾಜ್ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

ಬಿಜೆಪಿ – ಜೆಡಿಎಸ್ ನಾಯಕರಿಂದ ರಾಜಭವನಕ್ಕೆ ಕಾಲ್ನಡಿಗೆ

ಸಿಎಂ ರಾಜೀನಾಮೆಗೆ ಆಗ್ರಹಿಸಿ ರಾಜ್ಯಪಾಲರಿಗೆ ಬಿಜೆಪಿ ದೂರು

ಮುಡಾ ಹಗರಣ ಮತ್ತು ಚರ್ಚೆಗೆ ಸದನದಲ್ಲಿ ಅವಕಾಶ ನಿರಾಕರಣೆ ಕುರಿತು ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ-ಜೆಡಿಎಸ್ ನಾಯಕರು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ದೂರು ನೀಡಿದರು.

ಬೆಂಗಳೂರು: ರಾಜ್ಯದ ಕಾಂಗ್ರೆಸ್ ಸರಕಾರವು ಸದನದಲ್ಲಿ ಮುಡಾ ವಿಚಾರದಲ್ಲಿ ಅವಕಾಶ ನೀಡದೇ ಇರುವುದನ್ನು ಖಂಡಿಸಿ ಬಿಜೆಪಿ – ಜೆಡಿಎಸ್ ಜನಪ್ರತಿನಿಧಿಗಳು ರಾಜಭವನ ಚಲೋ ನಡೆಸಿ, ಸಿಎಂ ರಾಜೀನಾಮೆಗೆ ಆಗ್ರಹಿಸಿ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ.

ವಿಧಾನಮಂಡಲದ ಉಭಯ ಸದನಗಳ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆಯಾಗುತ್ತಿದ್ದಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್, ವಿಧಾನಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಬಿಜೆಪಿ – ಜೆಡಿಎಸ್ ಪ್ರಮುಖರು ರಾಜಭವನಕ್ಕೆ ಕಾಲ್ನಡಿಗೆಯಲ್ಲಿ ತೆರಳಿದರು. ರಾಜಭವನ ಚಲೋ ನಡೆಸಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿಯಾದರು. ಮುಡಾ ಹಗರಣ ಮತ್ತು ಚರ್ಚೆಗೆ ಸದನದಲ್ಲಿ ಅವಕಾಶ ನಿರಾಕರಣೆ ಕುರಿತ ವಿವರ ನೀಡಿ ಸಿಎಂ ವಿರುದ್ಧ ದೂರು ಸಲ್ಲಿಸಿದರು, ಸಿಎಂ ರಾಜೀನಾಮೆಗೆ ಒತ್ತಾಯಿಸಿದರು.

ನಂತರ ಮಾತನಾಡಿದ ವಿರೋಧಪಕ್ಷದ ನಾಯಕ ಆರ್. ಅಶೋಕ್, ಮುಡಾ ಹಗರಣ ಜೆ.ಎಚ್. ಪಟೇಲರ ಕಾಲದ್ದು. ಅರಿಶಿಣ ಕುಂಕುಮಕ್ಕೆ ನೀಡಿರುವುದು. ಒಂದು ಲಕ್ಷ ಸ್ಕ್ವೇರ್ ಫೀಟ್ 50:50 ರೇಶಿಯೋದಲ್ಲಿ ಲೂಟಿ ಹೊಡೆದಿದ್ದಾರೆ. ಸಂವಿಧಾನ ರಕ್ಷಣೆ ಮಾಡುತ್ತೀನಿ ಎಂದು ಶಪಥ ಮಾಡಿದ್ದರು. ನನ್ನ ಬಂಧುಗಳಿಗೆ ಸಹಾಯ ಮಾಡಲ್ಲ ಅಂತ ಹೇಳಿದ್ದಾರೆ. ಸಂವಿಧಾನ ರಕ್ಷಣೆ ಮಾಡುತ್ತೀನಿ ಎಂದು ಹೇಳಿ, ಭಕ್ಷಣೆ ಮಾಡಿದ್ದಾರೆ. ಸ್ಪೀಕರ್ ಕೂಡ ಕಾಂಗ್ರೆಸ್ ಪರ ವಾಲಿದ್ದಾರೆ. ಸದನದಲ್ಲಿ ಚರ್ಚೆ, ದಾಖಲೆ ನೀಡುವ ಅಧಿಕಾರ ನಮಗಿದೆ. ಆದರೆ ಚರ್ಚೆಗೆ ಅವಕಾಶ ಕೊಡದೇ ಹೆದರಿ ಪಲಾಯನ ಮಾಡಿದ್ದಾರೆ ಎಂದರು.

> ಸರಕಾರ ಬಂದು ಒಂದು ವರ್ಷದಲ್ಲಿ ಸಚಿವರೊಬ್ಬರ ತಲೆದಂಡ ಆಗಿದೆ. ಚುನಾವಣೆ ನಡೆಸಲು ರಾಜ್ಯದ ಬೊಕ್ಕಸ ಖಾಲಿ ಮಾಡಿದ್ದಾರೆ. ನಮ್ಮ ವಾಲ್ಮೀಕಿ ನಿಗಮದ ಹಣ ಆಂಧ್ರಕ್ಕೆ ಕಳಿಸಿದ್ದಾರೆ. ಇಡಿ ತನಿಖೆ ಪಾರದರ್ಶಕವಾಗಿ ನಡೆಯುತ್ತಿದೆ. ಮುಡಾ ಹಗರಣದಲ್ಲಿ ಸ್ವತಃ ಸಿಎಂ ಭಾಗಿಯಾಗಿದ್ದಾರೆ. ಚರ್ಚೆಗೆ ಅವಕಾಶ ಕೊಡದಂತೆ ಸಭಾಪತಿಗಳಿಗೆ ತಾಕೀತು ಮಾಡಿದ್ದಾರೆ. ಈ ರೀತಿ ದುರಾಡಳಿತ ಮಾಡುತ್ತಾರೆಂದು ಭಾವಿಸಿರಲಿಲ್ಲ.
> -ಸುರೇಶ್ ಬಾಬು, ಜೆಡಿಎಸ್ ನಾಯಕ

ಕಾಂಗ್ರೆಸ್ ಪಾದಯಾತ್ರೆ ಅಲ್ಲ, ಪ್ರಾಯಶ್ಚಿತಕ್ಕೆ ಉರುಳುಸೇವೆ ಮಾಡಲಿ

ವಿಧಾನ ಪರಿಷತ್ ಸದಸ್ಯ ಸಿ. ಟಿ ರವಿ ಮಾತನಾಡಿ, ಕಾಂಗ್ರೆಸ್ ಪಾದಯಾತ್ರೆ ಮಾಡುವ ವಿಚಾರ ಚರ್ಚೆಗೆ ಬಂದಿದೆ, ಬರೀ ಪಾದಯಾತ್ರೆ ಅಲ್ಲ, ಪ್ರಾಯಶ್ಚಿತಕ್ಕೆ ಉರುಳುಸೇವೆ ಮಾಡಿಕೊಂಡು ಬರಲಿ. ತಾಯಿ ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿ ಉರುಳುಸೇವೆ ಮಾಡಲಿ. ಅವರು ಅಧಿಕಾರದಲ್ಲಿ ಇರುವವರು ತನಿಖೆ ಮಾಡಬೇಕು. ಸ್ವಜನ ಪಕ್ಷಪಾತ ಮಾಡಿ, ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ಇವರು ದಲಿತರ ಜಮೀನು ಖರೀದಿಸಿ ತಪ್ಪು ಮಾಡಿದ್ದಾರೆ. ಸದನದಲ್ಲಿ ಚರ್ಚೆಗೆ ಅವಕಾಶ ಕೊಡಬೇಕಿತ್ತು. ನಾವು ನಿರಪರಾಧಿ ಅಂತ ನಿರೂಪಿಸಲು ಅವಕಾಶ ಇತ್ತು. ಸದನದಲ್ಲಿ ದಾಖಲೆ ಕೊಟ್ಟು ಚರ್ಚೆ ಮಾಡಬೇಕು. ಅವರು ನಿರಪರಾಧಿ ಆಗಿದ್ದರೆ, ಸದನದಲ್ಲಿ ನಿರೂಪಿಸಬೇಕಿತ್ತು. ಅವರು ಸುದ್ದಿಗೋಷ್ಠಿ ಮಾಡುತ್ತೇನೆ ಅಂದರೆ ಅದನ್ನು ಯಾರೂ ಒಪ್ಪಲ್ಲ. ದಾಖಲೆಯನ್ನ ಸದನದಲ್ಲೇ ಇಟ್ಟು ಚರ್ಚೆ ಮಾಡಬೇಕಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸೌಧದಲ್ಲಿ ಬೆಳಗ್ಗೆ ವಾಕಿಂಗ್ ಮಾಡಿದ ಶಾಸಕರು | ಸರಕಾರದ ಉಪಚಾರ ಬೇಡವೆಂದ ಬಿಜೆಪಿಗರು

ಹಾಡು, ಭಜನೆಯೊಂದಿಗೆ ಕಾಲ ಕಳೆದ ಬಿಜೆಪಿಗರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಗಳನ್ನು ಖಂಡಿಸಿ ಪ್ರತಿಪಕ್ಷ ಬಿಜೆಪಿ, ಜೆಡಿಎಸ್ ಶಾಸಕರು ಜಂಟಿಯಾಗಿ ನಡೆಸಿದ ಅಹೋರಾತ್ರಿ ಧರಣಿಯಲ್ಲಿ, ಹಾಡು, ಭಜನೆ ನೃತ್ಯ ಸದ್ದು ಮಾಡಿದವು.

ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ಹಾಸಿಗೆ, ದಿಂಬುಗಳ ಸಮೇತವಾಗಿ ಪ್ರತಿಭಟಿಸಿ ಇಡೀ ರಾತ್ರಿ ಸೋಫಾ ಮತ್ತು ನೆಲದ ಮೇಲೆ ನಿದ್ರಿಸಿದರು. ಗುರುವಾರ ಬೆಳಗ್ಗೆ ಎದ್ದು ಕಾಫಿ, ಟೀ ಸೇವಿಸಿ, ವಿಧಾನಸೌಧದ ಮುಂಭಾಗ ವಾಕಿಂಗ್, ಯೋಗ, ವ್ಯಾಯಾಮ ಮಾಡುವ ದೃಶ್ಯ ಕಂಡುಬಂತು. ಮುಡಾ ಹಗರಣ ಸಂಬಂಧ ಚರ್ಚೆಗೆ ಅವಕಾಶ ನೀಡುವಂತೆ ಬುಧವಾರ ಸದನದಲ್ಲಿ ಬಿಜೆಪಿ ಸದಸ್ಯರು ನಿಲುವಳಿ ಮಂಡಿಸಿದರು. ವಿಧಾನಸಭಾಧ್ಯಕ್ಷ ನಿಲುವಳಿಯನ್ನು ತಿರಸ್ಕರಿಸಿದರು. ಇದರಿಂದ ಕೆರಳಿದ ಪ್ರತಿಪಕ್ಷ ಸದಸ್ಯರು ಸದನದ ಬಾವಿಗಿಳಿದು ರಾಜ್ಯ ಸರಕಾರ ಹಾಗೂ ಸ್ಪೀಕರ್ ವಿರುದ್ಧ ಪ್ರತಿಭಟನೆ ನಡೆಸಲು ಆರಂಭಿಸಿದರು. ಆಗ ಸ್ಪೀಕರ್ ಕಲಾಪವನ್ನು ಮುಂದೂಡಿದರು. ಹೀಗಾಗಿ ಸರಕಾರದ ವಿರುದ್ಧ ಸದನದಲ್ಲೇ ಅಹೋರಾತ್ರಿ ಧರಣಿ ನಡೆಸಿದ್ದಾರೆ.

ಹಗರಣದ ಹಣದಲ್ಲಿ ಊಟ ಮಾಡುವುದಿಲ್ಲ

ಅಹೋರಾತ್ರಿ ನಡೆಸಿದ ಬಿಜೆಪಿ ಶಾಸಕರನ್ನು



ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಭೇಟಿಯಾಗಿ ಭೋಜನದ ವ್ಯವಸ್ಥೆ ಬಗ್ಗೆ ವಿಚಾರಿಸಿದರು. ಆಗ ಆರ್.ಅಶೋಕ್, ಮುಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣದ ಹಣದಲ್ಲಿ ನಾವು ಊಟ ಮಾಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ನಂತರ ಇಡೀ ರಾತ್ರಿ ಎಲ್ಲ ಶಾಸಕರು ಸದನದಲ್ಲೇ ಕಳೆದರು. ನಿದ್ರೆಗೆ ಜಾರುವ ಮುನ್ನ ಒಟ್ಟಿಗೆ ಕುಳಿತು ಅಂತ್ಯಾಕ್ಷರಿ ಹಾಡಿದರು. ಹನುಮಾನ್ ಚಾಲೀಸಾ ಮತ್ತು ಭಜನೆ ಪಠಿಸುವ ಮೂಲಕವೂ ಗಮನ ಸೆಳೆದರು. ಸಭಾಪತಿ ಹೊರಟ್ಟಿ ಬಂದಾಗಲೂ ಶಾಸಕರು ಹಾಡುಗಳನ್ನು ಹಾಡಿದರು. ಹಾಡುಗಳನ್ನು ಕೇಳುತ್ತಾ ಹೊರಟ್ಟಿ, ಇನ್ನು ಮುಂದೆ ಶಾಸಕರ ದಿನಾಚರಣೆ ಮಾಡೋಣ ಎಂದು ಹಾಸ್ಯ ಚಟಾಕಿ ಹಾರಿಸಿದರು. ಇದಾದ ಬಳಿಕ ಶಾಸಕರು ದಿಂಬು, ಹಾಸಿಗೆಗಳನ್ನು ಹೊದ್ದು ನಿದ್ರೆಗೆ ಜಾರಿದರು.

ಶಾಸಕರನ್ನು ತಡೆದ ಡಿಸಿಪಿ

ಬುಧವಾರ ರಾತ್ರಿ, ವಿಧಾನಸೌಧದ ಮುಂಭಾಗದ ಲಾಂಜ್‌ಗೆ ಬಂದ ಬಿಜೆಪಿ ಶಾಸಕ ಧೀರಜ್ ಮುನಿರಾಜು ವಾಪಸ್ ಸದನದ ಪ್ರತಿಪಕ್ಷದ ಮೊಗಸಾಲೆಗೆ ತೆರಳಲು ಮುಂದಾದಾಗ ಲಾಂಜ್ ದ್ವಾರದಲ್ಲಿ ಅವರನ್ನು ಡಿಸಿಪಿ ತಡೆದರು. ಶಾಸಕರು ಎಂದು ತಿಳಿಯದೆ ಡಿಸಿಪಿ, ವಿಧಾನಸೌಧದ ಪೂರ್ವ ಬಾಗಿಲು ಮುಚ್ಚಿದ್ದ ಹಿನ್ನೆಲೆಯಲ್ಲಿ ಒಳಗೆ ಹೋಗಲು ಬಾಗಿಲು ಬಡಿಯುತ್ತಿದ್ದಾಗ ಸದನದ ಮೊಗಸಾಲೆಯ ಒಳಗೆ ಬಿಡುವುದಿಲ್ಲ. ಆ ಕಡೆ ಹೋಗಿ ಎಂದು ಸೂಚಿಸಿದ್ದಾರೆ. ಬಳಿಕ ಶಾಸಕರು ಅಂತಾ ಗೊತ್ತಾದ ಮೇಲೆ ಕ್ಷಮೆ ಕೇಳಿದ ಡಿಸಿಪಿ, ಶಾಸಕರ ಪ್ರವೇಶಕ್ಕೆ ಅವಕಾಶ ನೀಡಿದರು. ಇದೇ ವೇಳೆ, ಡಿಸಿಪಿಗೆ ಎಚ್ಚರಿಕೆ ನೀಡಿದ ಶಾಸಕ ಧೀರಜ್ ಮುನಿರಾಜು, ಒಳಪ್ರವೇಶಿಸಿ ಪ್ರತಿಪಕ್ಷದ ನಾಯಕ ಅಶೋಕ್ ಅವರಿಗೆ ಮಾಹಿತಿ ನೀಡಿದರು. ಆಗ ಹೊರಗೆ ಬಂದ ಅಶೋಕ್, ಈ ಬಾಗಿಲು ತೆರೆದಿದ್ದೀರಿ, ಬಾಗಿಲ ಬಳಿ ಕಾಯಿರಿ. ಶಾಸಕರು ಯಾವ ಕಡೆ ಬಂದರೂ ಬಿಡಬೇಕು ಎಂದು ತಾಕೀತು ಮಾಡಿದರು.

ಬಿಜೆಪಿಯ ಅಕ್ರಮ ಪಟ್ಟಿ ಶೀಘ್ರ ಬಿಡುಗಡೆ

ಬೆಂಗಳೂರು: ಬಿಜೆಪಿ ಅವಧಿಯಲ್ಲೇ ಹೆಚ್ಚು ಅಕ್ರಮ ಮುಡಾ ಸೈಟು ಹಂಚಿಕೆಯಾಗಿದ್ದು, ಈ ನಿವೇಶನಗಳ ಫಲಾನುಭವಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿಯವರದ್ದೆ ಇದ್ದು, ಶೀಘ್ರದಲ್ಲೇ ಪಟ್ಟಿಯನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ವಿಧಾನಸೌಧದ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎರಡು ವರ್ಷಗಳ ಹಿಂದೆಯೇ ಬಿಜೆಪಿ ಆಡಳಿತಾವಧಿಯಲ್ಲಿ ಮುಡಾ ನಿವೇಶನ ಹಂಚಿಕೆ ಮಾಡಲಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಬಿಜೆಪಿ ಸದನ ಪ್ರಾರಂಭದ ದಿನವೇ ಈ ವಿಚಾರ ಪ್ರಸ್ತಾಪ ಮಾಡಬಹುದಿತ್ತು, ಅವರ ಹಗರಣ ಗಳು ಈಗ ಹೊರಗೆ ಬರುವ ಭಯದಿಂದ ಈಗ ಪ್ರಸ್ತಾಪಿಸುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ನಿಗಮ ಮಂಡಳಿಗಳಲ್ಲಿ ಆಗಿರುವ ಅಕ್ರಮಗಳ ಬಗ್ಗೆ ಚರ್ಚಿಸಲು ಅವಕಾಶ ಕಲ್ಪಿಸಿದ್ದರೂ ಸಹ ತಮಗೆ ಬೇಕಾದನ್ನು ಹೇಳಿದ್ದು, ಮುಖ್ಯಮಂತ್ರಿಗಳಿಂದ ಉತ್ತರ ಪಡೆಯಲು ಅವಕಾಶವನ್ನೇ ನೀಡಲಿಲ್ಲ. ತಮ್ಮ ಕಾಲದಲ್ಲಿ ನಡೆದಿದ್ದ ಹಗರಣಗಳನ್ನು ಮುಚ್ಚಿಟ್ಟಿದ್ದ ಬಿಜೆಪಿಯವರ ಅಕ್ರಮ ಬಹಿರಂಗವಾಗಬಾರದು ಎಂದು ಮುಖ್ಯಮಂತ್ರಿಗಳಿಗೆ ಉತ್ತರ ನೀಡಲು ಅವಕಾಶವನ್ನೇ ನೀಡಲಿಲ್ಲ. ಈ ಅಕ್ರಮಗಳ ಬಗ್ಗೆ ನಮ್ಮ ಸರಕಾರ ತನಿಖೆಗೆ ಆದೇಶ ನೀಡಿದೆ ಎಂದು ತಿಳಿಸಿದರು.

ವಾಲ್ಮೀಕಿ ನಿಗಮದಲ್ಲಿ ಅಧಿಕಾರಿಗಳು ಅಕ್ರಮ ನಡೆಸಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುವುದು. ಉಪ್ಪು ತಿಂದವನು ನೀರು ಕುಡಿಯುತ್ತಾರೆ. ಇದಕ್ಕೆ ನಮ್ಮ ಅಭ್ಯಂತರವಿಲ್ಲ. ಬಿಜೆಪಿಯವರು ಈಗ ಮುಡಾ ನಿವೇಶನದ ಬಗ್ಗೆ ಗದ್ದಲ ಎಬ್ಬಿಸುತ್ತಿದ್ದು, ನಾವು ಅವರ ಕಾಲದಲ್ಲಿ ಹೇಗೆ ನಿವೇಶನ ಹಂಚಿಕೆ ಮಾಡಿದ್ದಾರೆ ಎಂದು ಹೊರಗೆ ತರುತ್ತೇವೆ. ಈ ವಿಚಾರದಲ್ಲಿ ಮುಖ್ಯಮಂತ್ರಿಗಳು ತನಿಖೆಗೆ ಆದೇಶಿಸಿದ್ದು, ವಿರೋಧ ಪಕ್ಷಗಳ ಬಳಿ ದಾಖಲೆ ಇದ್ದರೆ ಅದನ್ನು ತನಿಖಾಧಿಕಾರಿಗಳಿಗೆ ನೀಡಲಿ. ಆ ಜಮೀನು ಖರೀದಿಸಿದ್ದು, ಅದನ್ನು ದಾನಪತ್ರವಾಗಿ ನೀಡಿದ್ದು ನಿಜವಲ್ಲವೇ? ಅದನ್ನು ಅಕ್ರಮವಾಗಿ ಮುಡಾದವರು ಬಳಸಿಕೊಂಡಿದ್ದು, ಅದಕ್ಕೆ ಪರಿಹಾರ ನೀಡಿದ್ದಾರೆ. ಇದರಲ್ಲಿ ಅವ್ಯವಹಾರ ಏನಿದೆ? ಇಲ್ಲಿ ಅವ್ಯವಹಾರ ನಡೆದಿದ್ದರೆ ಅದು ಬಿಜೆಪಿಯವರ ಕಾಲದಲ್ಲಿ ಆಗಿದೆ ಎಂದು ತಿರುಗೇಟು ನೀಡಿದರು.

> ವಾಲ್ಮೀಕಿ ಹಗರಣದಲ್ಲಿ ಅಕ್ರಮವಾಗಿ ವರ್ಗಾವಣೆಯಾಗಿರುವ 89 ಕೋಟಿ ಹಣದಲ್ಲಿ ತನಿಖಾಧಿಕಾರಿಗಳು ಸುಮಾರು 40 ಕೋಟಿ ರು. ಗೂ ಹೆಚ್ಚಿನ ಹಣ ವಶಪಡಿಸಿಕೊಂಡಿದ್ದು, ಇದರ ಮಧ್ಯೆ ಇಡಿ, ಸಿಬಿಐ ಕೂಡ ತನಿಖೆ ನಡೆಸುತ್ತಿದ್ದು, ಅವರನ್ನು ನಾವು ತಡೆದಿಲ್ಲ. ಅವರಿಗೂ ತನಿಖೆ ನಡೆಸುವ ಹಕ್ಕಿದ್ದು, ಯಾವುದೇ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ.
> ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಿಎಂ ಸಿದ್ದರಾಮಯ್ಯ ಅವರ ಹೆಸರಿಗೆ ಕಪ್ಪು ಮಸಿ ಬಳಿಯುವ ಹುನ್ನಾರ | ಕಾಂಗ್ರೆಸ್ ಶಾಸಕರಿಂದ ಮೂಡಾ ದಾಖಲಾತಿ ಬಿಡುಗಡೆ

ಮುಡಾ ವಿಚಾರದಲ್ಲಿ ಬಿಜೆಪಿ ನಾಯಕರಿಂದ ಅನಗತ್ಯ ರಾಜಕಾರಣ

ಬೆಂಗಳೂರು: ಮೈಸೂರಿನ ನಗರಾಭಿವೃದ್ಧಿ ಪ್ರಾಧಿಕಾರ ಮುಡಾದ ವಿಚಾರದಲ್ಲಿ ಬಿಜೆಪಿ ಅನಗತ್ಯವಾಗಿ ರಾಜಕಾರಣ ಮಾಡುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿಗೆ ಕಪ್ಪು ಮಸಿ ಬಳಿಯುವ ಹುನ್ನಾರ ನಡೆಸಿದೆ. ಜತೆಗೆ ವಿಧಾನಸಭೆಯಲ್ಲಿ ಸಭಾಧ್ಯಕ್ಷರ ರೂಲಿಂಗ್ ಅನ್ನು ವಿರೋಧಿಸಿ ಅಹೋರಾತ್ರಿ ಧರಣಿ ನಡೆಸುವ ಮೂಲಕ ನಿಯಮಬಾಹಿರವಾಗಿ ನಡೆದುಕೊಂಡಿದೆ ಎಂದು ಕಾಂಗ್ರೆಸ್ ಶಾಸಕರು ಕಿಡಿ ಕಾರಿದ್ದಾರೆ.

ಶಾಸಕರಾದ ಕೆ.ಎಂ.ಶಿವಲಿಂಗೇಗೌಡ, ಪಿ.ಎಂ. ನರೇಂದ್ರಸ್ವಾಮಿ, ಎಂ.ನಾರಾಯಣ ಸ್ವಾಮಿ ಅವರು ವಿಧಾನಸೌಧದ ಸಭೆಯಲ್ಲಿ ಜಂಟಿ ಪತ್ರಿಕಾ ಗೋಷ್ಠಿಯನ್ನು ನಡೆಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಸಮರ್ಥಿಸಿಕೊಂಡರು ಹಾಗೂ ಮುಡಾ ಪ್ರಕರಣದಲ್ಲಿ ದಾಖಲಾತಿಗಳನ್ನು ಬಿಡುಗಡೆ ಮಾಡಿದರು.

ಶಾಸಕ ಶಿವಲಿಂಗೇಗೌಡ ಮಾತನಾಡಿ,

ಸಿದ್ದರಾಮಯ್ಯ ಅವರು ತಮ ರಾಜಕೀಯ ಜೀವನದ ಉದ್ದಕ್ಕೂ ಒಂದು ಕಪ್ಪು ಚುಕ್ಕೆ ಇಲ್ಲದಂತೆ ನಡೆದುಕೊಂಡಿದ್ದಾರೆ. ಬಿಜೆಪಿ ಮುಡಾ ವಿಚಾರದಲ್ಲಿ ಸಿದ್ದರಾಮಯ್ಯ ಅವರ ಪಾತ್ರ ಇದೆ ಎಂದು ಅಪಪ್ರಚಾರ ಮಾಡುವ ಮೂಲಕ ಕೆಟ್ಟ ಹೆಸರು ತರುವ ಪ್ರಯತ್ನ ನಡೆಸುತ್ತಿದೆ. ಜೆಡಿಎಸ್ ಮತ್ತು ಬಿಜೆಪಿಯ ಈ ನಾಟಕ ಕಂಪನಿಗೆ ಜನ ತಕ್ಕ ಪಾಠ ಕಲಿಸಲಿದ್ದಾರೆ ಎಂದು ತಿರುಗೇಟು ನೀಡಿದರು.

ಶಾಸಕ ನಾರಾಯಣಸ್ವಾಮಿ ಅವರು ಮಾತನಾಡಿ, ಈ ಹಿಂದೆ ಬ್ರಿಟಿಷರ ಅವಧಿಯಲ್ಲಿ ಸರಕಾರಿ ಜಮೀನನ್ನು ಹರಾಜು ಮೂಲಕ ವಿಲೀನ ಮಾಡಲಾಗುತ್ತಿತ್ತು. ಮೈಸೂರು ಸಮೀಪ ಮೂರು ಎಕರೆ 16 ಗುಂಟೆಯನ್ನು 1995 ರಲ್ಲಿ ಲಿಂಗ ಬಿನ್ ಜವರ ಎಂಬುವರು ಹರಾಜು ಮೂಲಕ ಖರೀದಿ ಮಾಡಿದ್ದರು. ಇದು ಯಾವುದೇ ಸರಕಾರದ ನಿಯಮಾವಳಿ ಅಡಿ ಮಂಜೂರಾದ ಅಥವಾ ಷರತ್ತಿಗೆ ಒಳಪಟ್ಟ ಭೂಮಿಯಲ್ಲ. ಲಿಂಗ ಅವರಿಗೆ ಮಲ್ಲಯ್ಯ, ಮೈಲಾರಲಿಂಗ ಹಾಗೂ ದೇವರಾಜ್ ಎಂಬ ಮೂವರು ಮಕ್ಕಳಿದ್ದರು. ಈ ಹಿಂದಿನ ಪದ್ಧತಿಯಲ್ಲಿ ಅಣ್ಣ-ತಮಂದಿರು ಪಂಚರ ಸಮುಖದಲ್ಲಿ ಪರಸ್ಪರ ಒಪ್ಪಿಗೆಯ ಮೇರೆಗೆ ಮೂರು ಎಕರೆ 16 ಗುಂಟೆಯನ್ನು ದೇವರಾಜ್ ಅವರಿಗೆ ಬಿಟ್ಟುಕೊಡುವ ಹೇಳಿಕೆ ನೀಡಿದ್ದಾರೆ. ಅಧಿಕಾರಿಗಳು ಸಹೋದರರ ಹೇಳಿಕೆ ಆಧರಿಸಿ ದೇವರಾಜ್ ಅವರಿಗೆ ಆಸ್ತಿಯ ಸಂಪೂರ್ಣ ಸ್ವಾಧೀನ ಹಾಗೂ ಅಧಿಕಾರ ಪ್ರದತ್ತವಾಗುವ ಮ್ಯುಟೇಶನ್ ನೀಡಿದ್ದಾರೆ ಎಂದು ಹೇಳಿದರು.

1992 ರಲ್ಲಿ ಮೈಸೂರು ನಗರ ಅಭಿವೃದ್ಧಿ ಪ್ರಾಧಿಕಾರ ಸದರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿತ್ತು. ದೇವರಾಜು ಅವರು ಸ್ವಾಧೀನ ಪ್ರಕ್ರಿಯೆಯಿಂದ ತಮ ಭೂಮಿಯನ್ನು ಕೈಬಿಡುವಂತೆ ಮನವಿ ಮಾಡಿದ್ದರು. ಮನವಿ ಆಧರಿಸಿ ಮುಡಾ ಸಮಿತಿ ಚರ್ಚೆ ನಡೆಸಿದ್ದು, ದೇವರಾಜು ಸೇರಿದಂತೆ 19 ಜನರ ಸ್ವತ್ತುಗಳನ್ನು ಸ್ವಾಧೀನ ಪ್ರಕ್ರಿಯೆಯಿಂದ ಮುಡಾ ಕೈಬಿಟ್ಟಿದೆ. 2004ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭಾವಮೈದುನ ಮಲ್ಲಿಕಾರ್ಜುನಯ್ಯ ಈ ಭೂಮಿಯನ್ನು ಖರೀದಿಸಿದ್ದಾರೆ. ದೇವರಾಜಯ್ಯ ಅವರ ಪಿತ್ರಾಜಿತ ಆಸ್ತಿಯಾಗಿದ್ದರಿಂದ ಹಾಗೂ ಲಿಂಗ ಅವರು ಹರಾಜು ಮೂಲಕ ಭೂಮಿ ಖರೀದಿ ಮಾಡಿದ್ದರಿಂದ ಮಲ್ಲಿಕಾರ್ಜುನಯ್ಯ ಅವರಿಗೆ ಭೂ ದಾಖಲೆಗಳು ವರ್ಗಾವಣೆಗೊಂಡಿವೆ ಎಂದರು.

ಇಷ್ಟು ವರ್ಷ ಇಲ್ಲದ ತಕರಾರು ಈಗೇಕೆ?

ಮಲ್ಲಿಕಾರ್ಜುನ 2004ರಲ್ಲಿ ಜಮೀನು ಖರೀದಿಸಿದರು. 2005ರಲ್ಲಿ ಈ ಜಾಗದ ಭೂ ಪರಿವರ್ತನೆ ಆಗಿದೆ. 2010ರಲ್ಲಿ ಸದರಿ ಭೂಮಿಯನ್ನು ಮಲ್ಲಿಕಾರ್ಜುನಯ್ಯ ತಮ್ಮ ಸಹೋದರಿ ಹಾಗೂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಅರಿಶಿಣ ಕುಂಕುಮಕ್ಕೆ ದಾನ ಪತ್ರ ಮಾಡಿಕೊಟ್ಟಿದ್ದಾರೆ. ಅನಂತರ ಮುಡಾ ಸದರಿ ಭೂಮಿಗೆ ಅಕ್ರಮವಾಗಿ ಪ್ರವೇಶ ಮಾಡಿ ನಿವೇಶನಗಳನ್ನಾಗಿ ಮಾಡಿ ಹಂಚಿದೆ. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿಯವರು ನಮ್ಮ ಭೂಮಿಯನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ನಮ್ಮ ಜಮೀನನ್ನು ಬಿಟ್ಟು ಕೊಡಿ ಅಥವಾ ಸಮಾನಾಂತರವಾದ ಜಾಗ ಕೊಡಿ ಎಂದು ಮನವಿ ಸಲ್ಲಿಸಿದ್ದರು. ಬಿಜೆಪಿಯ ಅಧಿಕಾರ ಅವಧಿಯಲ್ಲಿ ಮುಡಾದ ಅಧ್ಯಕ್ಷರು ಹಾಗೂ ಇತರರು ಸಾಮಾನ್ಯ ಸಭೆ ನಡೆಸಿ ಪಾರ್ವತಿಯವರ ಅರ್ಜಿ ಪರಿಶೀಲನೆ ನಡೆಸಿದ್ದಾರೆ. ಶಾಸಕರೂ ಆಗಿದ್ದ ಜಿ.ಟಿ.ದೇವೇಗೌಡ 50:50ರ ಅನುಪಾತ ಅಡಿ ಅರ್ಜಿದಾರರಿಗೆ ಭೂಮಿ ನೀಡಬೇಕು. ಮರಿತಿಬ್ಬೇಗೌಡ ಮೂರು ಎಕರೆ 16 ಗುಂಟೆಯನ್ನು ಅರ್ಜಿದಾರರಿಗೆ ವಾಪಸ್ ನೀಡಬೇಕು ಎಂದು ಮುಡಾ ಸಭೆಯಲ್ಲಿ ಹೇಳಿದ್ದಾರೆ. ಎಲ್ಲವೂ ಕಾನೂನುಬದ್ಧವಾಗಿ ನಡೆದಿದೆ. ಈಗ ಬಿಜೆಪಿಯವರು ಈ ವಿಚಾರವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ. ಇಷ್ಟು ವರ್ಷ ಇಲ್ಲದ ತಕರಾರು ಈಗ ಏಕೆ ಎಂದು ಶಾಸಕ ನಾರಾಯಣಸ್ವಾಮಿ ಪ್ರಶ್ನಿಸಿದರು.

ಪ್ಯಾರಿಸ್ ಒಲಿಂಪಿಕ್ಸ್
ಪ್ರಣಯ ನಗರಿಯಲ್ಲಿ ಕ್ರೀಡೋತ್ಸವ

PARIS 2024

ಎರಡಂಕಿ ಪದಕ ಭಾರತೀಯರ ಗುರಿ

ಬಹುನಿರೀಕ್ಷಿತ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಇಂದು (ಜುಲೈ 26) ಅದ್ದೂರಿ ಚಾಲನೆ ಸಿಗಲಿದೆ. ಗುಂಪು ಹಂತದ ಪೂರ್ವಭಾವಿ ಪಂದ್ಯಗಳು ಈಗಾಗಲೇ ಪ್ರಾರಂಭವಾಗಿದ್ದು, ಭಾರತದ ಪುರುಷ ಮತ್ತು ಮಹಿಳೆಯರ ಬಿಲ್ಲುಗಾರಿಕೆ ತಂಡ ಕ್ವಾರ್ಟರ್ ಫೈನಲ್‌ಗೆ ತಲುಪಿದೆ. ದೇಶದ 117 ಕ್ರೀಡಾಪಟುಗಳು ಮತ್ತು 140 ಸಹಾಯಕ ಸಿಬ್ಬಂದಿ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಭಾರತ ತಂಡ ಈ ವರ್ಷ ಹಿಂದೆಂದಿಗಿಂತಲೂ ಹೆಚ್ಚಿನ ಪದಕ ಗೆಲ್ಲುವ ವಿಶ್ವಾಸದೊಂದಿಗೆ ಪ್ಯಾರಿಸ್ ಅಭಿಯಾನ ಆರಂಭಿಸಿದೆ. ನೀರಜ್ ಚೋಪ್ರಾ ಸೇರಿದಂತೆ ಕಳೆದ ವರ್ಷ ಪದಕ ಗೆದ್ದ ಐವರು ಈ ಬಾರಿ ಮತ್ತೆ ಸ್ಥಾನ ಪಡೆದಿದ್ದಾರೆ. ಅಥ್ಲೆಟಿಕ್ಸ್ ತಂಡದಲ್ಲಿ ಈ ಬಾರಿ 11 ಮಹಿಳೆಯರು ಮತ್ತು 18 ಪುರುಷರ ಸಹಿತ 29 ಮಂದಿ ದೇಶವನ್ನು ಪ್ರತಿನಿಧಿಸುತ್ತಿದ್ದಾರೆ. ಭಾರತದ ಪಾಲಿಗೆ ಒಲಿಂಪಿಕ್ಸ್ ಕ್ರೀಡಾಕೂಟ ಇನ್ನೂ ದೂರದ ಬೆಟ್ಟ. ವಿಶೇಷ ಎಂದರೆ 124 ವರ್ಷಗಳ ಹಿಂದೆ ಭಾರತ ಪ್ಯಾರಿಸ್ ನಿಂದಲೇ ತನ್ನ ಒಲಿಂಪಿಕ್ಸ್ ಅಭಿಯಾನ ಆರಂಭಿಸಿತ್ತು. 1900ರ ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಮೊದಲ ಬಾರಿಗೆ ಭಾರತವನ್ನು ಪ್ರತಿನಿಧಿಸಿದ ಏಕೈಕ ಕ್ರೀಡಾಪಟು ನಾರ್ಮನ್ ಪ್ರಿಚರ್ಡ್ ಅಥ್ಲೆಟಿಕ್ಸ್ ನಲ್ಲಿ ಎರಡು ಬೆಳ್ಳಿಯ ಪದಕಗಳನ್ನು ಜಯಿಸಿದ್ದರು. ಆದರೆ ಅಂದಿನಿಂದ ಇದುವರೆಗೆ ನಾವು ಗೆದ್ದ ಚಿನ್ನದ ಪದಕಗಳ ಸಂಖ್ಯೆ ಕೇವಲ 10. ಒಟ್ಟು ಪದಕಗಳ ಸಂಖ್ಯೆ ಕೇವಲ 35. ಹಾಕಿಯಲ್ಲಿ 1928ರಿಂದ 1956 ರವರೆಗೆ ಸತತ ಆರು ಚಿನ್ನದ ಪದಕಗಳ ಸಹಿತ ಹನ್ನೆರಡು ಒಲಿಂಪಿಕ್ಸ್‌ನಲ್ಲಿ ಹನ್ನೊಂದು ಬಾರಿ ಪದಕಗಳನ್ನು ಗೆದ್ದಿರುವುದಷ್ಟೇ ನಮ್ಮ ಹೆಗ್ಗಳಿಕೆ. ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತ ಒಂದೂ ಪದಕ ಗೆಲ್ಲದೆ ವಾಪಸ್ಸಾದ ಉದಾಹರಣೆಗಳಿವೆ. ಕಳೆದ ಬಾರಿಯ ಟೋಕಿಯೋ ಒಲಿಂಪಿಕ್ಸ್‌ನಲ್ಲಿ 119 ಭಾರತೀಯ ಅಥ್ಲೀಟ್‌ಗಳು ಭಾಗವಹಿಸಿ 1 ಚಿನ್ನ ಸಹಿತ ಏಳು ಪದಕ ಗೆದ್ದು 47ನೇ ಸ್ಥಾನ ಪಡೆದಿದ್ದು ಇದುವರೆಗಿನ ಉತ್ತಮ ನಿರ್ವಹಣೆ. 3 ದಶಕಗಳ ಹಿಂದಿನವರೆಗೂ ಒಲಿಂಪಿಕ್ಸ್‌ನಲ್ಲಿ ಐರೋಪ್ಯ ರಾಷ್ಟ್ರ ಗಳದ್ದೇ ಪ್ರಾಬಲ್ಯವಾಗಿತ್ತು. ಆದರೆ ಈಗ ಚೀನಾ, ದ.ಕೊರಿಯಾ, ಜಪಾನ್ ಮುಂತಾದ ರಾಷ್ಟ್ರಗಳು ಯೂರೋಪ್ ಪ್ರಾಬಲ್ಯಕ್ಕೆ ಸಡ್ಡು ಹೊಡೆದು ಪದಕ ಕೊಳ್ಳೆ ಹೊಡೆಯುತ್ತಿವೆ. ವಿಶ್ವದ ಮೂರನೇ ಅತಿ ದೊಡ್ಡ ಆರ್ಥಿಕ ರಾಷ್ಟ್ರವಾಗಲು ಹೊರಟಿರುವ ಭಾರತವೂ ಈ ದಿಶೆಯಲ್ಲಿ ಹೆಚ್ಚಿನ ಸಾಧನೆ ಮಾಡಲು ಹೊರಟಿದೆ. ಹಿಂದಿನ ದಿನಗಳಿಗೆ ಹೋಲಿಸಿದರೆ ಸರಕಾರ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ. ವಿಶ್ವದರ್ಜೆಯ ತರಬೇತಿಯೊಂದಿಗೆ ಭಾರತದ ಕ್ರೀಡಾಪಟುಗಳು ಕೂಡ ಈಗ ಚಿನ್ನದ ಪದಕಕ್ಕೆ ಕೊರಳೊಡ್ಡಲು ಸಜ್ಜಾಗಿದ್ದಾರೆ. ಈ ಬಾರಿ ಎರಡಂಕಿಯ ಪದಕ ಗೆಲ್ಲುವುದು ಭಾರತೀಯರ ಕನಸಾಗಿದೆ.

ಕರ್ನಾಟಕದ ನವ ಕಲಿಗಳು

ಪ್ಯಾರಿಸ್ ಕರ್ನಾಟಕದ ನವಕಲಿಗಳು ರಿಸ್ ಕ್ರೀಡಾಕೂಟದಲ್ಲಿ ರಾಜ್ಯದ ಪರವಾಗಿ ಮಹಿಳಾ ಡಬಲ್ಸ್ ಬ್ಯಾಡ್ಮಿಂಟನ್‌ನಲ್ಲಿ ಕುಮಾರಿ ಅಶ್ವಿನಿ ಪೊನ್ನಪ್ಪ, ಮಹಿಳಾ ಗಾಲ್ಫ್‌ನಲ್ಲಿ ಕುಮಾರಿ ಅದಿತಿ ಅಶೋಕ್, ಮಹಿಳಾ ಫ್ರೀಸ್ಟೈಲ್ ಈಜು ಸ್ಪರ್ಧೆಯಲ್ಲಿ

ಕುಮಾರಿ ಧಿನಿಧಿ ದೇಸಿಂಗೂ , ಮಿಕ್ಸೆಡ್ ರಿಲೇ ಓಟದಲ್ಲಿ ಎಂ.ಆರ್.ಪೂವಮ್ಮ, ಟೇಬಲ್ ಟೆನಿಸ್‌ನಲ್ಲಿ ಕುಮಾರಿ ಅರ್ಚನಾ ಕಾಮತ್, ಪುರುಷರ ಈಜು ಸ್ಪರ್ಧೆಯಲ್ಲಿ ಶ್ರೀಹರಿ ನಟರಾಜ್, ಪುರುಷರ ಟೆನ್ನಿಸ್ ಡಬಲ್ಸ್ ನಲ್ಲಿ ರೋಹನ್ ಬೋಪಣ್ಣ, ಪುರುಷರ 71 ಕೆಜಿ ಬಾಕ್ಸಿಂಗ್ ನಲ್ಲಿ ನಿಶಾಂತ್ ದೇವ್, ಮಿಕ್ಸೆಡ್ ರಿಲೇ ಓಟದಲ್ಲಿ ಮಿಜೋ ಚಾಕೋ ಅವರು ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ. ರಾಜ್ಯದ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕ್ರೀಡಾಪಟುಗಳಿಗೆ ಐದು ಲಕ್ಷ ರೂ. ಬಹುಮಾನ ಪ್ರಕಟಿಸಿದ್ದಾರೆ.

ಇತಿಹಾಸ

ಮೊದಲ ಒಲಿಂಪಿಕ್ ಕ್ರೀಡಾಕೂಟ ಗ್ರೀಸ್‌ನ ಒಲಿಂಪಿಯ ನಗರದಲ್ಲಿ ಕ್ರಿಸ್ತಪೂರ್ವ 8ನೇ ಶತಮಾನದಲ್ಲಿ ನಡೆಯಿತು. ಕ್ರೀಡಾಕೂಟವು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ 12 ಶತಮಾನಗಳ (1,200 ವರ್ಷ) ಕಾಲ ನಡೆಯಿತು. ಆದರೆ, ಕ್ರಿಸ್ತಶಕ 4ನೇ ಶತಮಾನದಲ್ಲಿ, ಬಹುದೇವತಾರಾಧನೆಯ ಎಲ್ಲಾ ಹಬ್ಬಗಳನ್ನು ಗ್ರೀಸ್ ಚಕ್ರವರ್ತಿ ಪ್ರಥಮ ತಿಯೋಡೋಸಿಯಸ್ ನಿಷೇಧಿಸಿದನು. ಹಾಗಾಗಿ, ಒಲಿಂಪಿಕ್ಸ್ ನಿಂತು ಹೋಗಿತ್ತು. ಆದರೆ 1,500 ವರ್ಷಗಳ ಬಳಿಕ, ಒಲಿಂಪಿಕ್ ಪರಂಪರೆಗೆ ಮರುಚಾಲನೆ ನೀಡಲಾಯಿತು. ಮೊದಲ



ಪದಕಗಳ ನಡೆ

... ನೀಡುವ ಸಂಪ್ರದಾಯ ಹುಟ್ಟಿಕೊಂಡಿತು. ಪ್ರತಿ ಪದಕ ಕನಿಷ್ಠ 7.7 ಎಂ.ಎಂ. ದಪ್ಪ ಮತ್ತು 85 ಎಂ.ಎಂ. ಸುತ್ತಳತೆ ಹೊಂದಿರ ಬೇಕೆಂದು ಐಒಸಿ ನಿಯಮವಾಗಿದೆ. ಆದರೆ ವರದಿಗಳ ಪ್ರಕಾರ ಒಲಿಂಪಿಕ್ಸ್‌ನಲ್ಲಿ ನೀಡುವ ಚಿನ್ನದ ಪದಕಗಳು ಸಂಪೂರ್ಣ ಚಿನ್ನದಿಂದ ಮಾಡಲಾಗಿರುವುದಿಲ್ಲ. ಬದಲಾಗಿ ಅದರಲ್ಲಿ ಬೆಳ್ಳಿಯೂ ಸೇರಿದೆ.

ಜಗತ್ತಿನೆಲ್ಲೆಡೆ ಗರಿಗೆದರಿದ ಕ್ರೀಡಾ ಸಂಭ್ರಮ



ಬಹುನಿರೀಕ್ಷಿತ ಪ್ಯಾರಿಸ್ ಒಲಿಂಪಿಕ್ಸ್ 2024ಗೆ ಇಂದು ಅದ್ದೂರಿ ಚಾಲನೆ ಸಿಗಲಿದೆ. ಸೈನಿ ನದಿಯ ದಡದಲ್ಲಿ ಕ್ರೀಡಾ ಮಹೋತ್ಸವಕ್ಕೆ ಕೋಟ್ಯಂತರ ಜನರ ಸಮ್ಮುಖದಲ್ಲಿ ಚಾಲನೆ ಸಿಗಲಿದೆ. ಶುಕ್ರವಾರ ಸಂಜೆ ಸಾವಿರಾರು ಕ್ರೀಡಾಪಟುಗಳು ಗಣ್ಯರು 6 ಕಿ.ಮೀಟರ್ ವರೆಗೆ ದೋಣಿ ಪರೇಡ್ ನಡೆಸಲಿದ್ದು ಒಲಿಂಪಿಕ್ಸ್ ಇತಿಹಾಸದಲ್ಲೇ ಇದು ಹೊಸ ದಾಖಲೆಯಾಗಲಿದೆ. ಈ ಕಾರ್ಯಕ್ರಮವನ್ನು 'ಡೇರಿಂಗ್ ಯಂಡ್ ಜಾಯ್ ಫುಲ್' ಎಂದು ಆಯೋಜಕರು ವರ್ಣಿಸಿದ್ದಾರೆ.

ಪ್ಯಾರಿಸ್‌ನ ಎಲ್ಲಾ ನದಿ, ಸೇತುವೆ, ಉದ್ಯಾನವನಗಳು ಒಲಿಂಪಿಕ್ಸ್ ಸಂಭ್ರಮದ ಅಂಗ ವಾಗಿ ಮ್ಯೂಸಿಕ್, ಲೈಟಿಂಗ್ಸ್ ಗಳಿಂದ ಶೃಂಗಾರಗೊಂಡಿದೆ. ಪ್ರಣಯ ನಗರಿಯಲ್ಲಿ ಸಂಭ್ರಮ ಹಾಗೂ ಕ್ರೀಡೆಯ ಫ್ಯೂಷನ್ ಕಂಡುಬರಲಿದೆ. ಭಾರತ್ ಹೌಸ್ ಈ ಬಾರಿ ಹೊಸ ಆಕರ್ಷಣೆ ಯಾಗಲಿದೆ.

ಒಟ್ಟೂ 3 ಲಕ್ಷ ವೀಕ್ಷಕರನ್ನು ನಿರೀಕ್ಷಿಸಲಾಗಿದ್ದು, ಕಾರ್ಯಕ್ರಮ ವೀಕ್ಷಣೆಗೆ 80 ದೊಡ್ಡ ಸ್ಕ್ರೀನ್‌ಗಳನ್ನು ಅಳವಡಿಸಲಾಗಿದೆ. ಭದ್ರತೆ ದೃಷ್ಟಿಯಿಂದ ಸೈನಿ ನದಿ ಪ್ರದೇಶದಲ್ಲಿ ವಾಹನ ಓಡಾಟಗಳಿಗೆ ನಿರ್ಬಂಧ ಹೇರಲಾಗಿದ್ದು, ವಿಮಾನ ಹಾರಾಟವನ್ನೂ ಬಂದ್ ಮಾಡಲಾಗಿದೆ. ಒಟ್ಟೂ 45 ಸಾವಿರ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದ್ದು 35 ಸ್ಥಳಗಳಲ್ಲಿ 32 ವಿವಿಧ ಕ್ರೀಡೆಗಳು ನಡೆಯಲಿವೆ. 3,50, 000 ಗಂಟೆಗಳ ಕಾಲ ಟೆಲಿವಿಶನ್ ಪ್ರಸಾರ ನಡೆಯಲಿದೆ. ಜುಲೈ 27ರಿಂದ ಪದಕ ಬೇಟೆ ಆರಂಭವಾಗಲಿದೆ.



ಹಾಕಿ

1928ರ ಆಮ್ಸ್ಟರ್ಡ್ಯಾಮ್ ನಡೆದ ಒಲಿಂಪಿಕ್ಸ್‌ನಲ್ಲಿ ಹಾಕಿಯಲ್ಲಿ ಮೊದಲ ಚಿನ್ನದ ಪದಕ ಗೆದ್ದ ಭಾರತ ಬಳಿಕ 6 ಬಾರಿ ಸತತವಾಗಿ ಚಿನ್ನದ ಪದಕ ತನ್ನದಾಗಿಸಿಕೊಂಡಿದೆ. ...

... ಸಾಗರ್ ಪ್ರಸಾದ್, ಅಭಿಷೇಕ್, ಸುಖ್‌ಜೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ್, ಮನ್‌ದೀಪ್ ಸಿಂಗ್, ಗುರ್ಜಂತ್ ಸಿಂಗ್.

(ರಿಸರ್ವ್: ನೀಲಕಾಂತ್ ಶರ್ಮಾ, ಜುಗ್‌ರಾಜ್ ಸಿಂಗ್, ಕೃಷ್ಣ ಬಹದ್ದೂರ್ ಪಾಠಕ್)

ಟೇಬಲ್ ಟೆನ್ನಿಸ್

ಇದೇ ಮೊದಲ ಬಾರಿಗೆ ... ಮಹಿಳಾ ಟೇಬಲ್ ಟೆನ್ನಿಸ್ ... ಪಡೆದುಕೊಂಡಿದೆ. ...

ಶೂಟಿಂಗ್

... 25ಮೀ ರ್‍ಯಾಪಿಡ್ ಫೈರ್ ಪಿಸ್ತೂಲ್ : (ಪುರುಷ) ಅನಿಶ್ ಭನ್ವಾಲ್, ವಿಜಯ್‌ವೀರ್ ಸಿಧು, (ಮಹಿಳೆ) ಇಶಾ ಸಿಂಗ್ ಸ್ಕೀಟ್ ಮಿಶ್ರ ತಂಡ :(ಮಹಿಳೆ) ಮಹೇಶ್ವರಿ ಚೌಹಾಣ್, (ಪುರುಷ) ಅನಂತ ಜೀತ್ ಸಿಂಗ್ ನರುಕಾ

ಮಹಿಳಾ ಸ್ಕೀಟ್ : ರೈಜಾ ದಿಲ್ಲೋನ್

ಬ್ಯಾಡ್ಮಿಂಟನ್

... ಲಕ್ಷ್ಯ ಸೇನ್,

ಡಬಲ್ಸ್ ಮಹಿಳಾ ತಂಡ: ಅಶ್ವಿನಿ ಪೊನ್ನಪ್ಪ, ತನಿಶಾ ಕ್ರಾಸ್ಟೊ

ಡಬಲ್ಸ್ ಪುರುಷ ತಂಡ : ಸಾತ್ವಿಕ್‌ಸೈರಾಜ್ ರಂಕಿರೆಡ್ಡಿ, ಚಿರಾಗ್ ಶೆಟ್ಟಿ

ಆರ್ಚರಿ

10 ಆಟಗಾರರ ಮೇಲೆ ಸ್ವರ್ಣ ಕನಸು

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪ್ರತಿಯೊಬ್ಬ ಭಾರತೀಯ ಕ್ರೀಡಾಪಟುಗಳು ನಿರೀಕ್ಷೆಯೊಂದಿಗೆ ತಲುಪಿದ್ದಾರೆ. 117 ಕ್ರೀಡಪಟುಗಳು ಆಯ್ಕೆಯಾಗಿದ್ದು, ಎಲ್ಲರ ಮೇಲೂ ನಿರೀಕ್ಷೆಗಳ ಭಾರ ಇರಲಿದೆ. ಒಲಿಂಪಿಕ್ಸ್‌ನಲ್ಲಿ ಭಾರತ ಸುದೀರ್ಘ ಇತಿಹಾಸ ಹೊಂದಿದೆ. ಕಳೆದ ಬಾರಿ 1 ಚಿನ್ನ ಸಹಿತ 7 ಪದಕ ಜಯಿಸಿದ್ದ ಭಾರತ, ಈ ಬಾರಿ ಅದನ್ನು ಎರಡಂಕಿ ದಾಟಿಸಲು ಸಜ್ಜಾಗಿದೆ. ಈ ಪೈಕಿ ಭಾರತದ 10 ಕ್ರೀಡಾಪಟುಗಳು ಪದಕದ ನಿರೀಕ್ಷೆಯನ್ನು ಹೆಚ್ಚಿಸಿದ್ದಾರೆ.

ವಿನೇಶ್ ಫೋಗಟ್

3 ಬಾರಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಮೊದಲ ಭಾರತೀಯ ಮಹಿಳಾ ಕುಸ್ತಿಪಟು ವಿನೇಶ್ ಫೋಗಟ್ ಅವರು ಇನ್ನೂ ಪದಕ ಗೆದ್ದಿಲ್ಲ. 50 ಕೆಜಿ ವಿಭಾಗದಲ್ಲಿ ಅಪಾರ ಅನುಭವ ಹೊಂದಿದ್ದರೂ ಪದಕ ಗೆಲ್ಲುವ ಮೂಲಕ ದೇಶದ ಕೀರ್ತಿ ಹೆಚ್ಚಿಸಲು ಮುಂದಾಗಿದ್ದಾರೆ.

ಮೀರಾಬಾಯಿ ಚಾನು

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಂಡಿದ್ದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು, ಈ ಬಾರಿ ಚಿನ್ನ ಗೆಲ್ಲಲು ಸಜ್ಜಾಗಿದ್ದಾರೆ. 2020ರಲ್ಲಿ ಮಹಿಳೆಯರ 49 ಕೆಜಿ ವಿಭಾಗದಲ್ಲಿ ಒಲಿಂಪಿಕ್ ಬೆಳ್ಳಿ ಪದಕ ಗೆದ್ದಿದ್ದರು. ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ಭಾರತದ ಮೊದಲ ವೇಟ್‌ಲಿಫ್ಟರ್ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದರು. ಹೀಗಾಗಿ, ಅವರು ಈ ಸಲ ಚಿನ್ನದ ಪದಕ ಗೆಲ್ಲಲಿದ್ದಾರೆ ಎಂಬ ಭರವಸೆ ಎಲ್ಲರಲ್ಲೂ ಮೂಡಿದೆ.

ಪುರುಷರ ಹಾಕಿ ತಂಡ

ಕಳೆದ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿದ್ದ ಭಾರತದ ಹಾಕಿ ತಂಡ ಈ ಬಾರಿ 8ನೇ ಚಿನ್ನ ಗೆಲ್ಲಲು ಸಜ್ಜಾಗಿದೆ. 1928, 1932, 1936 ಹಾಗೂ 1948, 1952, 1956, 1980ರಲ್ಲಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದ ಭಾರತದ ರಾಷ್ಟ್ರೀಯ ಕ್ರೀಡೆ, ಪ್ಯಾರಿಸ್‌ನಲ್ಲಿ ಪದಕದ ಬೇಟೆಯಾಡಲು ಭರ್ಜರಿ ಸಿದ್ಧತೆ ನಡೆಸಿದೆ. ಅಲ್ಲದೆ, ಇತ್ತೀಚಿನ ಟೂರ್ನಿಗಳಲ್ಲಿ ಉತ್ತಮ ಲಯ ಹೊಂದಿರುವ ಪುರುಷರ ಹಾಕಿ ತಂಡವು, ಪದಕ ಗೆಲ್ಲುವ ಫೇವರಿಟ್ ತಂಡಗಳಲ್ಲಿ ಒಂದಾಗಿದೆ.

ಲವ್ಲಿನಾ ಬೊರ್ಗೊಹೈನ್

ಭಾರತೀಯ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬಾಕ್ಸಿಂಗ್ 75 ಕೆಜಿ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದರು. ಹಾಗಾಗಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಪದಕ ಗೆಲ್ಲುವ ಭರವಸೆ ಹುಟ್ಟು ಹಾಕಿದ್ದಾರೆ. ಅವರ ಅಟ್ಯಾಕಿಂಗ್, ಆಟದ ತಂತ್ರಗಳು, ಎದುರಾಳಿ ತಂತ್ರಗಳಿಗೆ ಆಟವಾಡುವ ಲವ್ಲಿನಾ ಚಿನ್ನ ಗೆಲ್ಲುವ ಗುರಿ ಹೊಂದಿದ್ದು, ಐತಿಹಾಸಿಕ ಪುಟಗಳಲ್ಲಿ ದಾಖಲೆ ಬರೆಯಲು ಸಜ್ಜಾಗಿದ್ದಾರೆ.

ನೀರಜ್ ಚೋಪ್ರಾ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ನೀರಜ್ ಚೋಪ್ರಾ, ಈ ಬಾರಿಯೂ ಪದಕದ ಭರವಸೆ ಹುಟ್ಟು ಹಾಕಿದ್ದಾರೆ. ಜಾವೆಲಿನ್ ಥ್ರೋನಲ್ಲಿ ಕಳೆದ 2 ವರ್ಷಗಳಲ್ಲಿ ಹಲವು ಪದಕಗಳನ್ನು ಮುಡಿಗೇರಿಸಿಕೊಂಡಿರುವ ಅವರು, ಒಲಿಂಪಿಕ್ಸ್‌ಗೂ ಮುನ್ನ ಉತ್ತಮ ಲಯದಲ್ಲಿದ್ದರು. ಇತ್ತೀಚೆಗಷ್ಟೆ ಪಾವೊ ನುರ್ಮಿ ಗೇಮ್ಸ್‌ನಲ್ಲಿ ಸ್ವರ್ಣಕ್ಕೆ ಕೊರೊಳೊಡ್ಡಿದ್ದರು. ಕಳೆದ ಬಾರಿ 87.58 ಮೀಟರ್ ಜಾವೆಲಿನ್ ಎಸೆದು ಚಿನ್ನ ಗೆದ್ದಿದ್ದರು.

ಪಿ.ವಿ. ಸಿಂಧು

ಷಟ್ಲರ್ ಪಿವಿ ಸಿಂಧು ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದುಕೊಂಡಿದ್ದಾರೆ. 2016ರಲ್ಲಿ ನಡೆದ ರಿಯೋ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಹಾಗೂ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಸಿಂಧು, ಪ್ಯಾರಿಸ್‌ನಲ್ಲಿ ಚಿನ್ನದ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ ಅವರ ಇತ್ತೀಚೆಗೆ ನೀರಸ ಪ್ರದರ್ಶನ ... ಆದರೆ, ಸಿಂಧು, ಒಲಿಂಪಿಕ್ಸ್ ... ಅಭ್ಯಾಸ ನಡೆಸಿದ್ದು, ಪದಕದ ... ನಿರೀಕ್ಷೆಯಲ್ಲಿದ್ದಾರೆ.

ಅದಿತಿ ಅಶೋಕ್

ಭಾರತದ ಗಾಲ್ಫ್ ಆಟಗಾರ್ತಿ ಬೆಂಗಳೂರಿನ ಅಧಿತಿ ಅಶೋಕ್ ಅವರು ಕಳೆದ ಬಾರಿ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪದಕದ ರೇಸ್‌ನಲ್ಲಿದ್ದ ಅದಿತಿ, ಕೊನೆಗೆ ನಾಲ್ಕನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು. ಈ ಬಾರಿ ಅಗ್ರ-3ರಲ್ಲಿ ಸ್ಥಾನ ಪಡೆಯಲು ಭಾರಿ ಕಸರತ್ತು ನಡೆಸಿದ್ದಾರೆ.



ಸಿಫ್ಟ್ ಕೌರ್ ಶರ್ಮ

ಮಹಿಳೆಯರ 50 ಮೀ ರೈಫಲ್‌ನಲ್ಲಿ ವಿಶ್ವ ದಾಖಲೆ ಹೊಂದಿರುವ ಅವರು, ಪ್ಯಾರಿಸ್ 2024 ಒಲಿಂಪಿಕ್ಸ್‌ನಲ್ಲಿ ಮಹಿಳೆಯರ 50 ಮೀಟರ್ ರೈಫಲ್ 3 ಸ್ಥಾನಗಳ ಸ್ಪರ್ಧೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಏಷ್ಯನ್ ಗೇಮ್ಸ್‌ನಲ್ಲಿ ಶರ್ಮ ಚಿನ್ನ ಗೆದ್ದುಕೊಂಡಿದ್ದರು. ಹಾಗಾಗಿ ಅವರ ಮೇಲೆ ನಿರೀಕ್ಷೆ ಮೂಡಿದೆ.

ನಿಕತ್ ಜರೀನ್

ಟರ್ಕಿಯಲ್ಲಿ ನಡೆದ 2022 ಐಬಿಎ ಮಹಿಳಾ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕವನ್ನು ಗೆಲ್ಲುವ ಮೂಲಕ ಅವರು ವಿಶ್ವದ ಅತ್ಯುತ್ತಮ ಆಟಗಾರ ಎಂದು ಸಾಬೀತು ಪಡಿಸಿದ್ದರು. ಹೀಗಾಗಿ ಪ್ಯಾರಿಸ್ ಒಲಿಂಪಿಕ್ ನಲ್ಲೂ ಪದಕದ ನಿರೀಕ್ಷೆ ಹುಟ್ಟು ಹಾಕಿದ್ದಾರೆ.

ಸಾತ್ವಿಕ್ - ಚಿರಾಗ್

ವಿಶ್ವದ ನಂಬರ್ 1 ಬ್ಯಾಡ್ಮಿಂಟನ್ ಜೋಡಿಯಾದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ, ಚೊಚ್ಚಲ ಒಲಿಂಪಿಕ್ ಚಿನ್ನದ ಪದಕದ ಮೇಲೆ ಕಣ್ಣಿಟ್ಟಿದೆ. ಟೋಕಿಯೊದಲ್ಲಿ ನಿರಾಸೆ ಅನುಭವಿಸಿದ್ದ ಈ ಜೋಡಿ, ಈ ಸಲ ಪದಕ ಗೆದ್ದೇ ಗೆಲ್ಲುವ ಛಲ ಹೊಂದಿದೆ. ಇತ್ತೀಚೆಗೆ ನಡೆದ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವ ಇಬ್ಬರೂ ಹಲವು ಟ್ರೋಫಿ ಗೆದ್ದಿದ್ದಾರೆ.

ಇಷ್ಟೆಲ್ಲ ಇದೆ..

ದೋಣಿ ಪರೇಡ್

2024 ಒಲಿಂಪಿಕ್ಸ್ ಉದ್ಘಾಟನಾ ಕಾರ್ಯಕ್ರಮ ಮೊದಲ ಬಾರಿಗೆ ಸ್ಟೇಡಿಯಂನಿಂದ ಹೊರಗೆ ಪ್ಯಾರಿಸ್‌ನ ...

ಮೊದಲ ಬ್ರೇಕಿಂಗ್

68,477 ಕೋಟಿ ರೂ.

ಕ್ರೀಡಾಗ್ರಾಮ

ಇಂಡಿಯಾ ಹೌಸ್

ಸಸ್ಯಾಹಾರವೇ ಬೆಸ್ಟ್

... ಪ್ಯಾರಿಸ್ ಒಲಿಂಪಿಕ್ಸ್‌ನ ಆಹಾರ ಪಟ್ಟಿಯಲ್ಲಿ ಈ ಬಾರಿ ಸಾಕಷ್ಟು ಸಸ್ಯಾಹಾರಿ ಆಹಾರಗಳನ್ನು ಸೇರಿಸಲಾಗಿದೆ. ಸುಮಾರು ಶೇ.60 ರಷ್ಟು ಆಹಾರ ಸಸ್ಯಾಹಾರಿಯಾಗಿದ್ದು ಹೆಚ್ಚು ಪೌಷ್ಟಿಕಾಂಶಗಳುಳ್ಳ ತರಕಾರಿ, ಸೊಪ್ಪುಗಳನ್ನು ಬಳಸಿ ಅಡುಗೆ ತಯಾರಿಸಲಾಗಿದೆ. ವೆಜ್ಜಿ ಮೌಸಕ್ಕಾ, ವೆಜ್ಜಿ ಬೌರ್‌ಗುಯ್‌ಗ್ನಾನ್ , ಧಾನ್ಯಗಳು ಆಹಾರ ಪಟ್ಟಿಯಲ್ಲಿವೆ.

ಮೆಡಲ್ ಐಫಲ್ ಟವರ್

32 ಕ್ರೀಡೆಗಳು
ಪ್ಯಾರಿಸ್ 2024ರ ಒಲಿಂಪಿಕ್ ಕ್ರೀಡಾಕೂಟದ ಸ್ಪರ್ಧೆಯ ಪಟ್ಟಿ

- ಅಕ್ವಾಟಿಕ್ಸ್
- ಈಜು
- ಮ್ಯಾರಥಾನ್
- ಈಜು
- ಡೈವಿಂಗ್
- ವಾಟರ್ ಪೋಲೊ
- ಆರ್ಟಿಸ್ಟಿಕ್ ಈಜು
- ಬಿಲ್ಲುಗಾರಿಕೆ
- ಅಥ್ಲೆಟಿಕ್ಸ್
- ಬ್ಯಾಡ್ಮಿಂಟನ್
- ಬ್ಯಾಸ್ಕೆಟ್‌ಬಾಲ್
- ಬಾಕ್ಸಿಂಗ್
- ಬ್ರೇಕಿಂಗ್
- ಕ್ಯಾನೊ
- ಸೈಕ್ಲಿಂಗ್
- ಈಕ್ವೆಸ್ಟ್ರಿಯನ್
- ಫೆನ್ಸಿಂಗ್
- ಫುಟ್‌ಬಾಲ್
- ಗಾಲ್ಫ್
- ಜಿಮ್ನಾಸ್ಟಿಕ್ಸ್
- ಹ್ಯಾಂಡ್‌ಬಾಲ್
- ಹಾಕಿ
- ಜೂಡೋ
- ರಗ್ಬಿ
- ಶೂಟಿಂಗ್
- ಸ್ಕೇಟ್‌ಬೋರ್ಡಿಂಗ್
- ಟೇಬಲ್ ಟೆನಿಸ್
- ಟೇಕ್ವಾಂಡೋ
- ಟೆನಿಸ್
- ಟ್ರಯಥ್ಲಾನ್
- ವಾಲಿಬಾಲ್
- ವೇಟ್‌ಲಿಫ್ಟಿಂಗ್



ವಾಟ್ಸ್ ಚಾನೆಲ್

ಆರ್ಚರಿ: ಕ್ವಾರ್ಟರ್ ಫೈನಲ್‌ಗೆ ಭಾರತ

ಪ್ಯಾರಿಸ್: ಇಲ್ಲಿ ಚಾಲನೆಗೊಂಡ ಒಲಿಂಪಿಕ್ಸ್ ಕ್ರೀಡಾ... ರೈ, ಪ್ರವೀಣ್ ಜಾಧವ್ ಹಾಗೂ ಯುವ ಬಿಗ್ಗಾರ ಧಿ... ಅವರನ್ನೊಳಗೊಂಡ ಭಾರತದ ಪುರುಷರ ಆರ್ಚರಿ ...

... ದೇವರ 57((10, 10, 10, 10, 10, 9, 8) ಅಂಕದೊಂದಿಗೆ 11ನೇ ಸ್ಥಾನ ಗಳಿಸಿದರೆ, ಅನುಭವಿ ಪ್ರವೀಣ್ ಜಾಧವ್ 55(10, 10, 9, 9, 8) ಹಾಗೂ ತರುಣ್ ದೀಪ್ ರೈ 55(10, 10, 10, 9, 9, 8) ಅಂಕದೊಂದಿಗೆ ಕ್ರಮವಾಗಿ 30 ಮತ್ತು 33ನೇ ಸ್ಥಾನ ಪಡೆದರು. ಎಲ್ಲ ಸೆಟ್‌ಗಳಲ್ಲೂ ಭರ್ಜರಿ ಪ್ರದರ್ಶತ ತೋರಿದ ಮೂಲಕ ಇದೀಗ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿವೆ.

1896ರಲ್ಲೇ ಪ್ರಾರಂಭವಾದ ಒಲಿಂಪಿಕ್ಸ್‌ನಲ್ಲಿ ಸಾವಿರಾರು ಆಟಗಾರರು ಪದಕಗಳನ್ನು ಗೆದ್ದಿದ್ದಾರೆ. ಆದರೆ ಒಲಿಂಪಿಕ್ಸ್‌ನಲ್ಲಿ ಅತಿಹೆಚ್ಚು ಪದಕಗಳನ್ನು ಗೆದ್ದ ಪುರುಷ- ಮಹಿಳಾ ಕ್ರೀಡಾಪಟುಗಳು ಯಾರು ಎಂಬ ಪ್ರಶ್ನೆಗೆ ಉತ್ತರ ಇಲ್ಲಿದೆ. ಕ್ರೀಡಾಕೂಟದ ಆರಂಭದಲ್ಲಿ ಪದಕಗಳು ಒಂದು ಒಲಿಂಪಿ ಯಾಡ್‌ನಿಂದ ಇನ್ನೊಂದಕ್ಕೆ ಬದಲಾಗುತ್ತಿವೆ. 1896 ರಲ್ಲಿ ಅಥೆನ್ಸ್‌ನಲ್ಲಿ ನಡೆದ ಮೊದಲ ಆಧುನಿಕ ಕ್ರೀಡಾಕೂಟದಲ್ಲಿ ವಿಜೇತರಿಗೆ ಆಲಿವ್ ಮಾಲೆ ಮತ್ತು ಬೆಳ್ಳಿ ಪದಕವನ್ನು ನೀಡ ಲಾಯಿತು. ಆದರೆ ರನ್ನರ್- ಅಪ್ ಕಂಚಿನ ಪದಕ ಮತ್ತು ಲಾರೆಲ್ ಮಾಲೆಯನ್ನು ಪಡೆದರು.

ಗೋಲ್ಡನ್ ಬಾಯ್ಸ್	ಗೋಲ್ಡನ್ ಗರ್ಲ್ಸ್
2004-2016 ಫೆಲ್ಪ್ಸ್, ಮೈಕೆಲ್ ಯುಎಸ್‌ಎ ಅಕ್ವಾಟಿಕ್ಸ್ 28 ಪದಕ	1956-1964 ಲ್ಯಾಟಿನಿನಾ, ಲಾರಿಸಾ ಯುಎಸ್‌ಎ ಜಿಮ್ನಾಸ್ಟಿಕ್ 18 ಪದಕ
1972-1980 ಆಂಡ್ರಿಯಾನೋವ್, ನಿಕೊಲಾಯ್ ರಷ್ಯಾ,ಜಿಮ್ನಾಸ್ಟಿಕ್ಸ್ 15 ಪದಕ	1992-2020 ವರ್ತ್, ಇಸಾಬೆಲ್ಲೆ ಜರ್ಮನಿ ಈಕ್ವೆಸ್ಟ್ರಿಯನ್ 12 ಪದಕ
1956-1964 ಶಖ್ಲಿನ್, ಬೋರಿಸ್ ರಷ್ಯಾ ಜಿಮ್ನಾಸ್ಟಿಕ್ಸ್ 13 ಪದಕ	1980-2004 ಫಿಶರ್-ಸ್ಮಿತ್, ಬಿರ್ಗಿಟ್ ಜರ್ಮನಿ ದೋಣಿ 12 ಪದಕ
1936-1960 ಮಂಗಿಯಾರೊಟ್ಟಿ, ಎಡೋರ್ಡೊ ಇಟಲಿ, ಫೆನ್ಸಿಂಗ್ 13 ಪದಕ	1992-2004 ಥಾಂಪ್ಸನ್, ಜೆನ್ನಿ ಯುಎಸ್‌ಎ ಜಲ ಕ್ರೀಡೆಗಳು 12 ಪದಕ
1952-1964 ಒನೊ, ತಕಾಶಿ ಜಪಾನ್ ಜಿಮ್ನಾಸ್ಟಿಕ್ಸ್ 13 ಪದಕ	1984-2008 ಟೊರೆಸ್, ಡೇರಿಯಸ್ ಯುಎಸ್‌ಎ ಜಲ ಕ್ರೀಡೆಗಳು 12 ಪದಕ
1952-1964 ಕ್ಯಾಟೊ, ಸಾವೊ ಜಪಾನ್ ಜಿಮ್ನಾಸ್ಟಿಕ್ಸ್ 12 ಪದಕ	2004-2012 ಕಾಫ್ಲಿನ್, ನಟಾಲಿ ಯುಎಸ್‌ಎ ಅಕ್ವಾಟಿಕ್ಸ್ 12 ಪದಕ
1920-1928 ನೂರ್ಮಿ, ಪಾವೊ ಫಿನ್ ಅಥ್ಲೆಟಿಕ್ಸ್ 12 ಪದಕ	1960-68 ಕಸ್ಲಾವ್‌ಸ್ಕಾ, ವೆರಾ ಜೆಕೊಸ್ಲೊವಾಕಿಯಾ ಜಿಮ್ನಾಸ್ಟಿಕ್ಸ್ 11 ಪದಕ
1996-2000 ನೆಮೊವ್, ಅಲೆಕ್ಸಿ ರಷ್ಯಾ ಜಿಮ್ನಾಸ್ಟಿಕ್ಸ್ 12 ಪದಕ	8. 2016-2020 ಮೆಕ್ಕಿಯಾನ್, ಎಮ್ಮಾ ಆಸ್ಟ್ರೇಲಿಯಾ ಜಲ ಕ್ರೀಡೆಗಳು 11 ಪದಕ
2004-2016 ಲೊಚ್ಟೆ, ರಯಾನ್ ರಷ್ಯಾ ಜಲ ಕ್ರೀಡೆಗಳು 12 ಪದಕ	2004-2020 ಫೆಲಿಕ್ಸ್, ಅಲಿಸನ್ ಯುಎಸ್‌ಎ ಅಥ್ಲೆಟಿಕ್ಸ್ 11 ಪದಕ
1912-1924 ಓಸ್ಬರ್ನ್, ಕಾರ್ಲ್ ಟೌನ್ಸೆಂಡ್ ಯುಎಸ್‌ಎ ಶೂಟಿಂಗ್ 11 ಪದಕ	1992-2004 ವ್ಯಾನ್ ಅಲ್ಮ್ಸಿಕ್, ಫ್ರಾನ್ಜಿಸ್ಕಾ ಜರ್ಮನಿ ಅಕ್ವಾಟಿಕ್ಸ್ 11 ಪದಕ

ಜಿಮ್ನಾಸ್ಟಿಕ್‌ಗೆ ದೇಹ ಮುಚ್ಚುವ ಸೂಟ್



ಪ್ಯಾರಿಸ್: ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಜರ್ಮನಿಯ ಜಿಮ್ನಾಸ್ಟಿಕ್ ತಂಡದ ಮಹಿಳಾ ಕ್ರೀಡಾಪಟುಗಳು ಸಂಪೂರ್ಣ ದೇಹ ಮುಚ್ಚುವ ಫುಲ್ ಬಾಡಿ ಸೂಟ್ ಅನ್ನು ... ಹೇಳಿದ್ದಾರೆ. ಪ್ಯಾರಿಸ್‌ನ ಬೆರ್ಸಿ ಅರೆನಾದಲ್ಲಿ ಗುರುವಾರ ನಡೆದ ಅಭ್ಯಾಸದಲ್ಲಿ ಜರ್ಮನಿಯ ಆಟಗಾರ್ತಿಯರು, ಕುತ್ತಿಗೆಯಿಂದ ಪಾದದವರೆಗೆ ದೇಹವನ್ನು ಮುಚ್ಚುವ ಮೇಲಂಗಿ ಹಾಗೂ ಲೆಗ್ಗಿಂಗ್ಸ್ ಒಳಗೊಂಡ ಉಡುಪನ್ನು ತೊಟ್ಟಿದ್ದು ಕಂಡುಬಂತು. ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಜರ್ಮನಿಯ ಕ್ರೀಡಾಪಟುಗಳ ಇಂಥ ಪ್ರಯತ್ನಕ್ಕೆ ಭಾರೀ ಪ್ರಶಂಸೆ ವ್ಯಕ್ತವಾಗಿತ್ತು.

ನೀರಜ್ ಚೋಪ್ರಾ
ಜಾವೆಲಿನ್ ಎಸೆತಗಾರ ನೀರಜ್ ಮೇಲೆ ಈ ಬಾರಿ ನಿರೀಕ್ಷೆಗಳು ಹೆಚ್ಚಾಗಿದ್ದು, ಅವರು 2020ರಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಚಿನ್ನ

ಪಿ.ವಿ ಸಿಂಧು
ಸಿಂಧು ಮೇಲೆ ಈ ಬಾರಿ ನಿರೀಕ್ಷೆ ಹೆಚ್ಚಾಗಿದ್ದು ಕಳೆದ ಬಾರಿ ಅವರು ಕಂಚು ಗೆದ್ದಿದ್ದರು. ಅವರು ಗೆದ್ದರೆ ಹ್ಯಾಟ್ರಿಕ್ ಆಗಲಿದೆ.
ನಿರೀಕ್ಷೆ: ಚಿನ್ನ

ಅಭಿನವ್ ಬಿಂದ್ರಾ
ವೈಯಕ್ತಿಕ ವಿಭಾಗದಲ್ಲಿ ಮೊಟ್ಟ ಮೊದಲ ಚಿನ್ನ ಗೆದ್ದ ಶೂಟರ್ ಅಭಿನವ್ ಬಿಂದ್ರಾ ಈ ಬಾರಿ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಚಿನ್ನ

ವಿನೇಶ್ ಫೋಗಟ್
ಕುಸ್ತಿಪಟು ವಿನೇಶ್ ಫೋಗಟ್ ಅವರು ವಿವಿಧ ಕ್ರೀಡಾಕೂಟದಲ್ಲಿ ಸಾಧನೆ ಮಾಡಿದ್ದು ಅವರ ಮೇಲೂ ಈ ಬಾರಿ ನಿರೀಕ್ಷೆ ಇದೆ.
ನಿರೀಕ್ಷೆ: ಚಿನ್ನ/ಬೆಳ್ಳಿ

ಲಕ್ಷ್ಯ ಸೇನ್
ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಉತ್ತಮ ನಿರ್ವಹಣೆ ತೋರಿದ್ದು. ಅವರ ಮೇಲೆ ನಿರೀಕ್ಷೆ ಇಡಲಾಗಿದೆ.
ನಿರೀಕ್ಷೆ: ಚಿನ್ನ/ಬೆಳ್ಳಿ

ಮೀರಾಬಾಯಿ ಚಾನು
ವೇಟ್‌ಲಿಫ್ಟಿಂಗ್‌ನಲ್ಲಿ ಉತ್ತಮ ಸಾಧನೆ ಮಾಡಿರುವ ಚಾನು ಅವರ ಮೇಲೆ ನಿರೀಕ್ಷೆ ಇಡಲಾಗಿದೆ.
ನಿರೀಕ್ಷೆ: ಚಿನ್ನ

ನಿಖತ್ ಝರೀನ್
ನಿಖತ್ ಝರೀನ್ ಅವರು ಬಾಕ್ಸಿಂಗ್‌ನಲ್ಲಿ ಭರ್ಜರಿ ಪ್ರದರ್ಶನ ತೋರಿದ್ದು, ಚಿನ್ನ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಬೆಳ್ಳಿ/ಕಂಚು

ಅಂತಿಮ್ ಪಂಘಾಲ್
ಕುಸ್ತಿಪಟು ಅಂತಿಮ್ ಪಂಘಾಲ್ ಅವರು ಬಾಕ್ಸಿಂಗ್‌ನಲ್ಲಿ ಈ ಬಾರಿ ಭಾರೀ ಪ್ರದರ್ಶನ ತೋರಿದ್ದಾರೆ.
ನಿರೀಕ್ಷೆ: ಬೆಳ್ಳಿ/ಕಂಚು

ಲವ್ಲಿನಾ
ಲವ್ಲಿನಾ ಬೋರ್ಗಾಹಿನ್ ಅವರು ಬಾಕ್ಸಿಂಗ್‌ನಲ್ಲಿ ಈ ಬಾರಿ ಭಾರೀ ಪ್ರದರ್ಶನ ತೋರಿದ್ದಾರೆ. ಅವರ ಮೇಲೆ ನಿರೀಕ್ಷೆ ಇದೆ.
ನಿರೀಕ್ಷೆ: ಬೆಳ್ಳಿ

ಸಿಫ್ಟ್ ಕೌರ್
ಸಿಫ್ಟ್ ಕೌರ್ ಅವರು ಶೂಟಿಂಗ್‌ನಲ್ಲಿ ಈ ಬಾರಿ ಭಾರೀ ಪ್ರದರ್ಶನ ತೋರಿದ್ದಾರೆ. ಏಷ್ಯನ್ ಗೇಮ್ಸ್ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಬೆಳ್ಳಿ

ಶರತ್ ಕಮಲ್
ಶರತ್ ಕಮಲ್ ಭರ್ಜರಿ ಪ್ರದರ್ಶನ ತೋರಿದ್ದು, ಅವರು ಈ ಹಿಂದೆ ಕಾಮನ್‌ವೆಲ್ತ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಚಿನ್ನ/ಬೆಳ್ಳಿ

ಮಾನವ್ ಟಕ್ಕರ್
ಮಾನವ್ ಟಕ್ಕರ್ ಈ ಹಿಂದೆ ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಗೆದ್ದಿದ್ದರು. ಈ ಬಾರಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಕಂಚು

ಸುಮೀತ್ ನಗಾಲ್
ಸುಮೀತ್ ನಗಾಲ್ ಭರ್ಜರಿ ಪ್ರದರ್ಶನ ತೋರಿದ್ದು, ಈ ಬಾರಿ ಚಿನ್ನ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಚಿನ್ನ/ಬೆಳ್ಳಿ

ಶ್ರೀಜಾ ಅಕುಲಾ
ಶ್ರೀಜಾ ಅಕುಲಾ ಭರ್ಜರಿ ಪ್ರದರ್ಶನ ತೋರಿದ್ದು, ಈ ಹಿಂದೆ ಕಾಮನ್‌ವೆಲ್ತ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಚಿನ್ನ

ಅರ್ಚನಾ ಕಾಮತ್
ಅರ್ಚನಾ ಕಾಮತ್ ಭರ್ಜರಿ ಪ್ರದರ್ಶನ ತೋರಿದ್ದು, ಅವರು ಈ ಹಿಂದೆ ಕಾಮನ್ ವೆಲ್ತ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಬೆಳ್ಳಿ/ಕಂಚು

ಮನಿಕಾ ಬಾತ್ರಾ
ಮನಿಕಾ ಬಾತ್ರಾ ಭರ್ಜರಿ ಪ್ರದರ್ಶನ ತೋರಿದ್ದು, ಈ ಬಾರಿ ಚಿನ್ನ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಚಿನ್ನ

ಮನು ಭಾಕರ್
ಮನು ಭಾಕರ್ ಭರ್ಜರಿ ಪ್ರದರ್ಶನ ತೋರಿದ್ದು, ಅವರು ವಿಶ್ವಕಪ್ 2018ರಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಬೆಳ್ಳಿ/ಕಂಚು

ಸಾತ್ವಿಕ್
ಭರ್ಜರಿ ಪ್ರದರ್ಶನ ತೋರಿದ್ದು, ಅವರು ಥಾಮಸ್‌ಕಪ್‌ನಲ್ಲಿ ಬ್ಯಾಡ್ಮಿಂಟನ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಚಿನ್ನ/ಬೆಳ್ಳಿ

ಚಿರಾಗ್ ಶೆಟ್ಟಿ
ಚಿರಾಗ್ ಶೆಟ್ಟಿ ಭರ್ಜರಿ ಪ್ರದರ್ಶನ ತೋರಿದ್ದು, ಈ ಬಾರಿ ಚಿನ್ನ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಚಿನ್ನ/ಬೆಳ್ಳಿ

ತುಲಿಕಾ ಮಾನ್
ತುಲಿಕಾ ಮಾನ್ ಭರ್ಜರಿ ಪ್ರದರ್ಶನ ತೋರಿದ್ದು, ಈ ಬಾರಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಬೆಳ್ಳಿ

ಹರ್ಮಿತ್ ದೇಸಾಯಿ
ಹರ್ಮಿತ್ ದೇಸಾಯಿ ಭರ್ಜರಿ ಪ್ರದರ್ಶನ ತೋರಿದ್ದು, ಟೇಬಲ್ ಟೆನಿಸ್ ಕಾಮನ್ ವೆಲ್ತ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಬೆಳ್ಳಿ

ಅಂಶು ಮಲಿಕ್
ಅಂಶು ಮಲಿಕ್ ಭರ್ಜರಿ ಪ್ರದರ್ಶನ ತೋರಿದ್ದು, ಈ ಬಾರಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಬೆಳ್ಳಿ

ಶ್ರೇಯಸಿ ಸಿಂಗ್
ಶ್ರೇಯಸಿ ಸಿಂಗ್ ಭರ್ಜರಿ ಪ್ರದರ್ಶನ ತೋರಿದ್ದು, ಈ ಹಿಂದೆ ಶೂಟಿಂಗ್ ಕಾಮನ್ ವೆಲ್ತ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಚಿನ್ನ

ರಾಜೇಶ್ವರಿ ಕುಮಾರಿ
ರಾಜೇಶ್ವರಿ ಕುಮಾರಿ ಭರ್ಜರಿ ಪ್ರದರ್ಶನ ತೋರಿದ್ದು, ಶೂಟಿಂಗ್ ಇಂಡಿಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಬೆಳ್ಳಿ

ಇಶಾ ಸಿಂಗ್
ಇಶಾ ಸಿಂಗ್ ಭರ್ಜರಿ ಪ್ರದರ್ಶನ ತೋರಿದ್ದು, ಅವರು ಈ ಹಿಂದೆ ಫಿವಿಶ್ವಚಾಂಪಿಯನ್‌ನಲ್ಲಿ ಚಿನ್ನ ಗೆದ್ದಿದ್ದಾರೆ.
ನಿರೀಕ್ಷೆ: ಕಂಚು

ದೀಪಿಕಾ ಕುಮಾರಿ
ದೀಪಿಕಾ ಕುಮಾರಿ ಭರ್ಜರಿ ಪ್ರದರ್ಶನ ತೋರಿದ್ದು, ಈ ಬಾರಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಬೆಳ್ಳಿ

ಅಶ್ವಿನಿ ಪೊನ್ನಪ್ಪ
ಅಶ್ವಿನಿ ಪೊನ್ನಪ್ಪ ಭರ್ಜರಿ ಪ್ರದರ್ಶನ ತೋರಿದ್ದು, ಅವರು ಬ್ಯಾಡ್ಮಿಂಟನ್ ಕಾಮನ್ ವೆಲ್ತ್‌ನಲ್ಲಿ ಚಿನ್ನ ಗೆದ್ದಿದ್ದಾರೆ.
ನಿರೀಕ್ಷೆ: ಚಿನ್ನ

ಪೂವಮ್ಮ ಎಂ ಆರ್
ಪೂವಮ್ಮ ಎಂ ಆರ್ ಈ ಬಾರಿ ಭರ್ಜರಿ ಪ್ರದರ್ಶನ ತೋರಿದ್ದು, ಈ ಹಿಂದೆ ಅಥ್ಲೆಟಿಕ್ಸ್ ಏಷ್ಯನ್ ಗೇಮ್ಸ್‌ನಲ್ಲಿ 3 ಚಿನ್ನ ಗೆದ್ದಿದ್ದಾರೆ.
ನಿರೀಕ್ಷೆ: ಬೆಳ್ಳಿ

ಅದಿತಿ ಅಶೋಕ್
ಅದಿತಿ ಅಶೋಕ್ ಅವರು ಈ ಬಾರಿ ಭರ್ಜರಿ ಪ್ರದರ್ಶನ ತೋರಿದ್ದು, ಈ ಹಿಂದೆ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದರು.
ನಿರೀಕ್ಷೆ: ಬೆಳ್ಳಿ

ಶ್ರೀಹರಿ ನಟರಾಜ್
ಶ್ರೀಹರಿ ನಟರಾಜ್ ಈ ಬಾರಿ ಭರ್ಜರಿ ಪ್ರದರ್ಶನ ತೋರಿದ್ದು, ಈ ಹಿಂದೆ ಈಜು ಸೌತ್ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದಾರೆ.
ನಿರೀಕ್ಷೆ: ಚಿನ್ನ

ಧಿನಿಧಿ ಧಿಸಿಂಘು
14 ವರ್ಷದ ಧಿನಿಧಿ ಧಿಸಿಂಘು ಈಜು ನ್ಯಾಶನಲ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದು, ಒಲಿಂಪಿಕ್ಸ್‌ನಲ್ಲಿ ಪದಕದ ಭರವಸೆ ಆಗಿದ್ದಾರೆ.
ನಿರೀಕ್ಷೆ: ಬೆಳ್ಳಿ

ಅರ್ಚನಾ ಕಾಮತ್
ಟಟಿಯಲ್ಲಿ ಅರ್ಚನಾ ಕಾಮತ್ ಭರ್ಜರಿ ಪ್ರದರ್ಶನ ತೋರಿದ್ದು, ಟೇಬಲ್ ಟೆನ್ನಿಸ್ ನ್ಯಾಷನಲ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದರು.
ನಿರೀಕ್ಷೆ: ಬೆಳ್ಳಿ

ಬೋಪಣ್ಣ
ಟೆನ್ನಿಸ್‌ನಲ್ಲಿ ರೋಹನ್ ಬೋಪಣ್ಣ ಪ್ರದರ್ಶನ ತೋರಿದ್ದು, ಈ ಬಾರಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಚಿನ್ನ

ಅನುಷ್ ಅಗರ್‌ವಾಲ್
ಈಕ್ವೆಸ್ಟ್ರಿಯನ್ ಅನುಷ್ ಅಗರ್ ವಾಲ್ ಈ ಬಾರಿ ಭರ್ಜರಿ ಪ್ರದರ್ಶನ ತೋರಿದ್ದು, ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಬೆಳ್ಳಿ

ಹಾಕಿ ತಂಡ
ಹಾಕಿ ತಂಡ ಈ ಬಾರಿ ಭರ್ಜರಿ ಪ್ರದರ್ಶನ ತೋರಿದ್ದು, ಈ ಬಾರಿ ಪದಕ ಗೆಲ್ಲುವ ನಿರೀಕ್ಷೆಯಲ್ಲಿದೆ.
ನಿರೀಕ್ಷೆ: ಚಿನ್ನ

ಮಹಿಳಾ ಆರ್ಚರಿ
ಮಹಿಳಾ ಆರ್ಚರಿ ತಂಡ ಈ ಬಾರಿ ಭರ್ಜರಿ ಪ್ರದರ್ಶನ ತೋರಿದ್ದು, ಆರ್ಚರಿ ವಿಶ್ವಕಪ್ ನಲ್ಲಿ ಹ್ಯಾಟ್ರಿಕ್ ಗೆದ್ದಿದ್ದರು.
ನಿರೀಕ್ಷೆ: ಚಿನ್ನ

ವಿಷ್ಣು ಸರವಣನ್
ವಿಷ್ಣು ಸರವಣನ್ ಸೇಯ್ಲಿಂಗ್‌ನಲ್ಲಿ ವಿಷ್ಣು ಸರವಣನ್ ಅವರ ಮೇಲೆ ಈ ಬಾರಿ ನಿರೀಕ್ಷೆ ಹೆಚ್ಚಾಗಿದೆ.
ನಿರೀಕ್ಷೆ: ಬೆಳ್ಳಿ

ನೇತ್ರಾ ಕುಮನನ್
ನೇತ್ರಾ ಕುಮನನ್ ಸೇಯ್ಲಿಂಗ್‌ನಲ್ಲಿ ನೇತ್ರಾ ಕುಮನನ್ ಅವರ ಮೇಲೆ ಈ ಬಾರಿ ನಿರೀಕ್ಷೆ ಹೆಚ್ಚಾಗಿದೆ.
ನಿರೀಕ್ಷೆ: ಕಂಚು

ಅರ್ಜುನ್ ಚೀಮಾ
ಶೂಟಿಂಗ್‌ನಲ್ಲಿ ಅರ್ಜುನ್ ಚೀಮಾ ಅವರ ಮೇಲೆ ಈ ಬಾರಿ ನಿರೀಕ್ಷೆ ಹೆಚ್ಚಾಗಿದ್ದು, ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಬೆಳ್ಳಿ

ಅನಂತ್‌ಜೀತ್ ಸಿಂಗ್
ಶೂಟಿಂಗ್‌ನಲ್ಲಿ ಅನಂತ್‌ಜೀತ್ ಸಿಂಗ್ ಅವರ ಮೇಲೆ ಈ ಬಾರಿ ನಿರೀಕ್ಷೆ ಹೆಚ್ಚಾಗಿದ್ದು, ಪದಕ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.
ನಿರೀಕ್ಷೆ: ಕಂಚು

ವಿಶ್ವವಾಣಿ

ಸಂಪಾದಕೀಯ

ಗದ್ದಲಕ್ಕೆ ಸೀಮಿತವಾದ ಸದನ ಕಲಾಪ

ವಿಧಾನಸಭೆ ಮುಂಗಾರು ಅಧಿವೇಶನ ಎಂದಿನಂತೆ ಗದ್ದಲದಲ್ಲಿ ಆರಂಭವಾಗಿ ಗದ್ದಲದಲ್ಲಿಯೇ ಕೊನೆಗೊಂಡಿದೆ. ಶುಕ್ರವಾರ ಕೊನೆಗೊಳ್ಳಬೇಕಿದ್ದ ಅಧಿವೇಶನವು ಒಂದು ದಿನ ಮುಂಚಿತವಾಗಿಯೇ ಅಂತ್ಯ ಕಂಡಿದೆ. ವಿಪರ್ಯಾಸವೆಂದರೆ ಇಡೀ ರಾಜ್ಯ ಮಳೆ ಮತ್ತು ಪ್ರವಾಹ ಪರಿಸ್ಥಿತಿಯಲ್ಲಿ ಸಿಲುಕಿ ತತ್ತರಿಸುತ್ತಿದ್ದರೂ ಸದನದಲ್ಲಿ ಈ ಬಗ್ಗೆ ಪೂರ್ಣ ಪ್ರಮಾಣದಲ್ಲಿ ಚರ್ಚೆ ಆಗಲೇ ಇಲ್ಲ. ಮಳೆ ಅಬ್ಬರ ಈಗಲೂ ಮುಂದುವರಿದಿದೆ. ರಾಜ್ಯದ ಪ್ರಮುಖ ಜಲಾಶಯಗಳಿಂದ ಭಾರೀ ಪ್ರಮಾಣದಲ್ಲಿ ನೀರು ಹೊರ ಬಿಡಲಾಗುತ್ತಿದೆ. ತೀರ ಪ್ರದೇಶದ ಮನೆಗಳು ಮುಳುಗಡೆ ಭೀತಿಯಲ್ಲಿವೆ. ಗುಡ್ಡ ಕುಸಿತದಿಂದ ಹೆದ್ದಾರಿಗಳೇ ಮುಚ್ಚಿ ಹೋಗಿರುವ ಕಾರಣ ರಾಜ್ಯದ ಕರಾವಳಿ ಮತ್ತು ಮಲೆನಾಡು ಪ್ರದೇಶಕ್ಕೆ ಸಂಪರ್ಕ ದುಸ್ತರವಾಗಿದೆ. ಜನಸಾಮಾನ್ಯರ ಈ ಬವಣೆಗಳ ಬಗ್ಗೆ ಸದನದಲ್ಲಿ ಒಂದಿಷ್ಟಾದರೂ ಚರ್ಚೆ ಆಗಬೇಕಿತ್ತು. ಅಂಕೋಲಾ ಹೆದ್ದಾರಿಯಲ್ಲಿ ಭೂಕುಸಿತ ಸಂಭವಿಸಿದ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಭೇಟಿ ನೀಡಿದ ಬಳಿಕವೂ ಕಾಣೆಯಾದವರ ಶವ ಇನ್ನೂ ದೊರೆತಿಲ್ಲ. ಭೂಕುಸಿತದಲ್ಲಿ ಸಮಾಧಿಯಾದ ವ್ಯಕ್ತಿಯನ್ನು ಹುಡುಕಿಕೊಡುವಂತೆ ಸಂಬಂಧಿಕರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಅಲ್ಲೊಬ್ಬ ಇಲ್ಲೊಬ್ಬ ಶಾಸಕರು ಮಳೆ ಅನಾಹುತಗಳ ಬಗ್ಗೆ ಪ್ರಸ್ತಾಪಿಸಿದ್ದನ್ನು ಬಿಟ್ಟರೆ, ಪ್ರತೀವರ್ಷ ಕರಾವಳಿ, ಮಲೆನಾಡಿನಲ್ಲಿ ಮಳೆಗಾಲದಲ್ಲಿ ಎದುರಾಗುವ ಗುಡ್ಡ ಕುಸಿತದ ಸಮಸ್ಯೆಗಳಿಗೆ ಕಾರಣ ಮತ್ತು ಕಾಯಂ ಪರಿಹಾರ ಹುಡುಕುವ ಬಗ್ಗೆ ಚರ್ಚೆ ನಡೆಯಲೇ ಇಲ್ಲ. ಎರಡು ವಾರಗಳ ಕಾಲ ನಡೆದ ಅಧಿವೇಶನ ಮಹರ್ಷಿ ವಾಲ್ಮೀಕಿ ನಿಗಮದ ಹಗರಣ ಮತ್ತು ಮುಡಾ ಹಗರಣಗಳ ನಡುವೆ ಗಿರಕಿ ಹೊಡೆದಿದ್ದು ಬಿಟ್ಟರೆ ಯಾವ ಚರ್ಚೆಯೂ ತಾತ್ವಿಕ ಅಂತ್ಯ ಕಾಣಲಿಲ್ಲ. ಅಂತಿಮ ದಿನದಂದು ಚರ್ಚೆ ಇಲ್ಲದೆಯೇ ಆರು ಪ್ರಮುಖ ವಿಧೇಯಕಗಳನ್ನು ಅಂಗೀಕರಿಸಲಾಯಿತು. ಪ್ರಜಾಪ್ರಭುತ್ವದ ದೇಗುಲದಲ್ಲಿ ಪ್ರಜೆಗಳ ಆಶೋತ್ತರಗಳಿಗೆ ಅನುಗುಣವಾಗಿ ಅಗತ್ಯ ಕಾನೂನುಗಳನ್ನು ರೂಪಿಸುವುದು ಶಾಸನಸಭೆಯ ಕರ್ತವ್ಯ. ಪ್ರತಿಯೊಂದು ಶಾಸನದ ಒಳಿತು ಕೆಡುಕುಗಳ ಬಗ್ಗೆ ಎಲ್ಲ ಸದಸ್ಯರು ಸೇರಿ ವಿಸ್ತೃತವಾಗಿ ಚರ್ಚೆ ನಡೆಸಿ, ಬಹುಮತದ ಆಧಾರದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕೆನ್ನುವುದು ಪ್ರಜಾಸತ್ತೆಯ ಆಶಯ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಆಡಳಿತ ಮತ್ತು ವಿಪಕ್ಷಗಳೆರಡೂ ತಮ್ಮ ಪೂರ್ವ ನಿರ್ಧರಿತ ಅಜೆಂಡಾದಂತೆ ಕಾರ್ಯ ನಿರ್ವಹಿಸುತ್ತವೆ ಹೊರತು ಜನರ ಒಳಿತು ಕೆಡುಕುಗಳ ಚರ್ಚೆಗೆ ಆದ್ಯತೆ ಸಿಗುವುದು ಕಡಿಮೆ. ಲೋಕಸಭೆಗೆ ಆಯ್ಕೆಯಾದ ವಿಪಕ್ಷ ಬಿಜೆಪಿ ಮತ್ತು ಜೆಡಿಎಸ್‌ನ ಒಂದಷ್ಟು ನಾಯಕರ ಅನುಪಸ್ಥಿತಿಯೂ ಈ ಬಾರಿ ಸದನವನ್ನು ಕಾಡಿದೆ.

ಸೊಂಪಾದಕೀಯ

ಫೇಸ್‌ಬುಕ್‌ನಲ್ಲಿ ಕೆಲಸ ಇಲ್ಲ

ಭಾರತದ ಸಾಮಾಜಿಕ ಜಾಲತಾಣಗಳಲ್ಲಿ ಅತಿ ಹೆಚ್ಚು ಜನಪ್ರಿಯ ಅಂದ್ರೆ, ಅದು ಫೇಸ್‌ಬುಕ್. ಇಲ್ಲಿ ಜನಗಳು ತಮ್ಮ ವೈಯಕ್ತಿಕ ಜೀವನದಿಂದ ಹಿಡಿದು ದೇಶದಲ್ಲಿ ಆಗೋ ಎಲ್ಲ ಬೆಳವಣಿಗೆಗಳ ಬಗ್ಗೆಯೂ ತಮ್ಮ ಒಪಿನೀಯನ್ ಹಾಕಿ ಖುಷಿ ಪಟ್ಟುಕೊಳ್ಳುತ್ತಾರೆ. ಕೆಲವರಂತೂ ಈ ಫೇಸ್‌ಬುಕ್‌ಗೆ ಎಷ್ಟು ಅಡಿಕ್ಟ್ ಆಗಿರ್ತಾರೆ ಅಂದ್ರೆ, ನೀವೆಲ್ಲಿ ಕೆಲಸ ಮಾಡ್ತಾರಾ ಅಂತ ಕೇಳಿದ್ರೆ, ಫೇಸ್‌ಬುಕ್‌ನಲ್ಲಿ ಅಂತ ಹೇಳುವಷ್ಟು. ಆದರೆ ಈಗ ಫೇಸ್‌ಬುಕ್ ಸಂಸ್ಥೆಯಿಂದ ಒಂದು ಸುದ್ದಿ ಬಂದಿದೆ. ಅದೇನಪ್ಪಾ ಅಂದ್ರೆ, ಎಫ್‌ಬಿಯಲ್ಲಿ ಈಗ ಅನೇಕರನ್ನು ಕೆಲಸದಿಂದ ಕಿತ್ತು ಹಾಕುತ್ತಿದ್ದಾರಂತೆ. ಹಾಗಂತ, ಇದು ಮಾಡೋಕೆ ಬೇರೆ ಕೆಲಸ ಇಲ್ಲದೆ ಫೇಸ್‌ಬುಕ್‌ನಲ್ಲಿ ಕಾಲ ಕಳೆಯುವವರಿಗೆ ಸಂಬಂಧಪಟ್ಟಿದ್ದು ಅಂದ್ಕೊಬೇಡಿ. ಇದು ಫೇಸ್‌ಬುಕ್ ಆಫೀಸಿನಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ಸಂಬಂಧ ಪಟ್ಟ ವಿಷಯ. ಹಾಗಾಗಿ 'ಫೇಸ್‌ಬುಕ್‌ನಲ್ಲಿ ಕೆಲಸ ಮಾಡುವ' ನಮ್ಮ ಕೆಲವು ಯುವಕ ಯುವತಿಯರು ಇದರಿಂದ ಗಾಬರಿ ಪಡಬೇಕಾಗಿಲ್ಲ. ಪ್ರಪಂಚದಾದ್ಯಂತ ಕೋಟ್ಯಾಂತರ ಗ್ರಾಹಕರನ್ನು ಹೊಂದಿರುವ ಫೇಸ್‌ಬುಕ್‌ಗೆ ಕೆಲಸಗಾರರನ್ನು ಕಿತ್ತು ಹಾಕುವ ಗತಿ ಯಾಕೆ ಬಂತು ಅನ್ನೋದು ಗೊತ್ತಿಲ್ಲ. ಆದರೆ ಬಳಕೆದಾರರು ಆಕ್ಷೇಪಾರ್ಹ ಬರವಣಿಗೆಗಳನ್ನು ಹಾಕಿದಾಗ ಅವುಗಳನ್ನು ಕಿತ್ತು ಹಾಕುವಷ್ಟೇ ಸಲೀಸಾಗಿ ಈಗ ಫೇಸ್‌ಬುಕ್ ತನ್ನ ನೌಕರರನ್ನು ಕಿತ್ತು ಹಾಕಲಿದೆ. ಆದರೆ ಈಗ ನೌಕರರು ಕಡಿಮೆ ಆಗಿರೋದ್ರಿಂದ ನಮ್ಮ ಪೋಸ್ಟ್‌ಗಳನ್ನು ಪರಿಶೀಲನೆ ಮಾಡುವವರು ಕಮ್ಮಿ ಆಗುತ್ತಾರೆ. ಹಾಗಾಗಿ ಕುಂಟು ನೆಪ ಹೇಳಿ, ಸುಖಾ ಸುಮ್ಮನೆ ತಮಾಷೆಗೆ ಹಾಕಿದ ಪೋಸ್ಟ್‌ಗಳನ್ನೂ ರಿಪೋರ್ಟ್ ಮಾಡಿ ಪೋಸ್ಟ್ ಡಿಲೀಟ್ ಮಾಡೋದು, ಅಕೌಂಟ್ ರಿಸ್ಟ್ರಿಕ್ಟ್ ಮಾಡೋದು ಇಂಥದ್ದೆಲ್ಲ ಇನ್ನು ಮುಂದೆ ಆದ್ರೂ ಕಮ್ಮಿ ಆಗುತ್ತೇನೋ ನೋಡ್ಬೇಕು ಅಂತ ಫೇಸ್‌ಬುಕ್ ಬಳಕೆದಾರರಂತೂ ಕೊಂಚ ನಿರಾಳವಾಗಿದ್ದಾರೆ. ಆದರೆ ಫೇಸ್ ಬುಕ್ ತನ್ನ ಯಾವ ಡಿಪಾರ್ಟ್‌ಮೆಂಟ್‌ನ ಕೆಲಸಗಾರರನ್ನು ಕಿತ್ತು ಹಾಕಲಿದೆ ಅನ್ನೋದು ಇನ್ನೂ ಸ್ಪಷ್ಟವಾಗಿಲ್ಲ. ಆ ನೌಕರರು ಮಾಡಿದ ತಪ್ಪು ಏನು ಅಂತಾನೂ ಗೊತ್ತಿಲ್ಲ. ಆದರೆ, ಫೇಸ್ ಬುಕ್ ಆಫೀಸಿನಲ್ಲಂತೂ, ಮಾಡೋ ಕೆಲಸ ಬಿಟ್ಟು ಯಾವಾಗ್ಲೂ ಫೇಸ್ ಬುಕ್ ನೋಡ್ತಾ ಕೂತಿದ್ದ ಅಂತ ಕಾರಣ ಕೊಟ್ಟು ಯಾರನ್ನೂ ಕೆಲಸದಿಂದ ತೆಗೆಯೋಕಾಗಲ್ಲ ಬಿಡಿ!

ಸಂಪಾದಕರ ಸದ್ಯಶೋಧನೆ

ಗಿಣಿಗೇರಾ, ಚಿಂತಾದ್ರಿಪೇಟೆ ಕುರಿತು

ನೀವು ಗಿಣಿಗೇರಾ ಎಂಬ ಊರ ಹೆಸರನ್ನು ಕೇಳಿರಬಹುದು. ಕೊಪ್ಪಳದಿಂದ ಸುಮಾರು ಹತ್ತು ಕಿಮೀ ದೂರದಲ್ಲಿರುವ, ಸುಮಾರು ಐದು ಸಾವಿರ ಜನಸಂಖ್ಯೆಯಿರುವ ಒಂದು ಊರು. ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿದೆ. ಗುಂತಕಲ್ - ಹುಬ್ಬಳ್ಳಿ ನಡುವಿನ ರೈಲು ಮಾರ್ಗದಲ್ಲಿ ಗಿಣಿಗೇರಾ ರೈಲು ನಿಲ್ದಾಣವಿದೆ. ಕೆಲ ವರ್ಷಗಳ ಹಿಂದೆ ಕೊಪ್ಪಳದ ಜಲಋಷಿ ಎಂದೇ ಖ್ಯಾತರಾದ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರು ಗಿಣಿಗೇರಾದಲ್ಲಿ ಒಂದು ಕೆರೆಯನ್ನು ಅಭಿವೃದ್ಧಿಪಡಿಸಿದ್ದು ಗೊತ್ತಿರಬಹುದು. ಆ ಸಂದರ್ಭದಲ್ಲಿ ಸ್ವಾಮೀಜಿ ಅವರು, 'ಈ ಊರಿಗೆ ಗಿಣಿಗೇರಾ ಎಂಬ ಹೆಸರು ಯಾಕೆ ಬಂದಿರಬಹುದು? ಪ್ರಾಯಶಃ ಈ ಊರಿನ ಹೆಸರು ಗಿಣಿಗಳ ಕೆರೆ ಅಥವಾ ಗಿಣಿ ಕೆರೆ ಎಂದಿದ್ದಿರಬಹುದು. ಜನರ ಬಾಯಲ್ಲಿ ಅದು ಗಿಣಿಗೇರಾ ಆಗಿರಬೇಕು' ಎಂದು ಹೇಳಿದ್ದರು. ಅನೇಕ ಊರುಗಳ ಹೆಸರು ಹೀಗೆ ಏನೇನೋ ರೂಪಗಳನ್ನು ಪಡೆಯುತ್ತವೆ. ಬ್ರಿಟಿಷರ ಕಾಲದಲ್ಲಿ ಅವರಿಗೆ ಊರಿನ ಹೆಸರುಗಳನ್ನು ಸ್ಪಷ್ಟವಾಗಿ ಉಚ್ಚರಿಸಲು ಬರುತ್ತಿರಲಿಲ್ಲ. ಅವರಿಗೆ ನಾಲಗೆ ಹೊರಳುತ್ತಿರಲಿಲ್ಲ. ಅವರು ಇತ್ತ ಹೆಸರುಗಳನ್ನೂ ಸ್ಥಳೀಯರಿಗೆ ಹೇಳಲು ಬರುತ್ತಿರಲಿಲ್ಲ. ಹೀಗಾಗಿ ಅನೇಕ ಊರುಗಳ ಹೆಸರುಗಳು ವಿರೂಪವಾದವು. ಬೆಂದಕಾಳೂರು ಬ್ಯಾಂಗಲೋರ್ ಆಗಿ, ನಂತರ ಬೆಂಗಳೂರು ಆಗಿದ್ದು ಒಂದು ಉತ್ತಮ ನಿದರ್ಶನ. ಇದೇ ರೀತಿ ಅಸಂಖ್ಯ ಊರುಗಳ ಹೆಸರುಗಳು ವಿರೂಪಗೊಂಡವು. ಈ ಬಗ್ಗೆ ನಿಘಂಟು ತಜ್ಞ ಪ್ರೊ. ಜಿ.ವೆಂಕಟಸುಬ್ಬಯ್ಯನವರು ಆಗಾಗ ಒಂದು ಉದಾಹರಣೆ ಕೊಡುತ್ತಿದ್ದುದು ನೆನಪಾಗುತ್ತಿದೆ. ಚಿಂತಾದ್ರಿಪೇಟೆ ಎಂಬ ಊರಿನ ಹೆಸರು ಹೇಗೆ ಬಂದಿರಬಹುದು? ಅಂದಿನ ಮದರಾಸಿನಲ್ಲಿ Barber's Bridge ಎಂಬ ಒಂದು ಪ್ರದೇಶವಿದೆ. ಬ್ರಿಟಿಷರ ಕಾಲದಲ್ಲಿ ಹ್ಯಾಮಿಲ್ಟನ್ ಎಂಬ ಬ್ರಿಟಿಷ್ ಅಧಿಕಾರಿಯ ಹೆಸರನ್ನು ಆ ಸೇತುವೆಗೆ ಇಡಲಾಯಿತು. ಸ್ಥಳೀಯರಿಗೆ ಹ್ಯಾಮಿಲ್ಟನ್ ಎಂದು ಉಚ್ಚರಿಸುವುದು ಕಷ್ಟವಾಯಿತು. ಅವರು ಆ ಹೆಸರನ್ನು ಅಂಬಟ್ಟನ್ ಎಂದು ಉಚ್ಚರಿಸಲಾರಂಭಿಸಿದರು. ತಮಿಳಿನಲ್ಲಿ ಅಂಬಟ್ಟನ್ ಅಂದ್ರೆ ಕ್ಷೌರಿಕ ಎಂದರ್ಥ. ಹೀಗಾಗಿ ಹ್ಯಾಮಿಲ್ಟನ್ ಹೆಸರಿನ ಸೇತುವೆ ಅಂಬಟ್ಟನ್ ಸೇತುವೆಯಾಗಿ, ಅದನ್ನು ಇಂಗ್ಲಿಷಿನಲ್ಲಿ ಕೆಲವರು ಪುನಃ ಅನುವಾದಿಸಿ, Barber's Bridge ಆಯಿತು. ಇದೇ ರೀತಿ ಚಿಂತಾದ್ರಿಪೇಟೆಯ ಹೆಸರು ವಿರೂಪಗೊಂಡಿತು ಎಂದು ಪ್ರೊ.ಜೀವಿಯವರು ಹೇಳುತ್ತಿದ್ದುದನ್ನು ಕೇಳಿದ್ದೇನೆ. ಮದರಾಸಿನಲ್ಲಿ ಚಿಂತಾದ್ರಿಪೇಟೆ ಎಂಬ ಬೀದಿಯಿದೆ. ಅದಕ್ಕೆ St.Andrew Petಎಂದು ಬ್ರಿಟಿಷರು ನಾಮಕರಣ ಮಾಡಿದರು. ಆದರೆ ಸ್ಥಳೀಯ ತಮಿಳರಿಗೆ ಅದನ್ನು ಉಚ್ಚರಿಸಲು ಕಷ್ಟವಾಗುತ್ತಿತ್ತು. ಸೇಂಟ್ ಆಂಡ್ರೂ ಪೇಟ್ ಸ್ಥಳೀಯರ ಬಾಯಲ್ಲಿ ಚಿಂತಾದ್ರಿಪೇಟೆ ಆಯಿತು. ಕ್ರಮೇಣ ಜನ ಸೇಂಟ್ ಆಂಡ್ರೂ ಪೇಟ್ ಎಂದು ಹೇಳುವುದನ್ನು ಬಿಟ್ಟು ಚಿಂತಾದ್ರಿಪೇಟೆ ಎಂದೇ ಹೇಳಲು ಆರಂಭಿಸಿದರು. ಅದೇ ಹೆಸರು ಕಾಯಂ ಆಯಿತು. ಈಗಂತೂ ಜನ ಸೇಂಟ್ ಆಂಡ್ರೂ ಪೇಟ್ ಎಂದು ಯಾರೂ ಹೇಳುವುದಿಲ್ಲ. ಜನಮಾನಸದಲ್ಲಿ ಚಿಂತಾದ್ರಿಪೇಟೆಯೇ ಗಟ್ಟಿಯಾಗಿ ನೆಲೆಯೂರಿಬಿಟ್ಟಿದೆ. ಅದೇ ರೀತಿ ಮೈಸೂರಿನ ಕತ್ವಾಡಿಪುರ ಎಂಬ ಬಡಾವಣೆಯ ಹೆಸರು. ಕತ್ವಾಡಿ ಅಂದರೆ ಕೃಷ್ಣರಾಜವೊಡೆಯ ಎಂಬುದರ ತದ್ಭವ. ಕೃಷ್ಣರಾಜ ಒಡೆಯರಪುರ ಕ್ರಮೇಣ ಸುಲಭವಾಗಿ ಕತ್ವಾಡಿಪುರವಾಯಿತು. ಬೆಂಗಳೂರಿನಲ್ಲಿ ಪಟಾಲಮ್ಮ ಬೀದಿ ರಸ್ತೆ ಎಂಬ ಹೆಸರನ್ನು ಕೇಳಿರಬಹುದು. ಅದು ಮೊದಲು ಪಾತಾಳಮ್ಮ ಬೀದಿ ಆಗಿತ್ತಂತೆ. ಯಾರೋ ಕೆಲವರು ಅದನ್ನು ಪಟಾಲಮ್ಮ ಎಂದು ಕರೆದರು. ಅದೇ ಕ್ರಮೇಣ ಶಾಶ್ವತವಾಗಿ ಹೋಯಿತು. ಈಗ ಪಾತಾಳಮ್ಮ ಬೀದಿ ಎಂದು ಕರೆದರೆ, ಅರ್ಥವಾಗದೇ ಗೊಂದಲವಾದೀತು. ವಿಮಾನಗರ ಭೀಮಾನಗರವಾಗಿದ್ದೂ ಹೀಗೆ. ಬಾಣಾವರಕ್ಕೆ ಆ ಹೆಸರು ಹೇಗೆ ಬಂತು ಎಂಬುದಕ್ಕೆ ಒಂದು ದೊಡ್ಡ ಐತಿಹ್ಯ ಅಥವಾ ಕತೆಯೇ ಇದೆ.

ಸಾಧನೆಗೆ ಸಿದ್ಧ ಫಾರ್ಮುಲಾ ಇಲ್ಲ, ಒಮ್ಮೆಲೆ ಸಾಧನೆಯೂ ಆಗಲ್ಲ

ಶಿಶಿರ ಕಾಲ
ಶಿಶಿರ್ ಹೆಗಡೆ
shishirh@gmail.com

ದಿನಕ್ಕೆ ಹತ್ತಾರು ಮಂದಿ ಸಾಧಕರ ಬಗ್ಗೆ, ಅವರ ಸಾಧನೆಯ ಬಗ್ಗೆ ಒಂದಿಲ್ಲೊಂದು ಮೂಲದಿಂದ ಕೇಳುತ್ತೇವೆ. ಇನ್ನು ಕೆಲವು ಈಗಾಗಲೇ ಗೊತ್ತಿರುವ ಸಾಧಕರ ದಾಟಿದ ಇನ್ನೊಂದು ಮೈಲಿಗಲ್ಲಿನ ಸುದ್ದಿ. ಕೆಲವರ ಹೊಸ ಸಾಧನೆಗಳು ಕೊನೆ ಕೊನೆಗೆ ಆಶ್ಚರ್ಯವನ್ನು ಕೂಡ ಹುಟ್ಟಿ ಹಾಕುವುದಿಲ್ಲ, ತೆಂಡೂಲ್ಕರ್, ಕೊಹ್ಲಿ ಸೆಂಚುರಿ ಹೊಡೆದಂತೆ. ಓದಿ - ಕೇಳಿ - ನೋಡಿ ಖುಷಿಯಾಗುತ್ತದೆ - ಆದರೆ ಆಶ್ಚರ್ಯವಾಗುವುದಿಲ್ಲ. ಬೆಳಿಗ್ಗೆ ಎದ್ದು ಪತ್ರಿಕೆ ತೆರೆದರೆ ಒಂದಿಷ್ಟು ಸಾಧನೆಗಳು - ಒಂದೆರಡು ಹೊಸ ಸಾಧಕರು ಪ್ರತೀ ದಿನ ಗೊತ್ತಾಗುತ್ತಾರೆ. ಸ್ಪೋರ್ಟ್ಸ್ ಪುಟ ಎಂದರೆ ಅದು ಸಾಧನೆಯ ಸುದ್ದಿಯೇ. ವಿಜ್ಞಾನಿಯ ಬಗ್ಗೆ, ಆಟಗಾರನ ಬಗ್ಗೆ, ಸಾಹಿತಿಯ ಬಗ್ಗೆ, ಬಿಸಿನೆಸ್ ಪರ್ಸನಾಲಿಟಿಯ ಬಗ್ಗೆ ಒಬ್ಬರು ಬರೆದಿದ್ದಾರೆ ಎಂದರೆ ಅದು ಸಾಧನೆಗೆ ಸಂಬಂಧಿಸಿದ್ದೇ. ಏನೇನೋ ಸಾಧನೆಗಳು, ಯಾವ ಯಾವುದೋ ಫೀಲ್ಡ್, ಎಂಥೆಂಥದ್ದೋ ಮೂಲ, ಸ್ಥಿತಿಯಿಂದ ಬಂದವರು, ಎಲ್ಲಿಂದೆಲ್ಲಿಗೋ ಹೋಗಿ ಮುಟ್ಟಿದವರು. ಕೆಲವರ ಸ್ಥಿತಿ ನಮ್ಮ ಬದುಕಿಗೆ ಸರಿಹೊಂದುವಂತದ್ದು. ಇನ್ನು ಕೆಲವು ಮಹತ್ ಸಾಧಕರ ಸ್ಥಿತಿ ಮೂಲದಲ್ಲಿ ಅದೆಷ್ಟೋ ಕಷ್ಟ ಕಾರ್ಪಣ್ಯಗಳು. ಇಂದಿನ ದಿನದಲ್ಲಿ ಹೆಸರುವಾಸಿಯಾಗಲು ಸಾಧಕರೇ ಆಗಬೇಕೆಂದಿಲ್ಲ, ಕುಖ್ಯಾತಿಯಿಂದ ಹೆಸರು ಮಾಡುವುದು ತೀರಾ ಸುಲಭ ಎನ್ನುವುದು ಬೇರೆ ವಿಚಾರ.

ಸಾಧಕರ ಬಗ್ಗೆ ಮೊದಲು ಕೇಳಿದಾಗ ಸುಮಾರಾಗಿ ನಾವೆಲ್ಲ ಅವರನ್ನು ಎರಡರಲ್ಲಿ ಒಂದು ಬುಟ್ಟಿಗೆ ಹಾಕಿ ಅವರ ಬಗ್ಗೆ - ಅವರ ಸಾಧನೆಯ ಬಗ್ಗೆ ಒಂದು ಇತ್ಯರ್ಥಕ್ಕೆ ಬಂದು ಬಿಡುತ್ತೇವೆ. ಒಂದೋ ತೀರಾ ಕಷ್ಟಪಟ್ಟು - ಪ್ರಯತ್ನಿಸಿ ಬಂದವರು ಇಲ್ಲವೇ ಸಹಜವಾಗಿ ಜೀನ್ಸ್‌ನಿಂದ ಬಳುವಳಿ ಪಡೆದು ಬಂದವರು, ಅವರು ಬೆಳೆದು ಬಂದ ವಾತಾವರಣದಿಂದ ಹುಟ್ಟಿದ ಸಾಧಕರು ಅಥವಾ ಅವರು ಗಿಫ್ಟೆಡ್. ಆದರೆ ಸಾಧನೆ ಎಂದರೆ ಪ್ರಯತ್ನ ಎಂದು ಬಹುವಾಗಿ ನಂಬುವವರು ನಾವು. ಪ್ರಯತ್ನ ಪಟ್ಟರೆ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವುದೇ ನಮ್ಮೆಲ್ಲರ ದೃಢ ನಂಬಿಕೆ. ಅದರ ಜೊತೆ ಕೆಲವರನ್ನು ಗಿಫ್ಟೆಡ್ ಎನ್ನುವ ಬುಟ್ಟಿಗೆ ಹಾಕಿ ತೂಗುತ್ತೇವೆ. ಕೆಲವರದು ಸ್ವಾಭಾವಿಕ ಜನ್ಮ ಸಹಜ ಪ್ರತಿಭೆ. ಸಾಧಕರನ್ನು ಈ ರೀತಿ ವರ್ಗೀಕರಿಸಿ ನೋಡಿದಾಗಲೇ ಯಡವಟ್ಟಾಗುವುದು. ಸಾಧಕರು ಸ್ಫೂರ್ತಿ ಹೌದು ಆದರೆ ಸಾಧನೆಗೆ ಕೇವಲ ಶತ ಪ್ರಯತ್ನವೊಂದೇ ಕಾರಣ ಅಥವಾ ಅವರು ಗಿಫ್ಟೆಡ್ ಎಂದಾಕ್ಷಣ ಸಾಧನೆಯ ಬಗ್ಗೆ ನಾವು ರೂಪಿಸಿಕೊಳ್ಳುವ ಚಿತ್ರಣ ತಪ್ಪಾಗುತ್ತದೆ. ಸಾಮಾನ್ಯವಾಗಿ ಪರ್ಸನಾಲಿಟಿ ಡೆವಲಪ್ಮೆಂಟ್ ಬಗ್ಗೆ ಮಾತನಾಡುವವರೆಲ್ಲ ಒತ್ತಿ ಹೇಳುವುದು ಒಂದೇ. ಯಾರು ಬೇಕಾದರೂ ಏನನ್ನು ಬೇಕಾದರೂ ಸಾಧಿಸಬಹುದು. ಹಾಗಾದರೆ Believe in you and you can achieve it ಎನ್ನುವುದೊಂದೇ ಮಂತ್ರವೇ? ಇದು ಎಷ್ಟರ ಮಟ್ಟಿಗೆ ಸತ್ಯ? ನಮ್ಮ ಮಕ್ಕಳಿಗೆ ಕ್ರಿಕೆಟ್ ಬ್ಯಾಟ್ ಕೊಟ್ಟು - ದಿನವಿಡೀ ಬಾಲ್ ಹೊಡೆಯಲು ಬಿಟ್ಟರೆ ಅಥವಾ ವಿರಾಟ್ ಕೊಹ್ಲಿಯಿಂದಲೇ ಕ್ರಿಕೆಟ್ ಪ್ರಾಕ್ಟೀಸ್ ಮಾಡಿಸಿದರೆ ಕೊಹ್ಲಿಗಿಂತ ಒಳ್ಳೆಯ ಬ್ಯಾಟರ್ ಆಗಬಹುದೇ? ಅಥವಾ ಮಗು ಗಿಫ್ಟೆಡ್ ಕೂಡ ಆಗಿರಬೇಕೇ? ಚೆಸ್ ಆಡುವುದನ್ನು ಬಾಲ್ಯದಲ್ಲೇ ಕಲಿಸಿ ಗ್ರಾಂಡ್ ಮಾಸ್ಟರ್ ಮಾಡಬಹುದೇ? ಟೆನ್ನಿಸ್ ಆಡಲು ಐದನೆಯ ವಯಸ್ಸಿನಿಂದಲೇ ಕಲಿಸಿ ಬೆಳೆಸಿದರೆ ನಿಮ್ಮ ಮಗು ರೋಜರ್ ಫೆಡರರ್ ಆಗಬಹುದೇ?

ಮಾಲ್ಕಮ್ ಗ್ಲಾಡ್ವೆಲ್ಲ್ ಎನ್ನುವ ಲೇಖಕ 2008ರಲ್ಲಿ ಪ್ರಕಟಿಸಿದ Outlier, The Story of Success ಎನ್ನುವ ಪುಸ್ತಕದಲ್ಲಿ ಸಾಧನೆ ಎಂದರೆ ಏನು ಎಂದು ಬಹು ವಿವರವಾಗಿ ಬರೆಯುತ್ತಾನೆ. ಸಾಧನೆ ಎನ್ನುವ ವಿಚಾರವನ್ನೇ ಡೈಸೆಕ್ಟ್ ಮಾಡಲು ಹೊರಡುವ ಪುಸ್ತಕವದು. ಏನಾದರೊಂದನ್ನು ಸಾಧಿಸುವುದು ಹೇಗೆ ಎನ್ನುವುದನ್ನು ಪರೋಕ್ಷವಾಗಿ ಕೆಲವು ತನ್ನದೇ ಆದ ಸಿದ್ಧಾಂತಗಳಿಂದ ವಿವರಿಸುತ್ತಾನೆ ಲೇಖಕ. ಈ ಪುಸ್ತಕದಲ್ಲಿ ಹತ್ತಾರು ಸಾಧಕರನ್ನು ಅವರ ಸಾಧನೆಗೆ ಪಟ್ಟ ಶ್ರಮವನ್ನು ವಿವರವಾಗಿ ಬರೆಯುತ್ತ ಒಂದು ಸಿದ್ಧಾಂತ Theory of 10,000 hoursಅನ್ನು ಪುಸ್ತಕದುದ್ದಕ್ಕೂ ಪ್ರತಿಪಾದಿಸುತ್ತಾ ಹೋಗುತ್ತಾನೆ. ಇದಕ್ಕೆ ಹಲವಾರು ಉದಾಹರಣೆಗಳನ್ನು ಕೂಡ ಉಲ್ಲೇಖಿಸುತ್ತಾನೆ. ಈ ಸಿದ್ಧಾಂತಕ್ಕೆ ಆತ ಬಿಲ್ ಗೇಟ್ಸ್‌ನಿಂದ ಹಿಡಿದು ಹಲವಾರು ಮಹಾನ್ ಸಾಧಕರನ್ನು ಬಳಸಿಕೊಳ್ಳುತ್ತಾನೆ. ಆತನ ಪ್ರಕಾರ ಎಲ್ಲ ಸಾಧಕರು ಸುಮಾರು ಹತ್ತು ಸಾವಿರ ತಾಸಿಗಿಂತ ಹೆಚ್ಚಿಗೆ ಪ್ರಯತ್ನಿಸಿರಬೇಕು. ಪ್ರತೀ ದಿನ ಮೂರು ತಾಸು ಹತ್ತು ವರ್ಷ ಸತತ ಪ್ರಯತ್ನಿಸಿದರೆ ಏನನ್ನು ಬೇಕಾದರೂ ಸಾಧಿಸಬಹುದು. ಎಂದರೆ ಸಾಧನೆಯನ್ನು ಪ್ರಯತ್ನಿಸಿದ ವ್ಯಯಿಸಿದ ಸಮಯದ ಲೆಕ್ಕಕ್ಕೆ ಕಟ್ಟಿ ಹಾಕುವ ಕೆಲಸ ಅವನದು. ಇಡೀ ಪುಸ್ತಕ ಓದಿ ಮುಗಿಸಿದಾಗ ಈ ಗಿಫ್ಟೆಡ್ - ಸ್ವಾಭಾವಿಕ ಸಹಜ ಪ್ರತಿಭೆ ಎನ್ನುವುದೆಲ್ಲ ಬೊಗಳೆ - ಹತ್ತು ಸಾವಿರ ತಾಸು ಸರಿಯಾಗಿ ವ್ಯಯಿಸಿದರೆ ಏನನ್ನು ಬೇಕಾದರೂ ಸಾಧಿಸಬಹುದು ಎನ್ನುವ ಭಾವವನ್ನು ಲೇಖಕ ಹುಟ್ಟಿಹಾಕುತ್ತಾನೆ. ಈ ಸಿದ್ಧಾಂತದ ಪ್ರಕಾರ 10,000 ತಾಸು ಸಾಧನೆಗೆ ವ್ಯಯಿಸಬೇಕು. ಹಾಗಾಗಿ ಆದಷ್ಟು ಚಿಕ್ಕ ವಯಸ್ಸಿನಲ್ಲಿ ಪ್ರಯತ್ನ ಶುರುಮಾಡಿಕೊಂಡರೆ ಸಾಧನೆ ಪಕ್ಕಾ. ಈ ವಿವರಣೆಯ ಪ್ರಕಾರ ಮಗುವನ್ನು ಸಾಧಕನನ್ನಾಗಿ ಮಾಡಲು ಪೋಷಕರು ಅವರನ್ನು ಚಿಕ್ಕಂದಿನಲ್ಲೇ ಪ್ರಯತ್ನಕ್ಕೆ ಹಚ್ಚಿಸಬೇಕು.

ಹೀಗೆ ಚಿಕ್ಕ ವಯಸ್ಸಿನಲ್ಲೇ ಸಾಧನೆಯ ಪ್ರಯತ್ನಕ್ಕೆ ಹಚ್ಚಿ ಸಫಲರಾದವರು ಹಲವರಿದ್ದಾರೆ. ಉದಾಹರಣೆಗೆ ಗಾಲ್ಫ್ ಆಟದ ಜೀವಂತ ದಂತಕತೆ ಟೈಗರ್ ವುಡ್. ಟೈಗರ್ ಏಳು ತಿಂಗಳ ಮಗುವಾಗಿದ್ದಾಗ ಆತನ ತಂದೆ ಪುಟ್ಟ ಗಾಲ್ಫ್ ಬ್ಯಾಟ್ (ಪಟ್ಟರ್) ಅನ್ನು ಕೈಗೆ ಕೊಟ್ಟಿದ್ದರಂತೆ. ಹತ್ತು ತಿಂಗಳ ಮಗುವಾದ ಟೈಗರ್ ತಂದೆ ಪಟ್ಟರ್ ಅನ್ನು ಬೀಸುವುದನ್ನು ನೋಡಿ ಮಗು ಟೈಗರ್ ಕೂಡ ತಂದೆಯಂತೆ ಕೈ ಬೀಸುತ್ತಿದ್ದನಂತೆ. ಟೈಗರ್ ಎರಡನೆಯ ವರ್ಷವಾಗುವುದರಲ್ಲಿ ಪಟ್ಟರ್ ಅನ್ನು ಬೀಸಿ ಗಾಲ್ಫ್ ಬಾಲ್ ಅನ್ನು ಹೊಡೆಯುವುದನ್ನು ಕಲಿತುಬಿಟ್ಟಿದ್ದ. ಆತನನ್ನು ಅಂದೇ ಅಮೆರಿಕದ ರಾಷ್ಟ್ರೀಯ ವಾಹಿನಿಯೊಂದು ಜನರಿಗೆ ತೋರಿಸಿ ಎಲ್ಲರ ಅಚ್ಚರಿಗೆ ಪಾತ್ರನಾಗಿದ್ದ. ಟೈಗರ್ ಅನ್ನು ಆತನ ತಂದೆಯೇ ಚಿಕ್ಕಂದಿನಿಂದ ರೂಪಿಸಿದ್ದು. ಟೈಗರ್ ತನ್ನ ಇಪ್ಪತ್ತೊಂದನೆಯ ವಯಸ್ಸು ಮುಟ್ಟುವಾಗಲೇ ಜಗತ್ತಿನ ಅತಿ ಶ್ರೇಷ್ಠ ಗಾಲ್ಫ್ ಆಟಗಾರನಾಗಿ ಹೊರ ಹೊಮ್ಮಿದ. ಟೈಗರ್ ವುಡ್‌ನ ಕಥೆ ಕೇಳಿದರೆ ಎಲ್ಲ ತಂದೆಗೆ ತನ್ನ ಮಗನನ್ನು ಇದೆ ರೀತಿ ಬೆಳೆಸಿ ಸಾಧಕನನ್ನಾಗಿಸಬೇಕು ಎಂದೆನಿಸುತ್ತದೆ. ಈ ಇಡೀ ಪ್ರಕರಣದಲ್ಲಿ ಟೈಗರ್‌ನ ಆಟದ ಚಾಕಚಕ್ಯತೆಗಿಂತ ಆತನ ಬಾಲ್ಯದಿಂದ ಪಟ್ಟ ಪ್ರಯತ್ನ ಮತ್ತು ಆತನ ತಂದೆಯ ಶ್ರಮವಷ್ಟೇ ಸಾಧನೆಗೆ ಕಾರಣವೆನಿಸುತ್ತದೆ. ಹಾಗಾದರೆ ಕೇವಲ ಅದೇ ಹಾದಿಯನ್ನು ಯಥಾವತ್ತು ಇನ್ನೊಬ್ಬ ತಂದೆ ಮಾಡಿದರೆ ಇನ್ನೊಬ್ಬ ಟೈಗರ್ ತಯಾರು ಮಾಡಬಹುದೇ ಎನ್ನುವ ಪ್ರಶ್ನೆ ಹುಟ್ಟುತ್ತದೆ. ಈ ಟೈಗರ್ ವುಡ್‌ನ ಕಥೆಯನ್ನು ಕೂಡ Outlier ಪುಸ್ತಕದ ಹತ್ತು ಸಾವಿರ ತಾಸಿನ ಸಿದ್ಧಾಂತಕ್ಕೆ ಬಳಸಿಕೊಳ್ಳಲಾಗಿದೆ.

ಹಲವು ಪೋಷಕರು ಕೂಡ ಇಂಥದ್ದೇ ಕೆಲಸಕ್ಕೆ ಹೊರಟು ನಿಲ್ಲುವುದನ್ನು ನಾನು ನೋಡಿದ್ದೇನೆ, ನೀವೂ ನೋಡಿರುತ್ತೀರಿ. ಮಗುವಿಗೆ ಇಷ್ಟವಿದೆಯೋ ಇಲ್ಲವೋ, ಅಥವಾ ಇಷ್ಟ ಇದೆಯೋ ಇಲ್ಲವೋ ಎನ್ನುವ ಅರಿವಾಗುವ ವಯಸ್ಸು ಮತ್ತು ಮ್ಯಾಚುರಿಟಿ ಹುಟ್ಟುವ ಮೊದಲೇ ಏನೋ ಒಂದು ಪ್ರಯತ್ನಕ್ಕೆ ಹಚ್ಚಿಸುತ್ತಾರೆ. ಈಗಿನಿಂದಲೇ ಪ್ರಯತ್ನಪಟ್ಟರೆ ದೊಡ್ಡ ಸಾಧಕನಾಗುತ್ತಾನೆ ಎಂದು ಮಗುವಿನ ಮೇಲೆ ಎಲ್ಲಿಲ್ಲದ ಒತ್ತಡವನ್ನು ಹೇರುತ್ತಾರೆ. ಆಟಕ್ಕೋ, ಸಂಗೀತಕ್ಕೋ ಅಥವಾ ಇನ್ಯಾವುದೋ ಒಂದು ಕ್ಷೇತ್ರವನ್ನಾರಿಸಿ ಮಗುವಿನ ಬಾಲ್ಯ ಸಹಜ ಚಟುವಟಿಕೆಗೆ ಕೂಡ ಅವಕಾಶ ಕೊಡದೇ, ಮಗುವಿನ ಜಗತ್ತೇ ಒಂದು ತಮ್ಮಿಷ್ಟದ ಸಾಧನೆಗೆ ಸೀಮಿತವಾಗಿರಬೇಕೆಂದು ಹೊರಡುತ್ತಾರೆ. ಆ ಕ್ಷೇತ್ರದ ಸಾಧಕನ ಸಾಧನೆಯ ಹಾದಿಯನ್ನು ಅರ್ಧಂಬರ್ಧ ತಿಳಿದು ತನ್ನದೇ ಕಾಲ್ಪನಿಕ ಅಚ್ಚು ತಯಾರಿಸಿ - ಮಗು ಎನ್ನುವ ಎರಕವನ್ನು ಅದರಲ್ಲಿ ಹೊಯ್ದರೆ ಅದೇ ಸಾಧಕನ ರೂಪ ತಾಳಿಬಿಡುತ್ತಾನೆ ಎಂದು ಹೊರಡುತ್ತಾರೆ. 'ಆ ಸಾಧಕ ನಿನ್ನಂತೆಯೇ ಇದ್ದ - ಆತ ಇದನ್ನು ಮಾಡಿದ, ನೀನು ಹಾಗೆಯೇ ಮಾಡು - ಅವನಂತೆಯೇ ಆಗುತ್ತಿ' ಎಂದು ಹೇಳುವ ಅದೆಷ್ಟೋ ಪೋಷಕರಿದ್ದಾರೆ. ಹಲವು ಪೋಷಕರಿಗೆ ತಾನು ಕಂಡ ಕನಸನ್ನು ಮಗು ಸಾಧರಗೊಳಿಸಬೇಕು. ತನಗೇಕೆ ಸಾಧನೆ ಮಾಡಲಾಗಲಿಲ್ಲ ಎಂಬ ಕಾರಣಗಳನ್ನು ಹೆಕ್ಕಿ ಆ ಕಾರಣಗಳು ಮಗುವಿಗೆ ಎದುರಾಗದಂತೆ ನೋಡಿಕೊಂಡು - 'ಈ ಸಮಸ್ಯೆ, ತೊಡಕು ನನಗಿತ್ತು, ನಿನಗಿಲ್ಲ, ಹಾಗಾಗಿ ನೀನು ಇದನ್ನು ಸಾಧಿಸಬೇಕು' ಎನ್ನುವ ತಾಕೀತು. ಅಲ್ಲೆಲ್ಲ ಮಗು ಕೂಡ ಇನ್ನೊಂದು ವ್ಯಕ್ತಿತ್ವ ಎನ್ನುವ ವಿಚಾರವೇ ಗೌಣ ಅಥವಾ ನಗಣ್ಯವಾಗುತ್ತದೆ. ಸಾಧನೆ ಎನ್ನುವುದು ಕೇವಲ ಪ್ರಯತ್ನವೊಂದರಿಂದಲೇ ಹುಟ್ಟುವ ಪ್ರಣಾಳ ಶಿಶು ಅನಿಸಿದಾಗ, ಅದೇ ಹತ್ತು ಸಾವಿರ ತಾಸಿನಂತಹ ಥಿಯರಿಯನ್ನು ಇಟ್ಟು ನಮ್ಮ ಮಕ್ಕಳನ್ನು ಸಾಧಕರನ್ನಾಗಿ ಮಾಡಲು ಹೊರಡುವುದು ಆಧುನಿಕ ಪೋಷಕತ್ವದ ಟ್ರೆಂಡ್ ಆದಂತಿದೆ.



ಟೈಗರ್ ವುಡ್ಸ್ ಬಿಟ್ಟು ಈ ರೀತಿ ಚಿಕ್ಕಂದಿನಿಂದಲೇ ಪೋಷಕರಿಂದ ಪ್ರಯತ್ನ ಹಚ್ಚಿಸಿಕೊಂಡು ಸಾಧನೆಯ ಮೆಟ್ಟಿಲು ಹತ್ತಿದ ಇನ್ನೂ ಹತ್ತಾರು ಉದಾಹರಣೆಗಳು ಇದೆ. ಆದರೆ ಸಾಧಕರನ್ನು ದೊಡ್ಡ ಸಂಖ್ಯೆಯಲ್ಲಿ ಅಭ್ಯಸಿಸಿದಾಗ ಇನ್ನು ಕೆಲವು, ಈ ಲೆಕ್ಕದ ಹೊರತಾದ ವಿಚಾರಗಳು ತಿಳಿದುಬರುತ್ತವೆ. ಹಾಗಾದರೆ ಎಲ್ಲ ಸಾಧಕರು ಚಿಕ್ಕ ಮಗುವಿರುವಾಗಲೇ ಪ್ರಯತ್ನಕ್ಕೆ ಹೊರಟವರೇ? ಚಿಕ್ಕ ವಯಸ್ಸಿನಲ್ಲೇ ಪ್ರಯತ್ನ ಶುರುಮಾಡಿಕೊಳ್ಳದಿದ್ದರೆ ಅತ್ಯುತ್ತಮರಾಗಲು ಸಾಧ್ಯವೇ ಇಲ್ಲವೇ?

ಜಗತ್ತಿನ ಅತ್ಯುಚ್ಚ ಆಟಗಾರರನ್ನು ಗಣನೆಗೆ ತೆಗೆದುಕೊಂಡರೆ ಅವರಲ್ಲಿ ಬಹುತೇಕರು ಸಾಧನೆಗೈದ ಆಟವನ್ನು ಆಡುವುದನ್ನು ಗಂಭೀರವಾಗಿ ತೆಗೆದುಕೊಳ್ಳುವ ಮೊದಲು ಹಲವಾರು ಆಟಗಳನ್ನು ಪ್ರಯತ್ನಿಸಿರುತ್ತಾರೆ. ಆಟಗಾರರಷ್ಟೇ ಅಲ್ಲ, ಎಲ್ಲ ಸಾಧಕರೂ ಕೇವಲ ಒಂದೇ ಒಂದು ವಿಷಯವನ್ನಿಟ್ಟು ಅದರಲ್ಲಿಯೇ ಪ್ರಯತ್ನಿಸಿ ಯಶಸ್ಸಾಗುವುದಕ್ಕಿಂತ ಹತ್ತಾರು ಬೇರೆ ಬೇರೆ ಪ್ರಯತ್ನಗಳನ್ನು ಮಾಡಿ ಕೊನೆಯಲ್ಲಿ ತಮ್ಮಿಷ್ಟದ ಒಂದನ್ನು ಆರಿಸಿಕೊಂಡು ಅದರಲ್ಲಿ ಸಾಧನೆ ಮಾಡುತ್ತಾರೆ. ಯಾವೊಬ್ಬ ಮಹಾನ್ ಸಾಧಕನನ್ನು ನೋಡಿದರೂ ಸಾಮಾನ್ಯವಾಗಿ ಆತ ಯಾವುದರಲ್ಲಿ ಸಾಧನೆ ಮಾಡಿರುತ್ತಾನೋ ಅದನ್ನು ಬಿಟ್ಟು ಇನ್ನೊಂದಿಷ್ಟು ವಿಷಯಗಳಲ್ಲಿ ಪರಿಣಿತಿ ಹೊಂದಿರುತ್ತಾನೆ. ಅದಕ್ಕೆ ಕಾರಣ ಆತ ಇನ್ನೊಂದಿಷ್ಟು ವಿಷಯಗಳಲ್ಲಿ ಪ್ರಯತ್ನಿಸಿರುತ್ತಾನೆ ಎಂದೇ ಅರ್ಥ.

ರೋಜರ್ ಫೆಡರರ್ ವಿಶ್ವ ಕಂಡ ಅತ್ಯುಚ್ಚ - ಶ್ರೇಷ್ಠ ಟೆನಿಸ್ ಆಟಗಾರನಾಗುವ ಮೊದಲು ಬಾಸ್ಕೆಟ್ ಬಾಲ್, ಟೇಬಲ್ ಟೆನಿಸ್, ಈಜು, ಬಾಕ್ಸಿಂಗ್ ಹೀಗೆ ಹತ್ತಾರು ಆಟಗಳಲ್ಲಿ ಪ್ರಯತ್ನಿಸಿ ಕೊನೆಯಲ್ಲಿ ಟೆನಿಸ್ ಅನ್ನು ಆರಿಸಿಕೊಂಡವ. ಪ್ರತಿಯೊಬ್ಬ ಶ್ರೇಷ್ಠ ಆಟಗಾರರದ್ದೆಲ್ಲ ಇದೇ ಕಥೆ. ಪ್ರತಿಯೊಬ್ಬ ಅಪ್ರತಿಮ ವಿಜ್ಞಾನಿ, ಸಿಇಒ ಎಲ್ಲರೂ ಇನ್ನೊಂದು ಜಗತ್ತೇ ತಿಳಿದಿರದ ಹವ್ಯಾಸ ಇಷ್ಟಪಟ್ಟವರಾಗಿರುತ್ತಾರೆ. ಇವರನ್ನೆಲ್ಲ ಮಲ್ಟಿ ಟ್ಯಾಲೆಂಟೆಡ್ ಎನ್ನುವುದಕ್ಕಿಂತ ಇವರು ಹಲವಾರು ಸ್ಯಾಂಪ್ಲಿಂಗ್ ಮಾಡಿರುತ್ತಾರೆ ಮತ್ತು ತದನಂತರ ತಮ್ಮಿಷ್ಟದ ಒಂದನ್ನು ಆರಿಸಿಕೊಂಡವರಾಗಿರುತ್ತಾರೆ ಎನ್ನುವುದನ್ನು ನಾವು ಗ್ರಹಿಸಬೇಕಾಗುತ್ತದೆ. ಇದರ ಬದಲು ಸಾಧಕ ಚಿಕ್ಕಂದಿನಲ್ಲೇ ಪ್ರಯತ್ನಿಸಿ ಆಮೇಲೆ ಸಾಧಿಸಿದ ಎನ್ನುವ ಒಂದೇ ವಿಚಾರವನ್ನು ಪರಿಗಣಿಸಿ ಅದನ್ನೇ ಸಾಧನೆಯ ಗುಟ್ಟು ಎಂದು ನಿಮ್ಮ ಮಗುವನ್ನು 'ಸ್ಯಾಂಪ್ಲಿಂಗ್'ಗೆ ಅವಕಾಶವೇ ಕೊಡದಿದ್ದಲ್ಲಿ ಆತ / ಆಕೆ ಮಹಾನ್ ಸಾಧಕರಾಗುವ ಸಾಧ್ಯತೆ ತೀರಾ ಕಡಿಮೆ. ಅದೇ ಕಾರಣಕ್ಕೆ ಚಿಕ್ಕಂದಿನಲ್ಲಿ ಹೆಸರು ಮಾಡಿದ, ಟಿವಿಯಲ್ಲಿ ಪತ್ರಿಕೆಯಲ್ಲಿ ಅರಳುತ್ತಿರುವ ಬಾಲ ಪ್ರತಿಭೆ ಎಂದು ಹೆಸರುವಾಸಿಯಾಗುವ ಹಲವಾರು ಮಕ್ಕಳು ಆಮೇಲೆ ಹೇಳ ಹೆಸರಿಲ್ಲದಂತೆ ಮರೆಯಾಗುವುದು. ಸ್ಪೆಲ್ಲಿಂಗ್ ಬೀ ಆದ ಮಕ್ಕಳು ನಂತರ ಇಂಗ್ಲಿಷ್‌ನಲ್ಲಿ ಯಾವೊಂದು ಸಾಧನೆಯನ್ನು ಮಾಡದೇ ಇರುವುದಕ್ಕೆ, ಮ್ಯಾಥ್ ಬೀ ಆದವರು ಕೊನೆಗೆ ಬೇರೊಂದು ವಿಷಯವನ್ನು ಇಷ್ಟಪಡುವುದಕ್ಕೆ ಶುರುಮಾಡುವುದಕ್ಕೆ ಕೂಡ ಇದೆ ಕಾರಣ.

ನಮ್ಮಲ್ಲಿ ಬಹುತೇಕ ಪಾಲಕರಿಗೆ ಮಗುವನ್ನು ಬೆಳೆಸುವುದು ಒಂದು ರೀತಿಯಲ್ಲಿ ಅರಲು ಗದ್ದೆಯಲ್ಲಿ ಕೋಣನನ್ನು ಓಡಿಸಿದಂತೆ. ಜಗತ್ತು ತುಂಬಾ ಕಾಂಪಿಟೇಟಿವ್ ಎನ್ನುವ ವಿಚಾರದಿಂದ ಹುಟ್ಟುವ ಆತಂಕ ಪಾಲಕರನ್ನು ಏನೇನನ್ನೆಲ್ಲ ಮಾಡಿಸುತ್ತದೆ. ಇನ್ನು ಕೆಲವು ಪಾಲಕರು ಈ ಸ್ಯಾಂಪ್ಲಿಂಗ್ ಅನ್ನೇ ಅತಿಯಾಗಿ ಮಾಡುತ್ತಾರೆ. ಚಿಕ್ಕಂದಿನಲ್ಲೇ ಸಂಗೀತ ಕಲಿಸಬೇಕು, ಕರಾಟೆ ಬ್ಲಾಕ್ ಬೆಲ್ಟ್ ಮಾಡಬೇಕು, ಚೆಸ್ ಕಲಿಸಬೇಕು, ಇಂಗ್ಲಿಷ್ ಕಲಿಸಬೇಕು ಹೀಗೆ ಮಗುವಿಗೆ ಹತ್ತಾರು ಕ್ಲಾಸಿಗೆ ಹಾಕಿ ಮಗುವಿಗೆ ಅವಶ್ಯಕವಿರುವ ಆಟೋಟವನ್ನೇ ಬೈದು ಮಾಡಿಸುತ್ತಾರೆ. ಇದು ಇನ್ನೊಂದು ವಿಪರೀತ. ಪ್ರತಿಯೊಬ್ಬ ಮಗುವಿಗೂ ಹತ್ತಾರು ಅವಕಾಶಗಳ ಅವಶ್ಯಕತೆಯಿರುತ್ತದೆ ಆದರೆ ಅವಕಾಶಗಳೇ ಅತಿಯಾಗಬಾರದು ಕೂಡ. ಪೋಷಕರಾದವರು ಅವಕಾಶವನ್ನು ಹದವಾಗಿ ಒದಗಿಸಬೇಕು ಮತ್ತು ಮಗು ಯಾವುದನ್ನು ಆಯ್ಕೆಮಾಡಿಕೊಳ್ಳುತ್ತದೋ ಅದಕ್ಕೆ ಬೆಂಬಲ ಕೊಡಬೇಕೆ ವಿನಃ ತಂದೆ ತಾಯಿ ಸಾಧಿಸಬೇಕೆನ್ನುವ ವಿಷಯವನ್ನು ಮಗು ಸಾಧಿಸಬೇಕೆನ್ನುವುದು ಶತ ಮೂರ್ಖತನ ಮತ್ತು ಬಾಲಿಶ. ಕೆಲವೊಮ್ಮೆ ಮಗು ಒಂದನ್ನು ಅರ್ಧಕ್ಕೆ ನಿಲ್ಲಿಸಿ ಇನ್ನೊಂದಕ್ಕೆ ಕೈ ಹಾಕಲು ಹೊರಡುತ್ತದೆ. ಇದು ಮಗುವಿನ ಚಂಚಲತೆ ಎಂದು ಪರಿಗಣಿಸುವುದಕ್ಕಿಂತ ಮಗುವಿನ ಇಷ್ಟ ಮತ್ತು ಒಲವು ಎನ್ನುವುದನ್ನು ಪೋಷಕರು ಅರಿಯಬೇಕು. ಪ್ರತಿಯೊಬ್ಬ ಮಗು ಕೂಡ ಇಂಥದ್ದೊಂದು ಸ್ಯಾಂಪ್ಲಿಂಗ್ ಪೀರಿಯೆಡ್ ಅನ್ನು ಅನುಭವಿಸಬೇಕು. ಅದಕ್ಕೆ ಅವಕಾಶವನ್ನೊದಗಿಸುವ ಕೆಲಸ ಮಾತ್ರ ಪೋಷಕರು ಮಾಡಬೇಕು. ಮಗುವಿನಲ್ಲಿ ಉತ್ಕಟ ಇಷ್ಟ ಅದಾಗಿಯೇ ಹೊಟ್ಟಬೇಕೇ ವಿನಃ ಅದನ್ನು ಒತ್ತಾಯದಿಂದ ಮೂಡಿಸಲು ಯಾವೊಬ್ಬ ಪಾಲಕರೂ ಕೈ ಹಾಕಬಾರದು. ಅದಲ್ಲದೇ ಪ್ರತಿಯೊಬ್ಬ ಮಗುವೂ ಬೆಳೆದು ಒತ್ತಾಯಕ್ಕೆ ಮಹಾನ್ ಸಾಧಕರಾಗಿಬಿಡುವುದಿಲ್ಲ ಎನ್ನುವ ಸೂಕ್ಷ್ಮ ಪಾಲಕರಲ್ಲಿ ಮೂಡಬೇಕು. You never own your kid.ತಂದೆ ತಾಯಿಯಾಗುವುದೇ ಒಂದು ಭಾಗ್ಯ ಅದನ್ನು ಬಿಟ್ಟು ತಂದೆ ತಾಯಿಯಾದ ತಕ್ಷಣ ಮಗುವಿನ ಮೇಲೆ ಹಕ್ಕು ದತ್ತವಾಗಿಬಿಡುವುದಿಲ್ಲ ಎನ್ನುವ ಸೂಕ್ಷ್ಮದ ಅರಿವು ಪ್ರತಿಯೊಬ್ಬ ಪೋಷಕರಲ್ಲಿರಲೇ ಬೇಕು. ಈ ಸೂಕ್ಷ್ಮತೆಯೇ ಉತ್ತಮ ಪೋಷಕರನ್ನು ಉಳಿದವರಿಂದ ಪ್ರತ್ಯೇಕಿಸುವಂಥದ್ದು.

ಸಾಧನೆಗೆ ಯಾವುದೇ ಸಿದ್ಧ ಫಾರ್ಮುಲಾ ಅಥವಾ ಅಚ್ಚು ಇಲ್ಲ ಮತ್ತು ಮಕ್ಕಳು ತೆಳ್ಳಗಿನ ಎರಕವೂ ಅಲ್ಲ. ಮಕ್ಕಳನ್ನು ಸಾಧಕರನ್ನಾಗಿಸಬೇಕೆನ್ನುವ ವಿಪರೀತ ಹಂಬಲದ ನಡುವೆ ನಾವು ವಿಫಲ ಪೋಷಕರಾಗಬಾರದು. ಮಕ್ಕಳ ಸಾಧನೆ ನಮ್ಮ ಸಾಧನೆ, ಮಕ್ಕಳು ಏನಾದರೊಂದು ಸಾಧಿಸದಿದ್ದಲ್ಲಿ ಅದು ಪೋಷಕರಾದ ನಮ್ಮ ವೈಫಲ್ಯ ಎನ್ನುವ ಹುಚ್ಚು ಭಾವನೆಯಿಂದ ಮೊದಲು ಹೊರಬರಬೇಕು. 'ಸಾಧನೆ ಪ್ರನಾಳ ಶಿಶುವಲ್ಲ - ಸಾಧಕ ಒತ್ತಾಯಕ್ಕೆ ಹುಟ್ಟುವುದಿಲ್ಲ' ಎನ್ನುವ ಅರಿವನ್ನು ನಾವು ಪೋಷಕರು ಮೊದಲು ಹೊಂದಬೇಕು.

ಕಾಡುವ ಕಾರ್ಗಿಲ್ ಸಂಘರ್ಷದ ಹಸಿಹಸಿ ನೆನಪು

ತನ್ನಿಮಿತ್ತ
ಬೈಂದೂರು ಚಂದ್ರಶೇಖರ ನಾವಡ
vveditoped@gmail.com

1999ರಲ್ಲಿ ಕಾರ್ಗಿಲ್‌ನಿಂದ ಶತ್ರುಗಳನ್ನು ಹೊರಹಾಕುವ ಸೀಮಿತ ಪ್ರಮಾಣದಲ್ಲಿ ನಡೆದ ಕಾರ್ಯಾಚರಣೆ ಅಪರೇಶನ್ ವಿಜಯ್‌ಗೆ ಈ ತಿಂಗಳು 25 ವರ್ಷ ಪೂರ್ತಿಯಾಗಲಿದೆ. ಅಪರೇಶನ್ ವಿಜಯ್ ಪೂರ್ಣಪ್ರಮಾಣದ ಯುದ್ಧವಲ್ಲವಾದರೂ ಅದರ ಪರಿಣಾಮ ತುಂಬಾ ವ್ಯಾಪಕವಾಗಿತ್ತು. ಅದು ಕೇವಲ ಕಾರ್ಗಿಲ್ ಸೆಕ್ಟರಿಗೆ ಮಾತ್ರ ಸೀಮಿತವಾದ ಸಂಘರ್ಷವಾಗಿರಲಿಲ್ಲ. ಎರಡು ಪರಮಾಣು ಸಂಪನ್ನ ರಾಷ್ಟ್ರಗಳ ನಡುವಿನ ಸಂಘರ್ಷವಾದದ್ದರಿಂದ ವಿಶ್ವಸಮುದಾಯವೂ ಕೂಡಾ ಚಿಂತಿತವಾಗಿತ್ತು. ಸಂಪೂರ್ಣ ನಿಯಂತ್ರಣರೇಖೆ ಪ್ರಕ್ಷುಬ್ಧವಾಗಿತ್ತು. ಭಾರತೀಯ ಸೇನೆ ನಿಯಂತ್ರಣ ರೇಖೆಯಲ್ಲಿ ಸನ್ನದ್ಧ ಸ್ಥಿತಿಯಲ್ಲಿತ್ತು. ಸರಕಾರ ಸೇನೆಗೆ ಗಡಿ ದಾಟದೇ ಶತ್ರುಗಳನ್ನು ಹೊರದಬ್ಬುವ ಆದೇಶ ನೀಡಿತ್ತು. ಆದರೂ ಸಂಘರ್ಷ ಯಾವುದೇ ಕ್ಷಣದಲ್ಲೂ ಪೂರ್ಣಪ್ರಮಾಣದ ಯುದ್ಧದಲ್ಲಿ ಪರಿವರ್ತನೆಯಾಗುವ ಸಾಧ್ಯತೆಯೂ ಇತ್ತು. ಸ್ಥಿತಿ ಸ್ಫೋಟಕ ಎನ್ನುವಂತಿತ್ತು.

ಜಮ್ಮು ಡಿವಿಜನ್ನಿನ ಪಲ್ಲನವಾಲಾ ಸೆಕ್ಟರಿನ ನಿಯಂತ್ರಣ ರೇಖೆಯಲ್ಲಿ ನಿಯೋಜನೆಗೊಂಡ ಮಹಾರ್ ರೆಜಿಮೆಂಟಿನ 19ನೇ ಬಟಾಲಿಯನ್‌ನಲ್ಲಿ ಸೇವೆಯಲ್ಲಿದ್ದ ನನಗೆ ಆ ದಿನಗಳ ನೆನಪು ಇನ್ನೂ ಮನದಲ್ಲಿ ಹಚ್ಚ ಹಸುರಾಗಿಯೇ ಇದೆ. ಕಾಶ್ಮೀರ ಕಣಿವೆಯಂತಲ್ಲದೇ ಬಯಲು ಪ್ರದೇಶವಾಗಿದ್ದ ಪಲ್ಲನವಾಲದ ಜನರು ಕೃಷಿಯಲ್ಲೂ ಮತ್ತು ಸೇನೆಯಲ್ಲೂ ತೊಡಗಿಸಿಕೊಂಡಿದ್ದರು. ಸುಖ-ಶಾಂತಿಯುತ ಹಾಗೂ ಸಮೃದ್ಧ ಬದುಕನ್ನು ಕಟ್ಟಿಕೊಂಡಿದ್ದರು. ಜನರಿಂದ ಸದಾ ಗಿಜಿಗುಡುತ್ತಿದ್ದ ಪಲ್ಲನವಾಲಾ ಟೌನ್ ಉಭಯ ದೇಶಗಳ ನಡುವಿನ ಸಂಘರ್ಷದ ಬಿಸಿ ಹೆಚ್ಚುತ್ತಿದ್ದಂತೆ ನಿರ್ಜನವಾಗಿತ್ತು. ನಿಯಂತ್ರಣ ರೇಖೆಯಿಂದ ಕೆಲವೇ ಕಿ.ಮೀ. ಸಮೀಪದ ನಗರದ ಅಂಗಡಿ-ಮುಂಗಟ್ಟು, ಜನವಸತಿ ಪ್ರದೇಶದ ಮೇಲೆ ಮೇ ತಿಂಗಳ ಎರಡು-ಮೂರನೇ ವಾರದಲ್ಲಿ ಪಾಕಿಸ್ತಾನದ ಶೆಲ್ ದಾಳಿ ಹೆಚ್ಚುತ್ತಿದ್ದಂತೆ ಸುರಕ್ಷಿತ ಸ್ಥಾನಗಳಿಗೆ ಜನರು ಗುಳೇ ಹೋಗಬೇಕಾಯಿತು. ಅಖ್ನೂರ್‌ನಿಂದ ಪಲ್ಲನ'ವಾಲಾ ತಲುಪಬೇಕಾದರೆ ಮಧ್ಯದಲ್ಲಿ ಸಿಗುವ ಜೋಡಿಯಾ ಟೌನ್ ಜನರೂ ಸಹಾ ತಮ್ಮ ತಮ್ಮ ಮನೆಗಳನ್ನು ಖಾಲಿ ಮಾಡಬೇಕಾಯಿತು.

ರೈತಾಪಿ ವರ್ಗದ ಪಡಿಪಾಟಲು

ನಿಯಂತ್ರಣ ರೇಖೆಯಿಂದ 2-3 ಕಿ.ಮೀ. ಹಿಂದೆಯೇ ಸೈನಿಕ ಚೆಕ್‌ಪೋಸ್ಟ್ ಇರುತ್ತಿದ್ದವು. ಅಲ್ಲಿಂದ ಮುಂದಕ್ಕೆ ತಮ್ಮ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ರೈತಾಪಿ ವರ್ಗಕ್ಕೆ ಹಗಲಲ್ಲಿ ಸೇನೆಯ ವತಿಯಿಂದ ವಿತರಿಸಲಾದ ಪಾಸ್ ತೋರಿಸಿ ಹೋಗಲು ಅನುಮತಿ ಇತ್ತು. 1971ರ ಯುದ್ಧದಲ್ಲಿ ನಿಯಂತ್ರಣ ರೇಖೆಯಿಂದ 30 ಕಿಮೀ ದೂರದವರೆಗೂ ನುಗ್ಗಿದ್ದ ಪಾಕಿಸ್ತಾನೀಯರ ಅಟ್ಟಹಾಸವನ್ನು ಕಂಡು ಕೇಳಿದ್ದ ವೃದ್ಧರ ಬಾಯಿಯಿಂದ ಭಯವಾಹಕ ನೆನಪಿನ ಸುರುಳಿಯನ್ನು ಕೇಳುತ್ತಿದ್ದ ಯುವಕರು ಇನ್ನಷ್ಟು ಗಾಭರಿಗೊಳ್ಳುತ್ತಿದ್ದರು. ಸುಮಾರು ಮೂರೂವರೆ ದಶಕಗಳಿಂದ ಶಾಂತ ಗಡಿಯನ್ನು ಕಂಡು ಬೆಳೆದು ದೊಡ್ಡವರಾಗಿದ್ದ ಯುವ ಪೀಳಿಗೆ ಯುದ್ಧದ ಕಾರ್ಮೋಡ ಕಂಡು ಕಂಗಾಲಾಗಿದ್ದರು. ಹಳ್ಳಿಗೆ ಹಳ್ಳಿಯೇ ಖಾಲಿಯಾಗಿದ್ದವು. ಜಾನುವಾರುಗಳು ಅನಾಥವಾಗಿದ್ದವು. ಪಾಕಿಸ್ತಾನದ ಕಡೆಯಿಂದ ನಡೆಯುವ ಮೋರ್ಟಾರ್ ಫಾಯರ್‌ಗೆ ಹೊಲಗದ್ದೆಗಳಲ್ಲಿ ಕೆಲಸ ಮಾಡುವ ವೃದ್ಧರು, ಮಹಿಳೆಯರು, ಮಕ್ಕಳು, ಜಾನುವಾರುಗಳು ಬಲಿಯಾಗುತ್ತಿದ್ದ ಹೃದಯ ವಿದ್ರಾವಕ ಘಟನೆಗಳು ನಿತ್ಯ ಎಂಬಂತೆ ಘಟಿಸುತ್ತಿದ್ದವು. ಸುಂದರ ಆಶಿಯಾನವನ್ನು ಕಟ್ಟಿಕೊಂಡು ನೆಮ್ಮದಿಯಿಂದ ಜೀವನ ಕಳೆಯುತ್ತಿದ್ದವರಿಗೆ ಒಮ್ಮೆಗೇ ಯುದ್ಧದ ಕಾರ್ಮೋಡ ಕವಿದಾಗ ಸಹಜವಾಗಿಯೇ ಜೀವನ ನರಕಸದೃಶವಾಗಿತ್ತು.

ದೂರದ ಕಾರ್ಗಿಲ್‌ನಲ್ಲಿ ನಡೆಯುತ್ತಿದ್ದ ಸೈನಿಕ ಸಂಘರ್ಷ ಗಡಿಯುದ್ದಕ್ಕೂ ವಾತಾವರಣ ಉದ್ವಿಗ್ನವಾಗಿಸಿತ್ತು. ಸಂಪೂರ್ಣ ನಿಯಂತ್ರಣ ರೇಖೆ ಎರಡೂ ಕಡೆಯಿಂದ ನಡೆಯುತ್ತಿದ್ದ ಫಾಯರಿಂಗ್‌ನಿಂದ ಸಕ್ರಿಯವಾಗಿತ್ತು. ಜೀರೋ ಲೈನ್‌ನಲ್ಲಿ ನಿಯೋಜನೆಗೊಂಡಿದ್ದ ಯೋಧರು ಪೋಸ್ಟ್‌ಗಳಲ್ಲಿ ಎರಡೆರಡು ಗಂಟೆಗಳಿಗೊಮ್ಮೆ ಪಾಳಿ ಬದಲಿ ಮಾಡಿಕೊಳ್ಳುತ್ತಾ ಶತ್ರುಗಳ ಕಡೆಯಲ್ಲಿ ನಡೆಯುತ್ತಿದ್ದ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿರುತ್ತಿದ್ದರು. ಸಣ್ಣ ರೈಫಲ್‌ಗಳ ಫಾಯರ್ ನಿರಂತರ ಎಂಬಂತೆ ನಡೆಯುತ್ತಿತ್ತು. ಚಂದ್ರನ ಬೆಳಕಿಲ್ಲದ ದಿನಗಳಲ್ಲಿ ರಾತ್ರಿಯ ಕಾರಿರುಳಿನಲ್ಲಿ ಪ್ಯಾರಾ ಫಾಯರ್ ಮಾಡಲಾಗುತ್ತಿತ್ತು. ಆಗಸದ ಎತ್ತರದಲ್ಲಿ ಒಂದೆರಡು ನಿಮಿಷಗಳ ಕಾಲ ಹೊತ್ತಿ ಉರಿಯುತ್ತಿದ್ದ ಪ್ಯಾರಾ ಫಾಯರ್‌ನಿಂದ ಸುತ್ತಲ ದೃಶ್ಯ ಸ್ಪಷ್ಟವಾಗಿ ಕಾಣುತ್ತಿತ್ತು. ದೂರದವರೆಗೆ ದೃಷ್ಟಿ ಹಾಯಿಸಿ ವೈರಿಗಳು ಇಲ್ಲವೆಂದು ಖಚಿತವಾದಾಗ ನಿರಾಳವೆನಿಸುತ್ತಿತ್ತು. ಜೀರೋ ಲೈನ್‌ನಲ್ಲಿ ತೈನಾತಾದ ಸೈನಿಕರಿಗೆ ಮದ್ದುಗುಂಡುಗಳು ಮತ್ತು ಆಹಾರ ತಲುಪಿಸಲು ಆಳೆತ್ತರದ ಕುಣಿ ತೋಡಿ ದಾರಿ ಮಾಡಲಾಗಿತ್ತು.

ಬದಲಾದ ಸೈನಿಕರ ದಿನಚರಿ

ಕಾರ್ಗಿಲ್‌ನಲ್ಲಿ ಸಂಘರ್ಷದ ಕಾವೇರಿದಂತೆ ಯೋಧರ ದಿನನಿತ್ಯದ ಚಟುವಟಿಕೆಗಳ ಮೇಲೆ ಅದು ತನ್ನ ಪ್ರಭಾವ ಬೀರಿತು. ಪಾಕಿಸ್ತಾನೀಯರಿಗೆ ನಾವು ಹಾಗೂ ನಮಗೆ ಅವರು ಅಸ್ಪಷ್ಟವಾಗಿಯಾದರೂ ಸರಿ ಕಾಣುವಷ್ಟು ಸನಿಹದಲ್ಲಿದ್ದರಿಂದ ಉಭಯತ್ರರು ಪರಸ್ಪರರ ಚಲನವಲನ ವೀಕ್ಷಿಸಬಹುದಾಗಿತ್ತು. ಶಾಂತಿ ಕಾಲದಲ್ಲಿ ಪರಸ್ಪರರು ದೂರದಲ್ಲೇ ಶಿಷ್ಟಾಚಾರಗಳಿಂದ ವಂದನೆ ಪ್ರತಿವಂದನೆ ಮಾಡಿಕೊಳ್ಳುವ ಸ್ನೇಹಮಯ ವಾತಾವರಣ ಅಲ್ಲಿತ್ತು. ಆಗಾಗ ಅಲ್ಲಲ್ಲಿ ಭಾರತ-ಪಾಕ್ ಲೋಕಲ್ ಕಮಾಂಡರ್‌ಗಳ ಕೋರಿಕೆಯ ಮೇರೆಗೆ ನಡೆಯುತ್ತಿದ್ದ ಫ್ಲಾಗ್ ಮೀಟಿಂಗ್‌ಗಳಲ್ಲಿ ಒಂದೆಡೆ ಸೇರುವ, ಪರಸ್ಪರರು ಮಾತನಾಡುವ ಅವಕಾಶ ದೊರೆಯುತ್ತಿದ್ದವು. ಆದರೆ ಕಾರ್ಗಿಲ್ ಕದನದ ಕಾವೇರುತ್ತಿದ್ದಂತೆ ಉಭಯ ಸೈನಿಕರು ಪರಸ್ಪರರ ರಕ್ತಪಿಪಾಸುಗಳಾದಂತೆ ಅಲ್ಲಿನ ಪರಿದೃಶ್ಯ ಸಂಪೂರ್ಣ ಬದಲಾಯಿತು.

ದಿನದಲ್ಲೂ ನಡೆಯುತ್ತಿದ್ದ ಫಾಯರಿಂಗ್‌ನಿಂದಾಗಿ ನಮ್ಮ ಚಲನೆಗಳಿಗೆ ಬ್ರೇಕ್ ಬಿದ್ದವು. ಬೆಳಿಗ್ಗೆಯೇ ಪೂರ್ಣ ದಿನಕ್ಕಾಗುವಷ್ಟು ಕಿಚಡಿ ಅಥವಾ ಪೂರಿ ಪಲ್ಯ ನೀಡಲಾಗುತ್ತಿತ್ತು. ಇನ್ನು ರಾತ್ರಿ ಬಂಕರ್‌ಗಳಲ್ಲಿ ಬೂಟು ತೊಟ್ಟು, ಮಗ್ಗುಲಲ್ಲಿ ಹೆಲ್ಮೆಟ್, ಮ್ಯಾಗಜಿನ್ ಲೋಡ್ ಮಾಡಿರುವ ಬಂದೂಕು ಇಟ್ಟುಕೊಂಡೇ ಮಲಗಬೇಕಾದ ಸ್ಥಿತಿ ಇತ್ತು. ರಾತ್ರಿಯಿಡೀ ಆಗಾಗ್ಗೆ ನಡೆಯುತ್ತಿದ್ದ ಲೈಟ್ ಮೆಷೀನ್ ಗನ್ ಫಾಯರಿಂಗ್ ಯೋಧರಿಗೆ ಶತ್ರು ತನ್ನ ಪೋಸ್ಟ್‌ನಲ್ಲೇ ಇರುವ ಹಾಗೂ ತಮ್ಮೆಡೆಗೆ ಬರುತ್ತಿಲ್ಲದರ ಖಾತರಿ ನೀಡುವಂತಿರುತ್ತಿತ್ತು. ವೈರಿಗಳ ಪೋಸ್ಟ್ ಕಡೆಯಿಂದ ಫಾಯರಿಂಗ್ ನಿಂತರೆ ಅವರೆಲ್ಲಿ ತಮ್ಮೆಡೆಗೆ ಬರುತ್ತಿರುವರೋ ಎನ್ನುವ ಸಂಶಯ ಕಾಡುವ ಸ್ಥಿತಿ ಇತ್ತು. ಸೆಕ್ಟರ್‌ನ ಎಲ್ಲೋ ನಡೆಯುವ ರೈಡ್‌ಗಳ ಪ್ರತೀಕಾರ ಇನ್ನೆಲ್ಲೋ ತೆಗೆದುಕೊಳ್ಳುವ ಅಪನಂಬಿಕೆಯ ವಾತಾವರಣದಿಂದಾಗಿ ಯೋಧರ ಮಾನಸಿಕ ಶಾಂತಿ ಕಾಣೆಯಾಗಿತ್ತು. ಯಾವ ಸಮಯದಲ್ಲಿ ಏನಾಗುವುದೋ ಎನ್ನುವ ಚಿಂತೆ ಕಾಡುತ್ತಿತ್ತು.

ನಾಗರಿಕರ ಬವಣೆ

ಅಪರೇಶನ್ ವಿಜಯದ ಕರಾಳ ಅನುಭವ ಆ ಸಮಯದಲ್ಲಿ ಲೈನ್ ಆಫ್ ಕಂಟ್ರೋಲ್‌ನಲ್ಲಿ ತೈನಾತಾದ ಸಕ್ರಿಯ ಫೀಲ್ಡ್ ಬಟಾಲಿಯನ್‌ಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಎಲ್ಲರ ಬಳಿಯೂ ಇರಬಹುದು. ಈಗಿನಂತೆ ಆಗಿನ್ನೂ ಮೊಬೈಲ್ ಕ್ರಾಂತಿ ಆಗಿಲ್ಲವಾದದ್ದರಿಂದ ಸಂಪರ್ಕ ಕೊರತೆಯಿಂದಾಗಿ ಸೈನಿಕರ ಜತೆಯಲ್ಲಿ ಅವರ ಕುಟುಂಬಸ್ಥರೂ ಮಾನಸಿಕವಾಗಿ ಬಳಲಬೇಕಾಯಿತು. ಸೋಲಿನ ಹತಾಶೆಯ ಪರಿಣಾಮವಾಗಿ ಪಾಕಿಸ್ತಾನದ ಕಡೆಯಿಂದ ಪರಮಾಣು ಅಸ್ತ್ರಪ್ರಯೋಗವಾದರೆ ಎನ್ನುವ ಭಯ ನಾಗರಿಕರನ್ನು ಕಾಡಿತ್ತು. ಸುಖ ಸಮೃದ್ಧಿಯಿಂದ ಜನರಿಂದ ತುಂಬಿ ಮೆರೆಯುತ್ತಿದ್ದ, ಕಿಲ ಕಿಲ ನಗುತ್ತಿದ್ದ ಪಲ್ಲನವಾಲಾದಂತಹ ಗಡಿಯಂಚಿನ ಪಟ್ಟಣಗಳು ಬಿಕೋ ಎನ್ನುತ್ತಿತ್ತು. ತಮ್ಮ ಜನ್ಮ ಭೂಮಿಯನ್ನು ತೊರೆದು ನಿರಾಶ್ರಿತರಂತೆ ಬದುಕಬೇಕಾದ ಸಾಮಾನ್ಯ ಜನರ ಮಾನಸಿಕ ಸ್ಥಿತಿ ಹೇಗಿರಬಹುದು? ಊಹಿಸಿಕೊಳ್ಳುವುದು ಸಹ ಕಠಿಣ.

ಮಾನವ ಇತಿಹಾಸದಲ್ಲಿ ನಡೆದ ಅಸಂಖ್ಯ ಯುದ್ಧಗಳ ಭೀಕರ ಪರಿಣಾಮವನ್ನು ಕೇವಲ ಇತಿಹಾಸದ ಪುಸ್ತಕಗಳಲ್ಲಿ ಓದಿ ತಿಳಿದ ಜನರಿಗೆ ಗಡಿಯಲ್ಲಿ ಪಹರೆಗೆ ನಿಂತ ಯೋಧರ, ನೆಲೆಸಿದ ನಾಗರಿಕರ ಬವಣೆ ಕಟ್ಟುಕಥೆಯಾಗಿ ಕಾಣಬಹುದು. ಗಡಿ ಘರ್ಷಣೆಯಿಂದ ಸಾವಿರಾರು ಮೈಲು ದೂರದಲ್ಲಿ ಹಾಯಾಗಿ ತಿಂದುಡು ಸುಖವಾಗಿ ನಿದ್ದೆ ಸವಿಯುವವರು ಪಾಕಿಸ್ತಾನಕ್ಕೆ ತಕ್ಕ ಬುದ್ಧಿ ಕಲಿಸಿ ಎಂದು ಘೋಷಣೆ ಕೂಗಬಲ್ಲರು. ಸೇನೆಯನ್ನು ತರತರವಾಗಿ ನಿಂದಿಸಬಲ್ಲರು. ಗಡಿಯಲ್ಲಿ ಕರ್ತವ್ಯ ನಿರತ ಯೋಧರ, ಹಲವಾರು ತಲೆಮಾರುಗಳಿಂದ ಅಲ್ಲಿ ನೆಲೆಸಿರುವ ನಾಗರಿಕರ ಕಠಿಣ ಬದುಕಿನ ಬವಣೆಯ ಯಥಾರ್ಥತೆಯ ಅನುಭವ ಅವರಿಗಾಗುವುದು ಸಾಧ್ಯವೇ?

(ಲೇಖಕರು: ಮಾಜಿ ಸೈನಿಕರು ಹಾಗೂ ಹವ್ಯಾಸಿ ಬರಹಗಾರರು)

ಒದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಈ ವಿಷಯವೇ ಅಸಂಬದ್ಧ!

ರಾಜಕಾರಣ, ಸಂಬಂಧ, ಸ್ನೇಹ ಇವೆಲ್ಲ ಬಣ್ಣ ಬದಲಾಯಿಸುವ ಒಂದು ಪ್ರಕ್ರಿಯೆ ಅಂದರೇನೇ ಒಳಿತು. ಸ್ವತಃ ರಾಜಕಾರಣಿಗಳೇ ಹೇಳುವಂತೆ, 'ರಾಜಕಾರಣ' ದಲ್ಲಿ ಯಾರೂ ಶಾಶ್ವತ ಮಿತ್ರರೂ ಅಲ್ಲ; ಶತ್ರುವೂ ಅಲ್ಲ. ಇದರ ರ್ಥ, ತಮಗೆ ಅನುಕೂಲವಾದಂತೆ ಬಣ್ಣ ಬದಲಾಯಿಸುವುದು. ಒಂದು ಸಮಯದಲ್ಲಿ ಶತ್ರುತ್ವ ಬೆಳೆಸಿಕೊಂಡ ರಾಜಕೀಯ ಪಕ್ಷಗಳು ಇಂದು 'ಮೈತ್ರಿ' ಪಕ್ಷಗಳಾಗಿ ತಮಗೆ ಬೇಕಾದ್ದನ್ನು ಪಡೆಯುತ್ತಿದ್ದಾರೆ. ಇಲ್ಲಿ ಸಂಬಂಧ ಎನ್ನವುದು ಅಧಿಕಾರವನ್ನು ಅವಲಂಭಿಸಿರುತ್ತದೆ. ಅಧಿಕಾರ ಸಿಕ್ಕುತ್ತದೆಂದರೆ ಅನ್ಯೋನ್ಯ. ಇಲ್ಲ ಅಂದರೆ ಏನೂ ಇಲ್ಲ. ಇದು ಕೇವಲ ಈಗಿತ್ತಲಾಗಿನ ಬೆಳವಣಿಗೆಯೂ ಅಲ್ಲ. ರಾಜಕೀಯ ಎಂದು ಹುಟ್ಟಿಕೊಂಡಿತೋ ಅಲ್ಲಿಂದ ಈ ರೀತಿಯ ವ್ಯವಾಹಾರ ನಡೆಯುತ್ತಲೇ ಇದೆ. ಹಾಗಂತ ಇಲ್ಲಿ ಯಾರೂ ಯಾರೊಬ್ಬರ ಮೇಲೂ ಬೇಸರ ಪಟ್ಟುಕೊಳ್ಳುವುದಾಗಲೀ, ಸಿಟ್ಟಾಗುವುದಾಗಲೀ ಇರುವುದೂ ಇಲ್ಲ. ಕಾರಣ, ರಾಜಕಾರಣ ಅಂದರೆ ಇವೆಲ್ಲ ಇರುವುದೇ ಎಂಬ ಸಿದ್ಧ ಸಿದ್ಧಾಂತಕ್ಕೆ ಬಂದಂತಿದೆ.

ಇನ್ನೂ ಖತರ್ನಾಖ್ ವಿಷಯವೆಂದರೆ, ರಾಜಕಾರಣಿಗಳ ಸಖ್ಯ ನಂಬುವಂತಹದೂ ಅಲ್ಲ. ಅವರ ಸಂಬಂಧ, ಸ್ನೇಹ, ಸಖ್ಯ ಯಾವಾಗ ಮುಳುವಾಗುತ್ತದೋ ಅಂತಗ್ರಹಿಸುವುದೂ ಕಷ್ಟ. ಒಬ್ಬ ರಾಜಕಾರಣಿ, ಇನ್ನೊಬ್ಬ ರಾಜಕಾರಣಿಯ ಸಂಬಂಧ ಬೆಳೆಸಿದರೆ ಅಷ್ಟು ಅಪಾಯ ಆಗಲಿಕ್ಕಿಲ್ಲ. ಕಾರಣ, ಇಬ್ಬರೂ ಒಂದೇ ದೋಣಿಯಲ್ಲಿ ಚಲಿಸುವವರು! ಒಬ್ಬರ ನಡೆಯನ್ನು ಅರಿಯುವುದು ಇನ್ನೊಬ್ಬರಿಕೆ ಕಷ್ಟವಾಗದು. ಅದೇ ಒಬ್ಬ ಸಾಮಾನ್ಯನನ ಸಂಬಂಧಕ್ಕೆ ಮುಂದಾದ ಅಂದರೆ, ಏನೋ ಗಂಡಾಂತರ ಕಾದಿದೆ ಅಂತಲೇ ಅರ್ಥ! ಇಂದು ರಾಜಕಾರಣಿಗಳ ಮೇಲಿನ ಅಭಿಪ್ರಾಯ ಅಷ್ಟೊಂದು ಕಲುಷಿತಗೊಳ್ಳುತ್ತಿದೆ. ತಮ್ಮ 'ಪ್ರಭಾವ' ಬೀರಿ ಏನು ಬೇಕಾದರೂ ಮಾಡಿಸುವ ಶಕ್ತಿಯನ್ನು ಒಬ್ಬ ರಾಜಕಾರಣಿ ಹೊಂದುತ್ತಾನೆ. ಇದು ನಿಜಕ್ಕೂದುರದೃಷ್ಟಕರ. ಆದರೂನಡೆಯುತ್ತಲೇ ಇರುವ ಅತಿ ಸಾಮಾನ್ಯ ಸಂಗತಿ!

ಹೀಗಾಗಿ, ಯಾರೇ ಆಗಲಿ ಒಬ್ಬ ರಾಜಕಾರಣಿಯ ಸ್ನೇಹ-ಸಂಬಂಧ. ಬೆಳೆಸುವಾಗ ಹತ್ತು ಬಾರಿ ಯೋಚಿಸಿ ಹೆಜ್ಜೆಯಿಡಬೇಕು. ಇಲ್ಲ ಅಂದರೆ ಏನೋ ಮಾಡಲು ಹೋಗಿ ಇನ್ನೇನೋ ಆಗಿ ಬದುಕನ್ನೇ ನರಕವಾಗಿಸಿಕೊಂಡರೂ ಆಶ್ಚರ್ಯವಿಲ್ಲ!

-**ಶಂಕರನಾರಾಯಣ ಭಟ್** ಹೊನ್ನಾವರ

ಹಿರಿಯ ನಾಗರಿಕರ ಅವಗಣನೆ

ಆದಾಯ ತೆರಿಗೆಯ ಹೊಸ ಪದ್ಧತಿಯ ನೆಪದಲ್ಲಿ ಹಿರಿಯ ನಾಗರಿಕರಿಗೆ ಕೊಡಲಾಗಿದ್ದ ವಿಶೇಷ ರಿಯಾಯಿತಿಗಳನ್ನು ಕಿತ್ತುಕೊಳ್ಳಲಾಗಿದೆ. ಮುಂಗಡ ಟ್ಯಾಕ್ಸ್ ಕಟ್ಟಬೇಕಾಗಿಲ್ಲ ಎನ್ನುವುದೊಂದೇ ಈಗ ಅವರಿಗೆ ಮತ್ತು ಸಾಮಾನ್ಯ ಕರದಾತರಿಗೆ ಉಳಿದಿರುವ ವ್ಯತ್ಯಾಸ. ಹೆಚ್ಚಿನ ಹಿರಿಯ ನಾಗರಿಕರು ಬಡ್ಡಿ ಆದಾಯವನ್ನೇ ನೆಚ್ಚಿರುವವರು. ಆದರೆ ಹಣದುಬ್ಬರ ದರ ಬಡ್ಡಿ ದರಕ್ಕಿಂತ ಹೆಚ್ಚು ಇರುವುದರಿಂದ ದೊರಕುವ ಅಲ್ಪ ಬಡ್ಡಿಯನ್ನು ಗಣನೆಗೆ ತೆಗೆದುಕೊಂಡರೂ ಬ್ಯಾಂಕಿನಲ್ಲಿಟ್ಟ ಹಣದ ಮೌಲ್ಯ ಕರಗುತ್ತಲೇ ಇರುತ್ತದೆ. ಅಂದರೆ ನಿಜ ಅರ್ಥದಲ್ಲಿ ಆದಾಯ ಎನ್ನಲಾಗದ ಬಡ್ಡಿಗೂ ಕರ ವಿಧಿಸಲಾಗುತ್ತಿದೆ. ಆದ್ದರಿಂದ ಹಿರಿಯ ನಾಗರಿಕರಿಗಾದರೂ ಹಳೆ ಪದ್ಧತಿಯಲ್ಲಿದ್ದಂತೆ ಹೊಸ ಪದ್ಧತಿಯಲ್ಲೂ ಬಡ್ಡಿ ಆದಾಯದಲ್ಲಿ ಒಂದಷ್ಟು ರಿಯಾಯಿತಿಯ ಅಗತ್ಯವಿದೆ.

-**ಚಿದಂಬರ ಕಾಕತ್ಕರ್** ಮಂಗಳೂರು

ಭಟ್ಟರ್ ಸ್ನ್ಯಾಕ್

● **ಸತ್ಯನಾರಾಯಣ ಕೆದಿಲಾಯ, ಸಂಡೂರು**
ಹೆಂಗಸರಿಗೆ ಇಲ್ಲದಿರುವ ಗುಣ ಅಂದ್ರೆ, ಯಾವುದು ?
– ಚಟ!

● **ಸಂಪತ ಕುಮಾರ, ಮದ್ದೂರು**
ನಾನಂತೂ ಹೆಂಗಸರು ಶವ ಹೊರುವುದನ್ನು ನೋಡಿಲ್ಲ, ನೀವು?
– 'ಬದುಕಿರುವ' ಶವಗಳನ್ನು ಹೊತ್ತು ಮಾತ್ರ ಅವರಿಗೆ ಗೊತ್ತು !

● **ರಮೇಶ ಹರಿಯಣ್ಣ, ಚಿಕ್ಕಮಗಳೂರು**
ನನ್ನ ಹೆಂಡತಿಗೆ ಕಾಫಿ ಮಾಡಲು ಬರೋಲ್ಲ, ನನ್ನ ಗತಿ ಏನು ?
– ಅದೊಂದನ್ನಾದರೂ ನೀನು ಮಾಡಲಿ ಎಂಬ ಹುನ್ನಾರ !

● **ಶ್ರೀಧರ ದೇವಾಡಿಗ, ಜಿಗಣಿ**
ಯಶಸ್ಸಿನ ನಿಜವಾದ ಮಾನದಂಡ ಯಾವುದು?
– ನಿಮ್ಮನ್ನು ಎಷ್ಟು ಜನ ಬೈತಾರೆ, ಟೀಕಿಸುತ್ತಾರೆ ಎಂಬುದು !

● **ಸುಜಾತಾ ಮುದವಾತ, ಹುಳಿಯಾರು**
ಒಂದು ವೇಳೆ ಸೀತೆಯ ಅಪಹರಣ ಆಗದಿದ್ದರೆ ಏನಾಗುತ್ತಿತ್ತು?
– ಇಂಟರವೆಲ್ಲಿಗೆ ರಾಮಾಯಣ ಮುಗಿದು ಹೋಗುತ್ತಿತ್ತು!

● **ನಾರಾಯಣ ತೋಪೂರು, ಗಿರಿನಗರ**
ನಿಮ್ಮ ನಿಧನದ ಬಳಿಕ ನಿಮ್ಮ ತಲೆ ಖರೀದಿಸಬಹುದಾ?
– ನಿನ್ನಂಥವರು ಅದರೊಳಗೆ ಕೈ ಹಾಕಿ ತಿಂದ ನಂತರ ಅದರಲ್ಲಿ ಏನುಳಿದೀತು?

● **ವಿ.ಹೇಮಂತಕುಮಾರ, ಬೆಂಗಳೂರು**
ಇತ್ತೀಚೆಗೆ ಯಾಕೋ ತುಂಬಾನೆ ಬೇಜಾರು ಅಂತಿರ್‍ತಾಳಲ್ಲ ಭಟ್ರೇ?
– ನಾನು ಎರಡು ಸಲ ಫೋನ್ ಎತ್ತದಿದ್ದಕ್ಕೇ ಹೀಗೆ ಹೇಳಿದರೆ ಹೇಗೆ ಸಿವಾ?

● **ನೇರಲಗುಡ್ಡ ಶಿವಕುಮಾರ, ಶಿರಾ**
ಡೇಟಿಂಗ್‌ಗೆ ಬಿ.ಆರ್.ಹಿಲ್‌ಗೆ ಹೋಗಲೋ, ನಂದಿಬೆಟ್ಟಕ್ಕೋ?
– ಎಲ್ಲಿಗೆ ಬೇಕಾದರೂ ಹೋಗು, ಆದರೆ ಹುಡುಗಿ ಕರಕೊಂಡು ಹೋಗು!

● **ಕೆ.ಎಂ.ಗುರುಲಿಂಗಮೂರ್ತಿ, ಕುಶಾಲನಗರ**
ಮಳೆ ಏಕಕಾಲದಲ್ಲಿ ಎಲ್ಲ ಕಡೆಗಳಲ್ಲೂ ಹುಯ್ಯುವುದಿಲ್ಲ ಏಕೆ?
– ಅದೊಂಥರಾ ಹೆಂಗಸರು ಗರ್ಭಿಣಿಯಾದಂತೆ, ಎಲ್ಲರೂ ಏಕಕಾಲಕ್ಕೆ ಆಗುವುದಿಲ್ಲವಲ್ಲ!

● **ದಾಮೋದರ ಪೋತದಾರ, ಬೆಳಗಾವಿ**
ದಿನವೂ ವ್ಯಾಯಾಮ ಮಾಡುವುದರಿಂದ ಲಾಭವಿದೆಯಾ ಭಟ್ರೇ?
– ಇದೆ..ಇದೆ..ದಿನಾ ವ್ಯಾಯಾಮ ಮಾಡಿದರೆ ಆರೋಗ್ಯದಿಂದ ಸಾಯಬಹುದು!

● **ಯತಿರಾಜ ಕೆ.ಎಲ್., ಯಲಹಂಕ**
ನಿಮ್ಮ ದೃಷ್ಟಿಯಲ್ಲಿ ದೇವರು ಇದ್ದಾನಾ?
– ಹೋಗಿ ಹೋಗಿ ಭಟ್ರ ಹತ್ತಿರ ಈ ಪ್ರಶ್ನೆ ಕೇಳ್ತೀಯಲ್ಲ !?

ಮನೆ ಸುತ್ತಲಿನ ಮರಗಿಡಗಳ ನಂಟು

ಕೆಲವು ಕುಳ್ಳ, ಕೆಲವು ಎತ್ತರ, ಕೆಲವು ದಪ್ಪ, ಕೆಲವು ಸಪೂರ, ಕೆಲವುಗಳ ತುಂಬಾ ದಟ್ಟ ಹಸಿರೆಲೆ, ಅದೆಷ್ಟು ದಟ್ಟವೆಂದರೆ ಅಂತಹ ಮರಗಳಲ್ಲಿ ಯಾರಾದರೂ ಅಡಗಿ ಕುಳಿತರೆ ಕಾಣದೇ ಇರುವಷ್ಟು! ಆದ್ದರಿಂದಲೇ ಇರಬೇಕು, ಅಂತಹ ಕೆಲವು ದಟ್ಟ ಎಲೆಗಳ ಬೃಹತ್ ಮರಗಳಲ್ಲಿ ಭೂತಗಳು ವಾಸಿಸುತ್ತಿದ್ದವು ಎಂದು ನಮ್ಮೂರಿನವರು ಹೆದರುತ್ತಿದ್ದರು.

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ಗೆಳೆತನದ ವ್ಯಾಖ್ಯಾನ ಒಂದೊಂದು ಕಡೆ, ಒಬ್ಬೊಬ್ಬರಿಗೆ ವಿಭಿನ್ನ ರೀತಿಯಲ್ಲೂ ಇರಬಹುದು. ಸದಾಕಾಲ ಸ್ನೇಹದಿಂದಿದ್ದು, ಸಹಾಯ ಮಾಡುತ್ತಾ, ನಮ್ಮ ಮನಸ್ಸಿನ ನೆಮ್ಮದಿಗೆ ತಮ್ಮ ಕೊಡುಗೆಯನ್ನು ಕೊಡುವವರು ಗೆಳಯರು ಎನ್ನಬಹುದು; ಸದಾ ನಮ್ಮ ಒಳಿತನ್ನು ಬಯಸುವವರ ಜತೆಯಲ್ಲಿ ನಮ್ಮ ಗೆಳೆತನದ ನಂಟು ಇದ್ದರೆ ಒಳ್ಳೆಯದೇ ತಾನೆ?

ನಮ್ಮ ಹಳ್ಳಿಯ ಮನೆಯ ಸುತ್ತಲೂ ನಾನಾ ರೀತಿಯ ಮರಗಳಿದ್ದವು. ಅತ್ತ ನೋಡಿದರೂ ಮರ, ಇತ್ತ ನೋಡಿದರೂ ಮರ; ಮನೆ ಎದುರಿನಲ್ಲಿ ಮಾವಿನ ಮರ, ಅಲ್ಲೇ ಆಚೆ ಪೇರಳೆ ಮರ, ಎಡ ಭಾಗದಲ್ಲಿ ಅಡಕೆ ಮರ, ಇನ್ನಷ್ಟು ದೂರದಲ್ಲಿ ಹಲಸಿನ ಮರ, ಅಮಟೆ ಮರ, ಹೆಬ್ಬಲಸಿನ ಮರ, ದೀವಿ ಹಲಸಿನ ಮರ, ಹುಣಸೆ ಮರ, ಕಾಟುಮಾವಿನ – ಎಲ್ಲವೂ ಮನೆ ಎದುರು ನಿಂತು ದಿಟ್ಟಿ ಹಾಯಿಸಿದರೆ ಕಾಣಿಸುವಷ್ಟು ಹತ್ತಿರದಲ್ಲಿ! ಇದರ ಜತೆ ಮನೆಯ ಮೇಲೂ ಚಾಚಿಕೊಂಡ ಒಂದೆರಡು ತೆಂಗಿನ ಮರಗಳು! ನಮ್ಮ ಮನೆಯ ಸುತ್ತಮುತ್ತ ನನಗಿದ್ದ ಸಹಪಾಠಿಗಳು ಕೇವಲ ಬೆರಳೆಣಿಕೆಯಷ್ಟು. ಮಲೆನಾಡಿನ ಸೆರಗಿನಲ್ಲಿದ್ದ ನಮ್ಮೂರಿನಲ್ಲಿ ಒಂದು ಮನೆಗೂ ಇನ್ನೊಂದು ಮನೆಗೂ ಸಾಕಷ್ಟು ಅಂತರ. ಕೆಲವು ಮನೆಗಳೇ ಒಂದು ಹಳ್ಳಿಯಾಗಿಯೂ ಗುರುತಿಸುವಂತಹ ಮನೆಗಳಿದ್ದವು. ಹೀಗಾಗಿ, ಮೂರ್‍ನಾಲಕ್ಕು ಕಿ.ಮೀ. ಸುತ್ತಳತೆಯ ನಮ್ಮೂರಿನಲ್ಲಿ ನನಗೆ ಗೆಳೆಯರಾಗಿ ದೊರೆಯುತ್ತಿದ್ದ ಸಹಪಾಠಿಗಳು ಬೆರಳೆಣಿಕೆಯಷ್ಟು ಮಾತ್ರ. ನಮ್ಮ ಮನೆಯ ಸುತ್ತ ಮುತ್ತ ಇದ್ದ ಇಂತಹ ಸಹಪಾಠಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದುದು ಮರಗಳು!

ನಮ್ಮ ಮನೆಯ ಸುತ್ತ ಹರಡಿದ್ದ ಮರಗಳು, ಹೂವಿನ ಗಿಡಗಳು, ಕೆಲವು ಬಳ್ಳಿಗಳು, ಮರಸಣಿಗೆ ಗಿಡದಂತೆ ಗದ್ದೆಯ ಗಿಡಗಳು ನನ್ನ ಗೆಳಯರಾಗಿದ್ದರು! ಹೇಗೆಂದು ಕೇಳುತ್ತೀರಾ? ದೀರ್ಘ ಕಾಲದ ಒಡನಾಟದ ಮೂಲಕ, ದಿನ ನಿತ್ಯ ಬೆಳಗಾಗೆದ್ದ ಕೂಡಲೆ ದೃಷ್ಟಿಗೆ ಬೀಳುವ ಈ ಮರಗಿಡಗಳೇ ನನ್ನ ಗೆಳೆಯ, ಗೆಳತಿಯರೇ ಆಗಿದ್ದವು ಎಂದರೆ, ಅದು ಅಚ್ಚರಿಯೂ ಅಲ್ಲ, ಅತಿಶಯೋಕ್ತಿಯೂ ಅಲ್ಲ. ಆ ಮರಗಳಲ್ಲಿ ಅದೆಷ್ಟು ವೈವಿಧ್ಯ! ಕೆಲವು ಕುಳ್ಳ, ಕೆಲವು ಎತ್ತರ, ಕೆಲವು ದಪ್ಪ, ಕೆಲವು ಸಪೂರ, ಕೆಲವುಗಳ ತುಂಬಾ ದಟ್ಟ ಹಸಿರೆಲೆ, ಅದೆಷ್ಟು ದಟ್ಟವೆಂದರೆ ಅಂತಹ ಮರಗಳಲ್ಲಿ ಯಾರಾದರೂ ಅಡಗಿ ಕುಳಿತರೆ ಕಾಣದೇ ಇರುವಷ್ಟು! ಆದ್ದರಿಂದಲೇ ಇರಬೇಕು, ಅಂತಹ ಕೆಲವು ದಟ್ಟ ಎಲೆಗಳ ಬೃಹತ್ ಮರಗಳಲ್ಲಿ ಭೂತಗಳು ವಾಸಿಸುತ್ತಿದ್ದವು ಎಂದು ನಮ್ಮೂರಿನವರು ಹೆದರುತ್ತಿದ್ದರು.

ಇನ್ನು ಕೆಲವು ಮರಗಳ ಎಲೆಗಳು ವಿರಳ, ತೆಳು. ಕೆಲವು ಮರ ಬೋಳು, ಬೋಳು, ನೆಟ್ಟಗೆ ಏಕಾಂಗಿಯಾಗಿ ಬೆಳೆದು ನಿಂತಿರುತ್ತಿದ್ದವು. ಇನ್ನೂ ಕೆಲವು ಮರಗಳು ವಿಶಾಲವಾಗಿ ಹರಡಿಕೊಂಡು, ರೆಂಬೆ ಕೊಂಬೆಗಳನ್ನು ಬಾನಿನುದ್ದಕ್ಕೂ ಚಾಚಿರುತ್ತವೆ. ಮಾತ್ರವಲ್ಲ, ತಮ್ಮ ಮಡಿಲಿನಲ್ಲಿ ಹಾವಸೆ, ಬಂದಳಿಕೆ, ಅಪ್ಪುಬಳ್ಳಿ, ಮರಕೆಸದಂತಹ ಪುಟಾಣಿ ಗಿಡಗಳಿಗೆ ಆಶ್ರಯ ನೀಡುತ್ತವೆ. ಹಕ್ಕಿ, ಪ್ರಾಣಿಗಳೂ ಅಷ್ಟೆ – ಕೆಲವು ಮರಗಳನ್ನು ಹುಡುಕಿಕೊಂಡು, ಹೋಗಿ ಅಲ್ಲೇ ಬೀಡುಬಿಟ್ಟು,ಅಲ್ಲೇ ಗೂಡು ಕಟ್ಟಿ, ಮರಗಳು ನೀಡುವ ಹಣ್ಣು, ಮಕರಂದಗಳನ್ನು ಸೇವಿಸಿ, ಆ ಮರದ ಆತಿಥ್ಯ ಪಡೆಯುವಲ್ಲಿ ಖುಷಿ ಕಾಣುತ್ತಿದ್ದವು.

ನಮ್ಮ ಮನೆಯ ಸುತ್ತಲಿದ್ದ ಮರಗಳಿಗೂ, ಮಾನವರಿಗೂ ಒಂದು ಸಾಮ್ಯತೆಯನ್ನು ನಾನು ಕಂಡಿದ್ದೇನೆ. ಇಂತಹದ್ದೇ ಗುಣದ ಕೆಲವು ಮನುಷ್ಯರನ್ನು ನೀವು ನೋಡಿರಬಹುದು – ಅಂದರೆ ಸದಾಕಾಲ ಗೆಳೆಯರ ಗುಂಪನ್ನು ಕಟ್ಟಿಕೊಂಡು, ಅವರಿಗೆ ಸಹಾಯ ಮಾಡುತ್ತಾ, ಕೆಲವರಿಗೆ ಆಹಾರ, ಪಾನೀಯ ನೀಡುತ್ತಾ, ಕೈಲಾದ ಸಹಾಯ ಮಾಡುತ್ತಿರುತ್ತಾರೆ. ಇನ್ನು ಕೆಲವು ಮರಗಳು ಯಾವ ಹಕ್ಕಿ ಪಕ್ಷಿಗೂ ಆತಿಥ್ಯ ನೀಡದೇ ಇರುವಂತಹವು, ನೆರಳನ್ನೂ ಕೊಡದಂತಹವು, ಯಾವ ಪ್ರಾಣಿಗೂ ಆಶ್ರಯ ನೀಡದೇ ಇರುವಂತಹವು – ಅಕೇಶಿಯಾದಂತಹ ಬರಡು ಮರಗಳು.

ದೀರ್ಘಕಾಲ ನಮ್ಮ ಮನೆಯ ಸುತ್ತಲೂ ಬೆಳೆದುಕೊಂಡಿದ್ದ ಹಲವು ಮರಗಳು ನಾನಾ ರೀತಿಯ ಸಹಾಯ ಮಾಡುತ್ತಿದ್ದವು! ಹಲವು ಬಾರಿ ನೇರ ಮತ್ತು ಪರೋಕ್ಷ ಸಹಾಯ ನೀಡಿ, ಸಿಹಿಹಣ್ಣುಗಳನ್ನು ತಿನ್ನಲು ಕೊಟ್ಟು, ಸುವಾಸಿತ ಹೂವುಗಳನ್ನು ನೀಡಿ, ಗುಡುಗು ಮಳೆ ಬಂದಾಗ ರಕ್ಷಣೆ ನೀಡಿದ ಆ ಮರಗಳು, ನನ್ನ ಬಾಲ್ಯಸ್ನೇಹಿತರಾಗಿ ಪರಿವರ್ತನೆಗೊಂಡದ್ದು, ನಿಸರ್ಗ ಸಹಜ ಕ್ರಿಯೆಯೇ ಇರಬೇಕು.

ನಮ್ಮ ಮನೆಯ ಸುತ್ತಲೂ ಇದ್ದ ಮರಗಳ ಗುಣ ವಿಶೇಷತೆಗಳ ಬಗ್ಗೆ ಹೇಳುತ್ತಾ ಹೋದರೆ, ಅದು ಹಲವು ಪುಟಗಳ ಸುದೀರ್ಘ ಕಥನವೇ ಆದೀತು. ನನ್ನ ಮೇಲೆ ಹೆಚ್ಚು ಪ್ರಭಾವ ಬೀರಿದ ಕೆಲವು ಮರಗಳ ಸವಿನೆನಪನ್ನು ಮಾತ್ರ ಇಲ್ಲಿ ಹಂಚಿಕೊಳ್ಳಲು ಪ್ರಯತ್ನಿಸುವೆ. ನಮ್ಮ ಮನೆ ಎದುರಿನ ಗದ್ದೆಬೈಲನ್ನು ದಾಟಿದ ನಂತರ ಸಿಗುವ ಹಾಡಿಯ ನಡುವಿನ ಕಾಲ್ದಾರಿಯನ್ನು ಅನುಸರಿಸಿ ಪ್ರತಿದಿನ ಶಾಲೆಗೆ ಹೋಗುವ ಶಿಸ್ತು ನಮ್ಮದು. ನಾನಾಗ ಮೂರನೆಯ ತರಗತಿಯಲ್ಲಿದ್ದೆ. ಎಂದಿನಂತೆ ಸ್ಲೇಟು, ಬಳಪ ಮತ್ತು ಆ ತರಗತಿಗೆ ಆಗ ಇದ್ದ ಏಕೈಕ ಪಠ್ಯಪುಸ್ತಕವನ್ನು ಪುಟ್ಟ ಬಟ್ಟೆಯ ಚೀಲಕ್ಕೆ ತುಂಬಿಕೊಂಡು, ಗದ್ದೆಯ ಅಂಚಿನಲ್ಲಿ ಸಾಗಿ, ಒಂದು ಫರ್ಲಾಂಗು ದೂರದ ಮುಡಾರಿ ತಲುಪಿದಾಗ ಒಂದು ಪುಟ್ಟ ವಿರಾಮ. ಮುಡಾರಿ ಮನೆಯಿಂದ ಇಬ್ಬರು ಅಥವಾ ಮೂವರು ಮಕ್ಕಳೊಡಗೂಡಿ, ಆ ಮನೆಯ ಹಿಂಭಾಗದ ಹಾಡಿಯ ನಡುವೆ ಸಾಗುತ್ತಿತ್ತು ನಮ್ಮ ದಾರಿ. ಆ ದಾರಿಯುದ್ದಕ್ಕೂ ಇಕ್ಕೆಲಗಳಲ್ಲಿ ಮರಗಳು, ಗಿಡಗಳು, ಬಳ್ಳಿಗಳು. ಅವುಗಳ ಸಂಖ್ಯೆ ಅಕ್ಷರಶಃ ನೂರಾರು.

ಒಂದು ದಿನ ಶಾಲೆಯಿಂದ ವಾಪಸಾಗುವಾಗ, ಆ ಮರಗಳ ಪೈಕಿ ಒಂದು ಮಧ್ಯಮ ಗಾತ್ರದ ಒಂದನ್ನು ಏರಿದ ಸಹಪಾಠಿ ಸತ್ಯನು, ಕೆಂಪನೆಯ ಹಣ್ಣುಗಳನ್ನು ಕಿತ್ತು ಕೆಳಗೆಸೆದ. ನಾವೆಲ್ಲರೂ ಆರಿಸಿಕೊಂಡೆವು. ಅದೇಕೋ ಆ ವರೆಗೆ ಆ ರೀತಿಯ ಹಣ್ಣುಗಳನ್ನೇ ನೋಡಿರದ ನನಗೆ, ಅವುಗಳನ್ನು ಬಿಡಿಸಿದಾಗ ಬಹು ಅಚ್ಚರಿ! ಕೆಂಪನೆಯ ಆ ಹಣ್ಣಿನೊಳಗೆ ಗುಲಾಬಿ ಬಣ್ಣದ ನಾಲ್ಕಾರು ತೊಳೆಗಳು. ಬಾಯಲ್ಲಿಟ್ಟರೆ ಬಹು ರುಚಿಕರ, ಹುಳಿ ಮಿಶ್ರಿತ ಸಿಹಿ; ಮಾಂಸಲ ಭಾಗವನ್ನು ತಿಂದು ಬೀಜವನ್ನು ಉಗಿಯಬೇಕು. ಆ ಅದ್ಭುತ ರುಚಿಯನ್ನು ಸವಿದ ನನಗೆ, ಆ ಮರವೊಂದು ವಿಸ್ಮಯ ಎನಿಸಿತು. ಆ ಮರವನ್ನು ನಮ್ಮೂರಿನಲ್ಲಿ ಮುರಿನ ಮರ (ಪುನರ್ಪುಳಿ) ಎನ್ನುತ್ತಿದ್ದರು. ಮುರಿನ ಹಣ್ಣನ್ನು ತಿಂದು, ಅವರ ರುಚಿಗೆ ಬೆರಗಾದ ನಾನು, ಶಾಲೆಯಿಂದ ಮನೆಗೆ ಮರಳಿದ ಕೂಡಲೇ ಆ ಸವಿಯನ್ನು ನಮ್ಮ ಅಮ್ಮಮ್ಮನ ಬಳಿ ವರ್ಣಿಸಿದೆ. ಅವರು ನಿರ್ಲಿಪ್ತ ಭಾವದಿಂದ ಕೇಳಿ, ನೀರಸದನಿಯಲ್ಲಿ 'ಓ ಅದಾ, ಅದು ಮುರಿನ ಹಣ್ಣು. ನಮ್ಮ ಮನೆ ಹಿಂದಿನ ಹಕ್ಕಲಿನಲ್ಲೂ ಆ ಮರ ಉಂಟು' ಎಂದರು. ನನಗೆ ಹೊಸದಾಗಿ ಪರಿಚಯವಾಗಿದ್ದ ಆ ಮರವು, ಅವರಿಗೆ ಬಾಲ್ಯದಿಂದಲೂ ಪರಿಚಿತ!

ಮುರಿನ ಹಣ್ಣು ಮನುಷ್ಯರಿಗೆ ಸಹಾಯವನ್ನೂ ಮಾಡುತ್ತದೆ! ಹಣ್ಣಿನ ತೊಗಟೆಯನ್ನು ಒಣಗಿಸಿಟ್ಟುಕೊಂಡು, ಮಳೆಗಾಲದಲ್ಲೂ ಚಳಿಗಾಲದಲ್ಲೂ ಸಾರು, ತಂಬುಳಿ, ಪಾನಕ, ಗೊಜ್ಜು ತಯಾರಿಸಬಹುದು! ಮುರಿನ ಹಣ್ಣಿನ ಆ ಸಿಪ್ಪೆಯಲ್ಲಿ ನಾನಾ ರೀತಿಯ ಔಷಧೀಯ ಗುಣಗಳೂ ಇವೆಯಂತೆ! ತಿಳಿಸಾರು ಮಾಡಲು ಹಣ್ಣಿನ ತೊಗಟೆ ನೀಡುವ ಪುನರ್ಪುಳಿ ಮರದ ಹತ್ತಿರವೇ, ಬೃಹದಾಕಾರದ ಇನ್ನೊಂದು ಮರವಿತ್ತು. ಊಟಕ್ಕೆ ನಂಜಿಕೊಳ್ಳಲು, ಹಪ್ಪಳ ಕರಿಯಲು, ಬೋಂಡಾ ಮಾಡಲು, ಹಲಸಿನ ಹಣ್ಣಿನ ಮುಳಕ ಮಾಡಲು ಅಗತ್ಯವಿರುವ ಎಣ್ಣೆಯನ್ನು ಈ ಮರದ ಕಾಯಿಯಿಂದ ತಯಾರಿಸುತ್ತಿದ್ದರು. ಅಂದಿನ ದಿನಗಳಲ್ಲಿ, ಅಂದರೆ ಇಪ್ಪತ್ತನೆಯ ಶತಮಾನದ ಮೊದಲರ್ಧದಲ್ಲಿ, ನಮ್ಮೂರಲ್ಲಿ 1975ರ ತನಕವೂ ಅಡುಗೆಗೆ ಬೇಕಾದ ಎಣ್ಣೆಯನ್ನು ನಮಗೆಲ್ಲಾ ನೀಡುತ್ತಿದ್ದ ಇನ್ನೊಬ್ಬ ಗೆಳೆಯ ಎಂದರೆ, ಇದೇ ದೂಪದ ಮರ. ಪ್ರತಿ ಮಳೆಗಾಲದಲ್ಲಿ ದೂಪದ ಮರ ಕೆಳಗೆ ಬೀಳಿಸುತ್ತಿದ್ದ ಸಾವಿರಾರು ಕಾಯಿಗಳನ್ನು ಹೆಕ್ಕಿತಂದು, ಬಿಡಿಸಿ, ತಿರುಳನ್ನು ಅರೆದು, ಬೇಯಿಸಿ ಮೇಲೆ ತೇಲುವ ಎಣ್ಣೆಯನ್ನು ಸಂಗ್ರಹಿಸಿ, ವರ್ಷಪೂರ್ತಿ ಉಪಯೋಗಿಸಬಹುದಿತ್ತು! ಅಡುಗೆಗೆ ಎಣ್ಣೆಯನ್ನು ನೀಡುವ, ಗೆಳೆಯನಂತಿರುವ ದೂಪದ ಮರವು, ಈಗ ತನ್ನ ಪ್ರಾಮುಖ್ಯತೆ ಕಳೆದುಕೊಂಡಿದೆ. ದೂಪದ ಎಣ್ಣೆಯು ಕ್ರಿಕೆಟ್ ಬಾಲ್ ರೀತಿ ಕಾಣಿಸುವ, ನೆಲದ ಮೇಲೆ ಉರುಳಿಸಿ ಬಿಡಬಹುದಾದಂತಹ ಬಿಳಿ ಉಂಡೆ. ಆದರೆ, 1980ರ ದಶಕದ ನಂತರ, ಈ ಸ್ನೇಹಜೀವಿ ಮರದ ಕಾಯಿಗಳಿಂದ ಎಣ್ಣೆ ಉಂಡೆಗಳನ್ನು ತಯಾರಿಸುವ ಪದ್ಧತಿ ನಮ್ಮೂರಿನಲ್ಲಿ ನಿಂತುಹೋಯಿತು. ಅಂಗಡಿಗಳಲ್ಲಿ ಸಿಗುವ ಕಡಿಮೆ ಬೆಲೆಯ ಪಾಮ್ ಆಯಿಲ್ ಅಥವಾ ಪಾಮ್‌ಆಯಿಲ್ ಮಿಶ್ರಿತ ಕಡಲೆಕಾಯಿ ಎಣ್ಣೆಯನ್ನು ದುಡ್ಡುಕೊಟ್ಟು ತರುವುದೇ ಹೆಚ್ಚು ಸುಲಭ ಎಂದು ಎಲ್ಲರೂ ನಿರ್ಧರಿಸಿದ್ದರಿಂದ, ದೂಪದ ಎಣ್ಣೆ ಮಾಡುವ ಪದ್ಧತಿಯೇ ಮರೆಯಾಗಿದೆ. ಮನೆ ಎದುರಿನ ಹಾಡಿಯಲ್ಲಿದ್ದ ಬೃಹದಾಕಾರದ ದೂಪದ ಮರಗಳ ಸಂಖ್ಯೆಯೂ ಈಗ ಕಡಿಮೆಯಾಗಿದೆ. ಅಲ್ಲೆಲ್ಲಾ ಈಗ ಕಳೆಸ್ವರೂಪಿ ಅಕೇಶಿಯಯಾ ಮರಗಳ ಹಾವಳಿ.

ಉಪ್ಪಿನಕಾಯಿ ಮಾಡಲು ಸಿದ್ಧವಾಗಿರುವ ಅಮಟೆ ಕಾಯಿ.

ನಮ್ಮ ಮನೆಗೆ ತಾಗಿಕೊಂಡಂತೆ ಬೆಳೆದುನಿಂತಿದ್ದ ಕೆಲವು ಮರಗಳ ವಿಚಾರ ಸ್ವಾರಸ್ಯಕರ. ಹೂವು ನೀಡುವ ಬಾಗಾಳು ಮರ, ಉಪ್ಪಿನ ಕಾಯಿ ಮಾಡಲು, ಸಾಂಬಾರಿಗೆ ಹಾಕಲು ಕಾಯಿ ಕೊಡುವ ಅಮಟೆಕಾಯಿ ಮರ, ರುಚಿಕರ ಹಣ್ಣು ನೀಡುವ ಹೆಬ್ಬಲಸಿನ ಮರ, ಹುಣಸೆ ಬದಲಿಗೆ ಉಪಯೋಗಿಸುವ ಕಾಯಿ ನೀಡುವ ಬಿಂಬಲಿಕಾಯಿ ಮರ, ಮಾವಿನ ಮರ, ಹಲಸಿನ ಮರ, ದಾಸವಾಳದ ಪುಟ್ಟ ಮರ (ನಿಜ, ಮರದ ರೀತಿ ಬೆಳೆದ ಬಿಳಿ ದಾಸವಾಳದ ಗಿಡ), ಹಂಗಾರು ಮರ, ಇವೆಲ್ಲವೂ ನಮ್ಮ ಮನೆಯ ಸುತ್ತಲೂ ಸುಮಾರು 50 ಮೀಟರ್ ಅಂತರದಲ್ಲಿ ಬೆಳೆದು ನಿಂತಿದ್ದವು. ಈ ಮರಗಳು ನಮ್ಮ ಮನೆ ಸುತ್ತ ಹರಡದೇ ಇದ್ದರೆ, ಅಷ್ಟರ ಮಟ್ಟಿಗೆ ನಮ್ಮ ಅಡುಗೆಯ ರುಚಿ, ವೈವಿಧ್ಯ ಸೊರಗುತ್ತಿತ್ತೆಂಬುದಂತೂ ನಿಜ.

ಇವುಗಳ ನಡುವೆ ಸ್ಥಾನ ಪಡೆದಿರುವ ದಾಸವಾಳ ಮತ್ತು ಹಂಗಾರದ ಕುರಿತು ಕೆಲವು ಸಾಲು ಬರೆಯಲೇ ಬೇಕು. ನಮ್ಮ ಮನೆ ಅಂಗಳದಾಚೆ ಇರುವ ಹಟ್ಟಿಯ ಹಿಂಭಾಗದಲ್ಲಿ, ಎರಡು ಅಡಿ ಅಗಲವಿರುವ ಪುಟ್ಟ ತೋಡು ಒಂದಿದೆ. ತೋಟದಾಚೆಯಿರುವ ಅಗೇಡಿಯಲ್ಲಿ ಸುಗ್ಗಿಯ ಕಾಲದಲ್ಲಿ ಬತ್ತ ಬೆಳೆಯಲು ನೀರು ಸಾಗಿಸುವ ಕಾಲುವೆ ಅದು. ಆ ನೀರಿನ ತೊರೆಗೆ ತಾಗಿಕೊಂಡಂತೆ, ಎರಡು ದಾಸವಾಳ ಗಿಡಗಳು ಬೆಳೆದಿದ್ದವು. ಅವುಗಳನ್ನು ಗಿಡ ಎಂದು ಕರೆಯಲಾಗದಷ್ಟು ಎತ್ತರವಾಗಿ ಬೆಳೆದಿದ್ದವು. ಆ ಎರಡು ದಾಸವಾಳದ ಮರಗಳು ಅಲ್ಲಿ ತಲೆ ಎತ್ತಿ ನಿಂತಿದ್ದು, ಕೇವಲ ಹೂಗಿಡಗಳ ರೂಪದಲ್ಲಿ ಮಾತ್ರವಲ್ಲ, ಬದಲಿಗೆ ಆಹಾರಕ್ಕೆ ಎಲೆಗಳನ್ನು ಒದಗಿಸುವ ಮರಗಳ ರೀತಿ! ಆ ಎರಡು ದಾಸವಾಳ ಗಿಡಗಳ ಎಲೆಗಳಿಗೆ ನಮ್ಮ ಹಳ್ಳಿಯಲ್ಲಿ ಎಲ್ಲಿಲ್ಲದ ಬೇಡಿಕೆ! ಆ ಎಲೆಗಳನ್ನು ಅಕ್ಕಿ ಹಿಟ್ಟಿನ ಜತೆ ಮಿಶ್ರಣಮಾಡಿ, ಅರೆದು ಸೆಕೆಹಿಟ್ಟು (ಇಡ್ಲಿಯ ಹಳ್ಳಿರೂಪ) ಮಾಡಿ ತಿಂದರೆ, ಆರೋಗ್ಯಕ್ಕೆ ಉತ್ತಮ. ನಮ್ಮ ತೋಟದಲ್ಲಿದ್ದ ಆ ಎರಡು ದಾಸವಾಳದ ಪುಟಾಣಿ ಮರಗಳು 'ಬಿಳಿ ದಾಸವಾಳ' ಪ್ರಭೇದದವು. ಪ್ರತಿ ದಿನ ಹತ್ತಾರು ಬಿಳಿ ಹೂವುಗಳನ್ನು ಬಿಡುತ್ತಿದ್ದು, ಅವುಗಳನ್ನು ಕೊಯ್ದು ದೇವರ ಪೂಜೆಗೆ ಬಳಸುತ್ತಿದ್ದ ಪದ್ಧತಿ ಇದ್ದದ್ದೇ. ಅದರ ಜತೆ, ಆ ದಾಸವಾಳದ ಎಲೆಗಳಲ್ಲಿದ್ದ ಔಷಧೀಯ ಗುಣಗಳಿಂದಾಗಿ, ಆಹಾರದ ಜತೆ ಅವುಗಳನ್ನು ಬೇಯಿಸಿ ತಿನ್ನುವ ಪರಿಪಾಠ ಸಣ್ಣ ಮಟ್ಟದ ವಿಸ್ಮಯವೇ ಸರಿ.

ಇದೇ ರೀತಿ ಔಷಧೀಯ ಸಸ್ಯವಾಗಿ, ನಮ್ಮ ಮನೆಯವರ ಗೆಳೆಯನಾಗಿದ್ದು ಎಂದರೆ ಹಂಗಾರ ಮರ. ಮೈತುಂಬಾ ಮುಳ್ಳು ಹೊಂದಿದ್ದ, ಆ ಮೆದುಮರದ ತೊಗಟೆಯು ಜ್ವರ ಕಡಿಮೆ ಮಾಡುವಲ್ಲಿ ರಾಮಬಾಣ. ಆಗಿನ್ನೂ ನಮ್ಮ ಹಳ್ಳಿಯಲ್ಲಿ ಕ್ಲಿನಿಕ್ ಅಥವಾ ಆಸ್ಪತ್ರೆ ಇರಲಿಲ್ಲ. ಸುತ್ತಮುತ್ತ ಯಾರಿಗೇ ಮೂರು ಸೊರ ಸೊರವಾದರೆ, ಮೈ ಬೆಚ್ಚಗಾಗಿ ಜ್ವರ ಬಂದರೆ, ಅದೇ ಸಂಜೆ ಹಂಗಾರ ಮರದ ಎರಡಿಂಚು ತೊಗಟೆಯನ್ನು ಕೆತ್ತಿ, ನೀರಿನಲ್ಲಿ ಕುದಿಸಿ ಕಷಾಯ ಮಾಡಿ ಕುಡಿಸುವ ಪರಿಪಾಠ. ಹಂಗಾರ ಕೆತ್ತೆ ಕಷಾಯಕ್ಕೆ ಮೆಣಸಿನ ಕಾಳನ್ನು ಪುಡಿಮಾಡಿ ಕುದಿಸಿದರಂತೂ, ಹೆಚ್ಚಿನ ಜ್ವರಗಳು ಓಡಿಹೋಗುತ್ತಿದ್ದವು. ಹಂಗಾರು ಮರವು ಮಕ್ಕಳ ಜತೆ ಬೇರೊಂದು ರೀತಿಯಲ್ಲಿ ಸ್ನೇಹಿತ – ಅರ್ಧ ಸೆಂಟಿಮೀಟರ್ ಉದ್ದನೆಯ ಅದರ ಕೆಂಪನೆಯ ಬೀಜಗಳು ಚೆನ್ನೆಮಣೆ ಆಡಲು ಚಂದವಾದ್ದರಿಂದ, ಸದಾಕಾಲ ಮಕ್ಕಳ ಜೇಬಿನಲ್ಲಿ ಅವುಗಳ ರಾಶಿ!

ಮನೆಯವರ ದಿನಚರಿಯಲ್ಲಿ ಆಹಾರವಾಗಿ, ಔಷಧವಾಗಿ, ಹಣ್ಣು ಒದಗಿಸುವ ಆಕರವಾಗಿ ಮನೆ ಸುತ್ತಲೂ ಬೆಳೆದಿದ್ದ ಇಂತಹ ಮರಗಳು, ನಮ್ಮೆಲ್ಲರ ಜತೆ ಗೆಳೆತನದ ನಂಟು ಹೊಂದಿದ್ದರಲ್ಲಿ ಅಚ್ಚರಿ ಇಲ್ಲ, ಅಲ್ಲವೆ?

ಪ್ರಸ್ತುತ

ಡಾ. ಜಗದೀಶ ಮಾನೆ

ಧರ್ಮ ರಕ್ಷಣೆಗಾಗಿ ಯುಗ ಯುಗಗಳಲ್ಲೂ ಅವತರಿಸುತ್ತಾರೆ!

ಕುರುಕ್ಷೇತ್ರ ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ದುರ್ಯೋಧನನು ಭೀಷ್ಮರಿಗೆ ಒಂದು ಪ್ರಶ್ನೆ ಕೇಳುತ್ತಾನೆ. 'ಪಿತಾಮಹರೆ, ನಮ್ಮ ಸೈನ್ಯ ಪಾಂಡವರಿಗಿಂತಲೂ ಬಲಿಷ್ಠವಾಗಿದೆ, ಅದರಲ್ಲೂ ನೀವು ಅರ್ಜುನನಿಗಿಂತಲೂ ಬಲಶಾಲಿಯಾಗಿದ್ದೀರಿ, ಆತನಿಗೆ ವಿದ್ಯೆ ಹೇಳಿದ ಗುರು ದ್ರೋಣಾಚಾರ್ಯರು ನಮ್ಮ ಜತೆಗಿದ್ದಾರೆ, ಸಾವೇ ಇಲ್ಲದ ಅಶ್ವತ್ಥಾಮ, ಮಹಾರಥಿ ಕರ್ಣ, ರಾಜಾ ಭಗದತ್ತ, ಮಿತ್ರರಾಜ ಶಲ್ಯ, ಸಿಂಧೂ ನರೇಶ, ಸೈಂದವ, ಕೈಕೆಯ ಅರಸರು, ಮೊಹ್ಲಿಕರು, ದುಶ್ಯಾಸನ, ನಾನು ಸೇರಿದಂತೆ ಹನ್ನೊಂದು ಅಕ್ಷೋಹಿನಿ ಸೇನೆ ನಮ್ಮಬಳಿ ಇದೆ. ಹೀಗಿರುವಾಗಲೂ ಈ ಯುದ್ಧದಲ್ಲಿ ಪಾಂಡವರದ್ದೇ ಮೇಲುಗೈ ಆಗುತ್ತಿದೆ. ನಮ್ಮಿಂದ ಕೇವಲ ಈ ಅರ್ಜುನನನ್ನೂ ಸೋಲಿಸುವುದಕ್ಕೆ ಸಾಧ್ಯವಾಗುತ್ತಿಲ್ಲವಲ್ಲ ಯಾಕೆ?' ಸುಯೋಧನ ಈ ಪ್ರಶ್ನೆಗಳಿಗೆ ಭೀಷ್ಮರು ಬಹಳ ಮಾರ್ಮಿಕವಾಗಿ ಉತ್ತರಿಸುತ್ತಾರೆ. 'ಈ ಹಿಂದೆ ಪಾಂಡವರ ಪರವಾಗಿ ಶ್ರೀಕೃಷ್ಣನು ಸಂಧಾನಕ್ಕೆ ಬಂದಿದ್ದ. ಆಗ ನಾನು ನಿನಗೆ ಒಂದು ಮಾತನ್ನು ಹೇಳಿದ್ದೆ. ''ಯಥಾ ಕೃಷ್ಣಸ್ತತೋ ಧರ್ಮೋ, ಯತೋ ಧರ್ಮಸ್ತತೋ ಜಯಃ'' ಎಲ್ಲಿ ಕೃಷ್ಣ ಇರುತ್ತಾನೋ ಅಲ್ಲಿ ಧರ್ಮ ಇರುತ್ತದೆ, ಎಲ್ಲಿ ಧರ್ಮವಿದೆಯೋ ಅಲ್ಲಿ ಜಯ ನಿಶ್ಚಿತವಾಗಿರುತ್ತದೆ'. ಈ ಯುದ್ಧದಲ್ಲಿ ಶ್ರೀಕೃಷ್ಣ ಪಾಂಡವರ ಪರ ನಿಂತಿದ್ದಾನೆ, ನಿಸ್ಸಂದೇಹವಾಗಿ ಗೆಲುವು ಅವರದ್ದೇ ಆಗುತ್ತದೆ. ಆದ್ದರಿಂದ ಯುದ್ಧಕ್ಕೆ ಅವಕಾಶ ಕೊಡದೆ ಸಂಧಾನ ಮಾಡಿಕೊಂಡು ಅವರಿಗೆ ಸಲ್ಲಬೇಕಾದ ಪಾಲನ್ನು ಅವರಿಗೆ ಕೊಟ್ಟುಬಿಡಲು ನಿನಗೆ ಮನವಿ ಮಾಡಿದ್ದೆ ನಾನು. ಆದರೆ ನೀನು ನನ್ನ ಮಾತನ್ನೇ ಕೇಳಲಿಲ್ಲ ಎಂದಾಗ ಮತ್ತೆ ತನ್ನ ಮಾತುಗಳನ್ನು ಮುಂದುವರೆಸಿದ ದುರ್ಯೋಧನನು ಮತ್ತೆ ಹೀಗೆ ಕೇಳುತ್ತಾನೆ, 'ಪಿತಾಮಹರೆ, ಈ ಶ್ರೀಕೃಷ್ಣ ಅರ್ಜುನನೊಂದಿಗೆ ಅಷ್ಟೊಂದು ಪ್ರೀತಿಯಿಂದ ಇದ್ದು, ಆತನಿಗೆ ಕಾವಲಾಗಿ ನಿಂತಿರುವುದಾದರೂ ಯಾಕೆ?'

ಸುಯೋಧನನ ಪ್ರಶ್ನೆಗಳಿಗೆ ಭೀಷ್ಮರು ಉತ್ತರಿಸುತ್ತಾರೆ...

'ಸತ್ಯಯುಗದ ಕಾಲದಲ್ಲಿ ''ಬದರಿಕಾಶ್ರಮ'' ವೊಂದಿತ್ತು. ಅದು ಇಂದಿನ ಬದರಿನಾರಾಯಣ ದೇವಾಲಯವಿದ್ದ ಸ್ಥಳವೇ ಅಂದಿನ ಬದರಿಕಾಶ್ರಮ. ಅಲಕಾನಂದ ನದಿಯ ಪಕ್ಕದಲ್ಲಿನ ಪುಣ್ಯಭೂಮಿ. ಆ ಆಶ್ರಮದಲ್ಲಿ ಮಹಾ ವಿಷ್ಣುವಿನ ಅಂಶದಿಂದ ಜನಿಸಿದ ''ನರ-ನಾರಾಯಣ'' ಎಂಬ ಇಬ್ಬರು ಮುನಿಗಳಿದ್ದರು. ''ನರ'' ಅಂದ್ರೆ ಎಲ್ಲವನ್ನೂ ವಶಪಡಿಸಿಕೊಳ್ಳುವವನು, ಈತ ಮನುಷ್ಯ ಜಾತಿಗೆ ಸೇರಿದವನು. ''ನಾರಾಯಣ'' ಅಂದ್ರೆ ನರನ ಶರೀರದಲ್ಲಿ ಜನಿಸಿದ ಭಗವಂತ. ನೀರನ್ನೆ ತನ್ನ ಆವಾಸ ಸ್ಥಾನವನ್ನಾಗಿಸಿಕೊಂಡವನು, ಮಹಾವಿಷ್ಣುವಿನ ಅಂಶ. ಈ ನರ-ನಾರಾಯಣರಿಬ್ಬರೂ ಸಾವಿರಾರು ವರ್ಷಗಳ ಕಾಲ ಬದರಿಕಾಶ್ರಮದಲ್ಲಿ ತಪಸ್ಸು ಮಾಡುತ್ತ, ವೇದಗಳ ಸಾರವನ್ನು ಜಗತ್ತಿಗೆ ತಿಳಿಸುತ್ತಾ ಕಾಮ, ಕ್ರೋಧ, ಲೋಭ, ಮಧ, ಮತ್ಸರ, ಸುಖ, ಸಂಪತ್ತು, ಅಧಿಕಾರ, ಕೀರ್ತಿ ಮುಂತಾದ ಮನುಷ್ಯ ಸಹಜ ಆಶಯಗಳೆಲ್ಲವನ್ನೂ ಗೆದ್ದಿದ್ದರು.

ಇವರು ತಪಸ್ಸು ಮಾಡುತ್ತಿದ್ದ ಸಂದರ್ಭದಲ್ಲೊಮ್ಮೆ ಅದನ್ನು ಭಂಗಗೊಳಿಸಲು ದೇವೇಂದ್ರನು ಅಪ್ಸರೆಯರನ್ನು ಕಳುಹಿಸುತ್ತಾನೆ. ವರುಣ ಅಲ್ಲಿನ ವಾತಾವರಣವನ್ನು ಅಹ್ಲಾದಗೊಳಿಸಿ ಕಾಮದೇವನ ಮೂಲಕ ಇಡೀ ಬದರಿಕಾಶ್ರಮ ಶೃಂಗಾರ ಮತ್ತು ಆವರಿಸುವಂತೆ ಮಾಡುತ್ತಾನೆ. ಧ್ಯಾನಸ್ಥರಾಗಿದ್ದ ನರ-ನಾರಾಯಣರನ್ನು ಅಪ್ಸರೆಯರು ನೃತ್ಯ ಗಾಯನದ ಮೂಲಕ ಭಂಗಗೊಳಿಸುವ ಹಲವು ಪ್ರಯತ್ನಗಳನ್ನು ಮಾಡುತ್ತಾರೆ. ಆಗ ಕಣ್ಣು ಬಿಟ್ಟ ನಾರಾಯಣರು ತಮ್ಮ ತೊಡೆಯನ್ನು ತಟ್ಟುತ್ತಾರೆ. ಅದರಿಂದ ಸುಂದರವಾದ ಕನ್ನೆಯೊರ್ವಳು ಜನಿಸುತ್ತಾಳೆ, ಅವಳೇ ''ಊರ್ವಶಿ''. ಅವಳನ್ನು ಉಳಿದ ಅಪ್ಸರೆಯರಿಗೆ ಒಪ್ಪಿಸಿದ ನಾರಾಯಣರು ''ನಾವು ಸೌಂದರ್ಯವನ್ನೇ ಸೃಷ್ಟಿ ಮಾಡುವ ಶಕ್ತಿ ನಮ್ಮಲ್ಲಿದೆ. ನಿಮ್ಮ ಈ ಶೃಂಗಾರ ಸೌಂದರ್ಯಗಳು ನಮ್ಮನ್ನೇನೂ ಮರುಳು ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಈ ಸುಂದರಿಯನ್ನು ಕರೆದೊಯ್ದು ನಿಮ್ಮ ಇಂದ್ರನಿಗೆ ಬಹುಮಾನವಾಗಿ ನೀಡಿ. ಮತ್ತು ನಿಮ್ಮ ಇಂದ್ರನಿಗೆ ಏನೇ ಸಹಾಯ ಬೇಕಿದ್ದರೂ ನಮ್ಮ ನೆರವು ಸಿಗುತ್ತದೆ' ಎಂಬುದಾಗಿ ಹೇಳಿ ಮತ್ತೆ ಧ್ಯಾನಸ್ಥರಾಗುತ್ತಾರೆ.

ದೈವಾಂತ ಸಂಭೂತರಾದ ಈ ಮುನಿಗಳು ಇಂದ್ರಿಯಗಳನ್ನು ಸಂಪೂರ್ಣವಾಗಿ ಗೆದ್ದು ಎಲ್ಲ ಆಸೆ ಮೋಹಗಳನ್ನು ಜಯಿಸಿ ಜಿತೇಂದ್ರಿಯರಾಗಿದ್ದರು. ಸಮುದ್ರ ಮಂಥನದ ನಂತರ ಉಂಟಾದ ದೇವ-ದಾನವರ ಕದನದಲ್ಲಿ ನರ-ನಾರಾಯಣರ ಸಹಾಯ ಕೇಳುತ್ತಾನೆ ದೇವೇಂದ್ರ. ಆಗ ದಾನವರ ಸಂಹಾರ ಮಾಡಿ ಭೂಮಿಯ ಬಹುಪಾಲು ಭಾರವನ್ನೇ ಕಡಿಮೆ ಮಾಡುತ್ತಾರೆ. ಈ ಮಧ್ಯೆ ''ಧಂಬೋದ್ಭವ'' ಎನ್ನುವ ಅಸುರನೊಬ್ಬ ಶಿವನ ಕುರಿತು ತಪಸ್ಸು ಮಾಡಿ ಸಹಸ್ರ ಕವಚಗಳನ್ನು ಪಡೆದಿದ್ದ. ಆ ಕವಚಗಳ ಸಹಾಯದಿಂದ ತನ್ನನ್ನು ಯಾರೂ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ದುರಹಂಕಾರದಲ್ಲಿ ಮೆರೆಯುತ್ತಿದ್ದ. ಅವನ ಅಟ್ಟಹಾಸ ಹೆಚ್ಚಾದ ಸಂದರ್ಭದಲ್ಲಿ ನರ-ನಾರಾಯಣರೇ ಆತನ ಧಮನಕ್ಕೆ ನಿಲ್ಲುತ್ತಾರೆ. ಅವನ ಎಲ್ಲ ಕವಚಗಳನ್ನು ನಾಶ ಮಾಡಿದ ಬಳಿಕ ಪರಶಿವನ ಕೋರಿಕೆಯ ಮೇರೆಗೆ ತಮಸ್ಸು, ರಜಸ್ಸು, ಹಾಗೂ ಸಾತ್ವಿಕ ಗುಣಗಳ ಈ ಮೂರು ಕವಚಗಳನ್ನು ಮಾತ್ರ ಉಳಿಸುತ್ತಾರೆ. ಹೀಗೆ ನರ-ನಾರಾಯಣರು ಸತ್ಯಯುಗದಲ್ಲಿ ಅರಿಷಡ್ವರ್ಗಗಳನ್ನು ನಿಯಂತ್ರಿಸಿ ಅಗತ್ಯ ಬಿದ್ದಾಗ ಯುದ್ಧ ಹಾಗೂ ಉಳಿದ ಸಂದರ್ಭದಲ್ಲಿ ತಪಸ್ಸು ಹಾಗೂ ಜ್ಞಾನ ದಾಸೋಹ ಮಾಡುತ್ತಾ ಬದರಿಕಾಶ್ರಮದಲ್ಲಿ ಸಾವಿರಾರು ವರ್ಷ ಕಳೆದನಂತರ ಇದೀಗ ಮತ್ತೆ ದ್ವಾಪರ ಯುಗದಲ್ಲೂ ಜನ್ಮವೆತ್ತಿದ್ದಾರೆ.

ಸುಯೋಧನಾ...! ಈಗ ಭೂಮಿಯ ಭಾರ ಮತ್ತೆ ಹೆಚ್ಚಾಗಿದೆ. ಸತ್ಯಯುಗ ಹಾಗೂ ತ್ರೇತಾಯುಗದಲ್ಲಿರುವಂತೆ ರಾಕ್ಷಸರೀಗ ಇಲ್ಲದೇ ಇರಬಹುದು. ಆದರೆ, ರಾಕ್ಷಸ ಗುಣಗಳನ್ನೇ ಮೈತುಂಬಿಕೊಂಡ ಮನುಷ್ಯರು ನಾವಿದೀವಲ್ಲ! ಅಹಂಕಾರ, ಅಜ್ಞಾನ, ಸುಖಭೋಗ, ದುರಾಸೆಗಳ ಕವಚಗಳನ್ನು ನಾವು ತೊಟ್ಟು ನಿಂತಿದ್ದೇವೆ. ನಮ್ಮ ಈ ಸಮಾಜಕ್ಕೆ ನಾವು ಅಂಟಿಸುತ್ತಿರುವ ಕೆಟ್ಟ ಆದರ್ಶಗಳ ಕವಚಗಳನ್ನು ನಾಶ ಮಾಡುವುದಕ್ಕಾಗಿಯೇ ಈ ನರ-ನಾರಾಯಣರು ದ್ವಾಪರ ಯುಗದಲ್ಲೂ ಜನ್ಮವೆತ್ತಿದ್ದಾರೆ. ನಾವು ಯಾರನ್ನು ಮಧ್ಯಮ ಪಾಂಡವ ಅಂತ ಕರೆಯುತ್ತೇವೊ ಆ ಅರ್ಜುನನೇ ''ನರ''. ಅವನ ಬೆನ್ನಿಗೆ ನಿಂತು ಆತನಿಂದ ಪ್ರತಿಯೊಂದನ್ನೂ ಮಾಡಿಸುತ್ತಿದ್ದಾನಲ್ಲ ಆ ಶ್ರೀ ಕೃಷ್ಣನೇ ''ನಾರಾಯಣ''. ಈ ವಿಚಾರವನ್ನು ಸಾಕ್ಷಾತ್ ನಾರದರೆ ಋಷಿಮುನಿಗಳಿಗೆ ಹೇಳುತ್ತಿರುವುದನ್ನು ಸ್ವತಃ ನಾನು ಕೇಳಿಸಿಕೊಂಡಿದ್ದೇನೆ. ಕೃಷ್ಣಾರ್ಜುನರ ರೂಪದಲ್ಲಿರೋ ಈ ನರ-ನಾರಾಯಣರನ್ನು ಗೆಲ್ಲುವುದಕ್ಕೆ ಎಂಥಾ ಶಕ್ತಿಗಳಿಂದಲೂ ಸಾಧ್ಯವಿಲ್ಲ. ಹೀಗಾಗಿ ಶ್ರೀ ಕೃಷ್ಣನಿಗೆ ಅರ್ಜುನನ ಮೇಲೆ ಅಪಾರವಾದ ಪ್ರೀತಿ ಇದೆ. ಅವರು ಸದಾಕಾಲ ಜತೆಯಲ್ಲಿರೋದು ಕೂಡಾ ಅದೇ ಕಾರಣಕ್ಕಾಗಿ.

ಸುಯೋಧನಾ...ಈಗಲೂ ಕಾಲ ಮಿಂಚಿಲ್ಲ, ಯುದ್ಧ ಬಿಟ್ಟು ಪಾಂಡವರೊಂದಿಗೆ ಸಂಧಾನ ಮಾಡಿಕೊಂಡರೆ ನೀನು ಕಳೆದುಕೊಳ್ಳುವುದೇನೂ ಇಲ್ಲ'. ಭೀಷ್ಮರ ಆ ಮಾತುಗಳನ್ನು ಕೇಳುವ ಸ್ಥಿತಿಯಲ್ಲಿ ದುರ್ಯೋಧನನಿರಲಿಲ್ಲ. ಮತ್ತು ಅಷ್ಟೊತ್ತಿಗಾಗಲೇ ದುರ್ಯೋಧನನ್ನು ರಕ್ಷಿಸುವ ಎಲ್ಲ ಕಾರ್ಯ ಯೋಜನೆಗಳನ್ನು ಮಾಡಿ ಮುಗಿಸಿದ್ದ ಭೀಷ್ಮರು ಎಲ್ಲವನ್ನು ವಿಧಿಯ ಕೈಗೊಪ್ಪಿಸಿ ತಮ್ಮ ಕರ್ತವ್ಯವನ್ನು ಮುಂದುವರಿಸುತ್ತಾರೆ. ಯುದ್ಧದ ಹತ್ತನೇ ದಿನ ತಮ್ಮ ಹಣೆಬರಹದಂತೆ ಮತ್ತು ದೇವಿ ಅಂಬೆಯ ಪುನರ್ಜನ್ಮದ ಉದ್ದೇಶದ ಸಫಲತೆಗಾಗಿ ಶಿಖಂಡಿನಿಯು ತಮ್ಮೆದುರು ಪ್ರಕಟವಾದಾಗ ತಮ್ಮ ಧನಸ್ಸನ್ನು ಕೆಳಗಿಳಿಸಿ ಪ್ರಾಣ ತ್ಯಾಗ ಮಾಡುತ್ತಾರೆ. ಸುಯೋಧನನಿಗೆ ಭೀಷ್ಮರು ಹೇಳಿದ ನರ-ನಾರಾಯಣರ ಈ ಕಥೆಯ ಸಾರಾಂಶ ವಿಷ್ಣು ಪುರಾಣದ ಏಳನೇಯ ಅಧ್ಯಾಯದಲ್ಲಿ ಉಲ್ಲೇಖವಿದೆ.

ಈ ಕಥೆಯಿಂದ ನಾವು ತಿಳಿಯುವುದೇನೆಂದರೆ 'ಧರ್ಮದ ರಕ್ಷಣೆಗಾಗಿ ನ್ಯಾಯ- ನೀತಿಗಳ ಸ್ಥಾಪನೆಗಾಗಿ ಸಾತ್ವಿಕ ಮನುಷ್ಯನೂ ಕೂಡಾ ಕ್ಷಾತ್ರವನ್ನು ಧರಿಸಿ ಕಾಲೂರಿನಿಂತು ದುಷ್ಟರ ವಿರುದ್ಧ ಹೋರಾಡಬೇಕಾಗುತ್ತದೆ. ಈ ಸಂದೇಶವನ್ನು ನರ-ನಾರಾಯಣರ ಕಥೆಯ ಮೂಲಕ ನಮ್ಮ ಪುರಾಣಗಳು ತಿಳಿಸಿವೆ. ಇದೀಗ 'ಧಂಬೋದ್ಭವ' ಎನ್ನುವ ಸಹಸ್ರ ಕವಚದಾರಿ ಬೇರೆ ಯಾರೂ ಅಲ್ಲ. ಅದು ಮನುಷ್ಯನೇ ಆಗಿದ್ದಾನೆ. ಆತನಲ್ಲಿರುವ ಅಹಂಕಾರ, ದುರಾಸೆ, ಕ್ರೌರ್ಯ, ಮತ್ಸರ, ಕಾಮ, ಕ್ರೋಧ ಈ ಎಲ್ಲಾ ಕವಚಗಳನ್ನು ತೊಟ್ಟ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಕೂಡಾ ಒಬ್ಬೊಬ್ಬ 'ಧಂಬೋದ್ಭವ' ನಿದ್ದಾನೆ. ನಾವು ಧರಿಸಿದ ಅಜ್ಞಾನ, ಅಹಂಕಾರ, ದುರಾಸೆಗಳ ಕವಚಗಳನ್ನು ಕಿತ್ತೆಸೆದು ಇತರರಿಗೆ ಜ್ಞಾನವನ್ನು ಬೋಧಿಸುವ ಮೂಲಕ ಉತ್ತಮರಾಗಬೇಕಿದೆ.

(ಲೇಖಕರು: ರಾಜ್ಯಶಾಸ್ತ್ರದ ಅಧ್ಯಾಪಕರು ಹಾಗೂ ವಿಶ್ಲೇಷಕರು)

ಬಹುಮಾಧ್ಯಮ ಸ್ಪರ್ಧೆಯಲ್ಲೂ ಮಿಂಚುತ್ತಿರುವ ದಿ ನ್ಯೂಯಾರ್ಕ್ ಟೈಮ್ಸ್

ಸಂಪರ್ಕ-ಸಾಧನೆ
ಎ.ಎಸ್.ಬಾಲಸುಬ್ರಹ್ಮಣ್ಯ
vveditoped@gmail.com

ಪತ್ರಿಕಾ ಪ್ರಪಂಚ ಬಹು ವೇಗವಾಗಿ ಬದಲಾಗುತ್ತಿದೆ. ಸಂವಹನ ತಂತ್ರಜ್ಞಾನ ಎಲ್ಲ ಸಮೂಹ ಮಾಧ್ಯಮಗಳನ್ನು ಬುಡಮೇಲು ಮಾಡುತ್ತಿದೆ. ಮುದ್ರಣ ಮಾಧ್ಯಮ ಈಗ ಇತರೆ ಮಾಧ್ಯಮಗಳ ಮೂಲಕ ಓದುಗರನ್ನು ತಲುಪಲು ಶ್ರಮ ಪಟ್ಟರೆ, ಮಾಂತ್ರಿಕ ಕಂಪ್ಯೂಟರ್, ಟ್ಯಾಬ್ ಹಾಗೂ ಮೊಬೈಲ್‌ಗಳು ಎಲ್ಲ ಮಾಧ್ಯಮಗಳನ್ನು ತಮ್ಮೊಳಗಿರಿಸಿಕೊಂಡು ನಕ್ಕು ನಲಿಯುತ್ತಿವೆ. ಇಂತಹ ಬಹುಮಾಧ್ಯಮ ಸ್ಪರ್ಧೆಗಳಲ್ಲಿ ಜಾಗತಿಕವಾಗಿ ಹೆಸರು ಮಾಡುತ್ತಿರುವ ಏಕೈಕ ಪತ್ರಿಕೆಯೆಂದರೆ, ಅದು 'ದಿ ನ್ಯೂಯಾರ್ಕ್ ಟೈಮ್ಸ್'. 173 ವರ್ಷಗಳ ಇತಿಹಾಸ ಹೊಂದಿರುವ ಈ ಪತ್ರಿಕೆ ಇದೀಗ ಹೊಸ ದಾಖಲೆಯೊಂದನ್ನು ಬರೆದಿದೆ. ಈ ಪತ್ರಿಕೆಯ 20 ಲಕ್ಷ ಆನ್ ಲೈನ್ ಚಂದಾದಾರರು ವಿಶ್ವದಾದ್ಯಂತ 232 ದೇಶಗಳು ಮತ್ತು ಪ್ರಾಂತ್ಯಗಳಲ್ಲಿ ಹರಡಿದ್ದಾರೆ. ಈ ದಾಖಲೆಯನ್ನು ಬರೆದ ಏಕೈಕ ದೈನಿಕ ಇದಾಗಿದೆ. 'ಮುದ್ರಿಸಲು ಯೋಗ್ಯವಾದ ಎಲ್ಲ ಸುದ್ದಿ' (All the News That's is Fit to Print)ಎಂಬ ಘೋಷವಾಕ್ಯ ಹೊಂದಿರುವ ಈ ಪತ್ರಿಕೆ, ಸುದ್ದಿ ಮತ್ತು ಅತ್ಯುತ್ತಮ ವಿಶ್ಲೇಷಣಾತ್ಮಕ ಸಂಪಾದಕೀಯ ಹಾಗೂ ಲೇಖನಗಳಿಗೆ ಜಾಗತಿಕ ಇಂಗ್ಲಿಷ್ ಭಾಷಿಕರಲ್ಲಿ ಜನಪ್ರಿಯವಾಗಿದೆ.

ನ್ಯೂಯಾರ್ಕ್ ನಗರದಿಂದ ಪ್ರಕಟವಾಗುವ ಈ ಬೆಳಗಿನ ದೈನಿಕ, ಅಮೆರಿಕೆಯಲ್ಲಿ ದಾಖಲೆಯ ವೃತ್ತಪತ್ರಿಕೆ ಎಂದೇ ಹೆಸರಾಗಿದೆ. ಅಂದರೆ ಇಲ್ಲಿ ಪ್ರಕಟವಾಯಿತೆಂದರೆ ಅದು ನಿಜವೇ ಆಗಿದೆ ಎಂದರ್ಥ. ಹಾಗಾಗಿಯೇ ಇದು ವಿಶ್ವದ ಶ್ರೇಷ್ಠ ಪತ್ರಿಕೆಗಳಲ್ಲಿ ಒಂದಾಗಿದೆ. ಅದರ ಶಕ್ತಿಯು ಅದರ ಸಂಪಾದಕೀಯ ಶ್ರೇಷ್ಠತೆಯಲ್ಲಿದೆ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಆದರೆ ಪ್ರಸಾರ ಸಂಖ್ಯೆಯ ದೃಷ್ಟಿಯಿಂದ ಇದು ಎಂದಿಗೂ ದೊಡ್ಡ ಪತ್ರಿಕೆಯಾಗಿರಲಿಲ್ಲ. ಅಮೆರಿಕೆಯಲ್ಲಿ ಪತ್ರಿಕೆಗಳ ಪ್ರಸಾರ 2010 ರ ನಂತರ ತೀವ್ರವಾಗಿ ಕುಸಿಯಲಾರಂಭಿಸಿತು. ಇದನ್ನು ಮನಗಂಡ ಟೈಮ್ಸ್ ಮಾಲೀಕರು, ಬದಲಾಗುತ್ತಿರುವ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಲು ಯೋಜನೆ ಸಿದ್ಧಪಡಿಸಿದರು. ಮುದ್ರಿತ ಪತ್ರಿಕೆಗಳ ಪ್ರಸಾರ ಇಳಿಮುಖವಾಗುತ್ತಿದ್ದಂತೆ, ಆನ್‌ಲೈನ್ ಚಂದಾದಾರರ ಸಂಖ್ಯೆ ಏರುಮುಖ ಕಂಡಿತು. ಈ ತಂತ್ರಗಾರಿಕೆ ಪತ್ರಿಕೆಯ ಚಂದಾದಾರರ ಸಂಖ್ಯೆಯನ್ನು ಒಂದು ಕೋಟಿ 55 ಲಕ್ಷಕ್ಕೆ ಏರಿಸಿತು. 2025 ರ ವೇಳೆಗೆ ಇಪ್ಪತ್ತು ಲಕ್ಷ ಅಂತಾರಾಷ್ಟ್ರೀಯ ಚಂದಾದಾರರನ್ನು ಆಕರ್ಷಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದ್ದ ಟೈಮ್ಸ್ ಪತ್ರಿಕೆ, ನಿಗದಿಪಡಿಸಿದ ಗುರಿಗಿಂತ ಮುಂಚಿತವಾಗಿ ಮೈಲಿಗಲ್ಲನ್ನು ತಲುಪಿರುವುದು ಈ ಪತ್ರಿಕೆಯ ವಿಸ್ತೃತ ಸುದ್ದಿ ಪ್ರಕಟಣೆ ಮತ್ತು ಸಂಪಾದಕೀಯ ವಿಶ್ಲೇಷಣೆಗೆ ಸಾಕ್ಷಿ.

173 ವರ್ಷಗಳ ಭವ್ಯ ಇತಿಹಾಸ ಹೊಂದಿರುವ ಈ ಪತ್ರಿಕೆ ತನ್ನ ಪತ್ರಿಕಾ ಭಂಡಾರವನ್ನು ಪೂರ್ಣವಾಗಿ ಡಿಜಲೀಕರಣಗೊಳಿಸಿ ತನ್ನ ಐತಿಹಾಸಿಕ ಸಂಪನ್ಮೂಲದ ಸದುಪಯೋಗ ಮಾಡಿಕೊಂಡಿದೆ. ತನ್ನ ಓದುಗರಿಗೆ ಸುದ್ದಿ, ಪದಬಂಧ, ಅಡುಗೆ ಮಾಹಿತಿ, ಕ್ರೀಡಾ ಸುದ್ದಿ, ಗೇಮ್‌ಗಳು ಮತ್ತು ಪಾಡ್‌ಕಾಸ್ಟ್ ಸೇವೆಗಳನ್ನು ಒದಗಿಸುತ್ತಿದೆ. ಈ ಸೇವೆಗಳನ್ನು ಬಿಡಿಯಾಗಿ ಇಲ್ಲವೇ ಎರಡು ಅಥವಾ ಮೂರು ಸೇವೆಗಳಿಗೆ ಆಸಕ್ತರು ಚಂದಾದಾರರಾಗಬಹುದು. ಒಂದು ವರ್ಷದ ಹಿಂದೆ ಟೈಮ್ಸ್ ಪತ್ರಿಕೆ ಒಂದು ಕೋಟಿ ಚಂದಾದಾರರನ್ನು ಹೊಂದಿತ್ತು. ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಸೇವೆಗಳನ್ನು ಪಡೆಯುತ್ತಿದ್ದರೆ, ಅದನ್ನು ಒಂದೇ ಚಂದಾದಾರಿಕೆ ಎಂದು ಪರಿಗಣಿಸಲಾಗುತ್ತದೆ. ಈ ಎಲ್ಲ ಸೇವೆಗಳನ್ನು ಅಂತರ್ಜಾಲದ ಮೂಲಕ ಜಗತ್ತಿನ ಯಾವ ಭಾಗದಲ್ಲಾದರೂ ಓದುಗರು ಪಡೆಯಬಹುದಾಗಿದೆ.

1990 ರಲ್ಲಿ ಪತ್ರಿಕೆಯ ಮಾಲೀಕ ಮತ್ತು ಸಂಪಾದಕರಾದ ಆರ್ಥರ್ ಓಕ್ಸ್ ಸುಲ್ಜ್ ಬರ್ಗರ್ ಅವರನ್ನು ನ್ಯೂಯಾರ್ಕ್ ನಗರದಲ್ಲಿ ಲೇಖಕರು ಭೇಟಿ ಮಾಡಿದ ಚಿತ್ರ

ಪತ್ರಿಕೆಯ ಆಕರ್ಷಣೆ ಜಾಗತಿಕ ಬೆಳವಣಿಗೆಗಳನ್ನು ನೇರ ಮತ್ತು ಸವಿವರವಾಗಿ ವರದಿ ಮಾಡುವ ಪತ್ರಿಕೆಯ ಧೋರಣೆ, ದೇಶೀಯ ಮತ್ತು ವಿದೇಶಿ ಓದುಗರಿಗೆ ಪ್ರಮುಖ ಆಕರ್ಷಣೆಯಾಗಿದೆ. ಯುರೋಪ್ ಮತ್ತು ಮಧ್ಯ ಪ್ರಾಚ್ಯದಲ್ಲಿನ ಸಂಘರ್ಷಗಳ ಸವಿವರ ಸಚಿತ್ರ ವರದಿಗಳು ಸಮಸ್ಯೆಗಳ ಎಲ್ಲ ಮುಖಗಳನ್ನು ಹೊರಹಾಕುತ್ತವೆ. ರಾಜಕೀಯ ಬೆಳವಣಿಗೆಗಳ ಆಳವಾದ ವರದಿ ಮತ್ತು ವಿಶ್ಲೇಷಣೆಗಳು, ಟರ್ಕಿಯ ಭೂಕಂಪ ಸೇರಿದಂತೆ ಅನೇಕ ಜಾಗತಿಕ ದುರಂತಗಳನ್ನು ಪತ್ರಿಕೆ ಸುಧೀರ್ಘವಾಗಿ ವರದಿ ಮಾಡುತ್ತದೆ. ಅಲ್ಲದೆ ಅನೇಕ ದೇಶಗಳ ಸ್ಥಳೀಯ ಸಮಸ್ಯೆಗಳನ್ನು ಕುರಿತ ಲೇಖನ-ವರದಿಗಳು ಆಯಾ ದೇಶದ ಓದುಗರಿಗೆ ಇಷ್ಟವಾಗುತ್ತವೆ. ಜಾಗತಿಕ-ಮನಸ್ಸಿನ ಓದುಗರಿಗೆ ಆಳವಾದ ವರದಿ, ಪತ್ರಿಕೆಯ ಸ್ವತಂತ್ರ ತನಿಖೆಗಳು ಮತ್ತು ನಿರ್ಭಿಡೆಯ ಅಂತಾರಾಷ್ಟ್ರೀಯ ಸುದ್ದಿಗಳ ಪ್ರಕಟಣೆ ಈ ದೈನಿಕದ ವಿಶೇಷ ಆಕರ್ಷಣೆಗಳಾಗಿವೆ. ಸಮಕಾಲೀನ ಪ್ರಮುಖ ಜಾಗತಿಕ ಸಮಸ್ಯೆಗಳ ವರದಿಗಳ ಸಮಗ್ರ ಚಿತ್ರಣವನ್ನು ಪತ್ರಿಕೆ ಓದುಗರ ಮುಂದಿರಿಸುತ್ತದೆ.

ಅಫ್ಘಾನಿಸ್ತಾನದ ರಾಜಕೀಯ ಬೆಳವಣಿಗೆಗಳು, ಕರೋನ ಸಾಂಕ್ರಾಮಿಕ, ಅಮೆರಿಕೆಯ ಕ್ಯಾಪಿಟಲ್ ಭವನದ ಮುತ್ತಿಗೆ, ಕಪ್ಪು ಜನರ ಮೇಲೆ ನಡೆದ ದಾಳಿ, ಜಾಗತಿಕ ಹವಾಮಾನ, ತಂತ್ರಜ್ಞಾನಗಳ ಸಮಗ್ರ, ವರದಿಗಳು, 2019-20 ರ ಅವಧಿಯಲ್ಲಿ ಪತ್ರಿಕೆಯ ಅಂತಾರಾಷ್ಟ್ರೀಯ ಓದುಗರನ್ನು ದ್ವಿಗುಣಗೊಳಿಸಿತು. ವಿಶ್ವದಾದ್ಯಂತ ಓದುಗರನ್ನು ಆಕರ್ಷಿಸಲು ತನ್ನ ತಂತ್ರಜ್ಞಾನಕ್ಕೆ ಆಧುನಿಕ ಸ್ಪರ್ಶ ನೀಡಿದೆ. ಧ್ವನಿ, ಮಾಹಿತಿ ದೃಶ್ಯೀಕರಣ, ಗೇಮ್‌ಗಳು ಮತ್ತು ಸಾಕ್ಷ್ಯ ಚಿತ್ರಗಳನ್ನು ಪತ್ರಿಕೆಯ ಜಾಲತಾಣಗಳಲ್ಲಿ ವೀಕ್ಷಿಸಬಹುದಾಗಿದೆ. ಎಂಜಿನಿಯರಿಂಗ್, ಮಾರ್ಕೆಟಿಂಗ್ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಪತ್ರಿಕೆಯು ಹೆಚ್ಚು ಹೂಡಿಕೆ ಮಾಡಿದೆ. ವಿಶ್ವದ ಅನೇಕ ಪ್ರಮುಖ ಪತ್ರಿಕೆಗಳು ಜಾಗತಿಕ ಸುದ್ದಿ ಸಂಗ್ರಹಣೆಗೆ ಸುದ್ದಿ ಸಂಸ್ಥೆಗಳ ಮೊರೆ ಹೋಗುತ್ತಿವೆ. ಆದರೆ ಟೈಮ್ಸ್ ದೈನಿಕ ವಿಶ್ವದಾದ್ಯಂತ 30 ಕ್ಕೂ ಹೆಚ್ಚು ಸುದ್ದಿಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಿ ಅಧಿಕ ಸಂಖ್ಯೆಯ ಪತ್ರಕರ್ತರನ್ನು ನೇಮಿಸಿ, ವಿಶೇಷ ಮತ್ತು ಪರಿಣತ ಸುದ್ದಿ ಹಾಗು ವಿಶ್ಲೇಷಣೆಗಳ ಮೂಲಕ ತನ್ನ ವೈಶಿಷ್ಟತೆಯನ್ನು ಉಳಿಸಿಕೊಂಡಿದೆ. ಹೀಗಾಗಿ ಜಾಗತಿಕ ಸುದ್ದಿ ನೀಡುವಲ್ಲಿ ಪತ್ರಿಕೆ ತನ್ನ ಛಾಪು ಮೂಡಿಸಿದೆ.

ಮಾಲೀಕತ್ವ ಬದಲು: 1851 ರಲ್ಲಿ ಹೆನ್ರಿ ಜಾರ್ವಿಸ್ ರೇಮಂಡ್ ಮತ್ತು ಜಾರ್ಜ್ ಜೋನ್ಸ್ ಅವರಿಂದ ಪೆನ್ನಿ ಪತ್ರಿಕೆಯಾಗಿ ತನ್ನ ಪಯಣ ಆರಂಭಿಸಿದ ಟೈಮ್ಸ್ ಪತ್ರಿಕೆ, ತನ್ನ ವಸ್ತುನಿಷ್ಠ ವರದಿ ಮತ್ತು ವಿಶೇಷ ವರ್ಗದ ಓದುಗರನ್ನು ಆಕರ್ಷಿಸುವುದರ ಮೂಲಕ ಆರಂಭಿಕ ಯಶಸ್ಸನ್ನು ಗಳಿಸಿತು. ವರ್ಣರಂಜಿತ ಮತ್ತು ಕಾಲ್ಪನಿಕ ಸುದ್ದಿಗಳ ಮೂಲಕ ಓದುಗರನ್ನು ರಂಜಿಸುತ್ತಿದ್ದ ಅಂದಿನ ಪತ್ರಿಕೆಗಳ ನಡುವೆ ಕ್ರಮೇಣವಾಗಿ ಟೈಮ್ಸ್ ಮಾದರಿ ಪತ್ರಿಕೆಯಾಗಿ ಜನಮನ್ನಣೆ ಗಳಿಸಿತು. 1896 ರಲ್ಲಿ ಅಡಾಲ್ಫ್ ಸೈಮನ್ ಒಕ್ಸ್ ಈ ಪತ್ರಿಕೆಯನ್ನು 75 ಸಾವಿರ ಡಾಲರ್ ನೀಡಿ ಖರೀದಿಸಿ, ಈ ಪತ್ರಿಕೆಗೆ ವಿಶ್ವವ್ಯಾಪಿ ಮನ್ನಣೆ ಗಳಿಸಲು ಕಾರಣನಾದ. ಪೀತ ಪತ್ರಿಕೋದ್ಯಮದ ಹಾವಳಿಯ ಆ ದಿನಗಳಲ್ಲಿ ಕೂಡ, ಟೈಮ್ಸ್ ತನ್ನ ನಿಲುವನ್ನು ಬದಲಿಸದೆ, ವಸ್ತುನಿಷ್ಠತೆಗೆ ಮನ್ನಣೆ ನೀಡಿ ಓದುಗರ ವಿಶ್ವಾಸ ಸಂಪಾದಿಸಿತು. ಏಪ್ರಿಲ್ 1912 ರಲ್ಲಿ ಟೈಟಾನಿಕ್ ಹಡಗು ದುರಂತದ ಎಲ್ಲ ಮಗ್ಗಲುಗಳನ್ನು ಸವಿವರವಾಗಿ ಪ್ರಕಟಿಸಿ ಓದುಗರ ಗಮನ ಸೆಳೆಯಿತು. ಲಭ್ಯವಿರುವ ಎಲ್ಲ ಸಂಪನ್ಮೂಲಗಳನ್ನು ಪತ್ರಿಕೆ ವ್ಯಾಪಕವಾಗಿ ಬಳಸಿ ತನ್ನ ವೃತ್ತಿಪರತೆಯನ್ನು ಪ್ರದರ್ಶಿಸಿತು. ಪತ್ರಿಕೆಯ ಪ್ರತಿಷ್ಠೆ ಬಹುಮುಖವಾಗಿ ಬೆಳೆಯಿತು. ಎರಡು ವಿಶ್ವ ಯುದ್ಧಗಳ ವರದಿಗಾರಿಕೆಯಲ್ಲಿ ಟೈಮ್ಸ್ ಪತ್ರಿಕೆಯ ಶ್ರೇಷ್ಠತೆ ವಿಶ್ವಖ್ಯಾತಿ ಗಳಿಸಿತು.

ವಿಯೆಟ್ನಾಂ ಯುದ್ಧದ ಸಮಯದಲ್ಲಿ ಅಮೆರಿಕೆಯ ರಹಸ್ಯ ಸರಕಾರಿ ಅಧ್ಯಯನ ಪೆಂಟಗನ್ ಪೇಪರ್ಸ್ ಅನ್ನು ಆಧರಿಸಿ, ವರದಿಗಳ ಸರಣಿಯನ್ನು ಟೈಮ್ಸ್ ಪತ್ರಿಕೆ ಪ್ರಕಟಿಸಿದಾಗ ಸರಕಾರದಿಂದ ಭಾರಿ ವಿರೋಧ ವ್ಯಕ್ತವಾಯಿತು. ಸರಕಾರಿ ಅಧಿಕಾರಿಗಳೇ ಪತ್ರಿಕೆಗೆ ಈ ವರದಿಯನ್ನು ಗುಪ್ತವಾಗಿ ರವಾನಿಸಿದ್ದರು. ಪತ್ರಿಕೆಯ ವಿರುದ್ಧ ಸರಕಾರ ನ್ಯಾಯಾಲಯದ ಮೆಟ್ಟಿಲು ಏರಿತು. ಆದರೆ ಅಲ್ಲಿನ ಸುಪ್ರೀಂ ಕೋರ್ಟ್ ಪತ್ರಿಕೆಯ ಪರವಾಗಿ ನಿಂತಿತು. ಈ ವರದಿಗೆ ಪತ್ರಿಕೆ ಪುಲಿಟ್ಜರ್ ಪ್ರಶಸ್ತಿ ಪಡೆಯಿತು. ತನ್ನ ಪ್ರಭಾವಯುತ ತನಿಖಾ ವರದಿಗಳಿಗೆ, ಲೇಖನಗಳಿಗೆ ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಬರಹಗಳಿಗೆ ಟೈಮ್ಸ್ ಪತ್ರಿಕೆಯು ಇದುವರೆಗೆ 132 ಪುಲಿಟ್‌ಜರ್ ಪ್ರಶಸ್ತಿಗಳನ್ನು ಪಡೆದು ತನ್ನ ಪತ್ರಿಕಾ ಧರ್ಮದ ಶ್ರೇಷ್ಠತೆಯ ಸಾಧನೆಗಳನ್ನು ಸಾಬೀತುಪಡಿಸಿದೆ. ಅಡಾಲ್ಫ್ ಓಕ್ಸ್ ಅವರ ಮೊಮ್ಮಗ, ಆರ್ಥರ್ ಓಕ್ಸ್ ಸುಲ್ಜ್ ಬರ್ಗರ್ ವ್ಯಾಪಕವಾದ ತಾಂತ್ರಿಕ ಬದಲಾವಣೆಗಳನ್ನು ಪರಿಚಯಿಸಿದರು. ಉಪಗ್ರಹದಿಂದ ಪ್ರಾದೇಶಿಕ ಮುದ್ರಣ ಘಟಕಗಳಿಗೆ ರವಾನೆಯಾಗುವ ರಾಷ್ಟ್ರೀಯ ಆವೃತ್ತಿಯನ್ನು ಹೊರತಂದರು.

2011 ರಲ್ಲಿ ಟೈಮ್ಸ್ ತನ್ನ ಡಿಜಿಟಲ್ ಆವೃತ್ತಿಗೆ ಚಂದಾದಾರಿಕೆ ಯೋಜನೆಯನ್ನು ಆರಂಭಿಸಿ ಯಶಸ್ಸಿನ ಹಾದಿಯಲ್ಲಿ ಸಾಗಿದೆ. ಸುದ್ದಿ, ಅಡುಗೆ ಮಾಹಿತಿ, ಆಟಗಳು, ಕ್ರೀಡಾಸುದ್ದಿ, ಆಡಿಯೋ ಸುದ್ದಿ ನೀಡುವುದರ ಮೂಲಕ ಜಗತ್ತಿನ ಎಲ್ಲೆಡೆ ತನ್ನ ಓದುಗರನ್ನು ಆಕರ್ಷಿಸುತ್ತಿದೆ. ಪ್ರತಿದಿನ ಮಾರುಕಟ್ಟೆಯಲ್ಲಿ ಹೊರಬರುವ ಹೊಸ ಉತ್ಪನ್ನಗಳನ್ನು ಪರಿಶೀಲಿಸಿ ತನ್ನ ಓದುಗರಿಗೆ ಶಿಫಾರಸ್ಸು ಮಾಡುವ 'ವೈರ್ ಕಟರ್' ಎಂಬ ಸೇವೆ ಸಹ ಓದುಗರಿಗೆ ಲಭ್ಯವಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಎಲ್ಲ ಸುದ್ದಿ-ಲೇಖನಗಳನ್ನು ನೀವು ಓದಬಹುದು ಇಲ್ಲವೇ ಆಲಿಸಬಹುದಾದ ತಂತ್ರಜ್ಞಾನ ಅಳವಡಿಕೆ ಓದುಗರಿಗೆ ಇನ್ನೊಂದು ಆಕರ್ಷಣೆ. ಅಮೆರಿಕೆಯಲ್ಲಿ ಬಿಡಿ ಪತ್ರಿಕೆಯ ಬೆಲೆ ನಾಲ್ಕು ಡಾಲರ್, ಅಂದರೆ 335 ರುಪಾಯಿ. ಭಾರತೀಯರು ಆನ್ ಲೈನ್ ಮೂಲಕ ಚಂದಾದಾರರಾಗಲು ಮಾಸಿಕ 400 ರುಗಳನ್ನು ನೀಡಿ ಟೈಮ್ಸ್ ಪತ್ರಿಕೆಯನ್ನು ಓದಬಹುದಾಗಿದೆ. ಆರಂಭಿಕ ಆಕರ್ಷಣೆಯಾಗಿ ಕೇವಲ 100 ರುಗಳಲ್ಲಿ ಸಹ ಈ ಸೇವೆ ಪಡೆಯಬಹುದು!

(ಲೇಖಕರು: ವಿಶ್ರಾಂತ ಪತ್ರಿಕೋದ್ಯಮ ಪ್ರಾಧ್ಯಾಪಕರು ಮತ್ತು ಮಾಧ್ಯಮ ತಜ್ಞರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 214

ಸಮಾಚಾರ ಸಣ್ಣದಲ್ಲ

ಬಾಂಗ್ಲಾದಿಂದ 6,700 ವಿದ್ಯಾರ್ಥಿ ವಾಪಸ್

ದೆಹಲಿ: ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿಗಳ ಹಿಂಸಾತ್ಮಕ ಪ್ರತಿಭಟನೆ ನಡೆಯುತ್ತಿದ್ದ ಹಿನ್ನೆಲೆ ಆ ದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳಲ್ಲಿ 6,700 ಮಂದಿ ಈವರೆಗೆ ಸ್ವದೇಶಕ್ಕೆ ಮರಳಿದ್ದಾರೆ. ವಿವಾದಾತ್ಮಕ ಉದ್ಯೋಗ ಮೀಸಲಾತಿ ವ್ಯವಸ್ಥೆಯನ್ನು ರದ್ದುಗೊಳಿಸುವಂತೆ ಸರ್ಕಾರವನ್ನು ಒತ್ತಾಯಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸುತ್ತಿದ್ದರು. ವಾರ ಕಳೆದರೂ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿಲ್ಲ. ವಾರದ ಹಿಂದೆ ಪ್ರಾರಂಭವಾದ ಸಂಘರ್ಷದಲ್ಲಿ 130ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಈವರೆಗೆ 6,700 ಭಾರತೀಯ ವಿದ್ಯಾರ್ಥಿಗಳು ಬಾಂಗ್ಲಾದೇಶದಿಂದ ಮರಳಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಮಹಾ ಚುನಾವಣೆಗೆ ಸ್ವತಂತ್ರ ಸ್ಪರ್ಧೆ: ರಾಜ್

ಮುಂಬೈ: ವರ್ಷದ ಅಂತ್ಯದಲ್ಲಿ ನಡೆಯಲಿರುವ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧೆ ಮಾಡುವುದಾಗಿ ಮಹಾ ರಾಷ್ಟ್ರ ನವ ನಿರ್ಮಾಣ ಸೇನೆ(ಎಂಎನ್ಎಸ್) ಮುಖಂಡ ರಾಜ್ ಠಾಕ್ರೆ, ಗುರುವಾರ ಹೇಳಿದ್ದಾರೆ.

ಪಕ್ಷದ ಸಭೆಯಲ್ಲಿ ಈ ಘೋಷಣೆ ಮಾಡಿದ ರಾಜ್ ಠಾಕ್ರೆ, ಬಿಜೆಪಿ ನೇತೃತ್ವದ ಎನ್ ಡಿ ಎ ಮತ್ತು ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟದ ವಿರುದ್ಧ ಟೀಕೆ, ವಾಗ್ದಾಳಿ ನಡೆಸಿದರು. 288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯಲ್ಲಿ 225 ಕ್ಷೇತ್ರಗಳಲ್ಲಿ ಎಂ ಎನ್ ಎಸ್ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ನಿರ್ಧಾರ ಮಾಡಿರುವುದಾಗಿ ರಾಜ್ ಠಾಕ್ರೆ ಹೇಳಿದ್ದಾರೆ.

ಗನ್ ಪಾಯಿಂಟ್‌ನಲ್ಲಿ ಬಾಲಕಿ ಮೇಲೆ ರೇಪ್

ದೆಹಲಿ : ಗನ್ ಪಾಯಿಂಟ್‌ನಲ್ಲಿ ಬಾಲಕಿ ಮೇಲೆ ಅತ್ಯಾಚಾರವೆಸಗಿ 5ನೇ ಮಹಡಿಯಿಂದ ಕೆಳಗೆ ನೂಕಿದ ಭಯಾನಕ ಕೃತ್ಯ ದೆಹಲಿಯಲ್ಲಿ ನಡೆದಿದೆ. ದೆಹಲಿಯ ದ್ವಾರಕಾ ಪ್ರದೇಶದಲ್ಲಿ ಸೋಮವಾರ ಈ ಘಟನೆ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ಮನೆಯಲ್ಲಿ ಯಾರೂ ಇಲ್ಲದ ಸಮಯ ನೋಡಿಕೊಂಡು ಮನೆಗೆ ನುಗ್ಗಿದ ದುಷ್ಕರ್ಮಿ ಬಾಲಕಿಯನ್ನು ಅಲ್ಲೇ ಹತ್ತಿರದ ಕಟ್ಟಡಕ್ಕೆ ಕರೆದೊಯ್ದು ಗನ್ ತೋರಿಸಿ ಬೆದರಿಸಿ ಅತ್ಯಾಚಾರವೆಸಗಿದ್ದಾನೆ. ಬಳಿಕ ಬಾಲಕಿಯನ್ನು 5ನೇ ಮಹಡಿಯಿಂದ ತಳ್ಳಿದ್ದು ಗಂಭೀರವಾಗಿ ಗಾಯಗೊಂಡಿದ್ದಾಳೆ. ಸಂತ್ರಸ್ತೆ ಬಾಲಕಿಯನ್ನು ದೀನ್ ದಯಾಳ್ ಉಪಾಧ್ಯಾಯ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಪ್ತ ಸಮಾಲೋಚನೆಯಲ್ಲಿ ತನ್ನ ಮೇಲೆ ಅತ್ಯಾಚಾರ ನಡೆದಿದೆ ಎಂದು ಬಾಲಕಿ ಮಾಹಿತಿ ನೀಡಿದ್ದಾಳೆ. ಘಟನೆ ಸಂಬಂಧ ಭಾರತೀಯ ನ್ಯಾಯ ಸಂಹಿತೆ ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಮೊದಲು ಕಾರ್ಯಕಾರಿ ಅಧ್ಯಕ್ಷರ ನೇಮಕ?

ದೆಹಲಿ : ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜಗತ್ ಪ್ರಕಾಶ್ (ಜೆ.ಪಿ.) ನಡ್ಡಾ ಅಧಿಕಾರದ ಅವಧಿ ಜೂನ್‌ನಲ್ಲಿಯೇ ಮುಗಿದಿದೆ. ಹಾಗಿದ್ದರೂ ಹೊಸ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದಿಲ್ಲ. ನಡ್ಡಾ ಅವರನ್ನೇ ಡಿಸೆಂಬರ್‌ವರೆಗೆ ಮುಂದುವರಿಸಲಾಗುತ್ತದೆ ಎಂಬ ಮಾತುಗಳು ಕೇಳಿಬಂದಿವೆ. ಈ ಮಧ್ಯೆ, ಆಗಸ್ಟ್ ಅಂತ್ಯಕ್ಕೆ ಕಾರ್ಯಕಾರಿ ಅಧ್ಯಕ್ಷರನ್ನು ನೇಮಿಸಲು ಬಿಜೆಪಿ ಯೋಚಿಸಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ. ಸಂಸತ್ ಭವನದಲ್ಲಿ ಬುಧವಾರ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ, ಜೆ.ಪಿ.ನಡ್ಡಾ ಹಾಗೂ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಮಹತ್ವದ ಸಭೆ 2 ಗಂಟೆ ನಡೆಸಿದ್ದು, ರಾಷ್ಟ್ರೀಯ ಅಧ್ಯಕ್ಷರ ಬದಲಾವಣೆಗೂ ಮೊದಲು ಕಾರ್ಯಕಾರಿ ಅಧ್ಯಕ್ಷರನ್ನು ನೇಮಿಸಲು ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

‘ದರ್ಬಾರ್’ ಅಲ್ಲ ‘ಶೆಹೆನ್ ಷಾ’ ಪರಿಕಲ್ಪನೆ

ದೆಹಲಿ: ರಾಷ್ಟ್ರಪತಿ ಭವನದ ಎರಡು ಸಭಾಂಗಣಗಳ ಹೆಸರು ಬದಲಾವಣೆ ಮಾಡಿರುವ ಬಗ್ಗೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ವಾದ್ರಾ ಟೀಕಿಸಿದ್ದಾರೆ. ಅಲ್ಲಿ 'ದರ್ಬಾರ್' ಅಲ್ಲ 'ಶೆಹೆನ್ ಷಾ' ಪರಿಕಲ್ಪನೆ ಇದೆ ಎಂದು ವ್ಯಂಗ್ಯವಾಡಿದ್ದಾರೆ. ಸಂಸತ್ ಆವರಣದಲ್ಲಿ ಮಾಧ್ಯಮದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು. ಹೆಸರು ಬದಲಾವಣೆ ಮಾಡಿದ್ದು ಇಂಟ್ರಸ್ಟಿಂಗ್ ಆಗಿದೆ. ಅಲ್ಲಿರುವುದು ದರ್ಬಾರ್ ಅಲ್ಲ ಶೆಹೆನ್ ಷಾ ಯೋಚನೆಗಳು ಎಂದರು. ರಾಷ್ಟ್ರಪತಿ ಭವನದ ಎರಡು ಪ್ರಮುಖವಾದ ಸಭಾಂಗಣಗಳ ಹೆಸರನ್ನು ಬದಲಾಯಿಸಲಾಗಿದ್ದು ಗಣತಂತ್ರ ಮಂಟಪ ಹಾಗೂ ಅಶೋಕ್ ಹಾಲ್‌ನ್ನು ಅಶೋಕ ಮಂಟಪ ಎಂದು ಮರುನಾಮಕರಣ ಮಾಡಲಾಗಿದೆ.

{ **ರಣಧೀರ್ ಜೈಸ್ವಾಲ್** } ವಿದೇಶಾಂಗ ಇಲಾಖೆ ವಕ್ತಾರ

7ನೇ ಶೆಡ್ಯೂಲ್ ಪಟ್ಟಿ 1-ರಡಿ ಸಂವಿಧಾನವು ಕೇಂದ್ರ ಪಟ್ಟಿಯಲ್ಲಿ ವಿದೇಶಾಂಗ ವ್ಯವಹಾರಗಳು ಮತ್ತು ವಿದೇಶಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು ಕೇಂದ್ರ ಸರಕಾರದ ಏಕೈಕ ಹಕ್ಕು ಎಂದು ಸ್ಪಷ್ಟವಾಗಿ ಹೇಳಿದೆ. ಆದರೆ ಕೇರಳ ಸರಕಾರ ಪ್ರತ್ಯೇಕ ವಿದೇಶಾಂಗ ಕಾರ್ಯದರ್ಶಿ ಹುದ್ದೆಯನ್ನು ಸೃಷ್ಟಿಸಿ, ಕೆ.ವಾಸುಕಿ ಎಂಬ ಹಿರಿಯ ಅಧಿಕಾರಿಯನ್ನು ನೇಮಕ ಮಾಡಿದೆ.

ಪುಣೆಯಲ್ಲಿ ವರುಣನ ಅಬ್ಬರಕ್ಕೆ 4 ಬಲಿ; ಶಾಲೆ- ಕಾಲೇಜಿಗೆ ರಜೆ ಘೋಷಣೆ

ಮಹಾರಾಷ್ಟ್ರ ಭಾರೀ ಮಳೆ- ಪ್ರವಾಹ ಸ್ಥಿತಿ

ಮುಂಬೈ: ಮಹಾರಾಷ್ಟ್ರದ ಭಾರಿ ಮಳೆ ಸುರಿಯುತ್ತಿದ್ದು, ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳಲ್ಲಿ, ಪುಣೆ ನಗರದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಮಳೆ ಸಂಬಂಧಿತ ಅವಘಡಗಳಿಂದ ಪುಣೆ ಭಾಗದಲ್ಲಿ ನಾಲ್ವರು ಮೃತಪಟ್ಟಿದ್ದಾರೆ.

ತಗ್ಗು ಪ್ರದೇಶದ ನೂರಾರು ಮನೆಗಳು ಜಲಾವೃತವಾಗಿವೆ. ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ಪುಣೆ ಜಿಲ್ಲೆ ಗೆ ಹವಾಮಾನ ಇಲಾಖೆ ಮುಂದಿನ 24 ಗಂಟೆಗಳ ಕಾಲ ರೆಡ್ ಅಲರ್ಟ್ ಘೋಷಣೆ ಮಾಡಿದೆ. ಜನರು ಮುನ್ನೆಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಿದೆ.

ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಪುಣೆ ಸುತ್ತಲ ತಾಲ್ಲೂಕುಗಳಲ್ಲಿ ಅನೇಕ ಅಣೆಕಟ್ಟೆಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಖಡಕ್‌ವಾಸ್ಲಾ ಜಲಾಶಯದಿಂದ 35 ಸಾವಿರ ಕ್ಯುಸೆಕ್ ನೀರು ಹೊರ ಬಿಡಲಾಗಿದೆ. ಮಳೆಯಿಂದಾಗಿ ನೀರಿನ ಮಟ್ಟ ಹೆಚ್ಚುತ್ತಿರುವ ಕಾರಣ 45 ಸಾವಿರ ಕ್ಯುಸೆಕ್ ಗೆ ಹೆಚ್ಚಿಸುವ ಸಾಧ್ಯತೆ ಇದೆ. ಪರಿಣಾಮ ಇನ್ನಷ್ಟು ತಗ್ಗು ಪ್ರದೇಶಗಳು ಜಲಾವೃತವಾಗುವ ಭೀತಿ ಎದುರಾಗಿದೆ.

ರಾಯಗಡ ಜಿಲ್ಲೆಯಲ್ಲಿಯು ಕೆಲ ದಿನಗಳಿಂದ ಭಾರೀ ಮಳೆಯಾಗುತ್ತಿದ್ದು, ಕುಂಡಲಿಕಾ, ಅಂಬಾ, ಸಾವಿತ್ರಿ ಸೇರಿದಂತೆ ಹಲವು ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪಾಲ್ಘರ್‌ನಲ್ಲಿ ಭಾರೀ ಮಳೆ ಕಾರಣ ವಾಡಾ ಮತ್ತು ವಿಕ್ರಮಗಡ ತಾಲೂಕಿನ ಶಿಕ್ಷಣ ಸಂಸ್ಥೆಗಳಿಗೆ ಗುರುವಾರ ರಜೆ ಘೋಷಿಸಲಾಗಿತ್ತು.

ಆಲಮಟ್ಟಿಯಿಂದ ನೀರು ಬಿಡುವಂತೆ ಮಹಾರಾಷ್ಟ್ರ ಮನವಿ

ಮುಂಬೈ: ಮಹಾರಾಷ್ಟ್ರದ ಪಶ್ಚಿಮ ಭಾಗದಲ್ಲಿ ಭಾರಿ ಮಳೆಯ ಪರಿಣಾಮ ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳಲ್ಲಿ ಪ್ರವಾಹ ಸ್ಥಿತಿ ಉಂಟಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಆಲಮಟ್ಟಿ ಜಲಾಯಶಯದಿಂದ ನೀರು ಬಿಡುಗಡೆ ಮಾಡುವಂತೆ ಕರ್ನಾಟಕ ಸರಕಾರಕ್ಕೆ ಮಹಾರಾಷ್ಟ್ರ ಸರಕಾರ ಮನವಿ ಮಾಡಿದೆ.

ಆಲಮಟ್ಟಿ ಅಣೆಕಟ್ಟಿನಿಂದ ನೀರು ಹರಿಸುವುದನ್ನು 2.5 ಲಕ್ಷ ಕ್ಯುಸೆಕ್‌ನಿಂದ 3 ಲಕ್ಷ ಕ್ಯುಸೆಕ್‌ಗೆ ಹೆಚ್ಚಿಸುವಂತೆ ಕರ್ನಾಟಕವನ್ನು ಕೇಳಲಾಗಿದೆ ಎಂದು ಡಿಸಿಎಂ ಅಜಿತ್ ಪವಾರ್ ಹೇಳಿದ್ದಾರೆ. ಮಹಾರಾಷ್ಟ್ರದ ಸತಾರಾ ಜಿಲ್ಲೆಯ ಕೊಯ್ನಾ ಅಣೆಕಟ್ಟಿನ ನೀರಿನ ಸಂಗ್ರಹ ಅತಿ ಕಡಿಮೆ ಅವಧಿಯಲ್ಲಿ 6 ಸಾವಿರ ದಶಲಕ್ಷ ಘನ ಅಡಿಗಳಷ್ಟು (ಟಿಎಂಸಿ) ಹೆಚ್ಚಾಗಿದೆ ಮತ್ತು ಈಗಾಗಲೇ ಶೇ.75 ರಷ್ಟು ತುಂಬಿರುವುದರಿಂದ ಕೊಯ್ನಾ ಅಣೆಕಟ್ಟಿನಿಂದ ನೀರು ಹೊರಬಿಡಬೇಕಿದೆ. ಇದರಿಂದ ಕೃಷ್ಣಾ ನದಿ ನೀರಿನ ಮಟ್ಟ ಹೆಚ್ಚುತ್ತದೆ ಎಂದು ಅವರು ಸುದ್ದಿಗಾರರಿಗೆ ಗುರುವಾರ ತಿಳಿಸಿದರು. ಕೊಯ್ನಾ ಅಣೆಕಟ್ಟು ಸಂಗ್ರಹ ಸಾಮರ್ಥ್ಯ 105 ಟಿಎಂಸಿಯಷ್ಟಿದೆ. ಕೊಯ್ನಾ, ಕೃಷ್ಣಾ ನದಿಯ ಅತಿದೊಡ್ಡ ಉಪನದಿ. ಇದು ದಕ್ಷಿಣಕ್ಕೆ ಹರಿಯುತ್ತ ಸಾಂಗ್ಲಿ ನಗರ ಮತ್ತು ಕೊಲ್ಲಾಪುರ ಜಿಲ್ಲೆ ದಾಟಿ ಕರ್ನಾಟಕ ಪ್ರವೇಶಿಸುತ್ತದೆ.

ಮಹಾಬಲೇಶ್ವರ ಭಾಗದಲ್ಲಿ ಕೆಲ ದಿನಗಳಿಂದ ಭಾರಿ ಮಳೆಯಾಗಿದೆ. ಕಳೆದ 24 ಗಂಟೆಗಳಲ್ಲಿ 400 ಮಿ.ಮೀ ಗಿಂತ ಹೆಚ್ಚು ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಅಧಿಕಾರಿ ತಿಳಿಸಿದ್ದಾರೆ. ಮಹಾಬಲೇಶ್ವರದಲ್ಲಿ ಬೀಳುವ ಮಳೆ ಕೊಯ್ನಾ ಅಣೆಕಟ್ಟೆಗೆ ಬರುತ್ತದೆ. ಆಲಮಟ್ಟಿ ಅಣೆಕಟ್ಟಿನಿಂದ ನೀರು ಬಿಡುವುದನ್ನು ಹೆಚ್ಚಿಸದಿದ್ದಲ್ಲಿ ಸಾಂಗಲಿ ಮತ್ತು ಕೊಲ್ಲಾಪುರ ಜಿಲ್ಲೆಯ ಕೆಲವು ಭಾಗಗಳಲ್ಲಿ ಪ್ರವಾಹ ಉಂಟಾಗಿ ನಾಗರಿಕರಿಗೆ ತೊಂದರೆಯಾಗಲಿದೆ. ಕೃಷಿ ಕ್ಷೇತ್ರಕ್ಕೆ ಭಾರೀ ನಷ್ಟವಾಗಲಿದೆ. ಅಲ್ಲದೇ ಜಲಸಂಪನ್ಮೂಲ ಇಲಾಖೆ ಕೊಲ್ಲಾಪುರದ ವಾರ್ನಾ ಅಣೆಕಟ್ಟಿನಿಂದ 11,000 ಕ್ಯುಸೆಕ್ ನೀರನ್ನು ಬಿಡುಗಡೆ ಮಾಡಬೇಕದೆ, ಅದು ಕೃಷ್ಣಾ ನದಿಗೆ ತಲುಪುತ್ತದೆ, ಇದರಿಂದ ಪ್ರವಾಹ ಸಾಧ್ಯತೆ ಹೆಚ್ಚಾಗುತ್ತದೆ. ಆದ್ದರಿಂದ, ಆಲಮಟ್ಟಿ ಅಣೆಕಟ್ಟಿನ ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ ಎಂದು ಅಜಿತ್ ಪವಾರ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು

ಖನಿಜ ಸಂಪತ್ತಿರುವ ಭೂಮಿಗೆ ತೆರಿಗೆ ಅಧಿಕಾರ ರಾಜ್ಯಕ್ಕಿದೆ

ದೆಹಲಿ: ಗಣಿಗಳು ಮತ್ತು ಖನಿಜ ಸಂಪತ್ತು ಇರುವ ಭೂಮಿ ಮೇಲೆ ತೆರಿಗೆ ವಿಧಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದ್ದು, ಕೇಂದ್ರ ಸರಕಾರಕ್ಕೆ ಭಾರೀ ಹಿನ್ನಡೆಯಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಒಂಬತ್ತು ನ್ಯಾಯಮೂರ್ತಿಗಳ ಸಾಂವಿಧಾನಿಕ ನ್ಯಾಯಪೀಠದಿಂದ ಬಹುಮತದ (8 : 1) ಮಹತ್ವದ ತೀರ್ಪು ಹೊರಡಿಸಿದೆ. ಒಬ್ಬ ನ್ಯಾಯಮೂರ್ತಿ ಮಾತ್ರ ವಿರುದ್ಧ ಅಭಿಪ್ರಾಯ ನೀಡಿದ್ದಾರೆ. ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್, ಎ.ಎಸ್ ಓಕಾ, ಜೆ.ಬಿ. ಪರ್ದಿವಾಲಾ, ಮನೋಜ್ ಮಿಶ್ರಾ, ಉಜ್ಜಲ್ ಭುಯಾನ್, ಸತೀಶ್ ಚಂದ್ರ ಶರ್ಮಾ ಮತ್ತು ಅಗಸ್ಟಿನ್ ಜಾರ್ಜ್ ಮಿಸಿಹ್ ಕೇಂದ್ರ ಸರಕಾರದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಂವಿಧಾನದ ಪ್ರಕಾರ ಖನಿಜ ಸಂಪತ್ತು ಇರುವ ಭೂಮಿ ಮೇಲೆ ಕೇಂದ್ರ ಸರಕಾರಕ್ಕೆ ಅಧಿಕಾರ ಇರುವುದಿಲ್ಲ ಎಂದಿದೆ.

ತಾವು ಮತ್ತು ಪೀಠದ ಏಳು ನ್ಯಾಯಮೂರ್ತಿಗಳು ಬರೆದ ತೀರ್ಪನ್ನು ಸ್ವತಃ ಓದಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಸಂವಿಧಾನದ ಪಟ್ಟಿ 2ರ ಉಲ್ಲೇಖ 50ರಡಿ ಖನಿಜ ಹಕ್ಕುಗಳ ಮೇಲೆ ತೆರಿಗೆ ವಿಧಿಸುವ ಅಧಿಕಾರ ಕೇಂದ್ರ ಸರಕಾರಕ್ಕೆ ಇರುವುದಿಲ್ಲ. ಸಂವಿಧಾನದ ಪಟ್ಟಿ ಐಐ ರ ನಮೂದು 50 ಖನಿಜ ಅಭಿವೃದ್ಧಿಗೆ ಸಂಬಂಧಿಸಿದ ಕಾನೂನಿನ ಮೂಲಕ ಸಂಸತ್ತು ವಿಧಿಸುವ ಯಾವುದೇ ಮಿತಿಗಳಿಗೆ ಒಳಪಟ್ಟಿರುವ ಖನಿಜ ಹಕ್ಕುಗಳ ಮೇಲಿನ ತೆರಿಗೆಗಳಿಗೆ ಸೇರಿದೆ ಎಂದು ಹೇಳಿದರು.

ಬಹುಮತದ ತೀರ್ಪಿನ ಕಾರ್ಯಾಚರಣೆಯ ಭಾಗವನ್ನು ಓದಿದ ಮುಖ್ಯ ನ್ಯಾಯಮೂರ್ತಿ, 1989ರ ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳನ್ನು ಒಳಗೊಂಡ ಸಂವಿಧಾನ ಪೀಠದ ತೀರ್ಪು, ರಾಯಧನವನ್ನು ತೆರಿಗೆ ಎಂದು ಪರಿಗಣಿಸಿದ್ದು ಸರಿಯಲ್ಲ ಎಂದು ಹೇಳಿದರು. ನ್ಯಾಯಮೂರ್ತಿ ಬಿ.ವಿ.ನಾಗರತ್ನ ಮಾತ್ರ ಕೇಂದ್ರದ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ದೇಶದಲ್ಲಿ ಖನಿಜ ಹಕ್ಕುಗಳ ಮೇಲೆ ತೆರಿಗೆ ವಿಧಿಸಲು ಕೇಂದ್ರವು ವಿಶೇಷ ಹಕ್ಕನ್ನು ಹೊಂದಿದೆ ಮತ್ತು ಗಣಿಗಾರರಿಂದ ಪಾವತಿಸುವ ರಾಯಧನದ ಮೇಲೆ ಹೆಚ್ಚುವರಿ ಸುಂಕವನ್ನು ವಿಧಿಸಲು ರಾಜ್ಯಗಳಿಗೆ ಸಮಾನ ಅಧಿಕಾರವನ್ನು ನೀಡಿದರೆ ರಾಜ್ಯಗಳ ಶಾಸಕಾಂಗ ಸಾಮರ್ಥ್ಯವು ವ್ಯಾಪಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

ರಾಷ್ಟ್ರಪತಿ ಭವನದಲ್ಲಿನ 2 ಸಭಾಂಗಣಕ್ಕೆ ಹೊಸ ಹೆಸರು

ದೆಹಲಿ: ರಾಷ್ಟ್ರಪತಿ ಭವನದೊಳಗಿನ ಎರಡು ಸಭಾಂಗಣಗಳಿಗೆ ಹೊಸ ಹೆಸರು ನೀಡಿ ಮರು ನಾಮಕರಣ ಮಾಡಲಾಗಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಆದೇಶದಂತೆ ಈ ಬದಲಾವಣೆ ಮಾಡಲಾಗಿದ್ದು, ಸಭಾಂಗಣಗಳಾದ ದರ್ಬಾರ್ ಹಾಲ್ ಮತ್ತು ಅಶೋಕ್ ಹಾಲಿನ ಹೆಸರನ್ನು ಕ್ರಮವಾಗಿ ಗಣತಂತ್ರ ಮಂಟಪ್ ಹಾಗೂ ಅಶೋಕ ಮಂಟಪ್ ಎಂದು ಬದಲಿಸಲಾಗಿದೆ.

ರಾಷ್ಟ್ರಪತಿ ಭವನದಲ್ಲಿ ಭಾರತೀಯ ಸಾಂಸ್ಕೃತಿಕ ಮೌಲ್ಯಗಳು ಹಾಗೂ ನೈತಿಕತೆ ಪಸರಿಸುವ ವಾತಾವರಣ ಇರಬೇಕು ಎಂಬ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಷ್ಟ್ರಪತಿ ಭವನದ ಸೆಕ್ರೆಟ್ರಿಯೇಟ್ ಪ್ರಕಟಣೆ ತಿಳಿಸಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ದರ್ಬಾರ್ ಹಾಲ್’ ನಿರ್ಮಾಣವಾಗಿದೆ. ಈ ಸಭಾಂಗಣ ಅಂದಿನ ರಾಜಕೀಯ ಮತ್ತು ಸಾಮಾಜಿಕ ಘಟನೆಗಳಿಗೆ ಸಾಕ್ಷಿಯಾಗಿದೆ. ಅನೇಕ ಬ್ರಿಟಿಷ್ ಆಡಳಿತಗಾರರ ನ್ಯಾಯಾಲಯಗಳು ಈ ಸಭಾಂಗಣದಲ್ಲಿ ನಡೆಯುತ್ತಿದ್ದವು. ಭಾರತದ ಸ್ವಾತಂತ್ರ್ಯದ ನಂತರ, ಈ ಸಭಾಂಗಣ ರಾಷ್ಟ್ರಪತಿ ಭವನದ ಪ್ರಮುಖ ಭಾಗವಾಯಿತು. ಅಶೋಕ್ ಹಾಲ್ ಭಾರತದ ಚಕ್ರವರ್ತಿ ಅಶೋಕ ಅವರ ಆಳ್ವಿಕೆಯ ಕಾಲದ ಕಲೆ ಮತ್ತು ಸಂಸ್ಕೃತಿ ಪ್ರತಿಬಿಂಬಿಸುತ್ತದೆ. ಅಶೋಕ್ ಹಾಲ್ ಈ ಭವನದ ಅತ್ಯಂತ ಆಕರ್ಷಕ ಮತ್ತು ಸುಸಜ್ಜಿತ ಕೊಠಡಿಗಳಲ್ಲಿ ಒಂದಾಗಿದೆ. ಭಾರತದ ಗಣರಾಜ್ಯ ಮತ್ತು ಇತಿಹಾಸ ಪ್ರತಿಬಿಂಬಿಸಲಿ ಎಂದೇ ಈ ಬದಲಾವಣೆ ಮಾಡಲಾಗಿದೆ. ಈ ಬದಲಾವಣೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಂತಸ ವ್ಯಕ್ತಪಡಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶಿಕ್ಷಕಿಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು

ಪರಿಸರ ರಕ್ಷಣೆ ಬೋಧನೆ

ದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೆಹಲಿಯ ಡಾ.ರಾಜೇಂದ್ರ ಪ್ರಸಾದ್ ಕೇಂದ್ರೀಯ ವಿದ್ಯಾಲಯ ವಿದ್ಯಾರ್ಥಿಗಳಿಗೆ ಗುರುವಾರ ಕೆಲ ಸಮಯ ಶಿಕ್ಷಕಿಯಾಗಿದ್ದರು.

ವಿದ್ಯಾಲಯಕ್ಕೆ ಗುರುವಾರ ಭೇಟಿ ನೀಡಿದ್ದ ಮುರ್ಮು, ಜಾಗತಿಕ ತಾಪಮಾನ ಹೆಚ್ಚಳ ಹಾಗೂ ಪರಿಸರ ಸಂರಕ್ಷಣೆಯ ಅಗತ್ಯ ಕುರಿತು ವಿದ್ಯಾರ್ಥಿಗಳಿಗೆ ಬೋಧನೆ ಮಾಡಿದರು. ಏಕ್ ಪೆಡ್ ಮಾ ಕೆ ನಾಮ್ ಅಭಿಯಾನದಡಿ ಗಿಡ ನೆಡುವಂತೆ, ಮನೆಯಲ್ಲಿ ಮಳೆನೀರು ಕೊಯ್ಲುಅಳವಡಿಸಲು ಪೋಷಕರ ಗಮನ ಸೆಳೆಯುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ರಾಷ್ಟ್ರಪತಿಗಳಾಗಿ 2 ವರ್ಷಗಳ ಅಧಿಕಾರಾ ವಧಿ ಪೂರೈಸಿದ ಹಿನ್ನೆಲೆಯಲ್ಲಿ ಮುರ್ಮು ಅವರು, ಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದರು. ಇದೇ ವೇಳೆ 9 ತರಗತಿ ವಿದ್ಯಾರ್ಥಿಗಳಿಗೆ ಪಾಠ ಮಾಡಿದರು. ಮುರ್ಮು ಅವರು 1958ರ ಜೂ.20 ರಂದು ಒಡಿಶಾದ ಮಯೂರ್ ಭಂಜ್ ಜಿಲ್ಲೆಯ ಬೈದಪೋಸಿ ಗ್ರಾಮದ ಸಂತಾಲಿ ಬುಡಕಟ್ಟು ಕುಟುಂಬದಲ್ಲಿ ಜನಿಸಿದರು. ತಂದೆ ಮತ್ತು ಅಜ್ಜ ಪಂಚಾಯಾತ್ ರಾಜ್ ಯೋಜನೆಯಡಿ ಗ್ರಾಮದ ಮುಖ್ಯಸ್ಥರಾಗಿದ್ದರು. ಮುರ್ಮು ಅವರು ಭುವನೇಶ್ವರದ ರಮಾದೇವಿ ಮಹಿಳಾ ಕಾಲೇಜಿನಲ್ಲಿ ಬಿಎ ಪದವಿ ಪಡೆದಿದ್ದಾರೆ. ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. 2000 ಮತ್ತು 2009ರಲ್ಲಿ ಒಡಿಶಾದ ರಾಯರಂಗಪುರ ಕ್ಷೇತ್ರದಿಂದ ಬಿಜೆಪಿ ಅಭ್ಯ ರ್ಥಿಯಾಗಿ ಎರಡು ಬಾರಿ ಶಾಸಕಿಯಾಗಿದ್ದರು. ಬಿಜೆಪಿ-ಬಿಜೆಡಿ ಸಮ್ಮಿಶ್ರ ಸರ್ಕಾರದಲ್ಲಿ ವಾಣಿಜ್ಯ, ಸಾರಿಗೆ, ಮೀನುಗಾರಿಕೆ, ಪಶುಸಂಗೋಪನೆ ಖಾತೆಗಳನ್ನು ಹೊಂದಿದ್ದರು. 2015 ದ್ರೌಪದಿ ಮುರ್ಮು ಅವರು ಜಾರ್ಖಂಡ್‌ನ ರಾಜ್ಯಪಾಲರಾಗಿದ್ದರು. ಆ ಮೂಲಕ ಜಾರ್ಖಂಡ್‌ನ ಮೊದಲ ಮಹಿಳಾ ರಾಜ್ಯಪಾಲರು ಎನಿಸಿಕೊಂಡರು. ಬಳಿಕ ರಾಷ್ಟ್ರಪತಿ ಭವನಕ್ಕೆ ಬಂದು ತಲುಪಿದರು.

ಅಮೆರಿಕ ಅಧ್ಯಕ್ಷೀಯ ಚುನಾವಣೆ: ಕಮಲಾಗೆ ಸಿಗದ ಒಬಾಮ ಬೆಂಬಲ

ನ್ಯೂಯಾರ್ಕ್: ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆ ಸ್ಪರ್ಧೆಯಿಂದ ಜೋ ಬೈಡನ್ ಹಿಂದೆ ಸರಿದ ಬಳಿಕ ಹಾಲಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರನ್ನು ಅಭ್ಯರ್ಥಿಯಾಗಿ ಡೆಮಾಕ್ರೆಟಿಕ್ ಪಕ್ಷದ ಬಹಳಷ್ಟು ನಾಯಕರು ಬೆಂಬಲಿಸುತ್ತಿದ್ದಾರೆ.

ಆದರೆ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಈವರೆಗೂ ಹ್ಯಾರಿಸ್ ಅವರಿಗೆ ಇನ್ನೂ ಬೆಂಬಲ ಘೋಷಿಸಿಲ್ಲ. ಈ ಬಗ್ಗೆ ಅಮೆರಿಕದಲ್ಲಿ ಚರ್ಚೆಯಾಗುತ್ತಿದೆ.

ಒಬಾಮ ಪ್ರಕಾರ ಕಮಲಾ ಹ್ಯಾರೀಸ್, ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ಅವರನ್ನು ಚುನಾವಣೆಯಲ್ಲಿ ಮಣಿಸುವುದು ಸಾಧ್ಯವಿಲ್ಲ. ಆದ ಕಾರಣ ಒಬಾಮ ಇನ್ನೂ ಕಮಲಾ ಅವರಿಗೆ ಬೆಂಬಲ ಸೂಚಿಸಿಲ್ಲ ಎಂದು ನ್ಯೂ ಯಾರ್ಕ್ ಪೋಸ್ಟ್ ವಿಶ್ಲೇಷಿಸಿದೆ. ಅಧ್ಯಕ್ಷೀಯ ಚುನಾವಣೆಯಲ್ಲಿ ಕಮಲಾ ಗೆಲ್ಲಲ್ಲ ಎಂಬುದು ಒಬಾಮಗೆ ತಿಳಿದಿದೆ. ಆದ್ದರಿಂದ ಅವರು ಅಸಮಾಧಾನಗೊಂಡಿದ್ದಾರೆ ಎಂದು ಬೈಡನ್ ಕುಟುಂಬದ ಮೂಲಗಳು ತಿಳಿಸಿರುವುದಾಗಿ ನ್ಯೂಯಾರ್ಕ್ ಪೋಸ್ಟ್ ವರದಿ ತಿಳಿಸಿದೆ. ಒಬಾಮಾ ಶೀಘ್ರದಲ್ಲೇ ಕಮಲಾ ಅವರನ್ನು ಅನುಮೋದಿಸಲು ಯೋಜಿಸಿದ್ದಾರೆ ಎಂದು ಎನ್ ಬಿಸಿ ನ್ಯೂಸ್ ವರದಿ ಮಾಡಿದೆ. ಜೋ ಬಿಡೆನ್ ಚುನಾವಣೆ ಸ್ಪರ್ಧೆಯಿಂದ ನಿವೃತ್ತರಾಗುವ ಮೊದಲು, ಸೆನೆಟರ್ ಟೆಡ್ ಕ್ರೂಜ್ ಅವರು ಮಾಜಿ ಪ್ರಥಮ ಮಹಿಳೆ ಮಿಚೆಲ್ ಒಬಾಮಾ ಅವರು ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವ ಸಾಧ್ಯತೆಗಳಿವೆ ಎಂದು ಹೇಳಿದ್ದರು. ಆದರೆ, ಮಿಚೆಲ್ ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಆಸಕ್ತಿ ವ್ಯಕ್ತಪಡಿಸಿಲ್ಲ.

ಇಬ್ಬರು ಸಹಚರರೊಂದಿಗೆ ಸೆರೆ | ಹಲವು ಅಪರಾಧಗಳಲ್ಲಿ ಭಾಗಿ ಆರೋಪ

ವಾಹನ ಕಸಿದ ಪ್ರಕರಣ ಅಗ್ನಿವೀರ್ ಬಂಧನ

ದೆಹಲಿ: ವಾಹನ ಕಸಿದ ಪ್ರಕರಣದಲ್ಲಿ ಒಬ್ಬ ಅಗ್ನಿವೀರ್ ಯೋಧ ಸೇರಿ ಮೂವರು ಯುವಕರನ್ನು ಮೊಹಾಲಿ ಪೊಲೀಸರು ಬಂಧಿಸಿದ್ದಾರೆ. ಅಗ್ನಿವೀರ್ ಇಶ್ಮೀತ್ ಸಿಂಗ್ ಅಲಿಯಾಸ್ ಇಶು, ಪ್ರಭಪ್ರೀತ್ ಸಿಂಗ್ ಅಲಿಯಸ್ ಪ್ರಭ್ ಹಾಗೂ ಬಲ್ ಕರಣ್ ಸಿಂಗ್ ಬಂಧಿತರು.

ಮೊಹಾಲಿಯ ಬಾಲೊಂಗಿಯಲ್ಲಿ ಬಾಡಿಗೆಗೆ ಕೊಠಡಿ ತೆಗೆದುಕೊಂಡಿದ್ದ ಮೂವರು ಯುವಕರು 2 ದಿನಗಳ ಹಿಂದೆ ಪ್ರಯಾಣಕ್ಕೆ ಆಪ್ ಮೂಲಕ ಕಾರು ಬುಕ್ ಮಾಡಿದ್ದರು. ಬಳಿಕ ಕಾರಿನ ಚಾಲಕನಿಗೆ ಚಾಕು ತೋರಿಸಿ ಬೆದರಿಕೆ ಹಾಕಿ, ಚಾಲಕನ ಮುಖದ ಮೇಲೆ ಪೆಪ್ಪರ್ ಸ್ಪ್ರೇ ಮಾಡಿ ಕಾರು ಕಸಿದು ಪರಾರಿಯಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಸಂದೀಪ್ ಕುಮಾರ್ ಗರ್ಗ್ ಮೊಹಾಲಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪಂಜಾಬ್‌ನ ಫಾಜಿಲ್ಕಾ ಜಿಲ್ಲೆಯ ಅಗ್ನಿವೀರ್ ಇಶ್ಮೀತ್, ಪಶ್ಚಿಮ ಬಂಗಾಳದಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದಾನೆ. ಇಶ್ಮೀತ್ ಸಿಂಗ್ 2022 ರಲ್ಲಿ ಅಗ್ನಿವೀರ್ ಆಗಿ ದಾಖಲಾಗಿದ್ದ. 2 ತಿಂಗಳ ಹಿಂದೆ ರಜೆ ಮೇಲೆ ಪಂಜಾಬ್‌ಗೆ ಬಂದಿದ್ದ. ರಜೆ ಅವಧಿ ಮುಗಿದರೂ ಕೆಲಸಕ್ಕೆ ವಾಪಸ್ಸಾಗಿಲ್ಲ ಎಂದು ಎಸ್‌ಎಸ್‌ಪಿ ಹೇಳಿದ್ದಾರೆ. ಆರೋಪಿ ಗಳು ಹಲವು ಬಾರಿ ವಾಹನ ದೋಚುವಿಕೆ ಮತ್ತು ಕಳವು ಕೃತ್ಯದಲ್ಲಿ ಭಾಗಿಯಾಗಿದ್ದಾರೆ. ಅಪರಾಧ ಮಾಡಿದ ನಂತರ ಫಾಜಿಲ್ಕಾಗೆ ಪರಾರಿಯಾಗುತ್ತಿದ್ದರು ಎಂದು ಅಧಿಕಾರಿ ವಿವರಿಸಿದ್ದಾರೆ. ಆರೋಪಿಗಳಿಂದ ಕಳುವಾದ ಸ್ಕೂಟರ್ ಮತ್ತು ಮೋಟಾರ್ ಸೈಕಲ್ ಹಾಗೂ ದೇಶೀ ನಿರ್ಮಿತ ಪಿಸ್ತೂಲ್ ವಶಪಡಿಸಿಕೊಳ್ಳಲಾಗಿದೆ. ಬುಧವಾರ ಆರೋಪಿಗಳನ್ನು ಬಂಧಿಸಲಾಗಿದ್ದು ತನಿಖೆ ಆರಂಭಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ನೆರೆ ದೇಶದತ್ತ ಕೇಂದ್ರ ಸರಕಾರ ಮೃದುವಾಗುತ್ತಿದೆಯೇ?

ಚೀನಾ ಹೂಡಿಕೆ, ಆಮದು ಮೇಲೆ ನಿರ್ಬಂಧ ಸಡಿಲಿಕೆ?

ದೆಹಲಿ: ಚೀನಾ ತಂತ್ರಜ್ಞರ ವೀಸಾ ನಿರ್ಬಂಧ ಮತ್ತು ಹೂಡಿಕೆ ಮೇಲೆ ವಿಧಿಸಿದ ನಿರ್ಬಂಧ ಗಳನ್ನು ಸಡಿಲಿಸಿ ಪ್ರಕ್ರಿಯೆ ಸರಳಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಮಾಧ್ಯಮ ವರ ದಿಗಳು ತಿಳಿಸಿವೆ.

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಮಂಡಿಸಿದ ಆರ್ಥಿಕ ಸಮೀಕ್ಷೆಯಲ್ಲಿ ಭಾರತದ ಉತ್ಪಾದನಾ ಕ್ಷೇತ್ರದ ಬೆಳವಣಿಗೆಯಲ್ಲಿ ಚೀನಾ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಿದಂತಾಗಿದೆ. ಹಾಗಾಗಿಯೇ ಚೀನಾದ ಹೂಡಿಕೆ ಮೇಲಿನ ನಿರ್ಬಂಧಗಳನ್ನು ಸಡಿಲಿಸಲು ಸರಕಾರ ಪರಿಗಣಿಸುತ್ತಿದೆ ಎಂದು ತನ್ನ ಪ್ರತಿನಿಧಿಗೆ ಉನ್ನತ ಮೂಲಗಳಿಂದ ತಿಳಿದುಬಂದಿದೆ ಎಂದು ಆಂಗ್ಲ ಪತ್ರಿಕೆ ವರದಿ ಮಾಡಿದೆ.

ಕೇಂದ್ರ ಸರಕಾರ ಚೀನಾ ವಿರೋಧಿ ನಿಲುವನ್ನು ಮೃದುಗೊಳಿಸುತ್ತಿದೆ. ಚೀನಾದಿಂದ ಹೂಡಿಕೆ ಮತ್ತು ಆಮದುಗಳ ಮೇಲಿನ ನಿರ್ಬಂಧಗಳನ್ನು ಸಡಿಲಿಸಲು ಪರಿಶೀಲಿಸಲಿದೆ. ಈ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ಸರಕಾರದ ಉನ್ನತ ಮೂಲ ದೃಢಪಡಿಸಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. 2020ರಲ್ಲಿ ಲಡಾಖ್‌ನ ಗಾಲ್ವಾನ್ ನದಿ ಕಣಿವೆಯಲ್ಲಿ ಗಡಿ ಉದ್ವಿಗ್ನತೆಯ ಮಧ್ಯೆ ಚೀನಾದಿಂದ ಹೂಡಿಕೆ ನಿರ್ಬಂಧಿಸುವ ಕಠಿಣ ಕ್ರಮವನ್ನು ಕೇಂದ್ರ ಸರಕಾರ ಕೈಗೊಂಡಿತ್ತು. ದೇಶಕ್ಕೆ ಆಗಮಿಸುವ ಚೀನೀ ಪ್ರಜೆಗಳಿಗೆ ವೀಸಾ ನಿರ್ಬಂಧಿಸಿ ಚೀನಾದ ಆಮದುಗಳ ಮೇಲೆ ಹೆಚ್ಚಿನ ಸುಂಕವನ್ನು ವಿಧಿಸಲಾಗಿತ್ತು.

ಸರಕಾರದ ಈ ನಿರ್ಬಂಧಗಳಿಂದಾಗಿ ದೇಶದ ಬೃಹತ್ ಉದ್ಯಮಿಗಳಿಗೆ ಚೀನಾದಿಂದ ತಾಂತ್ರಿಕ ಉಪಕರಣಗಳನ್ನು ಸಂಗ್ರಹಿಸಲು ಮತ್ತು ಚೀನೀ ತಂತ್ರಜ್ಞರನ್ನು ಕರೆಸಲು ಸಾಧ್ಯವಾಗುತ್ತಿರಲಿಲ್ಲ. ಕಳೆದ 3-4 ವರ್ಷಗಳಿಂದ ಸ್ವಂತ ಸಾಮರ್ಥ್ಯ ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಉದ್ಯಮಿಗಳು ಹೇಳುತ್ತಿ ದ್ದರು. ಆದರೆ ಸರಕಾರದ ಈ ನಿರ್ಬಂಧಗಳಿಂ ದಾಗಿ ದೊಡ್ಡ ಕೈಗಾರಿಕಾ ಕೇಂದ್ರಗಳ ಬೃಹತ್ ಯೋಜನೆಗಳು, ವಿಶೇಷವಾಗಿ ಹೈಟೆಕ್ ಯೋಜನೆಗಳು ಪೂರ್ಣಗೊಳ್ಳುವಲ್ಲಿ ಕಷ್ಟ ಎದುರಿಸುತ್ತಿವೆ. ಇದರಿಂದಾಗಿ ಕೆಲವು ಕಂಪನಿಗಳಿಗೆ ಹೂಡಿಕೆ ನಿಯಮಗಳನ್ನು ಸರಾಗಗೊಳಿಸುವ ಆಯ್ಕೆಗಳನ್ನು ಸರಕಾರ ನೋಡುತ್ತಿರುವುದಾಗಿ ಹೇಳಲಾಗುತ್ತಿದೆ.

1999 ರ ಜುಲೈ 26 ರಂದು ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಸೇನೆ ಪಾಕಿಸ್ತಾನ ವಿರುದ್ಧ ವಿಜಯ ಸಾಧಿಸಿತು. ಶುಕ್ರವಾರ ಕಾರ್ಗಿಲ್ ವಿಜಯ ದಿವಸದ 25ನೇ ವರ್ಷಾಚರಣೆ. ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಲಡಾಕ್ ನ ದ್ರಾಸ್ ಪ್ರದೇಶಕ್ಕೆ ಭೇಟಿ ನೀಡಿ ಕಾರ್ಗಿಲ್ ವಿಜಯ ದಿವಸದ 25ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಭಾಗಿಯಾ ಗಲಿದ್ದಾರೆ. ಹುತಾತ್ಮ ವೀರ ಯೋಧರಿಗೆ ಪುಷ್ಪ ನಮನ ಸಲ್ಲಿಸಲಿದ್ದಾರೆ.

ನವೀಕೃತ ಇಂಧನ; 4ನೇ ಸ್ಥಾನದಲ್ಲಿ ಭಾರತ

ದೆಹಲಿ: ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲೇ 4ನೇ ಸ್ಥಾನದಲ್ಲಿದೆ. ಪ್ರಧಾನಿ ಮೋದಿ ಅವರ ಆಕಾಂಕ್ಷೆಯಂತೆ 2030ರ ವೇಳೆಗೆ ನವೀಕರಿಸಬಹುದಾದ ಇಂಧನದ ಮೂಲಕ 500 ಗಿಗಾವ್ಯಾಟ್ ಸಾಮರ್ಥ್ಯ ಸಾಧಿಸುವ ಗುರಿಯಿದ್ದು, ಆ ನಿಟ್ಟಿನಲ್ಲಿ ಯೋಜನೆ ಹಾಕಿಕೊಳ್ಳಲಾಗುತ್ತಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ರಾಜಸ್ಥಾನ ರಾಜ್ಯ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುತ್ತಿದೆ. ಪಿಎಂ ಕುಸುಮ ಮತ್ತು ಪಿಎಂ ಸೂರ್ಯಘರ್ ಯೋಜನೆಗಳಡಿ ರಾಜಸ್ಥಾನದಲ್ಲಿ ಸೌರಶಕ್ತಿ ಯೋಜನೆಗಳ ಪ್ರಗತಿ ಬಗ್ಗೆ ರಾಜಸ್ಥಾನ ಸಿಎಂ ಭಜನ್ ಲಾಲ್ ಜತೆ ಸಚಿವ ಜೋಶಿ ಚರ್ಚಿಸಿದರು. ಕೇಂದ್ರ ಸರಕಾರದಿಂದ ಪೂರ್ಣ ಬೆಂಬಲ ನೀಡುವುದಾಗಿ ಸಚಿವ ಜೋಶಿ ಭರವಸೆ ನೀಡಿದರು.

ಕಂಗನಾ ಆಯ್ಕೆ ಪ್ರಶ್ನಿಸಿ ಅರ್ಜಿ: ಹೈ ನೋಟಿಸ್

ಶಿಮ್ಲಾ: ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದೆ ಕಂಗನಾ ರಣಾವತ್ ಆಯ್ಕೆ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಶಿಮ್ಲಾ ಹೈಕೋರ್ಟ್, ಕಂಗನಾ ಅವರಿಗೆ ಗುರುವಾರ ನೋಟಿಸ್ ಜಾರಿ ಮಾಡಿದೆ.

ನ್ಯಾ. ಜೋತ್ಸ್ನಾ ರೆವಾಲ್ ಅವರು ಆ.21ರೊಳಗಾಗಿ ಪ್ರತಿಕ್ರಿ ಯೆ ನೀಡಬೇಕು ಎಂದು ನೋಟಿಸ್ ನೀಡುವ ವೇಳೆ ಸಂಸದೆಗೆ ನಿರ್ದೇಶನ ನೀಡಿದ್ದಾರೆ. ಲೋಕಸಭೆ ಚುನಾವಣೆ ವೇಳೆ ಚುನಾವಣಾ ಅಧಿಕಾರಿಯಾಗಿದ್ದ ಮಂಡಿ ಜಿಲ್ಲಾಧಿಕಾರಿ ನನ್ನ ನಾಮಪತ್ರ ತಿರಸ್ಕರಿಸಿ ಅನ್ಯಾಯ ಮಾಡಿದ್ದರು ಎಂದು ಕಿನ್ನೂರು ನಿವಾಸಿ ಲಾಯಕ್ ರಾಮ್ ನೇಗಿ ಎಂಬುವವರು ಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ. ಜಿಲ್ಲಾಧಿಕಾರಿಯನ್ನೂ ಪಕ್ಷಗಾರರನ್ನಾಗಿ ಮಾಡಿದ್ದಾರೆ. ಮೇ 14ರಂದು ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದೆ. ಮೇ 15ರಂದು ಅಗತ್ಯ ದಾಖಲೆಗಳನ್ನು ಸಲ್ಲಿಸಿದೆ. ಆದರೆ ಚುನಾವಣಾಧಿಕಾರಿ ಅದನ್ನು ಸ್ವೀಕರಿಸಲಿಲ್ಲ. ಒಂದು ವೇಳೆ ನಾಮಪತ್ರ ತಿರಸ್ಕೃತವಾಗದಿದ್ದರೆ ಚುನಾವಣೆಯಲ್ಲಿ ನಾನು ಗೆಲುವು ಸಾಧಿಸುತ್ತಿದ್ದೆ ಎಂದು ಅರಣ್ಯ ಇಲಾಖೆ ಮಾಜಿ ಅಧಿಕಾರಿ ನೇಗಿ ವಾದಿಸಿದ್ದಾರೆ. ಕಂಗನಾರ ಲೋಕಸಭೆ ಸದಸ್ಯತ್ವ ರದ್ದು ಮಾಡುವಂತೆ ನೇಗಿ ಆಗ್ರಹಿಸಿದ್ದಾರೆ.

ನೀಟ್ ಪರೀಕ್ಷೆ ಬೇಡ ಎಂದ ಮಾಯಾವತಿ

ಲಖನೌ: ತಮಿಳುನಾಡಿನಿಂದ ಶುರುವಾದ ನೀಟ್ ವಿರುದ್ಧದ ನಡೆ ಈಗ ಹಲವು ರಾಜ್ಯಗಳಿಗೆ ಪಸರಿಸಿದೆ. ಬಿಜೆಪಿ ಆಡಳಿತದ ರಾಜ್ಯ ಉತ್ತರಪ್ರದೇಶದಲ್ಲೂ ನೀಟ್ ವಿರುದ್ಧ ದನಿ ಎದ್ದಿದೆ.

ಬಹುಜನ ಸಮಾಜ ಪಕ್ಷದ ಮುಖ್ಯಸ್ಥೆ ಮಾಯಾವತಿ ಅವರು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ(ನೀಟ್) ರದ್ದುಪಡಿಸಬೇಕು. ಎಂಬಿಬಿಎಸ್, ಬಿಡಿಎಸ್, ಆಯುಷ್ ಮತ್ತು ಇತರ ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಹಳೆಯ ಪದ್ಧತಿಯನ್ನೇ ಮರು ಜಾರಿಗೊಳಿಸಬೇಕು ಎಂದು ಗುರುವಾರ ಒತ್ತಾಯಿಸಿದ್ದಾರೆ.

ನೀಟ್- ಯುಜಿ ವೈದ್ಯಕೀಯ ಪ್ರವೇಶ ಪರೀಕ್ಷೆಯಲ್ಲಿನ ಅಕ್ರಮ ಅತ್ಯಂತ ಗಂಭೀರ ವಿಷಯ. ಈ ಪ್ರಕರಣ ಸುಪ್ರೀಂ ಕೋರ್ಟ್‌ಗೂ ತಲುಪಿದೆ. ಫಲಿತಾಂಶ ಏನೇ ಇರಲಿ, ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಕುಟುಂಬಗಳಿಗೆ ತೊಂದರೆ ಆಗಿದೆ. ಮಾನಸಿಕ ಸಂಕಟ ಅನುಭವಿಸಿದ್ದಾರೆ. ಇಂತಹ ಮಹತ್ವದ ಪರೀಕ್ಷೆಯನ್ನು ಸರಿಯಾಗಿ ನಡೆಸುವುದಾಗಿ ಜನರಿಗೆ ಭರವಸೆ ನೀಡುವಲ್ಲಿ ಕೇಂದ್ರ ಸರಕಾರ ವಿಫಲವಾಗಿ, ಸಮಸ್ಯೆಯನ್ನು ಇನ್ನಷ್ಟು ಗಂಭೀರಗೊಳಿಸಿದೆ. ಆದ್ದರಿ ಂದ ಕೇಂದ್ರೀಕೃತ ನೀಟ್ ಯುಜಿ-ಪಿಜಿ ಪರೀಕ್ಷೆ ರದ್ದುಗೊಳಿಸಿ ಹಳೆ ಯ ವ್ಯವಸ್ಥೆಯನ್ನು ಏಕೆ ಮರುಸ್ಥಾಪಿಸಬಾರದು? ಇದು ಹಲವು ರಾಜ್ಯಗಳ ಬೇಡಿಕೆ ಎಂದು ಮಾಯಾವತಿ 'ಎಕ್ಸ್' ಸಂದೇಶ ಬರೆದಿದ್ದಾರೆ.

ಕೇಜ್ರಿ ನ್ಯಾಯಾಂಗ ಬಂಧನ ವಿಸ್ತರಣೆ

ದೆಹಲಿ: ಭ್ರಷ್ಟಾಚಾರ ಪ್ರಕರಣದಲ್ಲಿ ಕೇಂದ್ರ ತನಿಖಾ ದಳ(ಸಿಬಿಐ) ದಿಂದ ಬಂಧನಕ್ಕೆ ಒಳಗಾಗಿರುವ ದೆಹಲಿ ಮುಖ್ಯಮಂತ್ರಿ ಮತ್ತು ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ನ್ಯಾಯಾಂಗ ಬಂಧನ ಅವಧಿಯನ್ನು ದೆಹಲಿ ರೋಸ್ ಅವೆನ್ಯೂ ಕೋರ್ಟ್ ಮತ್ತೆ ವಿಸ್ತರಿಸಿದೆ.

ಸದ್ಯ ತಿಹಾರ ಜೈಲಿನಲ್ಲಿರುವ ಕೇಜ್ರಿವಾಲ್ ಗುರುವಾರ ವಿಡಿ ಯೋ ಕಾನ್ಪರೆನ್ಸ್ ಮೂಲಕ ಕೋರ್ಟ್ ವಿಚಾರಣೆಗೆ ಹಾಜರಾಗಿ ದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶೆ ಕಾವೇರಿ ಭವೇಜಾ, ಆ.8ರವರೆಗೆ ಅವರ ನ್ಯಾಯಾಂಗ ಬಂಧನವನ್ನು ವಿಸ್ತರಿಸಿ ಆದೇಶ ಹೊರಡಿಸಿದರು. ಮುಂದಿನ ವಿಚಾರಣೆ ಜು.31ರಂದು ನಡೆಯಲಿದ್ದು, ವಿಡಿಯೋ ಕಾನ್ಫರೆನ್ಸ್ ಮೂಲಕ ಆರೋಪಿಯನ್ನು ಹಾಜರುಪಡಿಸುವಂತೆ ತಿಹಾರ ಜೈಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಇನ್ನೊಂದೆಡೆ ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದಿಂದ (ಇ.ಡಿ) ಬಂಧಿತರಾಗಿರುವ ದೆಹಲಿ ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯ, ಬಿಆರೆಸ್ ಪಕ್ಷದ ನಾಯಕಿ ಕೆ.ಕವಿತಾ ಮತ್ತು ಇತರೆ ಆರೋಪಿಗಳ ನ್ಯಾಯಾಂಗ ಬಂಧನ ಅವಧಿಯನ್ನು ನ್ಯಾಯಾಲಯ ವಿಸ್ತರಿಸಿದೆ.

ಕಮಲಾ ಅಧ್ಯಕ್ಷೆ ಆಗಲು ಅನರ್ಹ: ಟ್ರಂಪ್ ವಾದ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷೀಯ ಚುನಾವಣೆಯ ಪ್ರಚಾರದಲ್ಲಿ ಟೀಕೆ, ವಾಗ್ದಾಳಿ, ಖಂಡನೆ ಬಹಳ ತೀವ್ರವಾಗಿದೆ. ಕಮಲಾ ಹ್ಯಾರಿಸ್ ಅವರು ಆಡಳಿತ ನಡೆಸಲು ಅನರ್ಹರು ಮತ್ತು ಅವರು ತೀವ್ರಗಾಮಿ ಎಡಪಂಥೀಯ ಮನಸ್ಥಿತಿಯವರು ಎಂದು ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ವ್ಯಾಖ್ಯಾನಿಸಿದ್ದಾರೆ. ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಆಗಲಿರುವ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರನ್ನು ಟ್ರಂಪ್ ಪ್ರಚಾರ ಭಾಷಣದಲ್ಲಿ ಕಟುವಾಗಿ ಟೀಕಿಸಿದ್ದಾರೆ. ಕಮಲಾ ಹ್ಯಾರಿಸ್ ಅವರು ತೀವ್ರ ಎಡಪಂಥೀಯ ಮನಸ್ಥಿತಿಯವರಾಗಿದ್ದು, ಅವರಿಗೆ ಅಧಿಕಾರ ಸಿಕ್ಕಿದರೆ ಅಮೆರಿಕ ದೇಶವನ್ನು ನಾಶ ಮಾಡಿಬಿಡುತ್ತಾರೆ. ಹಾಗೆ ಆಗಲು ನಾವು ಬಿಡುವುದಿಲ್ಲ. ಇಂಥ ಎಡಪಂಥೀಯ ಮನಸ್ಥಿತಿಯವರ ಜತೆ ವ್ಯವಹರಿಸುವುದು ಕಷ್ಟದ ವಿಷಯ, ಇಂಥವರು ಅಪಾಯಕಾರಿ. ಅವರ ಒಡನಾಟದಲ್ಲಿ ನೀವು ಚೆನ್ನಾಗಿರಲು ಸಾಧ್ಯವಿಲ್ಲ. ದೇಶದ ಜನತೆ ಎಚ್ಚೆತ್ತುಕೊಳ್ಳಬೇಕು ಎಂದರು. ಕಮಲಾ ಅಮೆರಿಕದ ಇತಿಹಾಸದಲ್ಲೇ ಅತ್ಯಂತ ಉದಾರವಾದಿ ರಾಜಕಾರಣಿ, ಅಷ್ಟೇ ಅಪಾಯಕಾರಿ ಕೂಡ. ಅವರು ಬರ್ನಿ ಸ್ಯಾಂಡರ್ಸ್‌ಗಿಂತ ಹೆಚ್ಚು ಉದಾರವಾದಿ. ಅವರು ಅಧ್ಯಕ್ಷೆಯಾದರೆ ದೇಶವನ್ನು ನಾಶ ಮಾಡಿಬಿಡುತ್ತಾರೆ ಎಂದು ಟೀಕಿಸಿದರು.

ವಿಶ್ವವಾಣಿ ಆರಾಮ

@vishwavaninews

ಅನುದಿನವೂ ವಿರಾಮಕ್ಕೆ ಒಂದು ನೆಪ

ಬೆಂಗಳೂರು
ಶುಕ್ರವಾರ
26 | 07 | 2024

ದಿನ ಭವಿಷ್ಯ

ಮೇಷ
ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು.

ವೃಷಭ
ನಿಮ್ಮ ಶಕ್ತಿ ಮತ್ತು ಉತ್ಸಾಹ ವನ್ನು ಮರಳಿ ತರುವ ಒಂದು ಆನಂದಮ ಯ ಪ್ರವಾಸಕ್ಕೆ ಹೊಗುವ ಸಾಧ್ಯತೆಯಿದೆ. ಹೆಚ್ಚಿನ ಕೆಲಸದ ಹೊರೆತಾ ಗಿಯೂ ಇಂದು ಕೆಲಸದಲ್ಲಿ ನಿಮ್ಮಲ್ಲಿ ಶಕ್ತಿ ನೋಡಬಹುದು.

ಮಿಥುನ
ಧ್ಯಾನ ಮತ್ತು ಯೊಗವನ್ನು ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗಾಗಿ ಆಚರಿಸಬೇಕು. ಇಂದು ಯಾವುದೇ ಸಹಾಯ ವಿಲ್ಲದೆ, ಹಣ ಗಳಿಸುವಲ್ಲಿ ಸಾಮರ್ಥ್ಯರಾಗುತ್ತೀರಿ.

ಕಟಕ
ಎಲ್ಲರನ್ನೂ ನಿಮ್ಮ ದೊಡ್ಡ ಪಾರ್ಟಿಗೆ ಕರೆಯಿರಿ - ನೀವು ಇಂದು ಆ ಹೆಚ್ಚುವರಿ ಚೈತನ್ಯ ಹೊಂದಿರುತ್ತೀರಿ ಇದು ನಿಮ್ಮನ್ನು ನಿಮ್ಮ ಗುಂಪಿಗೆ ಸಮಾರಂಭವನ್ನು ಸಂಯೋಜಿಸು ವಂತೆ ಮಾಡುತ್ತದೆ.

ಸಿಂಹ
ಇಂದು ಕೆಲಸದಲ್ಲಿ ಎಲ್ಲವೂ ನಿಮ್ಮ ಪರವಾಗಿರುವಂತೆ ತೊರುತ್ತದೆ. ಇಂದು ಸಾಧ್ಯವಾದಷ್ಟು ಜನರಿಂದ ದೂರವಿರಿ. ಜನರಿಗೆ ಸಮಯ ನೀಡುವುದಕ್ಕಿಂತ ನೀವು ನಿಮಗಾಗಿ ಸಮಯ ನೀಡುವುದು ಉತ್ತಮ.

ಕನ್ಯಾ
ಅಗತ್ಯವಾದ ಕೆಲಸಗಳಿಗೆ ಸಮಯ ನೀಡದೆ ಇರುವುದು ಮತ್ತು ಅನಗತ್ಯ ಕೆಲಸಗಳ ಮೇಲೆ ಸಮಯ ಕಳೆಯುವುದು, ಇಂದು ನಿಮಗೆ ಮಾರಕವೆಂದು ಸಾಬೀತುಪಡಿಸಬಹುದು.

ತುಲಾ
ಇಂದು ನಿಮ್ಮನ್ನು ಆವರಿಸುವ ಭಾವನಾತ್ಮಕ ಮನಸ್ಥಿತಿ ಯಿಂದ ನೀವು ಹೊರಬರಲು ಬಯಸಿದರೆ ಹಿಂದಿನದ್ದೆಲ್ಲವನ್ನೂ ಮರೆತುಬಿ ಡಬೇಕು. ದಿಟ್ಟ ಕ್ರಮಗಳು, ನಿರ್ಧಾರಗಳು ಲಾಭ ತರುತ್ತದೆ.

ವೃಶ್ಚಿಕ
ನಿಮ್ಮ ವಿಚಿತ್ರ ವರ್ತನೆಯ ಹೊರತಾಗಿಯೂ ಸಂಗಾತಿ ಸಹಕಾರಿಯಾಗಿರುತ್ತಾರೆ. ನಿಮ್ಮ ಪ್ರೀತಿಪಾತ್ರರು ನಿಮ್ಮನ್ನು ದ್ವೇಷಿಸಿದರೂ ನೀವು ಪ್ರೀತಿ ತೊರಿಸಬೇಕು.

ಧನು
ಇಂದು ನಿಮಗೆ ಅನೇಕ ಹೊಸ ಆರ್ಥಿಕ ಯೊಜನೆಗಳು ದೊರಕುತ್ತವೆ - ಯಾವುದೆ ಬದ್ಧತೆಗೊಳಗಾಗುವ ಮುನ್ನ ಸಾಧಕ ಬಾಧಕಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ.

ಮಕರ
ನೊಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ತೀರಾ ಖರ್ಚು ಮಾಡುವ ಮತ್ತು ಮನರಂಜನೆಗೆ ತುಂಬಾ ಖರ್ಚು ಮಾಡುವ ನಿಮ್ಮ ಪ್ರವೃತ್ತಿಗೆ ಕಡಿವಾಣ ಹಾಕಿ.

ಕುಂಭ
ಮನರಂಜನೆ ಮತ್ತು ಮೊಜಿನ ಒಂದು ದಿನ. ನಿವು ದಿರ್ಘ ಕಾಲದ ಆಧಾರದ ಮೆಲೆ ಹೂಡಿಕೆ ಮಾಡಿದಲ್ಲಿ ಗಣನಿಯ ಲಾಭ ಮಾಡುತ್ತೀರಿ. ಇಂದು ನಿವು ಸಿಮಿತ ತಾಳ್ಮೆ ಹೊಂದಿರುತ್ತೀರಿ

ಮೀನ
ದೆವಿಕ ಜ್ಞಾನವನ್ನು ಪಡೆಯಲು ನೀವು ಒಂದು ಧಾರ್ಮಿಕ ಸ್ಥಳಕ್ಕೆ ಭೆಟಿ ನೀಡುವಂತೆ ಮಾಡುತ್ತವೆ. ನಿಮ್ಮ ಖರ್ಚುಗಳಲ್ಲಿ ಅನಿರಿಕ್ಷಿತ ಏರಿಕೆ ನಿಮ್ಮ ಮನಸ್ಸಿನ ಶಾಂತಿಗೆ ಭಂಗ ತರುತ್ತದೆ.

● ಕೆ.ಬಿ.ಸಂತೋಷ್ ಗುರೂಜಿ

ಹೆಲ್ತ್ ಕಾರ್ನರ್

ನಮ್ಮ ರಾಜ್ಯದಲ್ಲಿ ತೀರಾ ಸಾಮಾನ್ಯ ತರಕಾರಿ ಎನಿಸಿರುವ ಎಲೆ ಕೋಸು, ಹಲವು ಪೌಷ್ಟಿಕಾಂಶಗಳನ್ನು ಹೊಂದಿದೆ. ಕೀಟನಾಶಕ ಉಪಯೋಗಿಸದೇ ಬೆಳೆಸಿದ ಎಲೆಕೋಸನ್ನು ಸೇವಿಸುವುದರಿಂದ, ಹಲವು ಅಗತ್ಯ ಲವಣಾಂಶಗಳು ಸಿಗುತ್ತವೆ. ಎಲೆ ಕೋಸಿನಲ್ಲಿ ಅಧಿಕ ವಿಟಮಿಕ್ ಕೆ, ಅಧಿಕ ವಿಟಮಿನ್ ಸಿ, ಮಿತಪ್ರಮಾಣದ ಫೋಲೇಟ್, ಮ್ಯಾಂಗನೀಸ್, ನಾರು (ಶೇ.2), ಕ್ಯಾಲ್ಸಿಯಂ, ಪೊಟಾಸಿಯಂ

ಮೊದಲಾದ ಲವಣಾಂಶಗಳಿವೆ. ಇದರಲ್ಲಿ ಆ್ಯಂಟಿ ಆಕ್ಸಿಡೆಂಟ್ ಇರುವುದರಿಂದ, ಫ್ರೀ ರ್‍ಯಾಡಿಕಲ್ಸ್ ಗಳನ್ನು ನಿಯಂತ್ರಿಸುವುದು. ಉರಿಯೂತವನ್ನು ಕಡಿಮೆ ಮಾಡಲು ಎಲೆ ಕೋಸು ಸಹಕಾರಿ. ಇದರಲ್ಲಿರುವ ನಾರಿನ ಅಂಶವು, ಹೊಟ್ಟೆಗೆ ಹಿತಕರ. ರುಚಿಕರ ಪಲ್ಯ, ಸಾಂಬಾರು ತಯಾರಿಸಿ, ಎಲೆಕೋಸನ್ನು ಸೇವಿಸುವ ಪದ್ಧತಿ ನಮ್ಮ ದೇಶದಲ್ಲಿವೆ.

● ಅಜಯ್ ಅಂಚೆಪಾಳ್ಯ

ಲವ್ ಲೆಟರ್ ಬರೆಯಲು ಬೇಡಿಕೆ!

● ಡಾ. ವಿಶ್ವನಾಥ ಎನ್ ನೇರಳಕಟ್ಟೆ



ಸುಮಾರು ನಾಲ್ಕು ವರ್ಷಗಳ ಹಿಂದಿನ ಘಟನೆ. ನಾನಾಗ ಸ್ಥಳೀಯ ಪತ್ರಿಕೆಯೊಂದರಲ್ಲಿ ಅಂಕಣ ಬರೆಯುತ್ತಿದ್ದೆ. ನನ್ನ ಅಂಕಣವನ್ನು ಓದುವ ಜನ ಹಲವರಿದ್ದರು. ಅದೆಷ್ಟೋ ಮಂದಿ ಕರೆ ಮಾಡಿಯೋ, ಮೆಸೇಜ್ ಮಾಡಿಯೋ ತಮ್ಮ ಅಭಿಪ್ರಾಯ ತಿಳಿಸುತ್ತಿದ್ದರು. ಕೆಲವರು ಹಅಂಕಣಕಾರನಾಗಿ ಗುರುತಿಸಿಕೊಂಡದ್ದೇ ಹೊಸ ಅನುಭವ ಆದುದರಿಂದ ಇದೆಲ್ಲಾ ನನಗೆ ಸಂತಸ ನೀಡುವ ಸಂಗತಿಗಳಾಗಿದ್ದವು.

ಅದೊಂದು ದಿನ ಬೆಳಗ್ಗೆ ಕಾಲೇಜನ್ನು ತಲುಪಿ, ಕನ್ನಡ ವಿಭಾಗದ ಕೊಠಡಿಯಲ್ಲಿದ್ದ ನನ್ನ ಕುರ್ಚಿಯಲ್ಲಿ ಕುಳಿತಿದ್ದೆನಷ್ಟೇ, ನನ್ನ ಮೊಬೈಲ್ ರಿಂಗಾಯಿತು. ಯಾವುದೋ ಅಪರಿಚಿತ ಸಂಖ್ಯೆ. ಅದೇ ದಿನ ನನ್ನ ಅಂಕಣ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಯಾರೋ ಅಭಿಪ್ರಾಯ ತಿಳಿಸಲೆಂದು ಕರೆ ಮಾಡಿದ್ದಾರೆ ಎನ್ನುವುದು ನನ್ನ ಅಂದಾಜು. 'ಸಾರ್ ನಮಸ್ಕಾರ. ನಿಮ್ಮ ಬರಹ ಓದಿದೆ. ಭಾರೀ ಚಂದ ಬರೆದಿದ್ದೀರಿ' ಎಂಬ ಧ್ವನಿ ಕೇಳಿಬಂತು. ಸಹಜವಾಗಿಯೇ ಸಂತಸವಾಯಿತು. ಧನ್ಯವಾದ ಹೇಳಿ, ಅವರ ಬಗ್ಗೆ ವಿಚಾರಿಸಿದೆ. ಅವರ ಹೆಸರು, ಊರು ಎಲ್ಲಾ ತಿಳಿಸಿದರು.

ಬಾಡಿಗೆ ತಾಯ್ತನದ ಭಾವ: ಬೆನ್ನಿಗೆಯೇ 'ಸಾರ್ ನಮ್ಮದೊಂದು ಸಂಘ ಇದೆ. ಸ್ಥಾಪನೆ ಆಗಿ ಹತ್ತು ವರ್ಷ ಆಗಿದೆ. ಸಾಂಸ್ಕೃತಿಕ ಚಟುವಟಿಕೆ ಮಾಡಿಕೊಂಡು ಬಂದಿದ್ದೇವೆ. ನಮ್ಮ ಈ ಸಂಘದ ಬಗ್ಗೆ ನೀವೊಂದು ಲೇಖನ ಬರೆದುಕೊಡಬಹುದಾ?' ಎಂದರು. ನನಗಿದು ಅಚ್ಚರಿ. ನನ್ನ ಅಂಕಣ ಓದಿ ಮೆಚ್ಚಿಕೊಂಡವರಿದ್ದರು. ಭಿನ್ನ ಅಭಿಪ್ರಾಯ ವ್ಯಕ್ತಪಡಿಸಿದವರಿದ್ದರು. ಆದರೆ ಈ ಬಗೆಯ ವಿಷಯವನ್ನು ಪ್ರಸ್ತಾಪಿಸಿದವರು ಯಾರೂ ಇರಲಿಲ್ಲ. ಅವರೇ ಮಾತು ಮುಂದುವರಿಸಿದರು- 'ಲೇಖನ ಬರೆಯುವವರೊಬ್ಬರು ನಮ್ಮ ಸಂಘದಲ್ಲಿಯೇ ಇದ್ದಾರೆ. ಆದರೆ ನಿಮ್ಮ ಬರವಣಿಗೆ ಅವರದಕ್ಕಿಂತ ಎಷ್ಟೋ ಚೆನ್ನಾಗಿದೆ. ಅದಕ್ಕೆ ನಿಮ್ಮನ್ನು ಕೇಳಿದ್ದು. ಹಣದ ವಿಷಯ ಪ್ರಸ್ತಾಪಿಸುತ್ತಿದ್ದೇನೆ ಅಂತ ತಪ್ಪು ತಿಳಿಯಬೇಡಿ. ನಿಮ್ಮ ಬರಹಕ್ಕೆ ಗೌರವ ಸಂಭಾವನೆ ಕೊಡುತ್ತೇವೆ ಸಾರ್. ಒಂದು ಲೇಖನ ಬರೆದುಕೊಡಿ. ಅದನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಜವಾಬ್ದಾರಿಯೂ ನಮ್ಮದೇ' ಎಂದವರು ನನ್ನ ಉತ್ತರಕ್ಕೆ ಕಾದು ಕುಳಿತಿದ್ದರು ಎನ್ನುವುದು ಗೊತ್ತಾಗುತ್ತಿತ್ತು. ಸಂಜೆ ಹೊತ್ತಿಗೆ ತಿಳಿಸುತ್ತೇನೆ ಎಂದು ಹೇಳಿ ಫೋನಿಟ್ಟ ನನ್ನೊಳಗೆ ಗಾಢವಾಗಿ ಆವರಿಸಿದ್ದು ಬಾಡಿಗೆ ತಾಯ್ತನದ ಭಾವ.

ಬರವಣಿಗೆ ಎನ್ನುವುದೊಂದು ಸೃಷ್ಟಿಶೀಲ ಪ್ರಕ್ರಿಯೆ. ಅಧ್ಯಯನ-

ಬರಹಗಾರರ ಬೆನ್ನು ಹಿಂದೆ ಬೀಳುವವರು ಹಲವರು. ಲೇಖನ ಬರೆದು ಕೊಡಿ ಎಂಬುದು ಸಾಮಾನ್ಯ ಮನವಿ. ಇಲ್ಲೊಬ್ಬ ಭೂಪ ತನಗೊಂದು ಲವ್ ಲೆಟರ್ ಬರೆದುಕೊಡಿ ಎಂದು ಲೇಖಕರ ಬೆನ್ನು ಹತ್ತಿದ್ದಾನೆ!

ಅನುಭವಗಳು ಸಂಯೋಗಗೊಳ್ಳಬೇಕು. ಈ ಸಂಯೋಜಿತ ರೂಪ ಮೌನಗರ್ಭದಲ್ಲಿ ಭ್ರೂಣರೂಪ ಪಡೆಯಬೇಕು. ಹಂತಹಂತವಾಗಿ ಬೆಳೆಯಬೇಕು. ಅಂತಿಮವಾಗಿ ಬರಹವೆಂಬ ಪಿಂಡ ಹೊರಬರಬೇಕು. ರಕ್ತ- ಮಾಂಸದ ಮುದ್ದೆಯಾದ ಕಂದಮ್ಮನ ಕರುಳಬಳ್ಳಿ ಕತ್ತರಿಸುವ ಮೊದಲೇ ತಾಯಿಯ ಎದೆಯ ಬಳಿಗೆ ಒಯ್ದಂತೆ ಬರಹ ಮೊದಲು ಆಪ್ತವಾಗಬೇಕಾದದ್ದು ಬರೆದವರಿಗೆ. ಹಾಗೆ ಆಪ್ತವಾಗಬೇಕಾದರೆ ಬರಹಕ್ಕೆ ಆಯ್ದುಕೊಂಡ ವಸ್ತು, ನಿರೂಪಣಾಶೈಲಿ, ಆಶಯ ಎಲ್ಲದರಲ್ಲಿಯೂ ಸ್ವಂತಿಕೆ ಇರಬೇಕು; ಸ್ವಾತಂತ್ರ್ಯ ಇರಬೇಕು. ಇಲ್ಲವಾದರೆ ಬೇರೆಯವರ ಮಗುವನ್ನು ಗರ್ಭದಲ್ಲಿ ಹೊತ್ತುನಿಂತ ಬಾಡಿಗೆ ತಾಯಿಯೊಬ್ಬಳ ಭಾವ ನಮ್ಮನ್ನಾವರಿಸುವುದು ಸಹಜ. ನನಗೆ ಪರಿಚಯವೇ ಇರದ ಆ ಸಂಘದ ಬಗ್ಗೆ ಬರೆಯುವುದು ಸರಿ ಎನಿಸಲಿಲ್ಲ. ಅದೂ ಅವರಿಂದ ಸಂಭಾವನೆ ಪಡೆದು ಬರೆಯಹೊರಟರೆ ಹೊಗಳಿ ಬರೆಯುವುದು ಬಿಟ್ಟು ಬೇರೆ ಆಯ್ಕೆಯೇ ಇರುವುದಿಲ್ಲ. ಅದು ನನ್ನ ಕೈಗಳನ್ನು ನಾನೇ ಕಟ್ಟಿಹಾಕಿಕೊಂಡು ಬರೆಯಹೊರಟಂತೆ ಎನಿಸಿತು. ಸಂಜೆ ಅವರಿಗೆ ನಾನೇ ಕರೆಮಾಡಿ, 'ದಯವಿಟ್ಟು ಇದು ನನ್ನಿಂದ ಸಾಧ್ಯವಿಲ್ಲ. ತಪ್ಪು ತಿಳಿದುಕೊಳ್ಳಬೇಡಿ' ಎಂದೆ.

ಮತ್ತೊಂದು ಬೇಡಿಕೆ!: ಇದಾಗಿ ಮೂರು ತಿಂಗಳು ಕಳೆದಿರಲಿಲ್ಲ, ಇಂತಹದ್ದೇ ಇನ್ನೊಂದು ಸನ್ನಿವೇಶ. ನಾನು ಕೆಲಸ ಮಾಡುತ್ತಿದ್ದ ಕಾಲೇಜಿನ ಆಫೀಸಿನಲ್ಲಿ ಒಬ್ಬರು ಹೆಣ್ಣುಮಗಳಿದ್ದರು. ಆಫೀಸಿಗೆ ಸಂಬಂಧಪಟ್ಟಂತಹ ನನ್ನ ಕೆಲಸ ಏನಿದ್ದರೂ ತಕ್ಷಣಕ್ಕೆ ಮಾಡಿಕೊಡುತ್ತಿದ್ದ ಅವರು ನನ್ನ ಪಾಲಿಗೆ ಅಕ್ಕನಂತಿದ್ದರು. ಅದೊಂದು ದಿನ ಸಂಜೆ 'ಸಾರ್ ನೀವೊಂದು ಲೇಖನ ಬರೆದುಕೊಡಬಹುದಾ?' ಎಂದರು. ''ಯಾವುದರ ಬಗ್ಗೆ?'' ಎಂದೆ. ''ನನ್ನ ಅಣ್ಣ ಉದ್ಯಮಿಯಾಗಿದ್ದಾರೆ. ಅವರ ಬಗ್ಗೆ ಒಂದು ಲೇಖನ ಬರೆದು ಪತ್ರಿಕೆಗೆ ಕಳಿಸಬೇಕಿತ್ತು. ಅದಕ್ಕೆ...'' ಎಂದರು. ಬರೆದುಕೊಡುವುದಿಲ್ಲ ಎಂದು ಹೇಳಲಾಗದ, ವ್ಯಕ್ತಿಯೊಬ್ಬರ ಬಗ್ಗೆ ಬರೆಯಲೊಪ್ಪದ ಸಂದಿಗ್ಧತೆ ನನ್ನದು. ''ನೀವು ಅವರ ಪರಿಚಯ, ಸಾಧನೆ ಎಲ್ಲಾ ಕೊಡಿ. ನನ್ನಿಂದ ಬರೆಯಲು ಸಾಧ್ಯವಾದರೆ ಬರೆಯುತ್ತೇನೆ'' ಎಂದೆ. ಮರುದಿನವೇ ಎಲ್ಲವನ್ನೂ ತಂದುಕೊಟ್ಟರು.

ಬಡತನದಲ್ಲಿ ಬೆಳೆದಿದ್ದ ಇವರ ಅಣ್ಣನಿಗೆ ಜನ್ಮತಃ ದೃಷ್ಟಿಭಾಗ್ಯ ಇರಲಿಲ್ಲ. ಆದರೂ ಕಷ್ಟಪಟ್ಟು ಓದಿ, ತಮ್ಮದೇ ಆದ ಉದ್ಯಮ ಆರಂಭಿಸಿ, ಯಶಸ್ಸು ಕಂಡಿದ್ದರು. ಅವರ ಉದ್ಯಮ ಕೃಷಿಕರಿಗೆ ಪ್ರಯೋಜನವಾಗುವಂತಿತ್ತು. ಅವರ ಬಗ್ಗೆ ನನಗೆ ಗೊತ್ತಿದ್ದವರಲ್ಲಿ ವಿಚಾರಿಸಿದೆ. ವಿವರ ಎಲ್ಲವೂ ನಿಜವಿತ್ತು. ನಿಜಕ್ಕೂ ಅವರೊಬ್ಬ ಸಾಧಕ ಎಂದನಿಸಿತು. ಆಗ ಅವರ ಬಗ್ಗೆ ಲೇಖನ ಬರೆಯಬೇಕೆಂಬ ಮನಃಸ್ಥಿತಿ ನನ್ನಲ್ಲಿಯೇ ಮೂಡಿತ್ತು. ಒಂದು ವಾರದೊಳಗಾಗಿ ಮನಃ ಸ್ಫೂರ್ತಿಯಿಂದ ಲೇಖನವನ್ನು ಬರೆದುಕೊಟ್ಟೆ. ಅದು ಪತ್ರಿಕೆಯಲ್ಲಿ ಪ್ರಕಟವಾಯಿತು. ನೈಜ ಸಾಧಕರೊಬ್ಬರ ಬಗ್ಗೆ ಬರೆದ ಧನ್ಯತಾಭಾವ ನನ್ನೊಳಗೆ ಮೂಡಿತು.

ಅದೊಂದು ಭಾನುವಾರ. ನಾನು ಬರೆದ ಕಥೆಯೊಂದು ಕನ್ನಡದ ಪ್ರಮುಖ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಯುವಕ ಯುವತಿಯ ಪ್ರೀತಿಗೆ ಸಂಬಂಧಿಸಿದ ಕಥೆ ಅದಾಗಿತ್ತು. ಹನ್ನೊಂದು ಗಂಟೆಯ ಹೊತ್ತಿಗೆ ಒಂದು ಫೋನು. ಕಾಲೇಜು ಓದುತ್ತಿದ್ದ ಹುಡುಗನಂತಿತ್ತು ಧ್ವನಿ. ''ಯಾರು?'' ಎಂದೆ. ಅವನ ಹೆಸರನ್ನು ಹೇಳಿದವನು, ನನ್ನ ಕಥೆ ಓದಿರುವುದಾಗಿ, ಕಥೆ ಬಹಳ ಚೆನ್ನಾಗಿರುವುದಾಗಿ ಹೇಳಿದ. ''ಮತ್ತೆ ಅದೂ ಅದೂ...ನಿಮ್ಮಿಂದ ಒಂದು ಸಹಾಯ ಆಗಬೇಕಿತ್ತಲ್ಲ'' ಎಂದ. 'ಹೇಳಿ' ಎಂದೆ.

ಪ್ರೀತಿ ಮಾಡಲು ಮಾರ್ಗದರ್ಶನ ಬೇಕು!: 'ನಾನು ಒಂದು ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ. ನನ್ನದೇ ಕ್ಲಾಸಿನವಳು. ನನಗೆ ಅವಳೆಂದರೆ ತುಂಬಾ ಇಷ್ಟ. ಆದರೆ ಅವಳು ನನ್ನನ್ನು ಕ್ಯಾರೇ ಮಾಡೋದಿಲ್ಲ. ಅದಕ್ಕೆ ನೀವೊಂದು ಲವ್ ಲೆಟರ್ ಬರೆದುಕೊಡಬೇಕಿತ್ತು, ಅವಳಿಗೆ ಕೊಡುವುದಕ್ಕೆ'' ಎಂದ. ''ನನ್ನ ಹೆಸರಲ್ಲೇ ಬರೆದುಕೊಡಬೇಕೋ? ನಿಮ್ಮ ಹೆಸರಲ್ಲೋ?'' ಎಂದು ಕೇಳಿದೆ. ಗಾಬರಿಯಾದ ಎನಿಸುತ್ತದೆ. ನಾಲ್ಕು ಸೆಕೆಂಡು ಮಾತೇ ಇಲ್ಲ. ಆಮೇಲೆ ''ನನ್ನ ಹೆಸರಲ್ಲೇ ಸಾರ್'' ಎಂದು ಸೀರಿಯಸ್ಸಾಗಿ ಹೇಳಿದ. ''ನನಗೆ ಲೀವ್ ಲೆಟರ್ ಬರೆದು ಗೊತ್ತಿದೆಯಷ್ಟೇ. ಲವ್ ಲೆಟರ್ ಎಲ್ಲಾ ಬರೆದು ಅನುಭವವಿಲ್ಲ'' ಎಂದೆ. ''ಸಾರ್ ಪ್ಲೀಸ್...'' ಎಂದು ಗೋಗರೆಯತೊಡಗಿದ. ಯಾಕೋ ಅತಿಯಾಯಿತು ಎನಿಸಿತು. ''ನಾನು ನನ್ನವಳಿಗೇ ಲವ್ ಲೆಟರ್ ಬರೆದವನಲ್ಲ. ಇನ್ನು ನಿನ್ನ ಹುಡುಗಿಗೆ ನಿನ್ನ ಹೆಸರಲ್ಲಿ ಹೇಗೆ ಬರೆಯಲಿ?'' ಎಂದವನು, ನೆಟ್ ವರ್ಕ್ ಸಮಸ್ಯೆ ಇರುವುದಾಗಿ ಹೇಳಿ ಫೋನಿಟ್ಟೆ.

ಈಗ ನನ್ನ ಮನೋಭಾವದಲ್ಲಿ ಒಂದಷ್ಟು ಬದಲಾವಣೆ ಆಗಿದೆ. ಇನ್ನೊಂದು ವಿಷಯವನ್ನು ಬರೆಯುವುದೀಗ ಫ್ರೀಲ್ಯಾನ್ಸ್ ಬರಹಗಾರನಾದ ನನ್ನ ಅನಿವಾರ್ಯತೆ. ಈ ಬದಲಾದ ಮನೋಭಾವ ಧಾರಾವಾಹಿಗೆ ಸಂಭಾಷಣೆ ಬರೆಯುವ ಸಂದರ್ಭದಲ್ಲಿ ವಿಶೇಷವಾಗಿ ನನ್ನ ಅನುಭವಕ್ಕೆ ಬರುತ್ತಿದೆ.

ಏನನ್ನು ತಿನ್ನಲಯ್ಯಾ?

● ಶ್ರೀರಂಜನಿ ಅಡಿಗ

ಒಮ್ಮೊಮ್ಮೆ ಸುಮ್ನೆ ಕೂತ್ಕೊಂಡಿದ್ದರೆ ಸರಿ; ಏನೇನೋ ಆಲೋಚನೆಗಳು ಮುತ್ತಿಕೊಂಡು ಬಿಡುತ್ವೆ! ಮನುಷ್ಯರಾಗಿ ಹುಟ್ಟೋ ಬದಲು ರೋಬೋಟ್‌ಗಳಾಗಿದ್ರೆ, ಇದ್ದ ಬದ್ದ ಕೆಲಸ ಮಾಡ್ಕೊಂಡು ತಿನ್ನೋ ಕುಡಿಯೋ ಚಿಂತೆಯಿಲ್ಲದೆ ಆರಾಮಾಗಿರ ಬಹುದಿತ್ತೇನೋ ಅಂತ!

ಯಾಕೆಂದರೆ ಮೊನ್ನೆ ಬೇಸಿಗೆಕಾಲದ ಮಾವಿನಹಣ್ಣಿನ ಸೀಸನ್ನಿಂದ ಶುರುವಾಯ್ತು ನೋಡಿ ಈ ರಗಳೆ - ಇನ್ನೂ ಮುಗಿದಿಲ್ಲ. ಸಾಲುಗಾಡಿಗಳಲ್ಲಿ ಜೋಡಿಸಿದ ಮಾವಿನಹಣ್ಣುಗಳ ಪರಿಮಳ ಅಷ್ಟು ದೂರ ಇರುವಾಗಲೇ ಮೂಗಿಗೆ ಬಡಿಯುತ್ತಿದ್ದರೆ ಯಾರಿಗೇ ಆಗಲಿ ತಿನ್ನುವ ಮನಸ್ಸಾಗದೇ? ಆದರೆ 'ನೀವು ತಿನ್ನುವ ಮಾವಿನಹಣ್ಣಿನಲ್ಲಿ ಏನುಂಟು ಗೊತ್ತಾ?' ಎಂದು ನ್ಯೂಸು ಪೇಪರು/ಚಾನೆಲ್ಲುಗಳ ಬ್ರೇಕಿಂಗ್ ನ್ಯೂಸ್‌ಗಳು ತಿನ್ನುವುದಕ್ಕೂ ಹಿಂದೆಮುಂದೆ ನೋಡುವಂತೆ ಮಾಡಿಬಿಟ್ಟವು. ನೀವು ತಿನ್ನುವ ಮಾವಿನ ಹಣ್ಣು ಕಾರ್ಬೈಡ್ ಹಾಕಿ ಮಾಡಿದ ಹಣ್ಣು, ಏಕಸಮಾನವಾಗಿ ಬಣ್ಣ ಬರಲು, ಘಾಟು ಜಾಸ್ತಿಯಾಗಲು ಕೆಮಿಕಲ್‌ಗಳನ್ನು ಹಾಕಿರುತ್ತಾರೆ ಎಂದು ಡಂಗುರ ಹೊಡೆದಂತೆ ಹೇಳಿದ ಮೇಲೆ ಯಾವ ಧೈರ್ಯದ ಮೇಲೆ ತಿನ್ನುವುದು? ಗೊತ್ತಿದ್ದೂ ಜೀವವನ್ನು ಯಾರು ತಾನೇ ಪಣಕ್ಕಿಡುತ್ತಾರೆ ಹೇಳಿ? ನೀರಿನಲ್ಲಿ ಮುಳುಗಿದರೆ ಸ್ವಾಭಾವಿಕವಾಗಿ ಮಾಗಿದ್ದು ತೇಲಿದರೆ ಕೃತಕವಾಗಿ ಮಾಗಿದ್ದು ಎಂದು ಮೊಬೈಲಿಗೆ ಬಂದ ಮೆಸೇಜುಗಳನ್ನು ಹಿಡಿದುಕೊಂಡು ಎಲ್ಲರೂ

ಪರೀಕ್ಷಿಸಿದ್ದೇ ಪರೀಕ್ಷಿಸಿದ್ದು. ಆದರೆ ಅದು ಹಣ್ಣಿನ ಸತ್ಯಾಸತ್ಯತೆಯ ಪರೀಕ್ಷೆಯೋ ಅಥವಾ ಮೆಸೇಜಿನ ಪರೀಕ್ಷೆಯೋ ಎಂಬ ಜಿಜ್ಞಾಸೆ ಕಾಡಿತ್ತು.

ಹಣ್ಣಿನ ವಿಷಯ ಬಿಡಿ, ಮೇಕಪ್ ಮಾಡಿಕೊಂಡ ಸಿನೆಮಾ ನಟಿಯರಂತೆ ರಂಗಾಗಿ ತೋರುತ್ತಿದ್ದ ಮಂಚೂರಿಯನ್‌ಗಳಿಗೆ, ಬೊಂಬಾಯಿ ಮಿಠಾಯಿಗಳಿಗೆ ಬಣ್ಣ ಹಾಕುತ್ತಾರೆಂದು ತಿಳಿದ ಮೇಲೆ ಹೊರಗಿನ ತಿಂಡಿಗಳ ಗೋಜೇ ಬೇಡವೆಂದು ಮನೆಯಲ್ಲೇ ಮಾಡಿಕೊಂಡು ತಿನ್ನೋಣ ಎಂದರೆ ಗರಂಮಸಾಲಾ ಮುಂತಾದ ಪರಿಮಳದ ಪುಡಿಗಳಿಗೆ ಕ್ಯಾನ್ಸರ್ ಕಾರಕ ರಾಸಾಯನಿಕಗಳನ್ನು ಹಾಕುತ್ತಾರಂತಾಯಿತು. ಟೇಸ್ಟ್ ಮೇಕರು, ಪ್ಲಾಸ್ಟಿಕ್ ಅಂಶಗಳು ಇರುತ್ತವೆ ಎಂದು ಮ್ಯಾಗಿ, ನ್ಯೂಡಲುಗಳನ್ನು ಮನೆಯ ಹೊಸಿಲಿನ ಒಳಗೆ ಬಿಡದೆ ಕೆಲಸ ಮಯವೇ ಕಳೆದಿದೆ. ಹಾಗೇ ತರಕಾರಿ, ಸೊಪ್ಪುಗಳೂ ಭಾರಲೋಹದಿಂದ ಭಾರವಾಗಿವೆಯಂತೆ.

ಟೀಪುಡಿಗೂ ಗ್ರಹಚಾರ!

ಹೋಗಲಿ ಈ ರಾಸಾಯನಿಕಗಳ ಪಟ್ಟಿ ಕೇಳಿಕೇಳಿ ಸಾಕಾಗಿ ಟೀ ಕುಡಿದು ಹಾಯೋಗೋಣ ಅಂದರೆ ಟೀಪುಡಿಗೂ ಗ್ರಹಚಾರ ವಕ್ಕರಿಸಬೇಕೇ? ಟೀ ಸ್ಟ್ರಾಂಗಾಗಿ ಕಾಣಲು ಅದಕ್ಕೂ ಬಣ್ಣ ಹಾಕಿರುತ್ತಾರಂತೆ, ತೂಕ ಬರಲು ಮರದ ಹುಡಿಯ ಕಲಬೆರಕೆ ಮಾಡಿರುತ್ತಾರಂತೆ. ಇವುಗಳ ಗೊಡವೆ ಬೇಡವೆಂದು ಮನೆಯಲ್ಲೇ ತರಕಾರಿ ಬೆಳೆಸಿದ್ರೆ ಊರಿದ ಬೀಜಗಳು ರಾಸಾಯನಿಕ ಗೊಬ್ಬರಗಳು ಇಲ್ಲದೇ ಮೇಲೆ ಬರೋದೆ ಇಲ್ಲ ಅಂತಾವೆ, ಒಂದು ಪಕ್ಷ ಬಂದರೂ ಹೂ ಕಾಯಿಗಳು ಪೋಷಕಾಂಶ ಕೊರತೆಯಿಂದ ನರಳುವ ಮಕ್ಕಳಂತೆ ಪೇಲವವಾಗಿರುತ್ತವೆ. ಏನು ಮಾಡೋಣ?

ಅದಕ್ಕೆ ಹೇಳಿದ್ದು ರೋಬೋಟ್‌ಗಳಂತೆ ಹೊಟ್ಟೆ ಹಸಿವೆ ಆಗದಿದ್ರೆ, ಇಂಥ ವಿಷಭರಿತ ತರಕಾರಿ, ಖಾದ್ಯಗಳನ್ನು ತಿಂದು ಬದುಕುವ ಹಿಕಮತ್ತೇ ಬರುತ್ತಾ ಇರಲಿಲ್ಲ ಅಲ್ವಾ? ಬರೀ ನಮ್ಮ ಪಾಲಿಗೆ ಬಂದ ಕೆಲಸಗಳನ್ನು ಮಾಡಿಕೊಂಡು ಆರಾಮಾಗಿ ಇರಬಹುದು. ಅಲ್ವಾ? ಆಂ? ಏನಂದ್ರೀ! ತಿನ್ನೋದು, ಉಣ್ಣೋದು, ಕುಡಿಯೋದು ಇರದಿದ್ರೆ, ಕೆಲಸ ಆದ್ರೂ ಏಕೆ ಮಾಡಬೇಕು? ಬದುಕಿ ಏನು ಪ್ರಯೋಜನ ಅಂದ್ರಾ? ಅದೂ ಒಂಥರಾ ಕರೆಕ್ಟೇ ಬಿಡಿ!

ಜೀವನದ ಸಮತೋಲನವೂ ಒಂದು ಕಲೆ

ಒಮ್ಮೆ ಶ್ರೋಣ ಎಂಬ ರಾಜಕುಮಾರನೊಬ್ಬ ಬುದ್ಧರಿಂದ ದೀಕ್ಷೆ ಪಡೆದ. ಇದಕ್ಕೆ ಮೊದಲು ಆತ ಜೀವನದಲ್ಲಿ ಎಲ್ಲ ಬಗೆಯ ಭೋಗ ಲಾಲಿಸೆಗಳಲ್ಲಿಯೇ ನಿರತನಾಗಿರುತ್ತಿದ್ದ. ಇವನನ್ನು ಕಂಡು ಉಳಿದ ಭಿಕ್ಷುಗಳಿಗೆಲ್ಲ ಆಶ್ಚರ್ಯವಾಯಿತು! ಇವನು ಇಲ್ಲಿರಲು ಹೇಗೆ ಸಾಧ್ಯ? ಈತನೆಂದೂ ತನ್ನ ಅರಮನೆಯ ಹೊರಗೇ ಕಾಲಿಟ್ಟವನಲ್ಲ, ಎಂದೂ ತನ್ನ ರಥ ಬಿಟ್ಟು ಕೆಳಗೆ ಇಳಿದಿಲ್ಲ. ಈತ ನಡೆಯುವ ದಾರಿಯಲ್ಲೂ ರತ್ನಗಂಬಳಿ ಹಾಸಲಾಗುತ್ತಿತ್ತು. ಈತ ಹೇಗೆತಾನೆ ಒಬ್ಬ ಭಿಕ್ಷುವಾಗಬಲ್ಲ! ಇದೆಲ್ಲ ಇವನಿಂದ ಆಗುವಂತ ಕೆಲಸವಲ್ಲ, ಸ್ವಲ್ಪ ದಿನದಲ್ಲಿ ಇವನು ಹಿಂದಿರುಗಬಹುದು ಎಂದುಕೊಂಡರು. ಅದನ್ನು ಕೇಳಿಸಿಕೊಂಡ ಬುದ್ಧ, ಈತನ ಮನಸ್ಸು ಸದಾ ಅತಿರೇಕದಲ್ಲಿ ಸಂಚರಿಸುವುದು, ಒಂದು ಅತಿಯಿಂದ ಮತ್ತೊಂದು ಅತಿಗೆ ಅದು ಎಂದೂ ಮಧ್ಯಬಿಂದುವಿನಲ್ಲಿ ನೆಲೆಸುವುದಿಲ್ಲ. ಇಲ್ಲಿಯತನಕ ಆತ ಒಂದು ಅತಿಯಲ್ಲಿ ಜೀವಿಸಿದ್ದ. ದೈಹಿಕ ಲಾಲಸೆಗಳ ತೃಪ್ತಿಗಾಗಿ, ಈಗ ಈತ ಇನ್ನೊಂದು ಅತಿಯಲ್ಲಿ ಜೀವಿಸಲು ಹೊರಟಿದ್ದಾನೆ. ತನ್ನ ದೇಹವನ್ನು ದಂಡನೆ ಮಾಡಲಿಕ್ಕಾಗಿ, ಎಂದರು.

ಭಿಕ್ಷುಗಳೆಲ್ಲರೂ ರಸ್ತೆಯಲ್ಲಿ ನಡೆಯುತ್ತಿದ್ದರೆ, ಈತ ಕಲ್ಲು ಮುಳ್ಳಿನ ದಾರಿಯಲ್ಲಿ ನಡೆಯುತ್ತಿದ್ದ. ಇದಕ್ಕೂ ಹಿಂದೆ, ಆತ ರಾಜಕುಮಾರನಾಗಿದ್ದ ಸಮಯದಲ್ಲಿ ರತ್ನ ಗಂಬಳಿ ಬಿಟ್ಟು ಬೇರೆ ಎಲ್ಲಿಯೂ ಕಾಲಿಡುತ್ತಿರಲಿಲ್ಲ. ಆದರೆ ಈಗ ಕೊರಕಲು ಮುಳ್ಳುಗಳ ದಾರಿಯನ್ನೇ ಹುಡುಕಿಕೊಂಡು ನಡೆಯುತ್ತಿರುವನು. ಬೇರೆ ಭಿಕ್ಷುಗಳೆಲ್ಲ ಮರದ ನೆರಳಿನಲ್ಲಿ ವಿಶ್ರಮಿಸಿದರೆ, ಈತ ಮಾತ್ರ ಸುಡುವ ಬಿಸಿಲಿನಲ್ಲಿ ಕುಳಿತುಕೊಳ್ಳುತ್ತಿದ್ದ. ಎಲ್ಲರೂ ದಿನಕ್ಕೊಮ್ಮೆ ಊಟ ಮಾಡಿದರೆ ಈತ ಎರಡು ದಿನಕ್ಕೊಮ್ಮೆ ಊಟ ಮಾಡುತ್ತಿದ್ದ. ಬುದ್ಧರ ಬಳಿಗೆ ಬಂದ ಆರು ತಿಂಗಳಲ್ಲಿಯೇ ಆತ ಅಸ್ಥಿಪಂಜರದಂತಾಗಿ ಮುಖವೆಲ್ಲ ಕಪ್ಪಾಗಿ, ಅವನ ಪಾದಗಳಿಗೆ ಗಾಯಗಳಾಗಿದ್ದವು.

ಕೆಲವು ತಿಂಗಳುಗಳ ನಂತರ, ಒಂದು ದಿನ ಬುದ್ಧ ಇವನ ಬಳಿ ಬಂದು 'ಶ್ರೋಣಾ, ನಾನೊಂದು ವಿಷಯವನ್ನು ಕೇಳಬೇಕೆಂದಿರುವೆ. ನೀನು ರಾಜಕುಮಾರನಾಗಿದ್ದಾಗ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಮಧುರವಾಗಿ ವೀಣೆಯನ್ನು ನುಡಿಸುತಿದ್ದೆ ಎಂದು ಕೇಳಲ್ಪಟ್ಟಿದ್ದೇನೆ ಅದು ನಿಜವೇ?' ಎಂದರು.

'ಹೌದು, ಹೌದು ನನ್ನಂತೆ ಬೇರೆ ಯಾರೂ ವೀಣೆ ನುಡಿಸುವವರಿಲ್ಲ ಎಂದು ಜನ ಹೇಳುತ್ತಿದ್ದರು' ಎಂದು ಗರ್ವದಿಂದ ಹೇಳಿದ.

'ಹಾಗಿದ್ದಲ್ಲಿ ನಿನಗೊಂದು ಪ್ರಶ್ನೆ, ಅದೇನೆಂದರೆ, ವೀಣೆಯ ತಂತಿಗಳು ಅತಿ ಸಡಿಲ ವಾಗಿದ್ದಲ್ಲಿ ಅದರಿಂದ ನಾದಹೊಮ್ಮಲು ಸಾಧ್ಯವೇ?' ಎಂದು ಕೇಳಿದರು ಬುದ್ಧ. ಆಗ ಶ್ರೋಣ ನಗುತ್ತಾ 'ನೀವು ಕೇಳುತ್ತಿರುವುದು ಇದೆಂಥ ಪ್ರಶ್ನೆ? ಎಲ್ಲ ಮಕ್ಕಳಿಗೂ ತಂತಿ ಸಡಿಲವಾದಲ್ಲಿ ಅದರಿಂದ ನಾದ ಹೊರಡಲಾರದೆಂದು ಗೊತ್ತಿರುತ್ತದೆ, ತಂತಿ ಸಡಿಲವಾದಲ್ಲಿ ಅದನ್ನು ಮೀಟುವುದಾದರೂ ಹೇಗೆ? ಇನ್ನು ನಾದ ಬರುವುದು ಹೇಗೆ?' ಎಂದ.

'ಅದೇ ತಂತಿಗಳು ಬಿಗಿಯಾದರೆ ಆಗ' ಎಂದರು ಬುದ್ಧ.

'ನಾದ ಹೊರಡುವುದು ಒಂದು ಸ್ಥಿತಿಯಲ್ಲಿ ಮಾತ್ರ. ವೀಣೆಯ ತಂತಿಗಳು ಅತಿ ಸಡಿಲವು ಇರಬಾರದು ಅತಿ ಬಿಗಿಯೂ ಇರಬಾರದು, ಒಂದು ಸಮತೋಲನ ಸ್ಥಿತಿಯಲ್ಲಿ ಮಾತ್ರ ನಾದ ಹೊರಡಲು ಸಾಧ್ಯ' ಎಂದ ಶ್ರೋಣ.

'ನಾನು ಕೂಡ ನಿನಗೆ ಇದನ್ನೇ ಹೇಳಲು ಬಂದಿರುವೆ, ವೀಣೆಯನ್ನು ನುಡಿಸಲು ಯಾವ ನಿಯಮ ವಿದೆಯೋ, ಅದೇ ನಿಯಮವನ್ನು ಜೀವನದ ವೀಣೆಯನ್ನು ನುಡಿಸಲೂ ಪಾಲಿಸಬೇಕು' ಎಂದರು ಬುದ್ಧ ನಗುತ್ತಾ.

'ನಾವು ಅತಿಯಾದ ಶಿಸ್ತು ದೇಹದಂಡನೆ ಮಾಡಿ ದೇಹವನ್ನು ದಂಡಿಸಲೂಬಾರದು, ಅಥವಾ ಅತಿರೇಕದಲ್ಲಿ ಕಣ್ಣಿಗೆ ಕಂಡದ್ದನ್ನೆಲ್ಲ ತಿನ್ನುತ್ತಾ ದೇಹವನ್ನು ಹಾಳು ಮಾಡಿಕೊಳ್ಳಲೂಬಾರದು. ದೇಹವೆನ್ನುವುದು ಒಂದು ದೇಗುಲದಂತೆ ಅದನ್ನು ನಿಯಮತವಾದ ಪೌಷ್ಟಿಕ ಆಹಾರ, ವ್ಯಾಯಾಮ ಒಳ್ಳೆಯ ಆಲೋಚನೆಗಳು ಮತ್ತು ಸತ್ಸಂಗದಲ್ಲಿ ಕಳೆಯಬೇಕು. ನಮ್ಮ ಆಚರಣೆ ಒಂದು ಹದದಲ್ಲಿ ಇದ್ದಾಗ ಜೀವನವು ಕೂಡ ಹೆಚ್ಚು ಅರ್ಥಪೂರ್ಣವಾಗುತ್ತದೆ. ಇದೆಲ್ಲದರ ಜತೆಗೆ ಏನನ್ನಾದರೂ ಸಾಧಿಸುವುದು ಒಂದು ದಿನದ ಕೆಲಸವಲ್ಲ ಅದಕ್ಕೆ ವರ್ಷಗಳ ಪರಿಶ್ರಮ ಬೇಕು' ಎಂದರು.

ನಮ್ಮ ಬದುಕಿನಲ್ಲಿ ನೆಮ್ಮದಿ, ಶಾಂತಿ ಅತಿ ಮುಖ್ಯ. ಇಂದಿನ ಆಧುನಿಕ ಯುಗದಲ್ಲಿ ಅದು ಮರೀಚಿಕೆ ಯಾಗುತ್ತಿದೆ. ನೆಮ್ಮದಿ ಪಡೆಯಲು ಕೆಲವು ಸೂತ್ರಗಳು ಇಲ್ಲಿವೆ.

ನೆಮ್ಮದಿಗೆ ಪಂಚ ಸೂತ್ರಗಳು

● ವಿರೇಶ ಎಸ್ ಅಬ್ಬಿಗೇರಿ

ಮಾತು ಮಾತಿಗೂ ಕಾಲ ಬಹಳ ಮುಂದುವರೆದಿದೆ ಎನ್ನುತ್ತಿರುತ್ತೇವೆ. ಅಂಗೈಯಗಲದ ಗ್ಯಾಜೆಟ್ಟುಗಳು ಅವುಗಳನ್ನು ಕಂಡುಹಿಡಿದ ಮನುಷ್ಯನನ್ನೇ ಆಡಿಸುತ್ತಿವೆ. ಮನುಷ್ಯ ಎಲ್ಲಾ ಕಡೆ ಟೆಕ್ ಮಯ ಆಗುತ್ತಿದ್ದಾನೆ. ಆದರೆ ಮನಃಪೂರ್ವಕವಾಗಿ ಸಂತೋಷವಾಗಿರಲು ಇಂದು ಬಿಡುವಿಲ್ಲದ ಜೀವನ ಎನಿಸಿದೆ! ಕೇಳಿ ನೋಡಿ, ಹೆಚ್ಚಿನವರಿಗೆ ನೆಮ್ಮದಿಯಾಗಿರಲು ಸಮಯವೇ ಇಲ್ಲ, ಆದರೆ, ಗಂಟೆಗಟ್ಟಲೆ ರೀಲ್ಸ್ ನೋಡುತ್ತಾ, ಸಾಮಾಜಿಕ ಜಾಲತಾಣದಲ್ಲಿ ಅಲೆದಾಡುತ್ತಾ ಇರುತ್ತಾರೆ! ಆದರೆ ನಿಮಗೆ ಗೊತ್ತಿರಲಿ, ಸಂತೋಷವಾಗಿರಲು ಇದ್ಯಾವುದರ ಅಗತ್ಯವೂ ಇಲ್ಲ, ನಾವು ದಿನ ನಿತ್ಯದ ಜೀವನದಲ್ಲಿ ಸಂತೋಷವಾಗಿರಲು ಹಲವಾರು ದಾರಿಗಳಿವೆ.

1. ಸಂಬಂಧಗಳೇ ಊರುಗೋಲುಗಳು

ಮನುಷ್ಯ ಸಾಮಾಜಿಕ ಜೀವಿ. ಅವನು ಒಬ್ಬಂಟಿಯಾಗಿ ಜೀವಿಸಲಾರ. ಒಳ್ಳೆಯ ಸಂಬಂಧಗಳು ಮನುಷ್ಯನನ್ನು ಚೈತನ್ಯದಿಂದಿಡುತ್ತವೆ. ಜೀವಕ್ಕೆ ಹತ್ತಿರವಾದ ನಾಲ್ಕು ಜನರ ಜೊತೆ ನಿತ್ಯವೂ ಬೆರೆಯುವುದರಿಂದ ಸಂತೋಷ ಆಪ್ತವಾಗುತ್ತದೆ. ವರ್ಚುವಲ್ ಜಗತ್ತಿನಿಂದ ಆಚೆಗೆ ಬಂದು ಆಗಾಗ ಹಳೆಯ ಸ್ನೇಹಿತನಿಗೊಂದು ಫೋನ್ ಮಾಡಿ ನಾಲ್ಕು ಮಾತನಾಡುವುದರಿಂದ ಮನೆಯವರೊಟ್ಟಿಗೆ, ಕುಟುಂಬದವರೊಡನೆ ಕೆಲ ಸಮಯ ಕಳೆಯುವುದರಿಂದ ಸಂತೋಷವನ್ನು ಬರಮಾಡಿಕೊಳ್ಳಬಹುದು. ಮನುಷ್ಯ ಭಾವನಾ ಜೀವಿ. ಉತ್ತಮ ಹಾಗೂ ಗಟ್ಟಿ ಸಂಬಂಧಗಳು ಮನುಷ್ಯನನ್ನು ಸಂತೋಷವಾಗಿರಿಸುತ್ತವೆ.

2. ಸೋಶಿಯಲ್ ಮೀಡಿಯಾಕ್ಕೆ ಕಡಿವಾಣ

ಸೋಶಿಯಲ್ ಮೀಡಿಯಾದಲ್ಲಿ ಒಳ್ಳೆಯ ವಿಷಯಗಳಷ್ಟೇ ಕೆಟ್ಟ ವಿಷಯಗಳೂ ಇರುತ್ತವೆ. ಎಚ್ಚರಿಕೆಯಿಂದ ಅಲ್ಲಿ ಹೆಜ್ಜೆಯಿಡಬೇಕು. ಫೇಸ್‌ಬುಕ್ ಇನ್ಸ್ಟಾಗ್ರಾಮಿನಲ್ಲಿ ಯಾರೋ ಹಾಕುವ ವಿದೇಶೀ ಟೂರಿನ ಚಿತ್ರಗಳು, ಯಾರೋ ತೊಟ್ಟಿರುವ ಬೆಲೆ ಬಾಳುವ ಒಡವೆ ವಸ್ತ್ರಗಳನ್ನು ನೋಡಿ ನಾವು ಅವರೊಂದಿಗೆ ನಮ್ಮನ್ನು ಕಂಪೇರ್ ಮಾಡಿಕೊಳ್ಳುತ್ತೇವೆ. ಇದರಿಂದ ನಿಮ್ಮ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುವುದಕ್ಕಿಂತ, ಯಾವುದು ಎಷ್ಟು ಬೇಕೋ ಅಷ್ಟೇ ಉಪಯೋಗಿ ಸುವುದನ್ನು ಕಲಿತರೆ ನಮ್ಮ ಸಂತೋಷ ನಮ್ಮ ಕೈಯಲ್ಲೇ.

3. ಪ್ರಕೃತಿಯೊಂದಿಗೆ ಒಡನಾಟ

ನೇಚರ್ ಈಸ್ ದಿ ಬೆಸ್ಟ್ ಹೀಲರ್ ಎಂದು ಹೇಳುತ್ತಾರೆ. ಪ್ರಕೃತಿ ಎಲ್ಲವನ್ನೂ ಮಾಯಿಸುತ್ತದೆ ಎನ್ನುವುದು ಕೇವಲ ಬಾಯಿ ಮಾತಲ್ಲ. ದಿನಪೂರ್ತಿ ಒತ್ತಡದಲ್ಲಿ ಕೆಲಸ ಮಾಡಿದ ನಂತರ, ಹಸಿರು ಹೊದ್ದ ಪಾರ್ಕಿನಲ್ಲೊಮ್ಮೆ ಗಿಡಮರಗಳನ್ನು ನೋಡುತ್ತ 20 ನಿಮಿಷ ಕಳೆಯಿರಿ. ನಿಮಗೇ ಗೊತ್ತಿಲ್ಲದಂತೆ ಪುಳಕಗೊಳ್ಳುತ್ತೀರಿ. ಪ್ರಕೃತಿ ನಿಮ್ಮನ್ನು ಸಂತೋಷವಾಗಿರಿಸುತ್ತದೆ.

4. ಸುಖ ನಿದ್ದೆ

ನಿಮ್ಮ ನಿದ್ದೆಯ ಸಮಯ ನಿಮ್ಮ ದಿನನಿತ್ಯದ ಜೀವನದ ಮೇಲೆ ಹೆಚ್ಚು ಪ್ರಭಾವವನ್ನು ಬೀರುತ್ತದೆ. ನಿದ್ದೆಯು, ಉತ್ತಮ ಆರೋಗ್ಯ ಮತ್ತು ದಿನಚರಿ ಬೆಳೆಸಿಕೊಳ್ಳುವುದಕ್ಕೂ ಸಹಾಯ ಮಾಡುತ್ತದೆ. ನಾವು ಚೈತನ್ಯದಿಂದಿರಲು ನಮ್ಮ ದೇಹಕ್ಕೆ ನಿರ್ದಿಷ್ಟ ಸಮಯದ ನಿದ್ದೆ ಬೇಕೇ ಬೇಕು.

5. ಕೃತಜ್ಞತೆ

ಸಂಶೋಧನೆಯೊಂದರ ಪ್ರಕಾರ ಪ್ರತಿ ದಿನ ಎದ್ದ ಕೂಡಲೇ, ನೀವು ಕೃತಜ್ಞರಾಗಿರುವ ಯಾವುದಾದರೂ ಮೂರು ಸಂಗತಿಗಳನ್ನು ನೆನಪಿಸಿಕೊಳ್ಳುವುದರಿಂದ ಇಡೀ ದಿನ ಸಂತೋಷವಾಗಿರುತ್ತೀರಿ. ಈ ಮೂಲಕ ನೀವು ನಿಮ್ಮ ಜೀವನದಲ್ಲಿ ಏನು ಇಲ್ಲ ಎಂದು ಕೊರಗುತ್ತಿರುತ್ತೀರೋ ಅದರಿಂದ ವಿಮುಖರಾಗಿ, ಯಾವುದು ನಿಮ್ಮಲ್ಲಿ ಹೇರಳವಾಗಿದೆ ಎನ್ನುವುದರತ್ತ ಗಮನ ಹರಿಸುತ್ತೀರಿ. ನಿಮಗೆ ವಿಚಿತ್ರ ಎನಿಸಬಹುದು. ಯಾರೋ ನಿಮಗೆ ಗೊತ್ತಿಲ್ಲದೆ ಸಹಾಯ ಮಾಡಿದರೆ, ಅವರಿಗೆ ಸಣ್ಣದೊಂದು ಕೃತಜ್ಞತೆಯನ್ನು ಅರ್ಪಿಸಿದರೆ ನಿಮ್ಮಲ್ಲಿ ಧನ್ಯತಾ ಭಾವ ಆವರಿಸಿಕೊಳ್ಳುತ್ತದೆ. ಅದೇ ರೀತಿ, ನೀವು ಅದಾರಿಗೋ ಒಂದು ಸಹಾಯ ಮಾಡಿ, ಅದರಿಂದ ಮನದಲ್ಲಿ ಸಂತಸ ತುಂಬುತ್ತದೆ. ಎಷ್ಟು ಚೆಂದ ಅಲ್ಲವೇ? ಹಿರಿಯರು ಅಷ್ಟಿಲ್ಲದೇ ಹೇಳುತ್ತಾರಾ, ಹಿಂದಿನ ಕಾಲದಲ್ಲಿ ಮೊಬೈಲು, ಟಿವಿ ಇಲ್ಲದ ಕಾಲದಲ್ಲಿಯೂ ನಾವು ಸಂತೋಷವಾಗಿದ್ದೆವು ಎಂದು? ಆದರೆ ಈಗ ಎಲ್ಲ ಇದ್ದೂ ಮನುಷ್ಯನನ್ನು ಕಂಗಾಲಾಗಿಸುತ್ತಿವೆ ಎಂದರೆ ಅವುಗಳನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಾವು ಸೋತಿದ್ದೇವೆ ಎಂದೇ ಅರ್ಥ. ಸಂತೋಷಕ್ಕಾಗಿ ಅಲ್ಲಿ ಇಲ್ಲಿ ಅಲೆಯದೆ, ನಮ್ಮ ದಿನ ನಿತ್ಯದ ಜೀವನದಲ್ಲೇ ಸಂತೋಷವನ್ನು ಹುಡುಕಿಕೊಂಡು ನಮ್ಮವರನ್ನೂ ಸಂತೋಷದಿಂದ ಇಡೋಣ.

ಪ | ದ | ಬಂ | ಧ



ಎಡದಿಂದ ಬಲಕ್ಕೆ:
5. ಸೈನಿಕರು ಮಾಡುವ ಕಸರತ್ತು (4)
6. ಸಮಯ ತಿಳಿಸುವ ಯಂತ್ರ (4)
7. ನಿತ್ಯ ಬಳಸುವ ಸಾವಾಸ, ಧಾನ್ಯ (3)
9. ತುಂಬಾ ತಿಳಿದವನು, ವಿದ್ವಾಂಸ (3)
10. ತಿರುಗಿ ಬಂದಿದೆ ಭಲ್ಲೂಕ (3)
11. ಅಚ್ಚರಿಗೊಂಡ (3)
13. ಸವಾಲಿಗೆ ನೀಡಿದ ಉತ್ತರ (3)
17. ಮತ್ತೊಂದು ಹಸುವಿನೊಂದಿಗೆ ಆರಂಭವಾಗುವ ಶಿವನ ಹೆಸರು (4)
18. ಸಿಹಿಯಾದ ಮಾತು (4)

ಮೇಲಿನಿಂದ ಕೆಳಕ್ಕೆ:
1. ಹೂವಿನ ಎಸಳು (3)
2. ಎಲ್ಲಿ ಹೋದರೂ ಬಿಡದ ಹುಟ್ಟುಗುಣ (4)
3. ಅವಸರಕ್ಕೆ ಮತ್ತೊಂದು ಹೆಸರು (4)
4. ಕೇಳಿದ್ದನ್ನು ಕೊಡುವ ಕಾಮಧೇನುವಿಗೆ ಮತ್ತೊಂದು ಹೆಸರು (3)
8. ಸ್ನಾಯುಗಳು ನೋವಿನಿಂದ ಮಿಡಿಯುವಿಕೆ (3)
9. ಕೆಸರಿನಲ್ಲಿ ಹುಟ್ಟಿದ ತಾವರೆ (3)
12. ಪತಿ ಮಾಡಿದ ಸಲ್ಲದ ಕಾರ್ಯ (4)
14. ಸಹಜವಾದ ಅಥವಾ ನಿಜವಾದ (4)
15. ಪಥ ಬದಲಿಸದೆ ಮಾಡಿದ ಪ್ರತಿಜ್ಞೆ (3)
16. ಬಿಗಿಯಿಲ್ಲದಿರುವಿಕೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: ಸುಗಮ 4. ಹುತ್ತರಿ 6. ಕನ್ನಡನಾಡು 7. ಮೋದಕ 9. ನಾಟಕ 11. ದಾಹ 12. ರಸಾಲ 13. ಮಧು 14. ಕಪಟ 16. ಗೆಬರು 21. ಚಿನಕುರುಳಿ 22. ವರಾತ 23. ವಶಾ

ಮೇಲಿನಿಂದ ಕೆಳಕ್ಕೆ: ಸುಸ್ಥಿರ 2. ಮಕರಂದ 3. ಮಡದಿ 4. ಹುಡುಗಾಟ 5.ರಿವಾಜು 7. ಮೋಹಕ 8. ಕರಟ 9. ನಾಲಗೆ 10. ಕಮರು 15. ಪರಿಚಿತ 17. ಬಳುಳಿವ 18. ಗೌರವ 19. ಅಂಕುರ 10. ಸಾವಿರ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಸಮಾಚಾರ ಸಣ್ಣದಲ್ಲ

ತೆರಿಗೆದಾರರಿಗೆ ಡಿ.31ರಿಂದ ವಿವಾದ್ ಸೆ ವಿಶ್ವಾಸ್ ಸ್ಕೀಮ್

ದೆಹಲಿ: ಬಾಕಿಯಾಗಿರುವ ನೇರ ತೆರಿಗೆ ಮೇಲ್ಮನವಿಗಳ ಇತ್ಯರ್ಥಕ್ಕಾಗಿ ಬಜೆಟ್‌ನಲ್ಲಿ ಘೋಷಿಸಿದ 'ವಿವಾದ್ ಸೇ ವಿಶ್ವಾಸ್' ಯೋಜನೆ ಈ ವರ್ಷ ಪ್ರಾರಂಭಿಸಲಾಗುವುದು. ಶೀಘ್ರ ಅಧಿಸೂಚನೆ ಹೊರಡಿಸಲಾಗುವುದು ಎಂದು ನೇರ ತೆರಿಗೆಗಳ ಕೇಂದ್ರ ಮಂಡಳಿ (ಸಿಬಿಡಿಟಿ) ಅಧ್ಯಕ್ಷ ರವಿ ಅಗರವಾಲ್ ಹೇಳಿದ್ದಾರೆ. ಸುದ್ದಿಸಂಸ್ಥೆ ಜತೆ ಮಾತನಾಡಿ, ದೇಶದ ವಿವಿಧ ನ್ಯಾಯಾಲಯಗಳಲ್ಲಿ ನೇರ ತೆರಿಗೆ ಸಂಬಂಧಿತ ಮೇಲ್ಮನವಿ ದಾಖಲಾಗಿವೆ. ತೆರಿಗೆದಾರರು ಹೊಸ ಯೋಜನೆ ಆಯ್ಕೆ ಮಾಡಿಕೊಂಡರೆ ಉಳಿದ ಮೇಲ್ಮನವಿಗಳು ಬೇಗ ಇತ್ಯರ್ಥವಾಗಲಿವೆ ಎಂದು ತಿಳಿಸಿದ್ದಾರೆ. ನೇರ ತೆರಿಗೆ ಅಥವಾ ಆದಾಯ ತೆರಿಗೆ ವರ್ಗದ ಪ್ರಕರಣಗಳಿಗೆ 2020ರಲ್ಲಿ ಮೊದಲ ಬಾರಿಗೆ 'ವಿವಾದ್ ಸೇ ವಿಶ್ವಾಸ್' ಯೋಜನೆಯನ್ನು ಸರಕಾರ ಪರಿಚಯಿಸಿದೆ. ಹಲವು ಲಕ್ಷ ತೆರಿಗೆದಾರರು ಯೋಜನೆಯ ಲಾಭ ಪಡೆದಿದ್ದರಿಂದ 75 ಸಾವಿರ ಕೋಟಿ ರು. ಆದಾಯ ಬಂದಿದೆ. ಡಿ.31ರೊಳಗೆ ಈ ಯೋಜನೆಯನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದೆ. ಹೀಗಾಗಿ ಶೀಘ್ರದಲ್ಲಿ ಈ ಕುರಿತು ಅಧಿಸೂಚನೆ ಬಿಡುಗಡೆ ಮಾಡಲಾಗುವುದು. ಜತೆಗೆ ಸಾಮಾನ್ಯವಾಗಿ ಎದುರಾಗುವ ಪ್ರಶ್ನೆಗಳಿಗೆ ಉತ್ತರ ನೀಡಲಾಗುವುದು ಎಂದು ಅಗರವಾಲ್ ಹೇಳಿದ್ದಾರೆ.

ಮನೀಶ್ ಕರ್ಬೀಕರ್ ಲೋಕಾ ಎಡಿಜಿಪಿ

ಬೆಂಗಳೂರು: ಹಿರಿಯ ಐಪಿಎಸ್ ಅಧಿಕಾರಿಗಳಾದ ಮನೀಶ್ ಕರ್ಬೀಕರ್ ಮತ್ತು ಪ್ರಶಾಂತ್ ಕುಮಾರ್ ಥಾಕೂರ್ ಅವರನ್ನು ವರ್ಗಾವಣೆ ಮಾಡಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಸಿಐಡಿ ಎಡಿಜಿಪಿ (ಆರ್ಥಿಕ ಅಪರಾಧಗಳು) ಆಗಿದ್ದ ಮನೀಶ್ ಕರ್ಬೀಕರ್ ಅವರು ಲೋಕಾಯುಕ್ತ ಎಡಿಜಿಪಿಯಾಗಿ ನೇಮಕವಾಗಿದ್ದು, ಲೋಕಾಯುಕ್ತ ಡಿಜಿಪಿಯಾಗಿದ್ದ ಪ್ರಶಾಂತ್ ಕುಮಾರ್ ಥಾಕೂರ್ ಅವರು ಅಗ್ನಿ ಶಾಮಕ ದಳ ಡಿಜಿಪಿಯಾಗಿ ವರ್ಗಾವಣೆಯಾ ಗಿದ್ದಾರೆ. ಮನೀಶ್ ಕರ್ಬೀಕರ್ ಅವರು ಸದ್ಯ ವಾಲ್ಮೀಕಿ ನಿಗಮದ ಹಗರಣ ಹಾಗೂ ಬಿಟ್ ಕಾಯಿನ್ ಹಗರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಮುಖ್ಯಸ್ಥರೂ ಆಗಿದ್ದಾರೆ. ಇವರು ಲೋಕಾಯುಕ್ತ ಎಡಿಜಿಪಿಯಾಗಿ ನೇಮಕವಾಗಿದ್ದರೂ ಎರಡೂ ಪ್ರಕರಣಗಳ ಎಸ್‌ಐಟಿ ಮುಖ್ಯಸ್ಥರಾಗಿ ಮುಂದುವರಿಯುವಂತೆ ಸೂಚಿಸಲಾಗಿದೆ. ಇನ್ನು ಲೋಕಾಯುಕ್ತ ಡಿಜಿಪಿಯಾಗಿದ್ದ ಪ್ರಶಾಂತ್ ಠಾಕೂರ್ ಅವರನ್ನು ಅಗ್ನಿಶಾಮಕ ದಳ ಡಿಜಿಪಿಯಾಗಿ ವರ್ಗಾವಣೆ ಮಾಡಲಾಗಿದೆ. ಅಗ್ನಿಶಾಮಕದಳ ಡಿಜಿಪಿ ಹಾಗೂ ಮಹಾ ನಿರ್ದೇಶಕರಾಗಿದ್ದ ಮಾಲಿನಿ ಕೃಷ್ಣಮೂರ್ತಿ ಅವರನ್ನು ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ.

ವಿರಾಮ
ಪ್ರತಿ ಭಾನುವಾರ

ಮಲೆಯಾಳಿ ಭಾಷಿಕರಿಗೆ ಕನ್ನಡ ಕಲಿಕಾ ತರಗತಿಗಳ ಉದ್ಘಾಟನಾ ಸಮಾರಂಭ

ಕೇರಳದಲ್ಲಿ ಕನ್ನಡ, ಮಲೆಯಾಳಿ ಭಾಷಿಕರ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಕನ್ನಡ ಕಲಿಕಾ ತರಗತಿಗಳಲ್ಲಿ ಕನ್ನಡ ಕಲಿತ ಮಲೆಯಾಳಿ ಭಾಷಿಕರಿಗೆ ಹಾಗೂ ಕೇರಳದಲ್ಲಿ ನೆಲೆಸಿರುವ ಕನ್ನಡಿಗರಿಗಾಗಿ ಕನ್ನಡ ಮತ್ತು ಮಲೆಯಾಳಿ ಭಾಷಿಕರ ಸಾಹಿತ್ಯ ಸಮ್ಮೇಳನ ಆಯೋಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಬೇಕು ಎಂದು ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಗುರುವಾರ ವಿಕಾಸಸೌಧದಲ್ಲಿ ಆಯೋಜಿಸಲಾದ ಮಲೆಯಾಳಿ ಭಾಷಿಕರಿಗೆ ಕನ್ನಡ ಕಲಿಕಾ ತರಗತಿಗಳ ಉದ್ಘಾಟನಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ದೇಶದ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ. ಹೆಚ್ಚು ಭಾಷೆಯನ್ನು ಕಲಿಯುವವರು ಹೆಚ್ಚು ಸಾಧನೆ, ಯಶಸ್ಸು ಪಡೆಯುತ್ತಾರೆ. ನಾವು ಬೇರೆ ರಾಜ್ಯಗಳಿಗೆ ಹೋದಾಗ ಅಲ್ಲಿನ ಭಾಷೆಗೆ ಗೌರವ ಕೊಟ್ಟು ಭಾಷೆ ಕಲಿಯಲು ಮುಂದಾಗಬೇಕು. ಕರ್ನಾಟಕ ರಾಜ್ಯದಲ್ಲಿರುವ ಮಲೆಯಾಳೀ ಭಾಷಿಕರು ಕನ್ನಡ ಭಾಷೆ ಕಲಿಯುತ್ತಿರುವುದು ನಿಮ್ಮ ವ್ಯಕ್ತಿತ್ವ, ಆತ್ಮವಿಶ್ವಾಸ ಹೆಚ್ಚಿಸುವ ಜತೆಗೆ ಕರ್ನಾಟಕ ರಾಜ್ಯಕ್ಕೆ ಕೊಡುಗೆ ನೀಡಲು ಮುಂದಾಗಿರುವುದು ಸಂತೋಷದ ವಿಷಯ ಎಂದರು.

ಮಲೆಯಾಳಿ ಭಾಷಿಕರಿಗೆ ಕನ್ನಡ ಕಲಿಸುವ ಕೆಲಸ ಇಲ್ಲಿಗೆ ನಿಲ್ಲಬಾರದು. ಈ ಯೋಜನೆ ಹೆಚ್ಚು ವಿಸ್ತೃತವಾಗಿ ಪ್ರತಿ ಜಿಲ್ಲೆಗಳಲ್ಲಿರುವ ಅನ್ಯಭಾಷಿಕರಿಗೆ ಕನ್ನಡ ಕಲಿಸುವ ಕೆಲಸ ಪ್ರಾಧಿಕಾರದಿಂದ ಆಗಬೇಕು. ಪ್ರಾಧಿಕಾರದಿಂದ ಆಯೋ ಜಿಸಿದ್ದ ಕನ್ನಡ ಕಲಿಕಾ ತರಗತಿಗಳಲ್ಲಿ ಕನ್ನಡ ಕಲಿತ ಮಲೆಯಾಳಿ ಭಾಷಿಕರಿಗಾಗಿ ಹಾಗೂ ಕೇರಳದಲ್ಲಿ ನೆಲೆಸಿರುವ ಕನ್ನಡಿಗರಿಗಾಗಿ ಕನ್ನಡ ಮತ್ತು ಮಲೆಯಾಳಿ ಭಾಷಿಕರ ಸಾಹಿತ್ಯ ಸಮ್ಮೇಳನ ಆಯೋಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಆಯೋಜಿಸಲಾದ ಮಲೆಯಾಳಿ ಭಾಷಿಕರಿಗೆ ಕನ್ನಡ ಕಲಿಕಾ ತರಗತಿಗಳ ಉದ್ಘಾಟನಾ ಸಮಾರಂಭವನ್ನು ಸಚಿವ ಶಿವರಾಜ್ ತಂಗಡಗಿ ಅವರು ಉದ್ಘಾಟಿಸಿದರು. ಸಭಾಧ್ಯಕ್ಷ ಯು.ಟಿ. ಖಾದರ್, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸುಧಾಕರನ್ ರಾಮಂತಳ್ಳಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯವ ಡಾ.ಸಂತೋಷ ಹಾನಗಲ್ಲ ಮತ್ತು ಮಲೆಯಾಳಂ ಮಿಷನ್ ಕೇರಳ ಸರಕಾರ ಮತ್ತು ಕನ್ನಡ ಕಲಿಕಾ ಯೋಜನೆ ಸಂಚಾಲಕ ಟಾಮಿ ಜೆ. ಅಲುಂಕಲ್ ಇದ್ದರು.

ಜೀವನ, ಸಂಸ್ಕೃತಿಯ ಬೆಳವಣಿಗೆಗೆ ಭಾಷೆ ತುಂಬಾ ಪ್ರಮುಖ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್. ತಂಗಡಗಿ ಮಾತನಾಡಿ, ಜೀವನ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಭಾಷೆ ತುಂಬಾ ಪ್ರಮುಖವಾದುದು. ಹೆಚ್ಚು ಭಾಷೆ ಕಲಿತಷ್ಟು ವ್ಯಕ್ತಿತ್ವ ವಿಕಾಸನ ಆಗುವುದರೊಂದಿಗೆ ನಮ್ಮಲ್ಲಿನ ಜ್ಞಾನವೂ ಹೆಚ್ಚಾಗುತ್ತದೆ. ಬೇರೆ ರಾಜ್ಯದವರು ಕರ್ನಾಟಕಕ್ಕೆ ಬಂದು ಕನ್ನಡ ಕಲಿಯುವಂತೆ ಅನ್ಯ ರಾಜ್ಯದಲ್ಲಿ ನೆಲೆಸಿರುವ ಕನ್ನಡಿಗರು ಅಲ್ಲಿನ ಭಾಷೆಯನ್ನು ಕಲಿಯಬೇಕು. ಬೇರೆ ಬೇರೆ ಭಾಷೆಗಳಲ್ಲಿರುವ ಒಳ್ಳೆಯ ವಿಚಾರಗಳು ಕನ್ನಡಿಗರಿಗೆ ಪರಿಚಯವಾಗಬೇಕು ಎಂಬ ಉದ್ದೇಶದಿಂದ ಹಲವು ಪುಸ್ತಕಗಳನ್ನು ಅನುವಾದ ಮಾಡಿಸಲಾಗಿದೆ. ಕನ್ನಡ ಭಾಷೆಯಿಂದ ಮಲೆಯಾಳಿ ಭಾಷೆಗೆ ಮಲೆಯಾಳಿ ಭಾಷೆಯಿಂದ ಕನ್ನಡ ಭಾಷೆಗೆ ಹೆಚ್ಚೆಚ್ಚು ಕೃತಿಗಳು ಅನುವಾದವಾಗಬೇಕು. ಈ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ಕನ್ನಡ ಮತ್ತು ಮಲೆಯಾಳಿ ಭಾಷಿಕರ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗುವುದು ಎಂದರು.

ಮೋದಿ ಭೇಟಿಯಾದ ಎಚ್‌ಡಿಡಿ, ಎಚ್‌ಡಿಕೆ


ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಾಜಿ ಪ್ರಧಾನಿ ದೇವೇಗೌಡ, ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಭೇಟಿಯಾಗಿ ಚರ್ಚಿಸಿದರು.

ದೆಹಲಿ: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಮೋದಿ, ಮಾಜಿ ಪ್ರಧಾನಿ ಎಚ್.ಡಿ.ದೇವೇ ಗೌಡ ರನ್ನು ಭೇಟಿಯಾಗಿದ್ದು ಗೌರವದ ಸಂಗತಿ. ವಿವಿಧ ವಿಷಯಗಳ ಬಗ್ಗೆ ಅವರ ಜಾಣ್ಮೆ ಮತ್ತು ದೃಷ್ಟಿಕೋನವು ಆಳವಾಗಿದ್ದು, ಮೌಲ್ಯಯುತವಾದುದ್ದಾಗಿದೆ. ನನಗೆ ಕಲಾಕೃತಿಯೊಂದನ್ನು ಉಡುಗೊರೆಯಾಗಿ ನೀಡುವ ಮೂಲಕ ನನ್ನ ಇತ್ತೀಚಿನ ಕನ್ಯಾಕುಮಾರಿ ಭೇಟಿ ನೆನಪಿಸಿದ ಅವರಿಗೆ ಕೃತಜ್ಞ ಎಂದು ಬರೆದುಕೊಂಡಿದ್ದಾರೆ.


ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರು ಬುಧವಾರ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ನ್ಯಾಷನಲ್ ಪಬ್ಲಿಕ್ ಶಾಲೆಯ ಸಿದ್ದರಾಜು, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಸ್.ಸಂದೀಪ್, ಜನಾರ್ದನ್ ಸೇರಿದಂತೆ ಹೆಸರಘಟ್ಟದ ಬಿಜೆಪಿ ಮುಖಂಡರು, ಕಾರ್ಯಕರ್ತರು ಶುಭ ಕೋರಿದರು.

ಮಿಸ್ ಬ್ರಾಂಡೆಡ್ ಔಷಧ: ಸಾಬೀತು

ಬೆಂಗಳೂರು: ಆರೋಗ್ಯ ಇಲಾಖೆ ಅಧೀನದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ (ಕೆಎಸ್ ಎಂಎಸ್‌ಸಿಎಲ್), ಫಾರ್ಮಾ ಕಂಪನಿಯೊಂದು ಸರಬರಾಜು ಮಾಡಿದ್ದ ಲಕ್ಷಾಂತರ ರು. ಮೌಲ್ಯದ ಕಣ್ಣು, ಕಿವಿ, ಮೂಗಿನ ಔಷಧವು 'ಮಿಸ್ ಬ್ರಾಂಡೆಡ್' ಎಂಬುದು ಸಾಬೀತಾಗಿದೆ.

ಪ್ರಾಣಿಗಳಿಗೆ ಬಳಸುವ ಔಷಧ ಸರಬರಾಜು ಮಾಡಿದ ಸಂಬಂಧಪಟ್ಟಂತೆ ದಾಖಲಾಗಿದ್ದ ದೂರಿನ ಮೇರೆಗೆ ಕೇಂದ್ರ ಔಷಧಗಳ ಪ್ರಮಾಣಿತ ನಿಯಂತ್ರಣ, ಔಷಧ ನಿಯಂತ್ರಣ ಇಲಾಖೆ ನಡೆಸಿದ್ದ ಪ್ರಯೋಗಾಲಯದ ಪರೀಕ್ಷಾ ವರದಿಯಲ್ಲಿ 'ಆಕ್ಸಿಮೆಟಾಜೋಲಿನ್ ಹೈಡ್ರೋಕ್ಲೋರೈಡ್' ಔಷಧವು 'ಮಿಸ್ ಬ್ರಾಂಡೆಡ್' ಎಂದು ಬಹಿರಂಗವಾಗಿದೆ. ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್-1940 ಕಾಯ್ದೆ ಪ್ರಕಾರ ತಪ್ಪು ಮಾಡಿದವರಿಗೆ ಕನಿಷ್ಠ 1 ವರ್ಷ ಜೈಲುಶಿಕ್ಷೆ ವಿಧಿಸಲು, ಸಾವಿರಾರು ರು. ದಂಡಹಾಕುವ ಅವಕಾಶ ಇದೆ. ಜತೆಗೆ,ಕಂಪನಿ ವಿರುದ್ಧ ಕ್ರಮಕೈಗೊಂಡು ಕಪ್ಪು ಪಟ್ಟಿಗೆ ಸೇರಿಸಬೇಕಿತ್ತು.

ಔಷಧಗಳ ಲೋಗೋಗ್ರಾಂನಲ್ಲಿ ಬದಲು: ಕಣ್ಣು, ಕಿವಿ, ಮೂಗಿನ ಸಂಬಂಧಪಟ್ಟಂತೆ ವಿವಿಧ ಔಷಧ ಖರೀದಿಗಾಗಿ ನಿಗಮ, 2023ರ ಆಗಸ್ಟ್‌ನಲ್ಲಿ ಟೆಂಡರ್ ನಡೆಸಿತ್ತು. ಟೆಂಡರ್‌ನಲ್ಲಿ ಎಲ್-1 ಪುಷ್ಕರ್ ಫಾರ್ಮಾ ಕಂಪನಿ, ಔಷಧ ಉಗ್ರಾಣಗಳಿಗೆ, ಆರೋಗ್ಯ ಸಂಸ್ಥೆಗಳಿಗೆ ಪೂರೈಸಿದ್ದ ಔಷಧ ಮೇಲೆ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ (ಎಎಚ್‌ವಿಎಸ್) ಲೇಬಲ್ ಇರುವುದು ಪತ್ತೆಯಾಗಿತ್ತು. ಔಷಧಗಳ ಲೋಗೋಗ್ರಾಂನಲ್ಲಿ ಆರೋಗ್ಯ ಇಲಾಖೆ ಬದಲಿಗೆ 'ಎಎಚ್ ವಿಎಸ್' ಎಂದು ನಮೂದಿಸಲಾಗಿತ್ತು. ಬಳಿಕ, ಔಷಧ ಮತ್ತು ಸೌಂದರ್ಯವರ್ಧಕ ಕಾಯ್ದೆ ಉಲ್ಲಂಘಿಸಿ ನಿಗಮದ ಎಂಡಿ ಚಿದಾನಂದ ವಟಾರೆ, ಮಾಸ್ಕಿಂಗ್, ಟ್ಯಾಂಪರಿಂಗ್ ಮಾಡುವಂತೆ ಆದೇಶ ಹೊರಡಿಸಿದ್ದರು. ಪುಷ್ಕರ್ ಫಾರ್ಮಾಗೆ ನೀಡಿದ್ದ ಪತ್ರದಲ್ಲಿ ಲೇಬಲ್ ಮರೆಮಾಚಲು ಅನುಮತಿ ಕೊಟ್ಟಿದ್ದರು.

ಗಾರ್ಡನ್ ಸಿಟಿ ವಿಶ್ವವಿದ್ಯಾಲಯದಲ್ಲಿ ನಡೆದ 6ನೇ ಘಟಿಕೋತ್ಸವ

ಜೀವನದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಜೀವನದ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವದರ ಜತೆಗೆ ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಮತ್ತು ಅವರನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡುವಲ್ಲಿ ವಿವಿ ಪಾತ್ರ ಪ್ರಮುಖವಾಗಿದೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹೇಳಿದರು.

ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವ ದಲ್ಲಿ ಮಾತನಾಡಿ, ಜೀವನದ ಯಶಸ್ಸಿನಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ, ಶಿಕ್ಷಣವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಉಪಯುಕ್ತವಾಗಿದೆ. ಶಿಕ್ಷಣವು ಕೌಶಲಗಳನ್ನು ಹೆಚ್ಚಿಸುತ್ತದೆ. ಆಸಕ್ತಿ ಹೊಂದಿರುವ ಕ್ಷೇತ್ರದಲ್ಲಿ ನುರಿತರಾಗುವ ಮೂಲಕ ಉತ್ತಮ ಯಶಸ್ಸನ್ನು ಸಾಧಿಸಬಹುದು ಎಂದರು.

ವೈಜ್ಞಾನಿಕ ಚಿಂತನೆ ಮತ್ತು ವೃತ್ತಿಪರ ಕೆಲಸದ ಮೇಲೆ ಕೇಂದ್ರೀಕರಿಸುವ ಮೂಲಕ, ಗಾರ್ಡನ್ ಸಿಟಿ ವಿಶ್ವವಿದ್ಯಾಲಯವು ವಿಜ್ಞಾನ ಮತ್ತು ನಿರ್ವಹಣೆ ಮತ್ತು ಉದ್ಯೋಗ ಇತ್ಯಾದಿ ಕಾರ್ಯಕ್ರಮಗಳಲ್ಲಿ ಕಡಿಮೆ ಅವಧಿಯಲ್ಲಿ ದೇಶದಲ್ಲಿ ತನ್ನ ಗುರುತನ್ನು ಸ್ಥಾಪಿಸಿದೆ. ವಿಶ್ವವಿದ್ಯಾಲಯವು ಮೊದಲು ಓದು, ನಂತರ ಪಾವತಿಸುವ ವಿನೂತನ ವಿದ್ಯಾರ್ಥಿ ವೇತನ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಇದು ಶೇ.25ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಲಿದೆ. ಈ ಕಾರ್ಯಕ್ಕೆ ಕುಲಾಧಿಪತಿ ಡಾ. ವಿ. ಜೋಸೆಫ್ ಮತ್ತು ಅವರ ತಂಡವನ್ನು ಅಭಿನಂದಿಸುತ್ತೇನೆ. ಅವರ ದೂರದೃಷ್ಟಿಯ ನಾಯಕತ್ವ ಮತ್ತು ಶೈಕ್ಷಣಿಕ ಉತ್ಕೃಷ್ಟತೆ ಮತ್ತು ನಾವಿನ್ಯತೆಗೆ ಬದ್ಧತೆ ವಿಶ್ವವಿದ್ಯಾಲಯದ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಶ್ಲಾಘಿಸಿದರು.

> ಪ್ರಸಕ್ತ ತಂತ್ರಜ್ಞಾನವು ನಾವು ಊಹಿಸುವುದಕ್ಕಿಂತ ವೇಗವಾಗಿ ಬದಲಾಗುತ್ತಿದೆ. ಆದ್ದರಿಂದ ನಮ್ಮ ಸಂಶೋಧಕರು, ವಿಜ್ಞಾನಿಗಳು ಮತ್ತು ತಜ್ಞರು ಪ್ರತಿಯೊಂದು ಕ್ಷೇತ್ರವನ್ನು ಮುನ್ನೆಚ್ಚರಿಕೆ ವಹಿಸುವುದು ಮತ್ತು ಅದಕ್ಕೆ ಅನುಗುಣವಾಗಿ ಯೋಜಿಸುವುದು ಅವಶ್ಯಕ. ಪ್ರಸ್ತುತ ಉತ್ಪಾದನೆ ಮತ್ತು ಉದ್ಯಮಶೀಲತೆಯ ಯುಗವಾಗಿದೆ ಮತ್ತು ನಮ್ಮ ಯುವಕರು ಕಾರ್ಯಕ್ಷಮತೆ ಮತ್ತು ಸುಧಾರಣೆಯ ಚಾಲಕರಾಗಲು ಸಾಮರ್ಥ್ಯ, ನಿರ್ಣಯವನ್ನು ಹೊಂದಿದ್ದಾರೆ.
> -ಥಾವರ್ ಚಂದ್ ಗೆಹ್ಲೋಟ್, ರಾಜ್ಯಪಾಲ

ಈ ವರ್ಷದಲ್ಲಿ ತೆರೆಗೆ ಬಂದ ಯಾವ ಸಿನಿಮಾಗಳು ಚಿತ್ರಮಂದಿರದಲ್ಲಿ ನಿಲ್ಲುತ್ತಿಲ್ಲ. ಪ್ರೇಕ್ಷಕರು ಥಿಯೇಟರ್‌ನತ್ತ ಸುಳಿಯುತ್ತಿಲ್ಲ. ಹಾಗಾಗಿ ಬಂದ ದಾರಿಗೆ ಸುಂಕವಿಲ್ಲ ಎಂದು ಬಂದು ಹೋದ ಸಿನಿಮಾಗಳೇ ಹೆಚ್ಚು. ಸ್ಯಾಂಡಲ್‌ವುಡ್‌ನಲ್ಲಿ ಒಂದೊಳ್ಳೆಯ ಸಿನಿಮಾ ಬರಬೇಕು, ಚಿತ್ರಮಂದಿರದಿಂದ ದೂರ ಉಳಿದಿರುವ ಪ್ರೇಕ್ಷಕರನ್ನು ಮತ್ತೆ ಕರೆತರಬೇಕು ಎಂದು ಎಲ್ಲರೂ ಕಾದು ಕುಳಿತ್ತಿದ್ದಾರೆ. ಹೀಗಿರುವಾಗಲೇ ಭೀಮ ಮಂಕಾದ ಚಿತ್ರರಂಗಕ್ಕೆ ಬಲ ತುಂಬುವ ನಿರೀಕ್ಷೆ ಮೂಡಿಸಿದ್ದಾನೆ. ಹೌದು, ದುನಿಯಾ ವಿಜಯ್ ನಟಿಸಿ ನಿರ್ದೇಶಿಸಿರುವ ಭಿಮ ಚಿತ್ರ ತೆರೆಗೆ ಸಿದ್ಧವಾಗಿದೆ. ರಿಲೀಸ್‌ಗೂ ಮೊದಲೇ ಹಾಡುಗಳ ಮೂಲಕವೇ ಸದ್ದು

ಮಾಡುತ್ತಿರುವ ಭೀಮ, ಪ್ರೇಕ್ಷಕರಲ್ಲಿ ಅಪಾರ ನಿರೀಕ್ಷೆ ಮೂಡಿಸಿರುವುದು ಸುಳ್ಳಲ್ಲ.

ಆಗಸ್ಟ್ 9 ರಂದು ಭೀಮನ ಬಳಗ ಚಿತ್ರಮಂದಿರಗಳಿಗೆ ಲಗ್ಗೆ ಇಡಲಿದೆ. ಬಿಡುಗಡೆಗೂ ಮೊದಲೇ ಭೀಮನಿಗೆ ಬಲು ಬೇಡಿಕೆ ಬರುತ್ತಿದೆ. ಕರ್ನಾಟಕದಲ್ಲಿಯೇ ಬರೋಬ್ಬರಿ ನಾನೂರಕ್ಕೂ ಹೆಚ್ಚು ಚಿತ್ರಮಂದಿರಗಳನ್ನು ಭೀಮ ಆವರಸಿಕೊಳ್ಳಲಿದ್ದಾನೆ. ಭೀಮ ಪ್ಯಾನ್ ಇಂಡಿಯಾ ಸಿನಿಮಾವಲ್ಲ, ಇದು ಅಪ್ಪಟ ಕನ್ನಡ ಸಿನಿಮಾವಾಗಿಯೇ ನಿರ್ಮಾಣವಾಗಿದ್ದು, ಕನ್ನಡದಲ್ಲಿಯೇ ಎಲ್ಲೆಡೆ ತೆರೆಗೆ ಬರುತ್ತಿದೆ. ಕರುನಾಡು ಮಾತ್ರವಲ್ಲದೆ ಹೊರ ರಾಜ್ಯ, ವಿದೇಶಗಳಲ್ಲಿಯೂ ಭೀಮ ದರ್ಶನ ನೀಡಲಿದ್ದಾನೆ. ಹೆಚ್ಚು ಕಮ್ಮಿ ಒಂದು ಸಾವಿರ ಚಿತ್ರಮಂದಿರಗಳು ಭೀಮನಿಗಾಗಿ ಕಾಯುತ್ತಿವೆ. ಇದು ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆಯಾಗಿದೆ.

ಹೊಸಬರ ದಂಡು

ದುನಿಯಾ ವಿಜಯ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಹೊಸ ಪ್ರತಿಭೆಗಳ ದಂಡೇ ಇದೆ. ಅಶ್ವಿನಿ ನಾಯಕಿಯಾಗಿ ನಟಿಸಿದ್ದು ಇವರಿಗೂ ಇದು ಮೊದಲ ಸಿನಿಮಾವಾಗಿದೆ. ಡ್ರಾಗನ್ ಮಂಜು, ಕಲ್ಯಾಣಿ ರಾಜು, ಚಂದ್ರು ಮುಂತಾದವರು ತಾರಾಬಳಗದಲ್ಲಿದ್ದಾರೆ. ಸಲಗ ನಿರ್ದೇಶಿಸಿ ಗೆದ್ದ ವಿಜಯ್ ಈ ಚಿತ್ರದಲ್ಲಿಯೂ ಅದೇ ಯಶಸ್ಸಿನ ಯಾತ್ರೆ ಮುಂದುವರಿಸುವುದು ಖಚಿತವಾಗಿದೆ. ಕೃಷ್ಣ ಸಾರ್ಥಕ್ ಮತ್ತು ಜಗದೀಶ್ ಗೌಡ ಜಂಟಿಯಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಮಾಸ್ ಕ್ಲಾಸ್ ವಿಜಿ

ಭೀಮ ಮಾಸ್ ಕ್ಲಾಸ್ ಆಗಿದ್ದು, ಇಲ್ಲಿಯೂ ಆ್ಯಕ್ಷನ್‌ಗೆ ಹೆಚ್ಚಿನ ಒತ್ತು ನೀಡಲಾಗಿದೆ. ಸಲಗದಂತೆ, ಭೂಗತ ಲೋಕದ ಕಥೆಯೂ ತೆರೆದುಕೊಳ್ಳುತ್ತದೆ. ಭೀಮನ ಪಂಚಿಂಗ್ ಡೈಲಾಗ್‌ಗಳು ಅದಾಗಲೇ ಪ್ರೇಕ್ಷಕರನ್ನು ಸೆಳೆದಿವೆ. ವಿಜಯ್ ಸಾಹಸ ದೃಶ್ಯಗಳು ರೋಮಾಂಚನಗೊಳಿಸುತ್ತಿವೆ. ವಿಜಯ್ ಚಿತ್ರದ ಎಂದರೆ ಅಲ್ಲಿ ವಿಶೇಷತೆ ಇದ್ದೇ ಇರುತ್ತದೆ. ಸಲಗದಲ್ಲಿ ಸಿದ್ದಿ ಸಹೋದರಿಯರು ಹಾಡಿನ ಮೂಲಕ ಮನರಂಜಿಸಿದ್ದರು. ಅಂತೆಯೇ ಬುಡಕಟ್ಟು ಸಮುದಾಯದ ಗಾಯಕಿಯರು ಭೀಮನಿಗೆ ಗಾನದ ಮೂಲಕ ಬಲತುಂಬಿದ್ದಾರೆ.

ಟಾಕ್ಸಿಕ್‌ನಲ್ಲಿ ನಟಿಮಣಿಯರ ದಂಡು

ಯಶ್ ಅಭಿನಯಿಸುತ್ತಿರುವ ಟಾಕ್ಸಿಕ್ ಸಾಕಷ್ಟು ಕುತೂಹಲ ಕೆರಳಿಸಿದೆ. ಕೆಜಿಎಫ್ ಬಳಿಕ ಯಶ್ ಅಭಿನಯಿಸುತ್ತಿರುವ ಸಿನಿಮಾ ಇದಾಗಿದ್ದು ಚಿತ್ರದ ಬಗ್ಗೆ ಭಾರೀ ನಿರೀಕ್ಷೆ ಮೂಡಿಸಿದೆ. ಮಲೆಯಾಳಂನ ಖ್ಯಾತ ನಿರ್ದೇಶಕಿ ಗೀತು ಮೋಹನ್‌ದಾಸ್ ನಿರ್ದೇಶನದಲ್ಲಿ ಸಿದ್ಧವಾಗುತ್ತಿರುವ ಟಾಕ್ಸಿಕ್ ಚಿತ್ರದಲ್ಲಿ ನಟಿಮಣಿಯರ ದಂಡೇ ಇದೆ. ಈ ಚಿತ್ರದಲ್ಲಿ ಯಶ್‌ಗೆ ಜತೆಯಾಗಿ ಬಾಲಿವುಡ್ ಬ್ಯೂಟಿ ಕಿಯಾರಾ ಅಡ್ವಾಣಿ ಅಭಿನಯಿಸಲಿದ್ದಾರೆ ಎಂಬ ಮಾಹಿತಿಯೂ ಇದೆ. ಈಗಾಗಲೇ ಕಥೆ ಕೇಳಿರುವ ಕಿಯಾರಾ ಚಿತ್ರದಲ್ಲಿ ನಟಿಸಲು ಸಮ್ಮತಿಸಿದ್ದಾರೆ ಎನ್ನಲಾಗಿದೆ. ಅದರ ಜತೆಗೆ ಬಹುಭಾಷಾ ನಟಿ ನಯನಾ ತಾರಾ ಯಶ್ ಸಹೋದರಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇನ್ನು ಬಾಲಿವುಡ್ ಬೆಡಗಿ ಹುಮಾ ಖುರೇಷಿ ಈ ಸಿನಿಮಾದಲ್ಲಿ ಬಣ್ಣಹಚ್ಚುವುದು ಬಹುತೇಕ ಖಚಿತವಾಗಿದ್ದು, ನೆಗೆಟಿವ್ ರೋಲ್‌ನಲ್ಲಿ ಅಭಿನಯಿಸಲಿದ್ದಾರಂತೆ. ಈ ಪಾತ್ರಕ್ಕೆ ಸಾಕಷ್ಟು ಮಹತ್ವವಿದ್ದು ಅದಕ್ಕಾಗಿಯೇ ಹುಮಾ ಈ ಪಾತ್ರ ಆಯ್ದುಕೊಂಡಿದ್ದಾರಂತೆ. ಇದರ ಜತೆಗೆ ಶ್ರುತಿ ಹಾಸನ್ ಕೂಡ ಸಿನಿಮಾದ ಮುಖ್ಯ ಪಾತ್ರದಲ್ಲಿ ನಟಿಸಲಿದ್ದಾರೆ. ಕರೀನಾ ಕಪೂರ್ ಈ ಸಿನಿಮಾದಲ್ಲಿ ನಟಿಸಬೇಕಿತ್ತು, ಆದರೆ ಸಂಭಾವನೆ ವಿಚಾರದಿಂದ ಕರೀನಾ ನಟಿಸಲು ಹಿಂದೆ ಸರಿದರು. ಅದ್ದೂರಿ ವೆಚ್ಚದ ಟಾಕ್ಸಿಕ್ ಕೆವಿಎನ್ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗುತ್ತಿದೆ.

ಎದುರಾದ ವಿಘ್ನ

ಟಾಕ್ಸಿಕ್ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಆದರೀಗ ಚಿತ್ರಕ್ಕೆ ವಿಘ್ನ ಎದುರಾಗಿದೆ. ಟಾಕ್ಸಿಕ್ ಚಿತ್ರಕ್ಕಾಗಿ ಬೆಂಗಳೂರಿನ ಪೀಣ್ಯದ ಬಳಿ ಅದ್ದೂರಿ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗುತ್ತಿದೆ. ಬರೋಬ್ಬರಿ ಇಪ್ಪತ್ತು ಎಕರೆ ಪ್ರದೇಶದಲ್ಲಿ ಬೃಹತ್ ಸೆಟ್ ನಿರ್ಮಿಸಲಾಗಿದೆ. ಆದರೀಗ ಟಾಕ್ಸಿಕ್ ಚಿತ್ರೀಕರಣಕ್ಕೆ ವಿಘ್ನ ಎದುರಾಗಿದೆ. ಅರಣ್ಯ ಇಲಾಖೆಗೆ ಸೇರಿದ ಜಾಗದಲ್ಲಿ ಸೆಟ್ ನಿರ್ಮಿಸಲಾಗಿದೆ, ಇದು ನಿಯಮಬಾಹಿರ ಎಂದು ವಕೀಲ ಜಿ.ಬಾಲಾಜಿ ನಾಯ್ಡು ಎಂಬುವವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಈ ಸಂಬಂಧ ನ್ಯಾಯಾಲಯ ಕೆವಿಎನ್ ಪ್ರೊಡಕ್ಷನ್ಸ್‌ಗೆ ನೋಟೀಸ್ ನೀಡಿದೆ.

ಕೋಲಾರ ಕ್ವೀನ್‌ಗೆ ಕ್ವೀಪಿಎಲ್ ಕಿರೀಟ

ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ ಕ್ವೀನ್ಸ್ ಪ್ರಿಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ತೆರೆ ಬಿದ್ದಿದೆ. ಈ ಪಂದ್ಯಾವಳಿಯಲ್ಲಿ ಅದ್ಭುತ ಪ್ರದರ್ಶನ ತೋರಿದ ಕೋಲಾರ ಕ್ವೀನ್ಸ್ ತಂಡ ಕ್ವೀಪಿಎಲ್ ಕಪ್ ಮುಡಿಗೇರಿಸಿಕೊಂಡಿದೆ.

ಮೊದಲು ಬ್ಯಾಟ್ ಮಾಡಿದ ಕೋಲಾರ ತಂಡವು ನಿಗಧಿತ 5 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 88 ರನ್ ಗಳಿಸಿತು. ಈ ಗುರಿ ಬೆನ್ನತ್ತಿದ ಮೊತ್ತಕ್ಕೆ ಬೆಂಗಳೂರು ತಂಡವು 5 ಓವರ್‌ಗಳಲ್ಲಿ ಮೂರು ವಿಕೆಟ್‌ಗಳಿಗೆ 53 ರನ್ ಗಳಿಸಲಷ್ಟೇ ಸೀಮಿತವಾಯಿತು. ಫೈನಲ್ ಪಂದ್ಯದಲ್ಲಿ ಹೆದ್ದು ಬೀಗಿದ ಕೋಲಾರ ಕ್ವೀನ್ಸ್ ತಂಡವು ಆಕರ್ಷಕ ಟ್ರೋಫಿಯೊಂದಿಗೆ ಆರು ಲಕ್ಷ ಬಹುಮಾನವನ್ನು ತನ್ನದಾಗಿಸಿಕೊಂಡಿತು. ರನ್ನರ್ ಅಪ್ ಬೆಂಗಳೂರು ಕ್ವೀನ್ಸ್ ತಂಡವು ಮೂರು ಲಕ್ಷ ಬಹುಮಾನ ಪಡೆಯಿತು.

ಕೋಲಾರ ಕ್ವೀನ್ಸ್ ತಂಡದ ಆಟಗಾರ್ತಿ ಹೇಮಾ ಟೂರ್ನಿಯ ಶ್ರೇಷ್ಠ ಆಟಗಾರ್ತಿಯಾಗಿ ಹೊರಹೊಮ್ಮಿದರೆ, ಬೆಳಗಾವಿ ಕ್ವೀನ್ಸ್‌ನ ಕವಿತಾ ಗೌಡ ಅತ್ಯುತ್ತಮ ಬ್ಯಾಟರ್ ಪ್ರಶಸ್ತಿ ಪಡೆದರು. ಬೆಂಗಳೂರು ಕ್ವೀನ್ಸ್‌ನ ಅನುಪಮಾ ಗೌಡ ಅತ್ಯುತ್ತಮ ಬೌಲರ್ ಆಗಿ ಹೊರಹೊಮ್ಮಿದರು. ಮಧು ಸರಣಿ ಶ್ರೇಷ್ಠ ಹಾಗೂ ಗ್ರೀಷ್ಮಾ ಗೌಡ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಜನರಾದರು. ಈ ಟೂರ್ನಿಯಲ್ಲಿ ಒಟ್ಟು ಹತ್ತು ತಂಡಗಳು ಪಾಲ್ಗೊಂಡಿದ್ದವು.

ಸೆನ್ಸಾರ್ ಅಂಗಳದಲ್ಲಿ ಯುವ ನಕ್ಷತ್ರ

ಅಪ್ಪು ಅಭಿಮಾನಿಗಳೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಯುವ ನಕ್ಷತ್ರ ಚಿತ್ರ ಚಿತ್ರೀಕರಣ ಮುಗಿಸಿದ್ದು, ಪೋಸ್ಟ್ ಪ್ರೊಡಕ್ಷನ್ ಕಾರ್ಯದಲ್ಲಿ ಬ್ಯುಸಿಯಾಗಿದೆ. ಶೀಘ್ರವೇ ಸೆನ್ಸಾರ್ ಅಂಗಳಕ್ಕೂ ತಲುಪಲಿದೆ. ನಾಲ್ವರು ಮಕ್ಕಳು ಪುನೀತ್ ರಾಜ್‌ಕುಮಾರ್ ಮೇಲಿನ ಅಭಿಮಾನದಿಂದ ಅವರನ್ನು ಕಾಣಲೆಂದು ಬಿಜಾಪುರದಿಂದ ಬೆಂಗಳೂರಿಗೆ ಬರುತ್ತಾರೆ. ಅವರ ಆಸೆ ಈಡೇರುತ್ತದೆಯೆ ಇಲ್ಲವೆ ಅನ್ನುವದೇ ಯುವನಕ್ಷತ್ರ ಚಿತ್ರದ ಕಥೆ. ನಿರ್ದೇಶಕ ಆನಂದ್ ಕಥೆ ಚಿತ್ರಕಥೆ ಬರೆದು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ರೋಹನ್ ಚಾರಿ, ಶಯನ್, ಪರಿಣಿತ್, ಆರ್ಯ ವಿನೋದ್ ಹಾಗೂ ಪೋಷಕ ಪಾತ್ರಗಳಲ್ಲಿ ಆನಂದ್ ತುಮಕೂರು, ಸುಗುಣ, ಮಹಾಂತೇಶ್ ಹಿರೇಮಠ್, ಸಂದೀಪ್ ನೀನಾಸಂ, ಚಂದ್ರು, ಕೈಲಾಶ್ ಮತ್ತಿತರರು ನಟಿಸಿದ್ದಾರೆ. ವಿಶೇಷ ಎಂದರೆ ಈ ಚಿತ್ರದಲ್ಲಿ ನಿರ್ದೇಶಕ ಪವನ್ ವಡೆಯರ್ ನಟಿಸಿದ್ದು, ನಿರ್ದೇಶಕನಾಗಿಯೇ ಕಾಣಿಸಿಕೊಂಡಿದ್ದಾರೆ. ಅಲ್ಲದೆ ನಟ ಶ್ರೀನಗರ ಕಿಟ್ಟಿ, ರಘು ಮುಖರ್ಜಿ, ಅರ್ಚನಾ ಜೋಯಿಸ್ ಅತಿಥಿ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸರಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಸ್ಥಿತಿಗತಿ, ಪುಟ್ಟ ಮಕ್ಕಳ ಮೇಲೆ ಪುನೀತ್ ರಾಜ್‌ಕುಮಾರ್ ಅವರ ಆದರ್ಶಗಳ ಪ್ರಭಾವ ಇದನ್ನೆಲ್ಲ ನಿರ್ದೇಶಕ ಆನಂದ್ ಈ ಚಿತ್ರದಲ್ಲಿ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ರಾಜಾ ಶಿವಶಂಕರ್ ಛಾಯಾಗ್ರಹಣ, ಎಸ್.ಆಕಾಶ್ ಮಹೇಂದ್ರಕರ್ ಸಂಕಲನ, ಜೆಸ್ಸಿ ಗಿಫ್ಟ್ ಸಂಗೀತ ನಿರ್ದೇಶನ, ಚಂದ್ರು ಬಂಡೆ ಸಾಹಸ ನಿರ್ದೇಶನ, ಮಂಜು ಮಹದೇವ್ ಹಿನ್ನಲೆ ಸಂಗೀತ ಈ ಚಿತ್ರಕ್ಕಿದೆ.